ಕನ್ನಡ ಅಧ್ಯಯನ ಸಂಸ್ಥೆ

ಪಠ್ಯಪುಸ್ತಕಮಾಲೆ ೬

ಕರ್ಣಾಟಕದ ಅರಣ್ಯ ವೃಕ್ಷಗಳು

ಎಸ್. ಎನ್. ರಾಮಸ್ವಾಮಿ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೧೯೬[illegible]

ಕನ್ನಡ ಅಧ್ಯಯನ ಸಂಸ್ಥೆ

ಪಠ್ಯಪುಸ್ತಕಮಾಲೆ ೬

ಪ್ರಧಾನ ಸಂಪಾದಕ

ಪ್ರೊಫೆಸರ್ ಡಿ. ಜವರೇಗೌಡ

ವಿಭಾಗ ಸಂಪಾದಕ

ಪ್ರೊ. ಕೆ. ಎನ್. ನಾರಾಯಣ್

ಕರ್ಣಾಟಕದ ಅರಣ್ಯ ವೃಕ್ಷಗಳು

ಕರ್ಣಾಟಕದ ಅರಣ್ಯ ವೃಕ್ಷಗಳು

ಎಸ್. ಎನ್. ರಾಮುಸ್ವಾಮಿ

ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ

KARNATAKADA ARANYA VRUKSHAGALU (The Forest Trees of Karnataka) by S. N. Rama Swamy; Published by the Institute of Kannada Studies, University of Mysore, First Edition 1969. Pp. 244 + XVI.

ಸಾದಾ ಪ್ರತಿ : 11=00
ಉತ್ತಮ ಪ್ರತಿ : 14=00

ಮಾರಾಟಗಾರರು
ಡೈರೆಕ್ಟರ್
ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು.

ಮುದ್ರಣ
ಶ್ರೀ ಮೀರಾ ಪ್ರಿಂಟರ್ಸ್
ಶಿವರಾಂಪೇಟೆ, ಮೈಸೂರು.

ಮುನ್ನುಡಿ

ಶೈಕ್ಷಣಿಕ ಸಮಸ್ಯೆಗಳಲ್ಲಿ ಮೂಲಭೂತ ಸಮಸ್ಯೆ ಮಾಧ್ಯಮಕ್ಕೆ ಸಂಬಂಧಿಸಿದ್ದು. ಜ್ಞಾನ ವಿಜ್ಞಾನಗಳ ಪ್ರಗತಿ, ವಿದ್ಯಾಮಟ್ಟದ ಏರಿಕೆ, ಸಂಸ್ಕೃತಿ ವಿಕಾಸ, ಭಾವ ಸಾಮರಸ್ಯ, ಬುದ್ಧಿದಾಸ್ಯ ವಿಮೋಚನೆ, ಅನುಕರಣ ವಿಮುಖತೆ, ನೈರಾಶ್ಯನಾಶನ, ವರ್ಗಭೇದ ನಿರ್ಮೂಲನ, ಸಮಷ್ಟಿ ಪ್ರಜ್ಞೆಯ ಜಾಗೃತಿ, ಸರ್ವೋದಯ ಸಮಾಜೋದಯ–ಇವೆಲ್ಲ ಶಿಕ್ಷಣ ಮಾಧ್ಯಮವನ್ನು ಅವಲಂಬಿಸಿವೆ. ದೇಶಭಾಷೆ ಸಂಪೂರ್ಣವಾಗಿ ಬೋಧನ ಮಾಧ್ಯಮವಾಗುವ ತನಕ ಪೂರ್ವೋಕ್ತ ಸಮಸ್ಯೆಗಳು ಖಂಡಿತ ಬಗೆಹರಿಯುವುದಿಲ್ಲ. ಹಿಡಿ ಮಂದಿಯ ಸ್ವಾರ್ಥಕ್ಕಾಗಿ ಬಹು ಜನರ ಕಲ್ಯಾಣ ಬಲಿಯಾಗುತ್ತಿದೆ. ಪರಭಾಷಾ ಮಾಧ್ಯಮದಿಂದ ಪ್ರತಿವರ್ಷವೂ ಯುವಕ ಶಕ್ತಿ ಅಪಾರವಾಗಿ ವ್ಯಯವಾಗುತ್ತಿರುವುದಲ್ಲದೆ, ಸಹಸ್ರ ಸಹಸ್ರ ಕೋಟಿ ಧನ ದುರ್ವ್ಯಯವಾಗುತ್ತಿದೆ. ರಾಷ್ಟ್ರಪಿತ ಸ್ವಾತಂತ್ರ್ಯಶಿಲ್ಪಿ ಗಾಂಧೀಜಿ ಮೊದಲುಗೊಂಡು ಪ್ರಪಂಚದ ವಿದ್ಯಾತಜ್ಞರೆಲ್ಲ ಎಂದೋ ಒಪ್ಪಿಕೊಂಡಿರುವ ಸಂಗತಿಯಿದು.

ಮೈಸೂರು ವಿಶ್ವವಿದ್ಯಾನಿಲಯ ಹತ್ತು ವರ್ಷಗಳಿಗೆ ಹಿಂದೆಯೇ ಶ್ರೀ ಕುವೆಂಪು ಅವರ ಮಾರ್ಗದರ್ಶನದಲ್ಲಿ ಈ ತತ್ವವನ್ನಂಗೀಕರಿಸಿ, ಆಂಗ್ಲ ಭಾಷೆಯೊಡನೆ ಕನ್ನಡವೂ ಶಿಕ್ಷಣ ಮಾಧ್ಯಮವೆಂದು ಸಾರಿ ಜಾರಿಗೆ ತಂದಿತು. ಈ ನಡುವೆ ಎರಡು ಮೂರು ವರ್ಷ ಹಿಂದೇಟು ಹೊಡೆದಿದ್ದ ಆ ನೀತಿ ಡಾ. ಶ್ರೀ ಮಾಲಿಯವರ ಪ್ರಬಲ ನೇತೃತ್ವದಲ್ಲಿ ಇಮ್ಮಡಿ ಮುಮ್ಮಡಿ ಹುರುಪಿನಿಂದ ಪುನಶ್ಚೇತನಗೊಂಡಿದೆ. ಇದಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶಿಕ್ಷಣ ಸಚಿವರ ಪೂರ್ಣ ಬೆಂಬಲವಿದೆ. ಹೀಗಾಗಿ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಸಂಖ್ಯೆ ವರ್ಷ ವರ್ಷಕ್ಕೂ ಹಲವು ಮಡಿಯಾಗುತ್ತಿದೆ. ಪರಭಾಷಾ ಮಾಧ್ಯಮದ ಫಲಿತಾಂಶದೊಡನೆ ಹೋಲಿಸಿದಾಗ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳ ಫಲಿತಾಂಶ ಅಜಗಜಾಂತರವೆನ್ನುವಷ್ಟರ ಮಟ್ಟಿಗೆ ಉತ್ತಮಗೊಳ್ಳುತ್ತಿದೆ. ಪ್ರಿ-ಯೂನಿವರ್ಸಿಟಿ ಪರೀಕ್ಷೆಯಿಂದ ಹಿಡಿದು ಸ್ನಾತಕೋತ್ತರ ಪರೀಕ್ಷೆಯವರೆಗೆ ವಿದ್ಯಾರ್ಥಿಗಳು ಕನ್ನಡದಲ್ಲಿ ಉತ್ತರ ಬರೆಯುವ ಅವಕಾಶ ಕಲ್ಪಿಸಿದೆ. ಈಗಾಗಲೇ ಸಂಗೀತ ಪದವಿ ತರಗತಿಯಲ್ಲಿ ಇಂಗ್ಲಿಷ್ ಐಚ್ಛಿಕ ವಿಷಯವಾಗಿದ್ದು, ಆ ನೀತಿಯನ್ನು ಇತರ ತರಗತಿಗಳಿಗೂ ವಿಸ್ತರಿಸಲಾಗಿದೆ. ಕನ್ನಡ ಆಡಳಿತ ಭಾಷೆಯಾಗಲು ತರದೂದು ನಡೆಯುತ್ತಿದ್ದು, ಕೆಲವೆಡೆ ಈಗಾಗಲೇ ವಾಸ್ತವವಾಗಿ ಜಾರಿಯಲ್ಲಿರುವುದರಿಂದ ಕನ್ನಡ ಮಾಧ್ಯಮ ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಈಗ ಪಾರಿಭಾಷಿಕ ಶಬ್ದಗಳ ಸಮಸ್ಯೆ ಬಗೆಹರಿದಿದೆ. ವೈಜ್ಞಾನಿಕ ಗ್ರಂಥಗಳ ಕೊರತೆ ದಿನೇ ದಿನೇ ಕಡಿಮೆಯಾಗುತ್ತಿದೆ. ವಿಜ್ಞಾನ ಹಾಗೂ ಸಾಹಿತ್ಯೇತರ ವಿಭಾಗದ ಹಲವು ವಿಷಯಗಳ ಮೇಲೆ ಗ್ರಂಥಗಳು ಸಾಕಷ್ಟು ಬರುತ್ತಿವೆ. ಈ ನಿಟ್ಟಿನಲ್ಲಿ ಪ್ರಸಾರಾಂಗ ಅದ್ಭುತ ಕಾರ್ಯ ಮಾಡಿದೆ. ಅದು ಅನೇಕ ಲೇಖಕರನ್ನು ಸೃಷ್ಟಿಸಿದೆ. ದೇಶಭಾಷೆಗಳ ಅಭಿವೃದ್ಧಿಗಾಗಿ ಸಾಕಷ್ಟು ಧನಸಹಾಯ ಒದಗಿಸಲು ಕೇಂದ್ರ ಸರ್ಕಾರ ಮುಂದೆ ಬಂದಿದೆ. ಅದಕ್ಕಾಗಿಯೇ ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಸಂಸ್ಥೆಯನ್ನು ಪ್ರಾರಂಭಿಸಿ, ಅದರ ಮೂಲಕ ಅಭಿವೃದ್ಧಿ ಯೋಜನೆಗಳ ಜೊತೆಗೆ ಪಠ್ಯಪುಸ್ತಕ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ.

ಈ ಸಂಸ್ಥೆಯ ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗದಲ್ಲಿ ಈ ಯೋಜನೆ ರೂಪುಗೊಂಡು ಕಾರ್ಯಗತವಾಗುತ್ತಿದೆ. ನುರಿತ ಲೇಖಕರಿಂದ ಪುಸ್ತಕಗಳನ್ನು ಬರೆಯಿಸುವುದು, ಹೊಸ ಲೇಖಕರನ್ನು ಅಣಿಗೊಳಿಸುವುದು, ಭಾಷಾಂತರಕಾರರನ್ನು ತರಪೇತು ಮಾಡುವುದು, ಭಾಷಾಂತರ ಕಾರ್ಯ ಮತ್ತು ವೈಜ್ಞಾನಿಕ ಗ್ರಂಥಗಳ ಬರವಣಿಗೆಯಲ್ಲಿ ಎದುರಿಸಬಹುದಾದ ಸಮಸ್ಯೆಗಳನ್ನು ಪರಿಹರಿಸುವುದು, ಈ ವಿಭಾಗ ಕೈಗೊಂಡಿರುವ ಕೆಲಸ. ಸ್ವತಂತ್ರ ಗ್ರಂಥ ಪ್ರಕಟನೆಯ ಜೊತೆಗೆ ಅನ್ಯಭಾಷೆಗಳಿಂದ ವಿಷಯ ಭೇದವಿಲ್ಲದೆ ಮೇಲ್ದರ್ಜೆಯ ಗ್ರಂಥಗಳನ್ನು ಭಾಷಾಂತರದ ಮೂಲಕ ಹೊರ ತರುವ ಪ್ರಯತ್ನ ಭರದಿಂದ ಸಾಗುತ್ತಿದೆ. ಬೇರೆ ಬೇರೆ ವೈಜ್ಞಾನಿಕ ವಿಷಯಗಳಿಗೆ ಸಂಬಂಧಿಸಿದ ಪಾರಿಭಾಷಿಕ ಕೋಶಗಳನ್ನು ಸಿದ್ಧಪಡಿಸುವ ಯೋಜನೆಯೂ ಈಗೀಗ ಕಾರ್ಯಗತವಾಗುತ್ತಿದೆ. ಈಗಾಗಲೇ ಮನಶ್ಶಾಸ್ತ್ರಕೋಶ ಬಿಡುಗಡೆಯ ಹಂತವನ್ನು ತಲುಪಿದೆ. ಭಾಷಾ ವಿಜ್ಞಾನಕೋಶ ಅಚ್ಚಿನ ಮನೆಗೆ ಹೋಗಲಿದೆ. ಇಂತಹ ಇನ್ನೂ ಏಳು ಕೋಶಗಳನ್ನು ತಯಾರಿಸಲಾಗುತ್ತಿದೆ.

ಮಾನವಿಕ ಮತ್ತು ವೈಜ್ಞಾನಿಕ ವಿಭಾಗಗಳಲ್ಲಿ ಗ್ರಂಥಗಳನ್ನು ಬರೆಯುವವರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಹೊಸ ತಲೆಮಾರಿನ ತರುಣರು ಅತ್ಯಂತ ಶ್ರದ್ಧಾ ಸಕ್ತಿಗಳಿಂದ, ಆತ್ಮ ಪ್ರತ್ಯಯದಿಂದ ರಚನಾಕಾರ್ಯವನ್ನು ಕೈಗೆತ್ತಿಕೊಳ್ಳುತ್ತಿದ್ದಾರೆ. ಬರಹಗೆಲಸದಲ್ಲಿ ನಾನು ಮುಂದೆ ತಾನು ಮುಂದೆ ಎಂದು ಅನೇಕ ತರುಣ ಮಿತ್ರರು ಮುಂದೆ ಬರುತ್ತಿದ್ದಾರೆ. ಹಿಂದೆಂದೂ ಇಲ್ಲದ ಹುರುಪು ಹುಮ್ಮಸ್ಸು, ಕೆಚ್ಚು ನೆಚ್ಚುಗಳು ಅವರಲ್ಲಿ ಮೂಡಿ ಬರುತ್ತಿವೆ. ಈ ಉತ್ಸಾಹದ ನೆರೆಯನ್ನು ಕಂಡಾಗ ಐದಾರು ವರ್ಷಗಳಲ್ಲಿಯೇ ವೈಜ್ಞಾನಿಕ ಮತ್ತು ಮಾನವಿಕ ವಿಷಯಗಳನ್ನು ಕುರಿತ ಗ್ರಂಥ ಸಂಪತ್ತು ಸಾಕಷ್ಟಕ್ಕಿಂತಲೂ ಮಿಗಿಲಾಗಿ ಒದಗುತ್ತದೆನ್ನುವುದರಲ್ಲಿ ಸಂದೇಹವಿಲ್ಲ. ಪ್ರಕೃತ ಗ್ರಂಥವನ್ನು ರಚಿಸಿರುವ ಶ್ರೀ ಎಸ್. ಎನ್. ರಾಮಸ್ವಾಮಿ ಅವರು ಸಸ್ಯ ವಿಜ್ಞಾನ ಇಲಾಖೆಯಲ್ಲಿ ಸಂಶೋಧಕರಾಗಿದ್ದಾರೆ. ಅವರಿನ್ನೂ ತರುಣರು. ಅವರ ಬುದ್ಧಿಶಕ್ತಿ, ಶ್ರದ್ಧಾಸಕ್ತಿ, ಸಂಶೋಧನಾನುರಕ್ತಿ ಮತ್ತು ಕರ್ತವ್ಯಪರತೆಗಳು ಈ

ಗ್ರಂಥದಲ್ಲಿ ಪಡಿಮೂಡಿವೆ. ಕರ್ನಾಟಕದಲ್ಲಿ ಸಿಗುವ ಎಲ್ಲ ಅರಣ್ಯ ವೃಕ್ಷಗಳ ಮಾಹಿತಿಯನ್ನು ಬಹು ಕಡೆಗಳಿಂದ ಸಂಗ್ರಹಿಸಿ ಅನೇಕ ದೃಷ್ಟಿಗಳಿಂದ ಅವುಗಳನ್ನು ವಿವರಿಸಿದ್ದಾರೆ. ಪ್ರತಿಯೊಂದು ವೈಜ್ಞಾನಿಕ ಪದಕ್ಕೂ ಕನ್ನಡನಾಡಿನ ಬೇರೆ ಬೇರೆ ಕಡೆ ಪ್ರಚಲಿತವಾಗಿರುವ ಕನ್ನಡ ಶಬ್ದಗಳನ್ನು ಕೊಟ್ಟಿದ್ದಾರೆ. ಈ ವೃಕ್ಷಗಳ ಆರ್ಥಿಕ ಮಹತ್ವವನ್ನೂ, ಔಷಧಶಾಸ್ತ್ರದಲ್ಲಿನ ಉಪಯೋಗಗಳನ್ನೂ ಹೆಸರಿಸಿದ್ದಾರೆ. ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ಅರಣ್ಯಗಳ ಪಾತ್ರವೇನು, ಅರಣ್ಯ ಸಂರಕ್ಷಣೆ ಮತ್ತು ಅಭಿವೃದ್ಧಿಗಾಗಿ ಯಾವ ಕಾರ್ಯಗಳನ್ನು ಕೈಗೊಳ್ಳಬೇಕಾಗಿದೆ ಇವೇ ಮೊದಲಾದ ವಿಷಯಗಳೆಲ್ಲವನ್ನೂ ಚರ್ಚೆ ಮಾಡಿದ್ದಾರೆ. ಅನೇಕ ವೃಕ್ಷಗಳ ಚಿತ್ರಗಳನ್ನು–ಅವುಗಳಲ್ಲಿ ಕೆಲವು ತ್ರಿವರ್ಣದವು–ಸಂಗ್ರಹಿಸಿದ್ದಾರೆ. ಶ್ರಮಸಾಧ್ಯವಾದ ಈ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಕರ್ಣಾಟಕದ ಅರಣ್ಯ ವೃಕ್ಷಗಳ ಬಗ್ಗೆ ಇಷ್ಟೊಂದು ವಿವರಗಳನ್ನೊಳಗೊಂಡಿರುವ ಈ ಪುಸ್ತಕ ಈ ಕ್ಷೇತ್ರದಲ್ಲಿನ ಮೊಟ್ಟ ಮೊದಲನೆಯ ಪುಸ್ತಕವೆಂದು ಗೊತ್ತಾಗಿದೆ. ಸಸ್ಯ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೂ, ಅಧ್ಯಾಪಕರುಗಳಿಗೂ ತುಂಬ ಉಪಯುಕ್ತವಾಗಬಲ್ಲ ಇಂತಹ ಗ್ರಂಥವೊಂದನ್ನು ರಚಿಸಿ ಕೊಟ್ಟಿದ್ದಕ್ಕಾಗಿ ಶ್ರೀ ರಾಮಸ್ವಾಮಿಯವರು ಅಭಿನಂದನಾರ್ಹರಾಗಿದ್ದಾರೆ.

ಸಸ್ಯ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಕೆ. ಎನ್. ನಾರಾಯಣ್ ರವರು ಈ ಗ್ರಂಥಕ್ಕೆ ಅಭಿಪ್ರಾಯ ರೂಪವಾದ ಕೆಲವು ಮಾತುಗಳನ್ನು ಬರೆದಿದ್ದಾರೆ. ಭಾಷಾಂತರ ವಿಭಾಗದ ಸಹೋದ್ಯೋಗಿಗಳು ಈ ಗ್ರಂಥದ ಭಾಷೆಯನ್ನು ತಿದ್ದುವುದರ ಮೂಲಕ ಸಹಾಯ ಮಾಡಿದ್ದಾರೆ. ಶ್ರೀ ಮಾರಾ ಮುದ್ರಣಾಲಯದ ಒಡೆಯರು ಅತಿಶೀಘ್ರವಾಗಿ ಅಚ್ಚುಮಾಡಿ ಕೊಟ್ಟಿದ್ದಾರೆ. ಇವರಿಗೆಲ್ಲಾ ಕೃತಜ್ಞತೆಯ ವಂದನೆಗಳು.

ಮೈಸೂರು
೯–೭–೧೯೬೯

ಡಿ. ಜವರೇಗೌಡ
ಪ್ರಧಾನ ಸಂಪಾದಕ

ಸಂಪಾದಕರ ಮಾತು

ನನ್ನ ನೆಚ್ಚಿನ ಸಹೋದ್ಯೋಗಿಗಳಾದ ಶ್ರೀ. ಎಸ್. ಎನ್. ರಾಮಸ್ವಾಮಿಯವರು ಬರೆದಿರುವ "ಕರ್ನಾಟಕದ ಅರಣ್ಯ ವೃಕ್ಷಗಳು" ಎಂಬ ಪುಸ್ತಕಕ್ಕೆ ನಾನು ಎರಡು ಮಾತುಗಳನ್ನು ಬರೆದು ಕೊಡಬೇಕೆಂದು ಕೇಳಿದಾಗ ನಾನೇನೋ ಒಪ್ಪಿಕೊಂಡೆ. ಬಹಳ ಕಷ್ಟಪಟ್ಟು ಅನೇಕ ಆಧಾರ ಗ್ರಂಥಗಳಿಂದ ಪುಸ್ತಕಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ಸಂಗ್ರಹಿಸಿ, ಮಾಹಿತಿಗೆಲ್ಲಾ ಒಂದು ನಿರ್ದಿಷ್ಟ ರೂಪ ಕೊಟ್ಟು ಒಂದು ಒಳ್ಳೆಯ ಪುಸ್ತಕವನ್ನು ಹೊರತರುವ ಗುರುತರ ಕಾರ್ಯವನ್ನು ದಕ್ಷರೀತಿಯಲ್ಲಿ ಅವರು ನಿರ್ವಹಿಸಿದ್ದಾರೆ. ಇಂತಹ ಕಷ್ಟಸಾಧ್ಯ ವಿಷಯವನ್ನು ಅವರು ಕಾರ್ಯರೂಪಕ್ಕೆ ತಂದಿರುವಾಗ ಇದಕ್ಕೆ ಪ್ರಾಸ್ತಾವಿಕವಾಗಿ ಒಂದೆರಡು ಮಾತುಗಳನ್ನು ಬರೆಯುವುದೂ ಒಂದು ಕಷ್ಟದ ಕೆಲಸವೇ ಎಂಬುದು ಈ ಕೆಲಸಕ್ಕೆ ಕೈ ಹಚ್ಚಿದಾಗ ನನಗೆ ಚೆನ್ನಾಗಿ ಮನದಟ್ಟಾಯಿತು.

ನಮ್ಮ ಅರಣ್ಯಗಳಲ್ಲಿ ಹೆಚ್ಚಾಗಿ ಬೆಳೆಯುವ ೨೪೦ಕ್ಕೂ ಹೆಚ್ಚು ವೃಕ್ಷಗಳ ಬಗ್ಗೆ ಇಲ್ಲಿ ವಿವರಗಳಿವೆ. ಈ ವೃಕ್ಷಗಳು ನಮ್ಮ ದೇಶದವೇ ಆಗಿವೆಯೆ? ಇಲ್ಲವೆ ಬೇರೆ ದೇಶಗಳಿಂದ ತರಲ್ಪಟ್ಟವಾಗಿದ್ದರೆ ಯಾವ ದೇಶದಿಂದ ಬಂದಿವೆ? ಅವುಗಳು ನಮ್ಮ ದೇಶದಲ್ಲಿ ನಮ್ಮ ಸಂಸ್ಥಾನದಲ್ಲಿ ಯಾವ ಯಾವ ಭೌಗೋಳಿಕ ಪ್ರದೇಶಗಳಲ್ಲಿ ಬೆಳೆಯುತ್ತಿವೆ? ಅವುಗಳ ಸಸ್ಯಶಾಸ್ತ್ರದ ಮತ್ತು ಅಚ್ಚ ಕನ್ನಡದ ಹೆಸರುಗಳು, ಸಸ್ಯಶಾಸ್ತ್ರದ ವಿವರಣೆ, ಆರ್ಥಿಕ ಪ್ರಾಮುಖ್ಯ ಮತ್ತು ಉಪಯೋಗಗಳ ಬಗ್ಗೆ ಆದಷ್ಟು ವಿವರಗಳನ್ನು ಕೊಡಲು ಈ ಪುಸ್ತಕದಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ನಡೆದಿದೆ ಎಂದು ಹೇಳಿದರೆ ಅದೇನೂ ಅತಿಶಯೋಕ್ತಿಯಾಗಲಾರದು. ಕನ್ನಡದಲ್ಲಿ ನನಗೆ ತಿಳಿದಿರುವ ಮಟ್ಟಿಗೆ ಇಂತಹ ಪುಸ್ತಕಗಳು ವಿರಳವೆಂದೇ ಹೇಳಬೇಕು. ನಮ್ಮ ಅರಣ್ಯ ವೃಕ್ಷಗಳ ಕನ್ನಡದ ಹೆಸರುಗಳನ್ನೆಲ್ಲಾ ಸಂಗ್ರಹಿಸಿ ತಿಳಿಗನ್ನಡದಲ್ಲಿ ಅವುಗಳಿಗೆ ಮೇಲೆ ಹೇಳಿದ ಎಲ್ಲ ವಿವರಗಳನ್ನೊದಗಿಸಿ, ಅನೇಕ ಛಾಯಾ ಚಿತ್ರಗಳನ್ನೂ ರೇಖಾ ಚಿತ್ರಗಳನ್ನೂ ಅಳವಡಿಸಿ ಇಂತಹ ಒಂದು ಕೃತಿಯನ್ನು ಬರೆಯುವ ಸಾಹಸ ಕೈಗೊಂಡು ಅದರಲ್ಲಿ ಕೃತಕೃತ್ಯರಾಗಿ ಈ ಪುಸ್ತಕವನ್ನು ಕನ್ನಡಿಗರ ಮಡಿಲಲ್ಲಿಟ್ಟಿರುವುದು ನಿಜಕ್ಕೂ ಒಂದು ಪ್ರಶಂಸನಾರ್ಹ ಕೆಲಸ.

ನಮ್ಮ ಅರಣ್ಯ ಸಂಪತ್ತು ದಿನೇ ದಿನೇ ಕ್ಷೀಣವಾಗುತ್ತಿರುವುದರ ಬಗ್ಗೆ, ಅದರಿಂದ ಆಗುವ ಹಾನಿ ಇವುಗಳ ಕಡೆಗೆ ಓದುಗರ ಗಮನ ಸೆಳೆಯಲು ಲೇಖಕರು ಸಾಕಷ್ಟು ಪ್ರಯತ್ನಿಸಿದ್ದಾರೆ. ಅರಣ್ಯ ನಿರ್ಮೂಲನದಿಂದ ವನ್ಯ ಪ್ರಾಣಿಗಳಿಗಾಗುವ ಹಾನಿ, ದೇಶದ ವಾಯುಗುಣದ ಮೇಲೆ ಅರಣ್ಯಗಳ ನಾಶದಿಂದ ಆಗುವ ದುಷ್ಪರಿಣಾಮ,

ಮಣ್ಣಿನ ಸವಕಲಿಕೆ, ಅರಣ್ಯ ನಾಶದಿಂದ, ಮಳೆ ನೀರಿನ ಕೊರೆತದಿಂದ ಫಲವತ್ತಾದ ಭೂಮಿಯ ಮೇಲ್ಪದರ ನಾಶವಾಗಿ ಬಂಜರು ಭೂಮಿಯಾಗುವಿಕೆ ಮುಂತಾದ ಎಲ್ಲ ವೈಜ್ಞಾನಿಕ ವಿಷಯಗಳನ್ನೂ ಪರಿಣಾಮಕಾರಿಯಾಗಿ ಚಿತ್ರಿಸಿ ಅರಣ್ಯನಾಶದ ಬಗ್ಗೆ ಕನ್ನಡಿಗರನ್ನು ಎಚ್ಚರಿಸಿದ್ದಾರೆ. ಅರಣ್ಯನಾಶದಿಂದ ಆಗುವ ಅನೇಕ ದುಷ್ಪರಿಣಾಮಗಳು ನಮ್ಮ ನಾಗರೀಕತೆಯನ್ನು ಹಾಳು ಮಾಡಬಲ್ಲವು.

ಅರಣ್ಯಗಳನ್ನು ತಿಳಿದೋ ತಿಳಿಯದೆಯೋ ಹಾಳು ಮಾಡಿದ ಅನೇಕ ದೇಶಗಳು ಇಂದು ಹಾಳು ದೇಶಗಳಾಗಿ ಮರಳುಗಾಡುಗಳಾಗಿರುವ ನಿದರ್ಶನಗಳು ಎಷ್ಟೋ ಇವೆ. ಇವನ್ನೆಲ್ಲಾ ಮನ ಮುಟ್ಟುವಂತೆ ಚಿತ್ರಿಸಿ ನಮ್ಮ ಅಮೂಲ್ಯ ಅರಣ್ಯ ಸಂಪತ್ತನ್ನು ರಕ್ಷಿಸಿ ಇಟ್ಟುಕೊಳ್ಳುವುದರಲ್ಲಿ ಅಧಿಕಾರಿಗಳ, ರಾಜಕಾರಣಿಗಳ ಮತ್ತು ಸಾಮಾನ್ಯ ಜನರ ಪಾತ್ರವೇನು ಎಂಬುದನ್ನು ಸೂಕ್ಷ್ಮವಾಗಿ ವಿವರಿಸಿದ್ದಾರೆ. ನಮ್ಮ ದೇಶದ ಜನ ಎಚ್ಚೆತ್ತು ಅರಣ್ಯ ಸಂರಕ್ಷಣೆಯ ಕಡೆಗೆ ಗಮನವೀಯುವಂತೆ ಮಾಡಿದ್ದಾರೆ.

ಇಂತಹ ಒಂದು ಒಳ್ಳೆಯ ಪುಸ್ತಕವನ್ನು ಬರೆಯಲು ನೆರವಾಗಿ ಪುಸ್ತಕವನ್ನು ಮುದ್ರಿಸಿ ಕನ್ನಡಿಗರ ಮುಂದಿಟ್ಟು ಉಪಕಾರ ಮಾಡಿರುವ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯವರು ನಿಜಕ್ಕೂ ವಂದನಾರ್ಹರು. ಅವರ ಮೂಲಕ ಮುಂದೆಯೂ ಸಸ್ಯಶಾಸ್ತ್ರಜ್ಞರಿಗೆ, ಸಾಮಾನ್ಯಜನತೆಗೆ ಹಾಗೂ ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತಹ ಇಂತಹ ಸ್ತುತ್ಯ ಕೃತಿಗಳು ಬಹಳವಾಗಿ ಬರಲೆಂದು ಆಶಿಸಿ, ಹಾರೈಸಿ ನನ್ನ ಈ ಎರಡು ಮಾತುಗಳನ್ನು ಮುಗಿಸಿದ್ದೇನೆ.

ಮೈಸೂರು
೮–೭–೬೯

ಕೆ. ಎನ್. ನಾರಾಯಣ್
ಸಂಪಾದಕರು, ಸಸ್ಯವಿಜ್ಞಾನ ವಿಭಾಗ

ಲೇಖಕನ ಮಾತು

ಈಗ್ಗೆ ಎರಡು ವರ್ಷಗಳ ಹಿಂದೆ ಎಂ.ಎಸ್‌ಸಿ., ಸಸ್ಯಶಾಸ್ತ್ರದ ವಿದ್ಯಾರ್ಥಿಗಳೊಂದಿಗೆ ಬಾಳೆಹೊನ್ನೂರು, ಚಿಕ್ಕಮಗಳೂರು, ಬಾಬಾಬುಡನ್‌ಗಳ ಮಾರ್ಗವಾಗಿ ಕೆಮ್ಮಣ್ಣು ಗುಂಡಿಗೆ ಹೋಗಿದ್ದೆ. ಕೆಮ್ಮಣ್ಣುಗುಂಡಿಯ ಆ ತಂಪು ಹವೆ ಮೈ ಮನಗಳನ್ನು ಪುಳಕಗೊಳಿಸಿತ್ತು. ಪುಷ್ಯಮಾಸದ ಅಲ್ಲಿನ ನಿಸರ್ಗ ಸೌಂದರ್ಯ ನಿಜಕ್ಕೂ ಕಣ್ಮನ ತಣಿಸುವಂತೆ ರಮಣೀಯವಾಗಿತ್ತು. ಸಮುದ್ರ ಮಟ್ಟಕ್ಕೆ ೬೧೫೫ ಅಡಿಗಳಷ್ಟು ಎತ್ತರವಿರುವ ಕಲ್ಹತ್ತಿಗಿರಿಯ ಮೇಲೆ ನಿಂತು ಒಮ್ಮೆ ಕಣ್ಣು ಹಾಯಿಸಿದೆ. ಸುತ್ತಲೂ ಹಬ್ಬಿದ್ದ ಮಲೆಗಳು ಮುಗಿಲೆತ್ತರಕ್ಕೆ ನಿಮಿರಿ ನಿಲ್ಲಲು ತಮ್ಮ ತಮ್ಮಲ್ಲೇ ಪೈಪೋಟಿ ನಡೆಸಿದಂತಿತ್ತು. ದೂರದಲ್ಲಿ ಭವ್ಯ ನಿಲುವಿನ ಬಾಬಾಬುಡನ್ ಮತ್ತು ಮುಳ್ಳಯ್ಯನ ಗಿರಿಗಳು ಅಸ್ಪಷ್ಟವಾಗಿ ಕಾಣಿಸುತ್ತಿದ್ದುವು. ಉದಯ ರವಿಯ ಹೊಂಗಿರಣಗಳು ಚಲುವಿನ ಹಸುರುಡೆಯುಟ್ಟ ಕಾನನಶ್ರೀಯ ಮೇಲೆ ಬಿದ್ದು ಪರ್ವತ ಶ್ರೇಣಿಗಳು ಭೂರಮೆಗೆ ಹೇಳಿ ಮಾಡಿಸಿದ ರತ್ನಹಾರಗಳೋ ಎಂದು ಕಂಗೊಳಿಸುವಂತೆ ಮಾಡಿದ್ದುವು. ಮಂಜು ಮುಸುಕಿದ ಆ ಉತ್ತುಂಗ ಪರ್ವತ ಶಿಖರಗಳನ್ನಪ್ಪಲು ಕಾತರಿಸಿ ಧಾವಿಸುತ್ತಿದ್ದ ಚಲುವಿನ ಬೆಳ್ಮುಗಿಲುಗಳ ಮೇಲೆ ಅನಿಲನ ಧಾಳಿ ಸತತವಾಗಿ ಸಾಗಿತ್ತು. ವನಶ್ರೀಯ ಕೇಶರಾಜಿಯನ್ನು ತೀಡಿ, ತಿದ್ದಿ ಬೈತಲೆ ತೆಗೆದಂತೆ ಅಲ್ಲಲ್ಲೆ ಪ್ರಪಾತಗಳ ಕೆಳಗೆ ಕೆಲವು ಸೀಳ್ದಾರಿಗಳು ಕಾಣುತ್ತಿದ್ದವು. ಅನತಿ ದೂರದಲ್ಲಿ ಒಮ್ಮೊಮ್ಮೆ ಕೇಳಿ ಬರುತ್ತಿದ್ದ ಖಗಮಿಗಗಳ ಇಂಚರ ಸುತ್ತಲಿನ ಕಣಿವೆಗಳಲ್ಲಿ ಮಾರ್ದನಿಗೊಳ್ಳುತ್ತಿತ್ತು. ಕಣ್ಮನತಣಿಸುವ ಆ ಅಮೇಯ ಸೌಂದರ್ಯದ ಮುಗ್ಧ ಆರಾಧಕನಾಗಿ ಒಂದು ಬಗೆಯ ಅಲೌಕಿಕ ಆನಂದವನ್ನನುಭವಿಸುತ್ತಿದ್ದ ನನ್ನ ಮನ 'ಹಿಂದೆ ಹೋಗೋಣವೆ ಸಾರ್' ಎಂದು ಒಬ್ಬವಿದ್ಯಾರ್ಥಿ ಎಚ್ಚರಿಸಿದಾಗ ಜಾಗೃತವಾಯಿತು. ಮಾತೆತ್ತಿದರೆ, 'ಅಮೆರಿಕಾ ಇಂಗ್ಲೆಂಡುಗಳಲ್ಲೇ ನಾವು ಪ್ರಕೃತಿ ಸೌಂದರ್ಯದ ಭವ್ಯತೆ, ರಮ್ಯತೆ, ದಿವ್ಯತೆಗಳ ಸಾಕ್ಷಾತ್ಕಾರ ಮಾಡಿಕೊಂಡಿದ್ದು ; ಅಲ್ಲಿಯೇ ನಾವು ಅವನ್ನು ಕಾಣಬಹುದು ; ಅಲ್ಲಿ ಇದ್ದಂತೆ ನಮ್ಮ ದೇಶದಲ್ಲೇನೂ ಇಲ್ಲ' ಎನ್ನುವವರ ಮೌಢ್ಯದ ಬಗ್ಗೆ ನಗು ಬಂತು. ಇಲ್ಲಿಯೇ ಹುಟ್ಟಿ, ಬೆಳೆದು ದೊಡ್ಡವರಾಗಿ ನಮ್ಮ ಅರಣ್ಯ ಸಿರಿಯ ಬಗ್ಗೆಯೇ ತಿಳಿವಳಿಕೆ, ಕಲ್ಪನೆಗಳಿಲ್ಲದವರು ವಿದೇಶಗಳ ಬಗ್ಗೆ ಏನಾದರೂ ಉಸುರಿದಾಗ ಯಾರೂ ಅದನ್ನೇ ಭರತವಾಕ್ಯವಾಗಿ ತೆಗೆದುಕೊಳ್ಳಲಾರರು.

ಬೆಟ್ಟದ ಏರಿಳಿವುಗಳು, ಕಣಿವೆ, ಕಂದರಗಳ ಮಧ್ಯೆ ವಿದ್ಯಾರ್ಥಿ ವಿದ್ಯಾರ್ಥಿನಿಯರೊಡಗೂಡಿ ಹಿಂದೆ ಬರುತ್ತಿದ್ದೆವು. ಆ ದುರ್ಗಮ, ಕುತೂಹಲಕಾರಿ ಕಿರುದಾರಿಯ ಅಕ್ಕ ಪಕ್ಕಗಳಲ್ಲಿ ಉದ್ದಕ್ಕೂ ಕೆಲವು ದೈತ್ಯವೃಕ್ಷಗಳೂ ಚಿಕ್ಕ ಪುಟ್ಟ ತರುಲತೆಗಳೂ

ಸಿಕ್ಕುತ್ತಿದ್ದವು. ಅವುಗಳಲ್ಲಿ ಅಲ್ಲಿಯ ಕೆಲವು ಸಸ್ಯಗಳ ಸಸ್ಯಶಾಸ್ತ್ರದ ಹೆಸರುಗಳು ಜಾತಿ, ಕುಟುಂಬಗಳು ಇವುಗಳ ವಿಷಯ ನಮಗೂ ಗೊತ್ತಿರಲಿಲ್ಲ. ನನ್ನ ಜೊತೆಯೇ ಇದ್ದ ಮಲೆನಾಡಿನ ಕೆಲವು ವಿದ್ಯಾರ್ಥಿಗಳಿಗೆ ಆ ವೃಕ್ಷಗಳ ಕನ್ನಡದ ಹೆಸರುಗಳು ಚೆನ್ನಾಗಿ ಗೊತ್ತಿದ್ದುವು. ನಮ್ಮ ಸಂಸ್ಥಾನದ ಸಸ್ಯಗಳ ಕನ್ನಡದ ಹೆಸರುಗಳ ಬಗೆ ನನಗೆ ಆಗ ಸ್ವಲ್ಪವೂ ತಿಳಿದಿರಲಿಲ್ಲ. ಅಂದರೆ ಈಗ ಎಲ್ಲ ತಿಳಿದಿದೆ ಎಂದಲ್ಲ. ಕನ್ನಡದ ಹೆಸರುಗಳನ್ನೆಲ್ಲಾ ಒಂದೆಡೆ ಸಂಗ್ರಹಿಸಿ ಅವುಗಳ ಸಸ್ಯಶಾಸ್ತ್ರದ ನಾಮಕರಣ, ವರ್ಗೀಕರಣ ಮತ್ತು ಉಪಯುಕ್ತತೆಗಳ ಬಗ್ಗೆ ಒಂದು ಚಿಕ್ಕಪುಸ್ತಕ ನಮ್ಮ ಮಾತೃ ಭಾಷೆಯಲ್ಲೇ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು? ಇಂತಹ ಕಷ್ಟ ಕಾಲದಲ್ಲಿ ಅದು ಎಷ್ಟು ಉಪಯೋಗಕ್ಕೆ ಬರುತ್ತಿತ್ತು ಎಂದು ವ್ಯಸನ ಪಟ್ಟಿದ್ದುಂಟು. ಇದೇ ಪ್ರಸಂಗ ದಲ್ಲಿಯೇ ನನ್ನ ಸ್ನೇಹಿತರುಗಳ ಪೈಕಿ ಕೆಲವರು ಇತರ ಭಾರತೀಯ ಭಾಷೆಗಳಲ್ಲೇ ಇಂತಹ ಪುಸ್ತಕ ಇನ್ನೂ ಬಂದಿಲ್ಲ. ಆದ್ದರಿಂದ ಕನ್ನಡದಲ್ಲಿ ಇಂತಹ ಪುಸ್ತಕವೊಂದನ್ನು ರಚಿಸಲು ಮಾಹಿತಿ ಸಂಗ್ರಹ ಮಾಡಲು ಹೊರಡುವುದು ಹುತ್ತಕ್ಕೆ ನೀರು ತುಂಬಲು ಹೊರಟಂತೆ ಹುಚ್ಚು ಸಾಹಸವಾಗುತ್ತದೆ ಎಂದರು ಕನ್ನಡ ಮಾತೃಭಾಷೆಯಾಗಿ ದ್ದರೂ ಕನ್ನಡದಲ್ಲಿ ಏನನ್ನೂ ಬರೆದು ಪ್ರಕಟಗೊಳಿಸದಿದ್ದ ನನಗೆ ಕನ್ನಡ ಭಾಷೆಯ ವಿಪುಲ ಶಬ್ದ ಸಂಪತ್ತಿನ ಅರಿವು ಅಂದಿರಲಿಲ್ಲವೆಂದೇ ಹೇಳಬೇಕು. ಸ್ವಲ್ಪ ಹೆದರಿ ಕೊಂಡೇ ಇಂತಹ ಒಂದು ಪುಸ್ತಕವನ್ನು ಬರೆಯಬೇಕೆಂದು ತೀರ್ಮಾನಿಸಿದೆ. ಪುಸ್ತಕ ವನ್ನು ಪೂರ್ಣವಾಗಿ ಬರೆದು ಮುಗಿಸಿ ಅದಕ್ಕೆ ಪೂರಕವಾಗಿ ಚಿತ್ರಗಳನ್ನೂ, ಛಾಯಾ ಚಿತ್ರಗಳನ್ನೂ ತಯಾರಿಸಿ ಕೊಳ್ಳುವ ಹೊತ್ತಿಗೆ ಎರಡು ವರ್ಷಗಳು ಕಳೆದವು. ಈ ನಡುವೆ ಕೆಲವರಂತೂ ನಿನ್ನ ಕರ್ಣಾಟಕದ ಅರಣ್ಯ ರೋದನ ಎಲ್ಲಿಗೆ ಬಂತು? (ನೀನು ಬರೆಯುತ್ತಿರುವ ಕರ್ಣಾಟಕದ ಅರಣ್ಯ ವೃಕ್ಷಗಳು ಪುಸ್ತಕ ಎಲ್ಲಿಯವರೆಗೆ ಬಂದಿದೆ ಎಂದು ಕೇಳುವುದಕ್ಕೆ ಬದಲಾಗಿ) ಎಂದೆಲ್ಲಾ ಕೇಳಿದ್ದರು.

ಹೆಚ್ಚುತ್ತಿರುವ ಜನಸಂಖ್ಯೆ, ದನಗಳ ಸಂಖ್ಯೆ, ನಿರಾಶ್ರಿತರ ಪುನರ್ವಸತಿಯ ಸಮಸ್ಯೆಗಳು, ಅರಣ್ಯೋತ್ಪನ್ನಗಳ ಹೆಚ್ಚಿನ ಬೇಡಿಕೆಗಳು, ವ್ಯವಸಾಯಯೋಗ್ಯ ಭೂಮಿಯ ಹೆಚ್ಚಿನ ಬೇಡಿಕೆ ಮುಂತಾದ ಭೀಕರ ಸಮಸ್ಯೆಗಳನ್ನೆದುರಿಸುತ್ತಿರುವ ಇಂದಿನ ಪೀಳಿಗೆ ಅರಣ್ಯಗಳ ನಿರ್ಮೂಲನಕ್ಕೆ ತೊಡಗುವುದೇನೂ ಅಸಂಭವವಲ್ಲ. ಇಂತಹ ಕಾಲದಲ್ಲಿ ವೈಜ್ಞಾನಿಕ ರೀತಿಯಲ್ಲಿ ಸಾಮಾನ್ಯ ಮನುಷ್ಯನಿಗೆ ರಾಜ್ಯದ ಅರಣ್ಯಗಳ ನಿಷ್ಕೃಷ್ಟ ಪರಿಚಯವನ್ನು ಮಾಡಿ ಕೊಟ್ಟು, ಅರಣ್ಯಗಳ ಮತ್ತು ಅರಣ್ಯ ವೃಕ್ಷಗಳ ಪ್ರಾಮುಖ್ಯವನ್ನು ತಿಳಿಸಿ ಕೊಡುವುದು ಅತ್ಯಗತ್ಯ. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಈ ರೀತಿ ಹೇಳಿದ್ದರು : "There is a good case for producing readable literature to

enlighten the common people about India's forest wealth and its importance."

ಆದರೆ ಪುಸ್ತಕದ ರಚನೆ ನಾನೆಣಿಸಿದಂತೆ ಅಷ್ಟು ಸರಳವಾಗಿರಲಿಲ್ಲ. ಪ್ರಪ್ರಥಮ ವಾಗಿ ನಾನೆದುರಿಸಿದ ಕ್ಲಿಷ್ಟ ಸಮಸ್ಯೆ ನಮ್ಮ ಅರಣ್ಯ ವೃಕ್ಷಗಳ ಕನ್ನಡದ ನಿಜ ನಾಮಧೇಯಗಳನ್ನು ಪತ್ತೆ ಹಚ್ಚುವುದು. ನಮ್ಮ ವೃಕ್ಷಗಳಿಗಾದರೋ ಕನ್ನಡದಲ್ಲಿ ಅನೇಕ ಹೆಸರುಗಳಿವೆ. ಉ. ಕ. ಜಿಲ್ಲೆಯಲ್ಲಿ ಒಂದು ಮರಕ್ಕೆ ಒಂದು ಹೆಸರಿದ್ದರೆ ಆ ಹೆಸರಿನ ಮರ ಕೊಡಗು ಜಿಲ್ಲೆಯಲ್ಲಿ ಬೇರೆಯೇ ಆಗಿರುತ್ತದೆ. ಕೊಡಗಿನ ಹೆಸರು ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿರುವುದಿಲ್ಲ. ಈ ದಿಕ್ಕಿನಲ್ಲಿ ಹಾಸನ ಜಿಲ್ಲೆಯ ಈಡಿಗರು, ಗೊಲ್ಲರು, ಬಿಳಿಗಿರಿ ರಂಗನ ಬೆಟ್ಟದ ಹತ್ತಿರವಿರುವ ಸೋಲಿಗರು, ಮಲೆ ನಾಡಿನ ಬೇಡರುಗಳು, ಪಶ್ಚಿಮ ಘಟ್ಟ ಪ್ರದೇಶದ ಕೆಲವು ಮೂಲನಿವಾಸಿಗಳು ನನಗೆ ಹೆಚ್ಚಿನ ಸಹಾಯ ಮಾಡಿದ್ದಾರೆ. ಬಹಳಷ್ಟು ಮರಗಳನ್ನು ಕಾಡಿನಲ್ಲಿ ನನಗೆ ತೋರಿ ಸಿರುವುದಲ್ಲದೆ ಅವುಗಳ ವಿವಿಧ ಕನ್ನಡದ ಹೆಸರುಗಳ ಪರಿಚಯವನ್ನು ನನಗೆ ಮಾಡಿ ಕೊಟ್ಟಿದ್ದಾರೆ.

ನಮ್ಮ ಇಂದಿನ ಅನೇಕ ಅರಣ್ಯಗಳು ಹಿಂದಿದ್ದಂತೆಯೇ ಇಲ್ಲ. ಈಗ್ಗೆ ನೂರಾರು ವರ್ಷಗಳ ಹಿಂದೆ ಇದ್ದ ಎಲ್ಲ ಅರಣ್ಯ ಸಸ್ಯಗಳೂ ಅವುಗಳ ಭೌಗೋಳಿಕ ವಿತರಣೆ ಸ್ವಲ್ಪವೂ ಬದಲಾಯಿಸದಂತೆ ಇಂದಿಗೂ ಆಯಾ ಅರಣ್ಯಗಳಲ್ಲೇ ಇವೆ ಎಂದು ಬೋಧಿಸುವುದು ಮೂರ್ಖತನದ ಪರಿಮಾವಧಿಯಾಗುತ್ತದೆ. ಗಬ್ಬಳರಲ್ಲಿ ಕ್ಯಾಮರಾನ್ (Cameron) ಮೈಸೂರಿನ ಹಾಗೂ ಕೊಡಗಿನ ಅರಣ್ಯ ವೃಕ್ಷಗಳ ಬಗ್ಗೆ ಒಂದು ಪುಸ್ತಕ ಬರೆದಿದ್ದರು. ಇಂದು ಅವರ ಪುಸ್ತಕ ಅಲಭ್ಯ, ಅಪೂರ್ಣ ಮತ್ತು ಸ್ವಲ್ಪ ಮಟ್ಟಿಗೆ ಅವಾಸ್ತವಿಕ. ಆದರೂ ಅವರು ಶ್ರದ್ಧಾಸಕ್ತಿಗಳನ್ನು ವಹಿಸಿ ಸಂಗ್ರಹಿಸಿರುವ ಸಸ್ಯಗಳ ಅನೇಕ ಕನ್ನಡದ ಹೆಸರುಗಳು ಇಂದೂ ಸರಿಯಾಗೇ ಕಂಡು ಬಂದಿರುವುದು ಮೆಚ್ಚಿ ಪ್ರಶಂಸಿಸಬೇಕಾದ ವಿಷಯ.

ವೃಕ್ಷಗಳ ಕನ್ನಡದ ಹೆಸರುಗಳನ್ನೆಲ್ಲಾ ಒಂದೆಡೆ ಸಂಗ್ರಹಿಸಿಟ್ಟುಕೊಂಡು, ಅನಂತರ ಅವುಗಳ ಸಸ್ಯಶಾಸ್ತ್ರದ ಹೆಸರು, ವಿವರಣೆಗಳು, ಆರ್ಥಿಕ ಪ್ರಾಮುಖ್ಯ, ವೈದ್ಯ ಕೀಯ ಪ್ರಾಮುಖ್ಯ ಮುಂತಾದುವುಗಳ ಬಗ್ಗೆಯೆಲ್ಲಾ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದೆ. ಮೊದಮೊದಲು ವೃಕ್ಷಗಳ ಕನ್ನಡದ ಹೆಸರುಗಳಿಗೆ ಹಿಂದಿನ ಬ್ರಿಟಿಷ್ ಅಧಿಕಾರಿಗಳು ಕೊಟ್ಟಿದ್ದ ಎಲ್ಲ ಹೆಸರುಗಳನ್ನೂ ಜೋಡಿಸಿಕೊಂಡು ಹೊರಟೆ. ಆಗುತ್ತಿದ್ದ ಅನಾಹುತಗಳನ್ನು ನನ್ನ ಗುರುಗಳು ನನಗೆ ಸಕಾಲದಲ್ಲೇ ಎಚ್ಚರಿಕೆ ಕೊಟ್ಟು ತಪ್ಪಿಸಿದರು. ಅಂದೇ ತೀರ್ಮಾನಿಸಿದೆ. ಈ ಎಲ್ಲ ಮರಗಳನ್ನು ನಾನು ಮೊದಲು ನೋಡಬೇಕು. ಸಾಧ್ಯವಾದಲ್ಲಿ ಸಂಗ್ರಹಿಸಿ, ಪರೀಕ್ಷಿಸಿ ಅನಂತರವೇ ಅವುಗಳ ವಿಷಯ

ವಾಗಿ ಬರೆಯಬೇಕು ಎಂದು. ಒಮ್ಮೊಮ್ಮೆ ಸಸ್ಯಶಾಸ್ತ್ರದಲ್ಲಿ ಒಂದೇ ಹೆಸರಿರುವ (ಉದಾ. Diospyros melanoxylon Roxb.) ವೃಕ್ಷಗಳು ಹಿಂದಿನ ಎರಡು ವೃಕ್ಷಗಳ ವಿವರಣೆಗಳಿಗೇ (Disopyros tupru Buch-Ham. ಮತ್ತು D. melanoxylon Roxb.) ಹೆಚ್ಚು ಹೋಲಿಕೆಗಳನ್ನು ಹೊಂದಿರುವುದು ಕಂಡು ಬಂತು. ಅಂಥವುಗಳನ್ನು ಪ್ರತ್ಯೇಕವಾಗೀ ವಿವರಿಸಲು ಪ್ರಯತ್ನಿಸಿದ್ದೇನೆ.

ಈ ಪುಸ್ತಕ ಬರೆಯಲು ಪ್ರಾರಂಭಿಸಿದಂದಿನಿಂದ ಮುಗಿಸುವವರೆಗೂ ತಮ್ಮೆಲ್ಲ ಪ್ರೋತ್ಸಾಹ ಸಹಕಾರಗಳನ್ನಿತ್ತು ಆಗಾಗ್ಗೆ ಮೂಡಿ ಬರುತ್ತಿದ್ದ ಎಲ್ಲ ಅನುಮಾನ ಗಳಿಗೂ ಸೂಕ್ತ ಪರಿಹಾರಗಳನ್ನೊದಗಿಸಿ ತಮ್ಮ ದಕ್ಷ ಮತ್ತು ಅತ್ಯುತ್ತಮ ನಿರ್ದೇಶನ ದಿಂದ ಈ ಪುಸ್ತಕವನ್ನು ತಮ್ಮ ನೇತೃತ್ವದಲ್ಲೇ ಸಾಕಷ್ಟು ಮಟ್ಟಿಗೆ ಒಳ್ಳೆಯ ರೀತಿಯಲ್ಲಿ ಹೊರತರಲು ನನ್ನ ನೆಚ್ಚಿನ ಗುರುಗಳಾದ ಡಾ. ಡಿ. ಎ. ಗೋವಿಂದಪ್ಪನವರು ಕಾರಣ ರಾಗಿದ್ದಾರೆ. 'ಬಿ.ಎಸ್‌ಸಿ. ಆದರೇನು? ಎಂ. ಎಸ್‌ಸಿ. ಆದರೇನು ಸಾಧ್ಯವಾದಲ್ಲಿ ಎಲ್ಲ ಕಡೆಯೂ ಕನ್ನಡ ಮಾಧ್ಯಮ ಇಂದಲ್ಲ ನಾಳೆ ಬರಬೇಕಾದ್ದು. ಕನ್ನಡದ ಕೆಲಸ ವೇನಿದ್ದರೂ ಸರಿ ಅದನ್ನು ಮೊದಲು ಮಾಡಿ' ಎಂದು ಎಲ್ಲಾ ಕಾಲಗಳಲ್ಲೂ ನಮ್ಮೆಲ್ಲ ರನ್ನೂ ಪ್ರೋತ್ಸಾಹಿಸುತ್ತಿರುವ ನನ್ನ ಮೆಚ್ಚಿನ ಪ್ರಾಧ್ಯಾಪಕರಾದ ಡಾ. ಕೆ. ಎನ್. ನಾರಾಯಣ್ ಅವರು ಪ್ರಾಸ್ತಾವಿಕ ಮಾತುಗಳನ್ನು ಬರೆದು ಹರಸಿದ್ದಾರೆ. ಡಾ. ರಾಜಿಯುವರು ನನ್ನ ಹಸ್ತಪ್ರತಿಯನ್ನು ಮೊದಲಿನಿಂದ ಕೊನೆಯವರೆಗೆ ಓದಿ ಸಸ್ಯಶಾಸ್ತ್ರದ ನಾಮಕರಣಗಳ ಬಗ್ಗೆ ಸೂಕ್ತ ತಿದ್ದುಪಡಿಗಳನ್ನು ಮಾಡಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ಕನ್ನಡದಲ್ಲಿ ವಿಜ್ಞಾನದ ಬಗ್ಗೆ ಏನೇ ಬರೆದಿರಲಿ ಅದರಲ್ಲಿ ಸಾಕಷ್ಟು ಹುರುಳಿದ್ದರೆ ಅದನ್ನು ತಾವೇ ಸ್ವತಃ ಪರೀಕ್ಷಿಸಿ ಚಿಕ್ಕವರು, ದೊಡ್ಡವರು ಎಂಬ ಭೇಧಭಾವವಿಡದೆ ಅವರನ್ನು ಪ್ರೋತ್ಸಾಹಿಸಿ ಅವರ ಕೃತಿಗಳನ್ನು ಬೆಳಕಿಗೆ ತರಲು ಸೂಕ್ತ ಏರ್ಪಾಡು ಮಾಡುತ್ತಿರುವ ಪ್ರೊ. ದೇಜಗೌ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಪುಸ್ತಕದ ಬಗ್ಗೆ ಅತೀವ ಶ್ರದ್ಧಾಸಕ್ತಿಗಳನ್ನು ತೋರಿಸಿ ತಮ್ಮ ಗ್ರಂಥಾಲಯವನ್ನು ನನಗೆ ತೆರವು ಮಾಡಿಕೊಟ್ಟು ಅಮೂಲ್ಯ ಸಲಹೆಗಳನ್ನಿತ್ತ ಮೈಸೂರಿನ ಜಿಲ್ಲಾ ಅರಣ್ಯಾಧಿಕಾರಿಗಳಾದ ಶ್ರೀ. ಬಿ. ಬಾಲಯ್ಯ, ಐ. ಎಫ್. ಎಸ್. ಅವರಿಗೆ ನಾನು ಚಿರಋಣಿ. ಕೆಲವೊಮ್ಮೆ ಅವರು ತಮ್ಮ ವಾಹನದಲ್ಲೇ ಜಿಲ್ಲೆಯ ಕೆಲವು ಮುಖ್ಯ ಅರಣ್ಯ ಗಳಿಗೆಲ್ಲಾ ಕರೆದುಕೊಂಡು ಹೋಗಿ ಆ ಅರಣ್ಯಗಳ ಬಗ್ಗೆ ವಿಶೇಷ ಮಾಹಿತಿ ನೀಡಿ, ಅವರು ನಡೆಸುತ್ತಿರುವ ವನಮಹೋತ್ಸವ ಮುಂತಾದುವುಗಳ ವಿಷಯವಾಗಿ ಅಪಾರ ವಿವರಗಳನ್ನು ಒದಗಿಸಿದ್ದಾರೆ.

ನಮ್ಮ ಅರಣ್ಯಗಳ ಬಗ್ಗೆ ಕೆಲವು ಮುಖ್ಯ ವಿವರಗಳನ್ನೊದಗಿಸಿದ ಸಂಸ್ಥಾನದ ಅರಣ್ಯ ಇಲಾಖೆಯ ಎಂ. ಖಾದರ್ ಹುಸೇನ್‌ರವರಿಗೂ, ಅರಣ್ಯ ಸಂಶೋಧನಾ

ಇಲಾಖೆಯ ಅಧಿಕಾರ ವರ್ಗದವರಿಗೂ ನಾನು ಕೃತಜ್ಞನಾಗಿದ್ದೇನೆ. 'ವೆಲ್ತ್ ಆಫ್ ಇಂಡಿಯಾ' ಸಂಹಿತೆಗಳಲ್ಲಿ ಪ್ರಕಟಗೊಂಡ ಕೆಲವು ಛಾಯಾ ಚಿತ್ರಗಳನ್ನೂ ಕೆಲವು ಮುಖ್ಯ ಮರಗಳ ಅಡ್ಡ ಸೀಳಿನ ಸೂಕ್ಷ್ಮ ಛಾಯಾ ಚಿತ್ರಗಳನ್ನು ನನ್ನ ಪುಸ್ತಕದಲ್ಲಿ ಪ್ರಕಟಗೊಳಿಸಲು ಅನುಮತಿ ಇತ್ತಿರುವ ಎಸ್. ಎನ್. ತುಳ್ಸಿಯಾನಿ (S. N. Tulsiani, Under Secretary to the Govt. of India, Ministry of food & Agriculture, C. D. & Co-opn, Govt. of India ಅವರಿಗೂ, ಡೆಹ್ರಾಡೂನಿನ ಅರಣ್ಯ ಸಂಶೋಧನ ಇಲಾಖೆಯವರಿಗೂ ನಾನು ಚಿರಋಣಿಯಾಗಿದ್ದೇನೆ. ತಮ್ಮ ಪುಸ್ತಕದಲ್ಲಿನ ಕೆಲವು ಚಿತ್ರಗಳನ್ನು ಪ್ರಕಟಿಸಲು ಅನುಮತಿ ಇತ್ತಿರುವ ಡಾ. ಎಚ್. ಸಂತಾಪು (H. Santapau) ಅವರ ಸಹಾಯವನ್ನು ನಾನು ಇಲ್ಲಿ ಸ್ಮರಿಸಬೇಕಾಗಿದೆ.

ನನ್ನ ಜೊತೆ ಎಲ್ಲ ರೀತಿಯ ಛಾಯಾಚಿತ್ರಣ ಕಾರ್ಯಗಳಲ್ಲೂ ನಮ್ಮ ಶಾಖೆಯ ಡಿ. ಗಣೇಶ್, ಎಂ.ಎಸ್‌ಸಿ. ಅವರು ಹೃತ್ಪೂರ್ವಕವಾಗಿ ಸಹಕರಿಸಿದ್ದಾರೆ. ಕೆಲವೊಮ್ಮೆ ಅವರೇ ನನ್ನ ಜೊತೆ ಬಂದು ದುರ್ಗಮ ಅರಣ್ಯಗಳಲ್ಲಿ ಛಾಯಾಗ್ರಹಣ ನಡೆಸಿದ್ದಾರೆ. ಸಮುದ್ರ ಮಟ್ಟಕ್ಕೆ ೪೫೦೦–೫೦೦೦ ಅಡಿಗಳಷ್ಟು ಎತ್ತರದ ಕಾಡುಗಳಲ್ಲಿ ಡಿಸೆಂಬರ್–ಜನವರಿ ತಿಂಗಳುಗಳಲ್ಲಿ ಛಾಯಾಚಿತ್ರಣ ನಡೆಸುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಕೆಲವೊಮ್ಮೆ ಸೂರ್ಯನ ಬೆಳಕು ಮರಗಳ ಮೇಲೆ ಬೀಳಲಿ ಎಂದು ಘಂಟೆಗಟ್ಟಲೆ ಮೋಡಗಳು ಚಲಿಸಿ ಸೂರ್ಯನ ಬಿಡುಗಡೆ ಯಾವಾಗ ಆಗುತ್ತದೋ ಎಂದು ಕಾಯ್ದಿದ್ದುಂಟು. ಒಂದೊಂದು ಸಾರಿ ಮುಗಿಲುಗಳು ಚದುರಿ ಬೆಳಕು ಬರುವಹೊತ್ತಿಗೆ ಬೆಳಕಿನ ದಿಕ್ಕೇ ಬದಲಾಯಿಸಿರುತ್ತಿತ್ತು. ಆ ದಟ್ಟಡವಿಗಳಲ್ಲಿ ಬೇರೆ ಕಡೆ ನಿಂತು ಅದೇ ಮರದ ಚಿತ್ರ ಸಮರ್ಪಕವಾಗಿ ತೆಗೆಯಬೇಕೆಂದರೆ ಬಹು ಕಷ್ಟದ ಕೆಲಸವೇ ಆಗುತ್ತಿತ್ತು. ಅವರಿಗೂ ನನ್ನ ವಂದನೆಗಳು.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ಬೆಳೆಯುತ್ತಿರುವ ತೆಂಗು, ಅಡಿಕೆ ಮರ ಮುಂತಾದವಲ್ಲದೆ ಇನ್ನೂ ಕೆಲವು ಸಾಮಾನ್ಯ ಮರಗಳನ್ನು ವಿವರಿಸಿದ್ದೇನೆ. ಪುಸ್ತಕದಲ್ಲಿ ಬರುವ ಇತರ ಕೆಲವು ವೃಕ್ಷಗಳು ಉದಾ: ಅಗಸೆ, ಸೀಬೆ, ದಾಳಿಂಬೆ, ಕಿತ್ತಳೆ. ಖರ್ಜೂರ ನಿಂಬೆ ಮುಂತಾದವು ಇಂದು ಸಾಮಾನ್ಯ ವೃಕ್ಷಗಳಾಗಿವೆ. ಇವನ್ನು ನಾವು ನಮ್ಮ ತೋಟಗಳಲ್ಲಿ ಬೆಳೆಸಿಕೊಳ್ಳುತ್ತಿದ್ದೇವೆ. ಆದರೆ ಆಶ್ಚರ್ಯಕರ ವಿಷಯವೆಂದರೆ ಈ ಸಸ್ಯಗಳಲ್ಲಿ ಕೆಲವನ್ನು ಪೂರ್ವ ಮತ್ತು ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಕಾಣಬಹುದು. ಅವು ಇಲ್ಲಿಂದ ತಪ್ಪಿಸಿಕೊಂಡು ಹೋಗಿ ಅಲ್ಲಿ ಆಕಸ್ಮಾತ್ ಬೆಳೆಯುತ್ತಿವೆಯೇ ಅಥವಾ ಅಲ್ಲಿ ಅವು ಬೆಳೆಯುತ್ತಿರುವುದಕ್ಕೆ ಬೇರಾವುದಾದರೂ ಕಾರಣಗಳಿವೆಯೇ ಎಂಬುದು ಸಸ್ಯಗಳ ಭೌಗೋಳಿಕ ವಿವರಣೆಯ ಒಂದು ಕ್ಲಿಷ್ಟ

ಸಮುಕ್ಷೆಯಾಗುತ್ತದೆ. ಒಮ್ಮೊಮ್ಮೆ ಬೇರೆ ದೇಶಗಳನ್ನು ತವರಾಗುಳ್ಳ ಕೆಲವು ವೃಕ್ಷಗಳು ನಮ್ಮ ಅರಣ್ಯಗಳಲ್ಲಿ ಕಂಡು ಬರುತ್ತವೆ. ನಮ್ಮ ಪೂರ್ವಜರಾರಾದರೂ ಇವು ಅಲ್ಲಿ ಉದ್ದೇಶಪೂರ್ವಕವಾಗಿಯೋ ಅಥವಾ ಅಕಸ್ಮಾತ್ತಾಗಿಯೋ ಬೆಳೆದುಕೊಳ್ಳುವುದಕ್ಕೆ ಕಾರಣರಾಗಿರಬಹುದು.

ಕೆಲವು ವೃಕ್ಷಗಳ ವಿಷಯವಾಗಿ ವಿವರಗಳೇ ದೊರೆತಿಲ್ಲ. ಇನ್ನು ಕೆಲವಕ್ಕೆ ಕನ್ನಡದ ಹೆಸರುಗಳೇ ಸಿಗದೆ ಅವನ್ನು ತಡೆಹಿಯಲಾಗಿದೆ. ಕೆಲವಕ್ಕೆ ಕೊಟ್ಟಿರುವ ವಿವರಗಳು ಅಪೂರ್ಣವಾಗಿವೆ. ಇವೆಲ್ಲವನ್ನೂ ಮುಂದಿನ ಆವೃತ್ತಿಯಲ್ಲಿ ಸರಿಪಡಿಸಲು ಪ್ರಯತ್ನಿಸುತ್ತೇನೆ.

ನನ್ನ ಪುಸ್ತಕದ ಬಗ್ಗೆ ಮೊದಲಿನಿಂದಲೂ ಶ್ರದ್ಧೆ ತೋರಿ, ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದ ಪ್ರೊ. ರಾಜಶೇಖರಶೆಟ್ಟಿ, ಶ್ರೀ ಸದಾನಂದ, ಕು. ರಾಜೇಶ್ವರಿ, ಕು. ಗಿರಿಜಮ್ಮ ಅವರುಗಳಿಗೆಲ್ಲ ನಾನು ಕೃತಜ್ಞನಾಗಿದ್ದೇನೆ.

ನನ್ನ ಲೇಖನ ಕಾರ್ಯದಲ್ಲಿ ವಿಶೇಷವಾದ ಆಸಕ್ತಿಯನ್ನು ತೋರುತ್ತ ಬಂದಿರುವ ಡಾ. ಹಾ. ಮಾ. ನಾಯಕ್, ಡಾ. ತಿಪ್ಪೇರುದ್ರಸ್ವಾಮಿ, ಶ್ರೀ ಕೆ. ಟಿ. ವೀರಪ್ಪ ಅವರುಗಳಿಗೂ ನಾನು ಕೃತಜ್ಞನಾಗಿದ್ದೇನೆ.

ಪುಸ್ತಕದ ಹಸ್ತಪ್ರತಿಯನ್ನು ತಯಾರಿಸಿಕೊಟ್ಟ ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀನಿವಾಸಮೂರ್ತಿ ಅವರಿಗೂ, ಅದನ್ನು ಕೂಲಂಕಶವಾಗಿ ಓದಿ ಸೂಕ್ತ ಸಲಹೆಗಳನ್ನಿತ್ತ ಶ್ರೀ ಟಿ.ಎಚ್. ಹೊನ್ನಗಂಗಪ್ಪ ಮತ್ತು ಶ್ರೀ ಪ್ರಧಾನ್ ಗುರುದತ್ತ ಅವರಿಗೂ, ಸಸ್ಯಗಳ ಕನ್ನಡ ಹೆಸರುಗಳ ಸೂಚಿಯನ್ನು ತಯಾರಿಸಿ ಕೊಟ್ಟ ಶ್ರೀಮತಿ ರಮಾ ಅವರಿಗೂ, ಇಂಗ್ಲಿಷ್ ಹೆಸರುಗಳ ಸೂಚಿಯನ್ನು ತಯಾರಿಸಿಕೊಟ್ಟ ಶ್ರೀ ಶಂಕರಭಟ್ ಅವರಿಗೂ ನನ್ನ ವಂದನೆಗಳು.

ಮೈಸೂರು
೮–೭–೧೯೬೯

ಎಸ್. ಎನ್. ರಾಮಸ್ವಾಮಿ

ಪೀಠಿಕೆ

"ಕಾಡಿಲ್ಲದ ನಾಡು ಬೆಂಗಾಡು, ಕಾಡು ಮಾಡಿರುವುದೇ ಕರ್ನಾಟಕ" ಎಂಬ ನಾಣ್ಣುಡಿ ಬಹಳ ಹಳೆಯದಾದರೂ ಇದರಲ್ಲಿ ಸತ್ಯಾಂಶ ಸ್ವಲ್ಪ ಮಟ್ಟಿಗಿರುವುದು ನಿಜ. ಕರ್ಣಾಟದ ಅರಣ್ಯವೃಕ್ಷಗಳು ಹಾಗೂ ಅರಣ್ಯಗಳಿಗೆ ಉಜ್ವಲ ಇತಿಹಾಸವಿದೆ. ಪ್ರಾಚೀನ ಕಾವ್ಯಗಳಲ್ಲೆಲ್ಲಾ ಇವುಗಳ ಭವ್ಯ ಸುಂದರ ಹಾಗೂ ರುದ್ರ ಭೀಕರ ವರ್ಣನೆಗಳು ಹೇರಳವಾಗಿವೆ. ಮೈಸೂರು ಪ್ರಸ್ಥಭೂಮಿಯ ಉತ್ಕೃಷ್ಟವಾದ ಹವಾಗುಣ, ಫಲದಾಯಕವಾದ ಸಮುದ್ರಮಟ್ಟ, ಸಮೃದ್ಧಿಯಾದ ಮಳೆ ಇವು ಇಲ್ಲಿನ ಅರಣ್ಯಗಳನ್ನು ಬಹು ಪ್ರಯೋಜನಕಾರಿಯಾದ ಅನೇಕ ತರುಲತೆಗಳು, ಕ್ರೂರ ಹಾಗು ಸಾಧು ಪ್ರಾಣಿಗಳು, ಬಗೆಬಗೆಯ ವಿಹಂಗಮಗಳು ಮುಂತಾದುವುಗಳಿಗೆ ತವರನ್ನಾಗಿಮಾಡಿವೆ.

ಇತಿಹಾಸದ ಪ್ರಾರಂಭದಿಂದಲೂ ಮೈಸೂರಿನ ಅರಣ್ಯ ಸಸ್ಯಗಳು ಮತ್ತು ಅವುಗಳ ಬಗ್ಗೆ ಮಾಹಿತಿ ಇದೆ. ಕರ್ಣಾಟಕದ ತೀರ ಪ್ರದೇಶದ ಬಂದರುಗಳಿಂದ ಮೆಣಸು, ಏಲಕ್ಕಿ, ಲವಂಗ ಮುಂತಾದ ಪದಾರ್ಥಗಳನ್ನೂ, ಶ್ರೀಗಂಧ ಮುಂತಾದ ಮರಗಳನ್ನೂ ಸಮುದ್ರದ ಮೂಲಕ ಇತರ ದೇಶಗಳಿಗೆ ಕಳುಹಿಸಲಾಗುತ್ತಿತ್ತು. ಈ ವ್ಯಾಪಾರ ಸಂಬಂಧ 41ನೆಯ ಶತಮಾನದವರೆಗೂ ಅರೇಬಿಯಾ, ಚೈನಾ ಮತ್ತು ಪರ್ಷಿಯಾ ದೇಶಗಳೊಡನೆ ನಡೆಯುತ್ತಿತ್ತು. ಪ್ರಸಿದ್ಧ ವೆನಿಷಿಯನ್ ಯಾತ್ರಿಕ ಮಾರ್ಕೋ ಪೋಲೊ 1290 ರಲ್ಲಿ ಕರ್ಣಾಟಕ ಹಾಗೂ ಮಲಬಾರ್‌ಗಳ ಅರಣ್ಯ ಸಂಪತ್ತುಗಳನ್ನು ಪ್ರಶಂಸಿಸಿದ್ದಾನೆ. 1444 ರಲ್ಲಿ ವಿಜಯ ನಗರವನ್ನು ಸಂದರ್ಶಿಸಿದ ಅಬ್ದರ್ ರಸಾಕ್, (Abd-er-Razzak) ಕರ್ಣಾಟಕದ ಅರಣ್ಯ ಸಂಪತ್ತು, ಅದರ ವ್ಯಾಪಾರ ಸಂಬಂಧ ಇವುಗಳ ಬಗ್ಗೆ ಪ್ರಸ್ತಾವಿಸಿದ್ದಾನೆ. ವಿಜಯನಗರ ಸಾಮ್ರಾಜ್ಯ ಇರುವವರೆಗೂ ದಕ್ಷರೀತಿಯಿಂದ ನಡೆದುಬರುತ್ತಿದ್ದ ಅರಣ್ಯಗಳ ಆಡಳಿತ 1565 ರಲ್ಲಿ ಷಾಹಿ ಸಂಸ್ಥಾನಗಳೆಲ್ಲಾ ಒಟ್ಟಾಗಿ ಸೇರಿ ಸಾಮ್ರಾಜ್ಯವನ್ನು ಮುಳುಗಿಸಿದ ಅನಂತರ ಕುಸಿಯಿತು. ಅರಾಜಕತೆ ತುಂಬಿ ತುಳುಕುತ್ತಿದ್ದ ಆ ಕಾಲದಲ್ಲಿ ಅರಣ್ಯಗಳ ಲೂಟಿ ಹೇರಳವಾಗಿತ್ತು. ಜಮೀನಿಲ್ಲದವರೆಲ್ಲಾ ಅರಣ್ಯ ನಿರ್ಮೂಲನ ಮಾಡಿ ಸಾಗುವಳಿ ಮಾಡಲು ಪ್ರಾರಂಭಿಸಿದ್ದರು; ಬೆಲೆಬಾಳುವ ಶ್ರೀಗಂಧ ಮುಂತಾದುವನ್ನೆಲ್ಲಾ ಕಡಿದು ನ್ಯಾಯಬಾಹಿರವಾಗಿ ಮಾರುತ್ತಿದ್ದರು. ಇವುಗಳೆಲ್ಲಾ ತಡೆಯಲಸಾಧ್ಯವಾಗಿ ಪರಿಣಮಿಸಿದ್ದವು. ಕರ್ಣಾಟಕದ ಆಡಳಿತ ಹೈದರ್‌ಆಲಿ ಮತ್ತು ಟಿಪ್ಪೂಸುಲ್ತಾನರ ಕೈಗೆ ಬಂದಾಗ ಅರಣ್ಯಗಳ ಪ್ರಾಮುಖ್ಯದ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ತಿಳುವಳಿಕೆ ಬಂದಿತ್ತು. ತೇಗ ಮುಂತಾದ ಮರಗಳನ್ನು ಹಡಗು ಕಟ್ಟಲೂ, ಶ್ರೀಗಂಧವನ್ನು ಹೊರದೇಶಗಳಿಗೆ ಕಳಿಸಲೂ ತಕ್ಕ ಏರ್ಪಾಟುಗಳನ್ನು ಮಾಡಲಾಗಿತ್ತು. ಟಿಪ್ಪೂ,

ಸುಲ್ತಾನ್ ತೇಗ ಮತ್ತು ಶ್ರೀಗಂಧದ ಮರಗಳನ್ನು ರಾಜವೃಕ್ಷಗಳೆಂದು ಘೋಷಿಸಿದ್ದನು. 1799 ರಲ್ಲಿ ಕರ್ನಾಟಕದ ಆಡಳಿತ ಬ್ರಿಟಿಷರ ಕೈವಶವಾಯಿತು. ಬ್ರಿಟಿಷರಿಗೆ ಮೊದ ಮೊದಲು ನಮ್ಮ ಅರಣ್ಯಗಳ ಮೇಲಿದ್ದ ಶ್ರದ್ಧೆ ಬರೀ ತೇಗ, ಶ್ರೀಗಂಧಗಳಿಗೆ ಮಾತ್ರ ಸೀಮಿತವಾಗಿತ್ತು. ಹಡಗು ಹಾಗೂ ರಕ್ಷಣಾ ಸಾಮಾಗ್ರಿಗಳನ್ನು ಮಾಡಿಸಿಕೊಳ್ಳುವುದ ರಲ್ಲೇ ಅವರು ತೃಪ್ತರಾಗಿದ್ದರು. ಆದರೆ ಲಾರ್ಡ್ ಡಾಲ್‌ಹೌಸಿ ಮತ್ತು ಅವನ ಅನಂತರ ಬಂದ ಬ್ರಿಟಿಷ್ ಅಧಿಕಾರಿಗಳು ದೇಶದ ಅರಣ್ಯ ಸಂಪತ್ತನ್ನು ರಕ್ಷಿಸುವ ಬಗ್ಗೆ ಹೆಚ್ಚು ಗಮನಕೊಟ್ಟರು.

ನಮ್ಮ ಸಂಸ್ಥಾನದಲ್ಲಿ ಪ್ರಪ್ರಥಮವಾಗಿ ಅರಣ್ಯ ಇಲಾಖೆ ಸ್ಥಾಪಿತವಾದದ್ದು 1864 ರಲ್ಲಿ. ಅಂದಿನ ಮೈಸೂರಿನ ವಿಸ್ತೀರ್ಣ ಕೇವಲ 29,500 ಚ. ಮೈಲಿಗಳಿದ್ದು ಅರಣ್ಯ ಪ್ರದೇಶ ಅದರ ಸುಮಾರು ¼ ಭಾಗಕ್ಕಿಂತ ಹೆಚ್ಚಾಗಿತ್ತು. ಇಷ್ಟೊಂದು ಅರಣ್ಯ ಪ್ರದೇಶ ಸಂಸ್ಥಾನದಲ್ಲಿದ್ದರೂ 1864 ರಲ್ಲಿ ಅರಣ್ಯ ಇಲಾಖೆಯ ಆಡಳಿತಕ್ಕೆ ಕೇವಲ 385 ಚ. ಮೈಲಿಗಳಷ್ಟು ಅರಣ್ಯಪ್ರದೇಶ ಮಾತ್ರ ಒಳಪಟ್ಟಿತ್ತು. ಅರಣ್ಯಗಳ ದುರುಪಯೋಗ, ನಿರ್ಮೂಲನಗಳೇ ಹೆಚ್ಚಾಗಿದ್ದ ಆ ಕಾಲದಲ್ಲಿ ಸರ್ಕಾರ ಇದೆಲ್ಲವನ್ನೂ ಗಮನಿಸಿ ಮೇಜರ್ ಹಂಟರ್ [Major Hunter] ಎಂಬುವರನ್ನು ಅರಣ್ಯಗಳ ಸಂರಕ್ಷರನ್ನಾಗಿ [Conservator] ನೇಮಿಸಿತು. ಅವರು ಇಬ್ಬರ ಸಹಾಯಕರಾಗಿ ಲೆಫ್ಟಿನೆಂಟ್ ಸೋಮರ್ನ್ [Lt. Somern] ಮತ್ತು ಲೆಫ್ಟಿನೆಂಟ್ ಮಿಲ್ಲರ್ [Lt. Miller] ಎಂಬುವರು ನೇಮಕಗೊಂಡರು. ಸೋಮರ್ನ್ ಅವರು ಕೊಡಗು ಸೀಮೆಯ ಅರಣ್ಯಗಳ ಮೇಲ್ವಿಚಾರಣೆಯನ್ನೂ, ಮಿಲ್ಲರ್ ಅವರು ನುಗ್ಗೂರು ಪ್ರದೇಶದ ಅರಣ್ಯಗಳನ್ನೂ ನೋಡಿಕೊಳ್ಳುತ್ತಿದ್ದರು. ಮೇಜರ್ ಹಂಟರ್ ಮತ್ತು ಅವರ ಸಹಾಯಕರೆಲ್ಲಾ ಸೇರಿ ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ಕಾಯಿದೆ, ನಿಯಮಗಳನ್ನು ಮಾಡಿದರು. ಅರಣ್ಯ ಪ್ರದೇಶಗಳ ಕಾಯ್ದಿಡುವಿಕೆ, ಕಾಳ್ಕಿಚ್ಚು ಗಳನ್ನು ತಡೆಯುವಿಕೆ, ಅರಣ್ಯೋತ್ಪನ್ನಗಳನ್ನು ವಿಶೇಷವಾಗಿ ಹಾಳುಮಾಡದೆ ಸರಿ ಯಾಗಿ ಉಪಯೋಗ ಮಾಡಿಕೊಳ್ಳುವುದು ಮುಂತಾದುವಕ್ಕೆ ಅದ್ಯಗಮನ ಕೊಡ ಲಾಯಿತು. ಆದರೂ ಈ ಕಾಲದಲ್ಲಿ ಕಾಫಿ ತೋಟಗಳ ಬೆಳವಣಿಗೆಗಾಗಿ ಕೆಲವು ಒಳ್ಳೆ ಕಾಡುಗಳಿದ್ದ ಪ್ರದೇಶವನ್ನೆಲ್ಲಾ ಸರ್ಕಾರ ಬಿಟ್ಟುಕೊಟ್ಟಿದ್ದುಂಟು. ಸಂಸ್ಥಾನದ ಕೆಲವೆಡೆಗಳಲ್ಲಿ ಯಥೇಚ್ಛವಾಗಿ ಅರಣ್ಯ ನಿರ್ಮೂಲನ ನಡೆಯುತ್ತಿದ್ದುದನ್ನು ಗಮನಿಸಿ ಮನನೊಂದು 1867ರಲ್ಲಿ ಲೆಫ್ಟಿನೆಂಟ್ ಸೋಮರ್ನ್‌ರವರು ಅರಣ್ಯ ಸಂರಕ್ಷಣೆಯ ಮಹತ್ವವನ್ನು ಸರ್ಕಾರಕ್ಕೆ ನಿವೇದಿಸಿದರು. ಅಂದಿನಿಂದ ಅರಣ್ಯ ಸಂಪತ್ತಿನ ಸಂರಕ್ಷಣಾ ಕಾಯಿದೆಗಳು ಸ್ವಲ್ಪ ಬಿಗಿಯಾದುವು. ಇದರ ನೇತೃತ್ವದಲ್ಲಿ ಹೊರಟ ತಜ್ಞರ ಗುಂಪು ಸಂಸ್ಥಾನದ ಅನೇಕ ಅರಣ್ಯ ಪ್ರದೇಶಗಳನ್ನು ಪರೀಕ್ಷಿಸಿ ಕೆಲವನ್ನು ಸಂಸ್ಥಾನದ ಕಾಯ್ದಿ ರಿಸಿದ ಅರಣ್ಯ ಪ್ರದೇಶಗಳೆಂದು ಸಾರಿತು. ಈ ಪ್ರದೇಶಗಳಲ್ಲಿ ಸರ್ಕಾರದ ಅನ

ಗಾಹನೆಗೆ ತರದೆ ಇತರರು ಮರ ಕಡಿಯುವುದನ್ನು ನಿಷೇಧಿಸಲಾಯಿತು. 1868 ರಲ್ಲಿ ಕೊಡಗು ಪ್ರದೇಶದಲ್ಲಿ ತೇಗದ ತೋಟಗಳನ್ನು ಬೆಳೆಸಲು, ಪಶ್ಚಿಮ ಘಟ್ಟಗಳ ಇತರ ಕೆಲವು ಪ್ರದೇಶಗಳಲ್ಲಿ ಬೀಟೆ, ತೇಗ ಮುಂತಾದ ಒಳ್ಳೆ ಮರಗಳನ್ನು ಬೆಳೆಸಲು ಪ್ರೋತ್ಸಾಹಿಸಲಾಯಿತು. 1831 ರಿಂದಲೂ ಬ್ರಿಟಿಷರ ನೇರ ಆಧಿಪತ್ಯದಲ್ಲೇ ಇದ್ದ ಮೈಸೂರನ್ನು 1881 ರಲ್ಲಿ ಮಹಾರಾಜರಿಗೆ ಬಿಟ್ಟುಕೊಡಲಾಯಿತು. ಇವರ ನೇತೃತ್ವದಲ್ಲಿ ಬಲಗೊಂಡ ಅರಣ್ಯ ಇಲಾಖೆ ಕೆಲವೇ ವರ್ಷಗಳಲ್ಲಿ ಪುರೋಭಿವೃದ್ಧಿ ಹೊಂದಿತು. 1901 ರಲ್ಲಿ ರಾಜಕಾರ್ಯಪ್ರಸಕ್ತ ಎಂ. ಮುತ್ತಣ್ಣನವರು ಸಂಸ್ಥಾನದ ಅರಣ್ಯಗಳ ಮುಖ್ಯ ಸಂರಕ್ಷಣಾಧಿಕಾರಿಯಾದರು. ದಕ್ಷ ಆಡಳಿತಗಾರರಾಗಿದ್ದ ಇವರು 1913ರವರೆಗೂ ಸೇವೆಸಲ್ಲಿಸಿದರು. ಇವರ ಅನಂತರ ಶ್ರೀ ಎಂ.ಜಿ. ರಾಮರಾವ್ ಅವರು 1914 ರಿಂದ 1920 ರವರೆಗೂ, ಶ್ರೀ ಬಿ. ವಿ. ರಾಮಐಯ್ಯಂಗಾರ್ 1921 ರಿಂದ 1935ರವರೆಗೂ, ಅನಂತರ 1935 ರಿಂದ 1939 ರವರೆಗೆ ರಾಜಸೇವಾಸಕ್ತ ಮಾಚಯ್ಯನವರೂ ತಮ್ಮ ಅಪೂರ್ವ ಸೇವೆಯ ಮೂಲಕ ಇಲಾಖೆಗೆ ಒಂದು ಭವ್ಯ ಬುನಾದಿ ಹಾಕಿ ಅರಣ್ಯಗಳ ಅಭಿವೃದ್ಧಿ ಹಾಗೂ ವೈಜ್ಞಾನಿಕವಾಗಿ ಅವುಗಳ ಉಪಯೋಗ ಪಡೆದುಕೊಳ್ಳುವುದು ಮುಂತಾದುವಕ್ಕೆ ಆದ್ಯಗಮನ ಕೊಟ್ಟಿದ್ದರು. ರಾಜಸೇವಾಸಕ್ತ ಮಾಚಯ್ಯನವರ ಕಾಲದಲ್ಲೇ ಅಂದರೆ 1938 ರಲ್ಲಿ ಬೆಂಗಳೂರಿನಲ್ಲಿ ಒಂದು ಅರಣ್ಯ ಸಂಶೋಧನಾ ಪ್ರಯೋಗಾಲಯ ಸ್ಥಾಪಿಸಲ್ಪಟ್ಟಿತ್ತು. ಈ ಪ್ರಯೋಗಾಲಯದ ಪ್ರಥಮ ಸಂಶೋಧನಾಧಿಕಾರಿಗಳಾಗಿ ಡಾ. ಎಂ. ಎನ್. ರಾಮಸ್ವಾಮಿ ಮತ್ತು ಡಾ. ಕಬೀರ್ ರವರುಗಳು ನೇಮಕಗೊಂಡರು. ಅಂದಿನಿಂದಲೂ ಈ ಸಂಸ್ಥೆ ತನ್ನ ಅಮೂಲ್ಯ ಸೇವೆಯನ್ನು ಅರಣ್ಯ ಇಲಾಖೆಗೆ ಸಲ್ಲಿಸುತ್ತಾ ಬಂದಿದೆ. ಡಾ. ಎಂ. ಎನ್. ರಾಮಸ್ವಾಮಿಯವರು ತಮ್ಮ 22ವರ್ಷಗಳ ಅಮೋಘಸೇವಾಕಾಲದಲ್ಲಿ ಈ ಪ್ರಯೋಗಾಲಯವನ್ನು ಬಹು ಮುಂದೆ ತಂದಿದ್ದಾರೆ. 1938 ರಲ್ಲೇ ಈ ಸಂಸ್ಥೆ ಸ್ಪೈಕ್ ಖಾಯಿಲೆಯ ಬಗ್ಗೆ ಸಂಶೋಧನೆ ನಡೆಸಲು ಪ್ರಾರಂಭಿಸಿತು. 1956 ರ ಅಕ್ಟೋಬರ್ 26 ರಲ್ಲಿ ಈ ಸಂಸ್ಥೆಯನ್ನು ಕೇಂದ್ರಕ್ಕೆ ಬಿಟ್ಟುಕೊಡಲಾಯಿತು.


ಮೈಸೂರು ವಿಶಾಲ ಕರ್ನಾಟಕವಾದ ಅನಂತರ ಕೆಲವು ಹೊಸ ಅರಣ್ಯ ಪ್ರದೇಶಗಳು ಹಳೆಯವುಗಳೊಡನೆ ಕೂಡಿಕೊಂಡುವು. ಮದರಾಸ್ ಸರ್ಕಾರದ ಹತೋಟಿಯಲ್ಲಿದ್ದ ಬಳ್ಳಾರಿ ಹಾಗೂ ಕೊಡಗಿನ ಅರಣ್ಯಗಳು, ಕೊಳ್ಳೇಗಾಲ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಅರಣ್ಯ ಪ್ರದೇಶಗಳು, ಬೊಂಬಾಯಿ ಸರ್ಕಾರದ ಹತೋಟಿಯಲ್ಲಿದ್ದ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಪ್ರದೇಶಗಳು ಹಳೇ ಮೈಸೂರಿನ ಅರಣ್ಯ ಪ್ರದೇಶಗಳಿಗೆ ಕೂಡಿಕೊಂಡುವು.

1961 ರ ಸೆನ್ಸಸ್ ಪ್ರಕಾರ ಮೈಸೂರು ಸಂಸ್ಥಾನ ವಿಸ್ತೀರ್ಣದಲ್ಲಿ (ವಿಸ್ತೀರ್ಣ 74,122 ಚ.ಮೈಲಿ)(M. ಖಾದರ್ ಹುಸೇನ್)ಭಾರತದ ಆರನೆಯ ದೊಡ್ಡ ಸಂಸ್ಥಾನ

ವಾಗಿದೆ. ಜನಸಂಖ್ಯೆಯಲ್ಲಿ ಎಂಟನೆಯದಾಗಿದೆ (23,586,777). ನಮ್ಮ ಸಂಸ್ಥಾನ ವಿಸ್ತೀರ್ಣದಲ್ಲಿ ಇಂದು ಬೆಲ್ಜಿಯಂ, ಜೆಕೋಸ್ಲೋವಾಕಿಯಾ, ಡೆನ್ಮಾರ್ಕ್ ಮತ್ತು ಹಂಗೇರಿ ದೇಶಗಳಿಗಿಂತಲೂ, ಜನಸಂಖ್ಯೆಯಲ್ಲಿ ಆಸ್ಟ್ರೇಲಿಯಾ, ಕೆನಡಾ, ಈಜಿಪ್ಟ್, ಮೆಕ್ಸಿಕೋ, ಯುಗೋಸ್ಲೋವಿಯಾ, ಡೆನ್ಮಾರ್ಕ್, ಫಿನ್ಲೆಂಡ್ ಮತ್ತು ಸ್ವೀಡನ್ ದೇಶ ಗಳಿಗಿಂತಲೂ ದೊಡ್ಡದು. ಹೀಗಿದ್ದರೂ ಈ ಸಂಸ್ಥಾನವು ಹೊಂದಿರುವ ಅರಣ್ಯ ಪ್ರದೇಶ ಬಹಳ ಕಡಿಮೆ. ಇದರ ಒಟ್ಟು ವಿಸ್ತೀರ್ಣದ ಕೇವಲ 18·4% ರಷ್ಟು ಇದಕ್ಕೆ ಮುಖ್ಯ ಕಾರಣ ಇಲ್ಲಿಯ ಜನ ಸಾಂದ್ರತೆ. ಇಲ್ಲಿಯ ಜನಸಾಂದ್ರತೆ ಚ.ಕಿ.ಮಿೂ.ಗೆ 123ಕ್ಕೂ ಹೆಚ್ಚಿದೆ. ಬೇರೆ ದೇಶಗಳ ಒಟ್ಟು ವಿಸ್ತೀರ್ಣದ ಶೇಕಡ ಅರಣ್ಯ ಪ್ರದೇಶಗಳಿಗೆ ಹೋಲಿ ಸಿದರೆ ಮೈಸೂರು ಸಂಸ್ಥಾನದಲ್ಲಿ, ಅಷ್ಟೇ ಏಕೆ ಭಾರತದಲ್ಲಿ, ಇರುವ ಅರಣ್ಯ ಪ್ರದೇಶ ಬಹಳ ಕಡಿಮೆ. ಉದಾಹರಣೆಗೆ ಹೇಳುವುದಾದರೆ ರಷ್ಯಾದ ಒಟ್ಟು ವಿಸ್ತೀರ್ಣದ ಶೇಕಡ 51 ಭಾಗ ಅರಣ್ಯ ಪ್ರದೇಶವಾಗಿದೆ. ಅಂತೆಯೇ ರೊಢೇಸಿಯಾ, ಫಿನ್ಲೆಂಡ್‌ಗಳಲ್ಲಿ ತಲಾ 64% ಮತ್ತು 64·3% ರಷ್ಟು ಅರಣ್ಯ ಪ್ರದೇಶವಿದೆ. ಜಪಾನ್‌ನಲ್ಲಿ 64% ರಷ್ಟು, ಥೈಲೆಂಡ್‌ನಲ್ಲಿ 62,5% ಬರ್ಮಾದಲ್ಲಿ 57% ದಕ್ಷಿಣ ಅಮೆರಿಕದಲ್ಲಿ 54%, ಉತ್ತರ ಅಮೆರಿಕಾದಲ್ಲಿ 39% ಅರಣ್ಯ ಪ್ರದೇಶಗಳಿವೆ. ಭಾರತದಲ್ಲಾದರೋ ಕೇವಲ 17% ಅರಣ್ಯ ಪ್ರದೇಶವಿದೆ. ಭಾರತದ ಒಟ್ಟು ಅರಣ್ಯ ಪ್ರದೇಶ 2,94,750 ಚದರ ಮೈಲಿಗಳಾದರೆ ನಮ್ಮ ಸಂಸ್ಥಾನದ ಒಟ್ಟು ಅರಣ್ಯ ಪ್ರದೇಶ ಕೇವಲ 13,575 ಚದರ ಮೈಲಿಗಳಾಗಿವೆ.

'ಭೌಗೋಳಿಕರ ಕಾರ್ಯಾಗಾರ', 'ಪ್ರವಾಸಿಗಳ ಸ್ವರ್ಗ', 'ಸುಂದರ, ಭವ್ಯ ದೃಶ್ಯ ಗಳ ತವರು' ಎಂದು ಹೆಸರುಗಳಿಸಿರುವ ಮೈಸೂರು ಸಂಸ್ಥಾನ ಸ್ವಾಭಾವಿಕವಾಗಿಯೇ ಕರಾವಳಿ ಪ್ರದೇಶ, ಮಲೆನಾಡು ಹಾಗೂ ಮೈದಾನ ಪ್ರದೇಶಗಳಾಗಿ ವಿಭಾಗಗೊಂಡಿದೆ. ಬೆಟ್ಟಗುಡ್ಡಗಳ ಇಳಿಜಾರು ಪ್ರದೇಶಗಳಲ್ಲಿ, ಕಣಿವೆಗಳಲ್ಲಿ, ಮೈದಾನ ಪ್ರದೇಶದ ಕೆಲವೆಡೆ ಗಳಲ್ಲಿ ನಮ್ಮ ಅರಣ್ಯ ಸಂಪತ್ತಿದೆ. ಭಾರತದ ದಕ್ಷಿಣ ಪಶ್ಚಿಮ ಭಾಗದ ಉಷ್ಣವಲಯ ಪ್ರದೇಶದಲ್ಲಿ ಉತ್ತರ ಅಕ್ಷಾಂಶ 11° 36′–19°, ಪೂರ್ವರೇಖಾಂಶ 74°–78°36′ ಗಳ ಮಧ್ಯದಲ್ಲಿ ನಮ್ಮ ಸಂಸ್ಥಾನವಿದೆ. ಇದರ ಬಹಳಷ್ಟು ಪ್ರದೇಶಗಳಲ್ಲಿ ಕಾಡುಗಳು ಬೆಳೆ ಯಲು ಬೇಕಾದ ಹಿತಕರ ಹವಾಗುಣವಿದೆ. ಆರೋಗ್ಯಕರ ಪ್ರಸ್ಥಭೂಮಿಯ ಮೇಲಿ ರುವ ಈ ಸಂಸ್ಥಾನ ಸಾಮಾನ್ಯವಾಗಿ ಪಶ್ಚಿಮ ಹಾಗೂ ಉತ್ತರ ಪೂರ್ವ ಕ್ಲುಪ್ತಮಾರುತ ಗಳೆರಡರಿಂದಲೂ ಹೇರಳವಾಗಿ ಮಳೆಯನ್ನು ಪಡೆಯುತ್ತದೆ.

ಇಲ್ಲಿನ ಉಷ್ಣತೆ ಮಳೆಗಾಲದಲ್ಲಿ 64° ರಿಂದ 80°F ಇದ್ದು ಚಳಿಗಾಲದಲ್ಲಿ 51°–81°F ನಷ್ಟಿರುತ್ತದೆ. ಬೇಸಿಗೆಯಲ್ಲಿ ಮಾತ್ರ ಸ್ವಲ್ಪ ಹೆಚ್ಚಾಗಿ 66°–96°F ನಷ್ಟಿರುತ್ತದೆ. ಇಲ್ಲಿ 19″ ನಿಂದ (ಉತ್ತರ ಭಾಗ) 360″ ಗಳವರೆಗೂ (ಪಶ್ಚಿಮ ಘಟ್ಟ ಗಳ ಕೆಲವೆಡೆಗಳಲ್ಲಿ) ಮಳೆ ಬೀಳುತ್ತದೆ. ಇಂಥಹ ವೈವಿಧ್ಯಮಯ ಸನ್ನಿವೇಶಗಳಿರುವು


ಕರ್ನಾಟಕದ ಅರಣ್ಯಗಳು
ಮೈಸೂರು ಸಂಸ್ಥಾನ
0 100
ಬಿದರೆ
ಗುಲ್ಬರ್ಗ
ಬಿಜಾಪುರ
ಬೆಳಗಾಂ
ರಾಯಚೂರು
ಧಾರವಾಡ
ಬಳ್ಳಾರಿ
ಉ. ಕ. ಜಿಲ್ಲೆ
ಶಿವಮೊಗ್ಗ
ಚಿತ್ರದುರ್ಗ
ಚಿಕ್ಕಮಗಳೂರು
ತುಮಕೂರು
ಕೋಲಾರ
ದ.ಕ. ಜಿಲ್ಲೆ
ಹಾಸನ
ಬೆಂಗಳೂರು
ಮಂಡ್ಯ
ಕೊಡಗು
ಮೈಸೂರು
ಕಳ್ಳಿ ಕುರುಚಲು ಗಿಡಗಳನ್ನೊಳಗೊಂಡ ಒಣಕಾಡುಗಳು
ಬೇಸಗೆಯಲ್ಲಿಎಲೆಗಳುದುರುವ ಮೈದಾನ ಸೀಮೆಯ ಕಾಡುಗಳು
0 50 ಮೈಲಿಗಳು
ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳು
ಭಾಗಶಃ ನಿತ್ಯಹರಿದ್ವರ್ಣ ಕಾಡುಗಳು
ಬೇಸಗೆಯಲ್ಲಿ ಎಲೆಗಳುದುರುವ ಮಲೆನಾಡಿನ ಕಾಡುಗಳು
75° 76° 77° 78°
12° 13° 14° 15° 16° 17° 18°

ದರಿಂದಲೇ ಮೈಸೂರಿನ ಅರಣ್ಯಗಳಲ್ಲೂ ವೈವಿಧ್ಯ ಎದ್ದು ಕಾಣುತ್ತದೆ. ಮೈಸೂರಿನ ಅರಣ್ಯಗಳು ದಕ್ಷಿಣದ ಉಷ್ಣವಲಯಕ್ಕೆ ಸೇರಿದವುಗಳಾದರೂ ಇಲ್ಲಿನ ಹವಾಮಾನ, ವಾರ್ಷಿಕ ಮಳೆ, ಭೂಮಿಯರೀತಿ, ಆ ಜಾಗದಲ್ಲಿ ಪ್ರಬಲವಾಗಿರುವ ವೃಕ್ಷಗಳು, ವಾಯುಗುಣ ಮುಂತಾದುವನ್ನೆಲ್ಲಾ ಗಣನೆಗೆ ತೆಗೆದುಕೊಂಡು ಇಲ್ಲಿನ ಅರಣ್ಯಗಳನ್ನು 5 ವಿಧವಾಗಿ ವಿಂಗಡಿಸಲಾಗಿದೆ : (ಭೂಪಟ ನೋಡಿ.)

1 ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣ ಕಾಡುಗಳು
(Tropical Wet Evergreen Forests)

2 ಉಷ್ಣವಲಯದ ಭಾಗಶಃ ನಿತ್ಯಹರಿದ್ವರ್ಣ ಕಾಡುಗಳು
(Tropical Semi Evergreen Forests)

3 ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಅರಣ್ಯಗಳು
(Moist Deciduous Forests)

4 ಬೇಸಿಗೆಯಲ್ಲಿ ಎಲೆಯುದುರುವ ಮೈದಾನ ಸೀಮೆಯ ಒಣಕಾಡುಗಳು
(Dry Deciduous Forests)

5 ಕಳ್ಳಿಕುರುಚಲು ಗಿಡಗಳನ್ನೊಳಗೊಂಡ ಒಣ ಕಾಡುಗಳು
(Scrub Forests)

ನಮ್ಮ ಸಂಸ್ಥಾನದ ಒಟ್ಟು ಅರಣ್ಯಪ್ರದೇಶ 13,575 ಚ. ಮೈಲಿಗಳಿದ್ದು ಈ ಪ್ರದೇಶದಲ್ಲಿ ಮೇಲೆ ಹೇಳಿರುವ ವಿವಿಧ ರೀತಿಯ ಅರಣ್ಯ ಪ್ರಾಂತಗಳು ಆಕ್ರಮಿಸಿ ಕೊಂಡಿರುವ ಸುಮಾರು ಚ. ಮೈಲಿ ಪ್ರದೇಶಗಳು ಈ ರೀತಿ ಇವೆ:

1	ತೇವಪೂರಿತ ನಿತ್ಯಹರಿದ್ವರ್ಣ ಹಾಗೂ ಭಾಗಶಃ ನಿತ್ಯಹರಿದ್ವರ್ಣ ಕಾಡುಗಳು	1295	ಚ.ಮೈಲಿಗಳು
2	ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಅರಣ್ಯಗಳು	840	,,
3	ಬೇಸಿಗೆಯಲ್ಲಿ ಎಲೆಯುದುರುವ ಮೈದಾನ ಸೀಮೆಯ ಒಣಕಾಡುಗಳು....	3020	,,
4	ಕಳ್ಳಿ ಕುರುಚಲುಗಿಡಗಳನ್ನೊಳಗೊಂಡ ಒಣಕಾಡುಗಳು	8420	,,
	ಒಟ್ಟು	13,575	ಚ. ಮೈಲಿಗಳು

ಶಾಸನ ಸಮ್ಮತ ಸ್ಥಿತಿಯ ಪ್ರಕಾರ ಮೈಸೂರು ಸಂಸ್ಥಾನದ ಅರಣ್ಯಗಳ ವರ್ಗೀಕರಣ :

(Classification of the Mysore Forests by Legal Status)

	ಚ. ಮೈಲಿಗಳು
ಸಂಸ್ಥಾನದ ಕಾಯ್ದಿರಿಸಿದ ಅರಣ್ಯಗಳು	11,009.44
ರಕ್ಷಣೆಗೊಳಪಟ್ಟ ಇತರ ಸಣ್ಣ ಕಾಡುಗಳು (Protected Minor Forests)	1,004.32
ಹಳ್ಳಿಯ ಕಾಡುಗಳು (Village Forests)....	51.97
ಜಿಲ್ಲಾ ಅರಣ್ಯಗಳು (District Forests) ...	1,107.81
ಮೈಸೂರು ಅರಣ್ಯ ನಿಯಮದ 35 ನೆಯ ವಿಧಿಯ ಪ್ರಕಾರ ಕಾಯ್ದಿರಿಸಿದ ಅರಣ್ಯಪ್ರದೇಶ ...	66.50
ಅರಣ್ಯ ನಿಯಮದ 4 ನೆಯ ವಿಧಿಯ ಪ್ರಕಾರ ಕಾಯ್ದಿರಿಸಿದ್ದು (Reservation under section 4 of Mysore Forest Act)	87.08
ಅವರ್ಗೀಕೃತ ಅರಣ್ಯಗಳು (Unclassified)....	189.67
ಇಲಾಖೆಯ ಮೇಲ್ವಿಚಾರಣೆಯಲ್ಲಿರುವ ಇತರ ಪ್ರದೇಶಗಳು	68.31
ಒಟ್ಟು	13575.10

ಉಷ್ಣವಲಯದ ತೇವಪೂರಿತ ನಿತ್ಯಹರಿದ್ವರ್ಣ ಕಾಡುಗಳು :

ಪಶ್ಚಿಮಘಟ್ಟಗಳ ಎರಡು ಕಡೆಗಳಲ್ಲೂ ಅರಬ್ಬಿ ಸಮುದ್ರಕ್ಕೆದುರಾಗಿ ಸಮುದ್ರ ಮಟ್ಟಕ್ಕೆ 3000 ದಿಂದ 6000 ಅಡಿಗಳ ಎತ್ತರದವರೆಗೂ ಈ ಅರಣ್ಯಗಳು ಹಬ್ಬಿಕೊಂಡಿವೆ. ಸುಮಾರು 250 ಮೈಲಿ ಉದ್ದ, 15 ರಿಂದ 30 ಮೈಲಿ ಅಗಲವಿರುವ ಈ ಅರಣ್ಯ ಪ್ರದೇಶಗಳು, ಉತ್ತರ ಕನ್ನಡಜಿಲ್ಲೆ, ಆಗುಂಬೆ (ಶಿವಮೊಗ್ಗಜಿಲ್ಲೆ), ಬಿಸಲೆ (ಹಾಸನಜಿಲ್ಲೆ), ಮಾಕುಟ್ (ಕೊಡಗು ಜಿಲ್ಲೆ)ಗಳಲ್ಲಿ ಚೆನ್ನಾಗಿ ಬೆಳೆದುನಿಂತಿವೆ.

ಈ ಅರಣ್ಯ ಪ್ರದೇಶಗಳ ಕೆಲವೆಡೆಗಳಲ್ಲಿ ಒಳಗಿರುವ ಬಂಡೆಗಳು ಬೆಣಚುಕಲ್ಲು ಅಭ್ರಕಗಳಿಂದಾದವುಗಳಾಗಿದ್ದು ಅಲ್ಲಲ್ಲಿ ಸಿಲಿಕ, ಮೆಗ್ನೀಸಿಯಂ ಮತ್ತು ಸುಣ್ಣ ಸೇರಿರುವ

ಗ್ರಾನೈಟ್ ಒಳಗೊಂಡು ಭಿನ್ನಸ್ತರದ ಶಿಲೆಗಳಾಗಿರುತ್ತವೆ. ನೆಲ ಜಂಬುಮಣ್ಣಿನಿಂದಾಗಿದ್ದು ಹೆಚ್ಚು ತೇವ ಪೂರಿತವಾಗಿರುತ್ತವೆ. ಬೆಟ್ಟಗಳ ಮೇಲ್ಭಾಗಗಳು ಮತ್ತು ಅಂಚುಗಳು ಒಮ್ಮೊಮ್ಮೆ ಬೂದು ಮಿಶ್ರಿತ ಬಿಳಪು ಬಣ್ಣ ಹೊಂದಿರುವ ಮರಳು ಗಲ್ಲುಗಳಿಂದ ಕೂಡಿದ್ದಾಗ ಅಲ್ಲಲ್ಲೆ ಕಪ್ಪು ಬಂಡೆಗಳನ್ನು ಹೊಂದಿರುತ್ತವೆ.

ಈ ಅರಣ್ಯ ಪ್ರದೇಶಗಳಲ್ಲಿ (ದಕ್ಷಿಣ-ಪಶ್ಚಿಮ ಕ್ಲುಪ್ತಮಾರುತ) 150″ ರಿಂದ 350 ಇಂಚುಗಳವರೆಗೂ ಮಳೆ ಬೀಳುತ್ತಿದ್ದು ಒಮ್ಮೊಮ್ಮೆ ಸುಮಾರು 475 ಇಂಚಿನಷ್ಟು ಮಳೆ ಆಗುತ್ತದೆ(ಜೂನ್–ಸೆಪ್ಟೆಂಬರ್ ಕಾಲದಲ್ಲಿ). ಈ ಕಾಲಕ್ಕೆ ಮುಂಚೆ ಬರುವ ಮಳೆ ಆಗಾಗ್ಗೆ ಎರಡು ಮೂರು ವಾರಗಳಿಗೊಮ್ಮೊಮ್ಮೆ ಏಪ್ರಿಲ್ ಮೇಗಳಲ್ಲಿ ಬೀಳುತ್ತಿರುತ್ತದೆ. ಇಲ್ಲಿ ಮಂಜು, ಕಾವಳಗಳು ಅಷ್ಟಾಗಿ ಕಂಡುಬರದಿದ್ದರೂ ಆರ್ದ್ರತೆ (Humidity) ಎಲ್ಲಾ ಕಾಲಗಳಲ್ಲೂ ಹೆಚ್ಚಾಗಿರುತ್ತದೆ. ವಾತಾವರಣದ ಖರತ್ವ 70°—80°F ನಷ್ಟಿರುತ್ತದೆ. ಇಲ್ಲಿ ಗಾಳಿ ಪಶ್ಚಿಮದಿಂದ ಮತ್ತು ದಕ್ಷಿಣ–ಪಶ್ಚಿಮದಿಂದ ಬೀಸುತ್ತಿದ್ದು ಮಳೆಗಾಲದಲ್ಲಿ ಅಂದರೆ ಜೂನ್–ಆಗಸ್ಟ್ ತಿಂಗಳುಗಳಲ್ಲಿ ಪ್ರಬಲವಾಗಿ ಬೀಸುತ್ತಿರುತ್ತದೆ.

ಈ ಅರಣ್ಯಗಳು ಬಹಳ ದಟ್ಟವಾಗಿ ಹರಡಿಕೊಂಡಿರುವುದರಿಂದ ಸೂರ್ಯನ ಬೆಳಕು ನೇರವಾಗಿ ಕಾಡಿನ ಮೇಲ್ಭಾಗಕ್ಕೆ ಮಾತ್ರ ಬೀಳುತ್ತಿದ್ದು ಒಮ್ಮೊಮ್ಮೆ ಅಲ್ಲಲ್ಲೆ ಸಂದುಗೊಂದುಗಳಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ. ಇಲ್ಲಿನ ತೇವ, ಬೆಳಕು, ಹಿತಕರ ಖರತ್ವ ಇವೆಲ್ಲವೂ ವರ್ಷಪೂರ್ತಿ ವೃಕ್ಷಗಳು ಬೆಳೆಯಲು ಅನುಕೂಲಗಳನ್ನು ಕಲ್ಪಿಸಿಕೊಟ್ಟಿವೆ. ಈ ಅರಣ್ಯಗಳಲ್ಲಿ ಬೀಜಗಳು ಮೊಳೆತು ಸಸಿಗಳಾಗಿ ಬೆಳೆಯಬೇಕಾದರೆ ಬಹಳ ಕಷ್ಟ. ಇದು ಸಾಧ್ಯವಾಗಬೇಕಾದರೆ ಆ ಪ್ರದೇಶಗಳಲ್ಲಿ ಇರುವ ವೃಕ್ಷಗಳು ಇಲ್ಲವಾದಾಗಮಾತ್ರ ಸಾಧ್ಯ. ಏಕೆಂದರೆ ಈ ಬೀಜಗಳು ಮೊಳೆತು ಆರೋಗ್ಯಕರ ಸಸ್ಯಗಳಾಗಬೇಕಾದರೆ ಆವಶ್ಯಕವಾದ ಬೆಳಕು ಮುಂತಾದ ಅನೇಕ ಪೂರೈಕೆಗಳು ಆ ವೃಕ್ಷಗಳಿದ್ದರೆ ಅವಕ್ಕೆ ದೊರಕುವುದಿಲ್ಲ.

ನಿತ್ಯಹರಿದ್ವರ್ಣ ಕಾಡುಗಳು ನಿಜಕ್ಕೂ ಕುತೂಹಲಕರವಾದುವು. ಈ ಕಾಡುಗಳಲ್ಲಿ ಬೆಂಕಿ ಆಕಸ್ಮಿಕಗಳು ಬಹಳ ಅಪರೂಪ. ಇಲ್ಲಿ ಸಸ್ಯಗಳಿಗೆ ಎಲೆಗಳು ಮೂಡುವ ಕಾಲಗಳೆರಡಿರುತ್ತವೆ. ಅವುಗಳಲ್ಲಿ ಒಂದು ಮುಂಗಾರು ಹಿಂದೆ ಇನ್ನೊಂದು,ಅದರ ಮುಂದೆ ಇರುತ್ತವೆ. ಅಂತೆಯೇ ಎರಡು ಹೂಬಿಡುವ ಕಾಲಗಳೂ ಇರುತ್ತವೆ.(ಒಂದು ಡಿಸೆಂಬರ್ ನಿಂದ ಫೆಬ್ರವರಿ ತಿಂಗಳ ಕಾಲದಲ್ಲಿ; ಇನ್ನೊಂದು ಮಳೆಯ ಅನಂತರ ಅಕ್ಟೋಬರ್ ತಿಂಗಳಿನಲ್ಲಿ.) ಮರಗಳು ಜೂನ್–ಆಗಸ್ಟ್ ತಿಂಗಳುಗಳಲ್ಲೂ ಮತ್ತು ಡಿಸೆಂಬರ್‌ನಲ್ಲೂ ಫಲಭರಿತವಾಗಿರುತ್ತವೆ. ಧೂಪ ಮುಂತಾದ ಮರಗಳಲ್ಲಂತೂ ಮರದ ಮೇಲೆಯೇ ಬೀಜಗಳು ಮೊಳೆಯಲು ಪ್ರಾರಂಭಿಸುತ್ತವೆ. ಮರಗಳಿಂದ ಕೆಳಗುದುರುವ ಎಲೆಗಳ ತಳ ಭಾಗದಲ್ಲಿರುವ ತೇವ, ಫಂಗೈ ಮೊದಲಾದ ಸಸ್ಯಸಮೂಹಗಳ ಚಟುವಟಿಕೆಗಳ ಪರಿಣಾ

ಮವಾಗಿ ಕೊಳೆತು ಕೆಳಗೆ ಮೂಡುವ ತೇವಪೂರಿತ ಸಾವಯುವ ಪದಾರ್ಥಗಳು ಹೆಚ್ಚಾಗಲು ಕಾರಣವಾಗುತ್ತವೆ.

ನಿತ್ಯಹರಿದ್ವರ್ಣ ಕಾಡುಗಳ ಸಸ್ಯಗುಂಪುಗಳು ಯಾವ ಅಡಚಣೆ, ಅಡೆತಡೆಗಳೂ ಇಲ್ಲದಿದ್ದಲ್ಲಿ ಕೆಲವು ಕಾಲದಮೇಲೆ ತಾವು ಬೆಳೆಯುತ್ತಿರುವ ಪೃಥ್ವಿಗೂ ತಮ್ಮ ಸುತ್ತಲಿರುವ ವಾತಾವರಣಕ್ಕೂ ಹೊಂದಿಕೊಂಡು ಒಂದು ನಿಶ್ಚಿತ ಸಮತೋಲನಕ್ಕೆ ಬಂದು ಚೆನ್ನಾಗಿ ಬೆಳೆಯುತ್ತಿರುತ್ತವೆ. ಆದ್ದರಿಂದಲೇ ನಿತ್ಯಹರಿದ್ವರ್ಣ ಕಾಡುಗಳನ್ನು ಸಸ್ಯಗುಂಪುಗಳ ಕ್ಲೈಮಾಟಿಕ್ ಕ್ಲೈಮಾಕ್ಸ್(Climatic climax) ಎನ್ನುವುದು.

ಈ ಕಾಡುಗಳು ಒಮ್ಮೊಮ್ಮೆ 150 ಅಡಿಗಳಿಗಿಂತಲೂ ಹೆಚ್ಚು ಎತ್ತರಕ್ಕೆ ಬೆಳೆಯುವುದುಂಟು. ಆದರೆ ಬೆಟ್ಟಗಳ ಅಂಚಿನಲ್ಲಿ ಸಮುದ್ರಮಟ್ಟಕ್ಕೆ ಅತಿ ಎತ್ತರದಲ್ಲಿ ಬೆಳೆಯುತ್ತಿದ್ದರೆ ಮರಗಳು 30–70 ಅಡಿಗಳಷ್ಟು ಎತ್ತರ ಮಾತ್ರ ಬೆಳೆದು ಬೀಸಣಿಗೆಯಂತಹ ತಲೆ ಹೊಂದಿರುತ್ತವೆ. ಗಾಳಿಯ ಹೊಡೆತ ಅತಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಬರೇ ಹುಲ್ಲುಗಾವಲಿದ್ದು ಅಲ್ಲಲ್ಲೆ ಬೆಟ್ಟಗಳ ನಡುವಿನ ಕಣಿವೆ ಪ್ರದೇಶಗಳಲ್ಲೂ, ಇಳಿಜಾರುಗಳಲ್ಲೂ ಸಣ್ಣ ಸಣ್ಣ ಮರಗಳೂ, ಪೊದೆಗಳೂ ಕಂಡುಬರುತ್ತವೆ. 75" ನಿಂದ 300" ನಷ್ಟು ಮಳೆಯಾಗುವ ಬೆಟ್ಟಗುಡ್ಡಪ್ರದೇಶಗಳ ಕಣಿವೆಗಳಲ್ಲೂ, ಗಾಳಿಯಿಂದ ರಕ್ಷಣೆ ಪಡೆದ ಬೆಟ್ಟಗಳ ಇಳಿಜಾರು ಪ್ರದೇಶಗಳಲ್ಲೂ ಬೆಳಯುವ ಈ ನಿತ್ಯಹರಿದ್ವರ್ಣ ಕಾಡುಗಳನ್ನು "ಷೋಲಾ ಅರಣ್ಯಗಳು" ಎಂದು ಕರೆಯುತ್ತಾರೆ. ಸಮುದ್ರಮಟ್ಟಕ್ಕೆ 4000 ದಿಂದ 5200 ಅಡಿಗಳ ಎತ್ತರದ ಪ್ರದೇಶಗಳಲ್ಲಿ ಈ ಬಗೆಯ ಅರಣ್ಯಗಳು ನಮ್ಮ ಸಂಸ್ಥಾನದಲ್ಲಿ ಕಂಡುಬಂದಿವೆ. ಸಾಮಾನ್ಯವಾಗಿ ಎರಡು ಬೆಟ್ಟಗಳ ನಡುವೆ ಒಂದು ಸಣ್ಣ ಝರಿ ಹರಿಯುತ್ತಿರುತ್ತದೆ. ಇದರಲ್ಲಿ ವಿವಿಧ ಆಲ್ಗೆ ಸಸ್ಯಗಳೂ, ಈ ಝರಿಯ ಇಕ್ಕೆಲಗಳಲ್ಲಿಯೂ ಬಗೆ ಬಗೆಯ ಝರಿಗಿಡಗಳು, ಜಲಸಸ್ಯಗಳು, ಆರ್ಖಿಡ್ ಸಸ್ಯಗಳು (orchids) ಮುಂತಾದುವೆಲ್ಲಾ ಇರುತ್ತವೆ. ಮೇಲೆ ಹೋದಂತೆಲ್ಲಾ ಕೆಲವು ಬಗೆಯ ಅಡರು ಬಳ್ಳಿಗಳೂ, ಪೊದೆಗಳೂ ಇತರ ವೃಕ್ಷಗಳೊಡನೆ ಬೆಳೆಯುತ್ತಿರುವುದನ್ನು ನಾವು ನೋಡಬಹುದು. ಒಂದು ವಿಚಿತ್ರ ಪ್ರಸಂಗವೆಂದರೆ ಈ ಷೋಲಾ ಅರಣ್ಯಗಳ ವೃಕ್ಷಗಳು ಬಹಳ ಆಳವಾದ ಬೇರುಗಳನ್ನು ಹೊಂದಿಲ್ಲದಿರುವುದು. ಆದರೂ ಇವು ಗಾಳಿಯ ಹೊಡೆತಕ್ಕೆ ಕೆಳಗೆ ಬಿದ್ದಿರುವ ದಾಖಲೆಯೆ ಇಲ್ಲ. ಈ ಅರಣ್ಯಗಳ ಹವೆ ಸಾಮಾನ್ಯವಾಗಿ ಸಮಶೀತೋಷ್ಣವಲಯದ್ದಾಗಿರುತ್ತದೆ. ನಮ್ಮ ಸಂಸ್ಥಾನದಲ್ಲಿ ಈ ಷೋಲಾ ಅರಣ್ಯಗಳು ಬಾಬಾಬುಡನ್‌ಗಿರಿ. ಕುದುರೆಮುಖ, ಬಿಳಿಗಿರಿರಂಗನ ಬೆಟ್ಟ, ಬೇಡಗುಲಿ ಮುಂತಾದ ಪ್ರದೇಶಗಳಲ್ಲೆಲ್ಲಾ ಇವೆ. ಈ ಪ್ರದೇಶಗಳ ಬೆಟ್ಟಗುಡ್ಡಗಳ ಕಣಿವೆಪ್ರದೇಶ, ಹಳ್ಳಕೊಳ್ಳಗಳು, ಇಳಿಜಾರು ಪ್ರದೇಶಗಳು ಇವುಗಳಲ್ಲೆಲ್ಲಾ ಕಂಡುಬರುವ ಈ ಅರಣ್ಯಗಳು ಕಣಿವೆ ಮಧ್ಯದ ಝರಿಯ ಇಕ್ಕೆಲಗಳ ಮೆಲ್ಭಾಗಗಳಲ್ಲೂ ಸೊಂಪಾಗಿ ಬೆಳೆದಿರುತ್ತವೆ. ಈ ಹಿಂದೆಯೇ ತಿಳಿಸಿದಂತೆ ಬೆಟ್ಟಗಳ ತುದಿಗಳು ಗಾಳಿಯ ದಿಕ್ಕಿಗೆದುರಾಗಿದ್ದರೆ ಲ್ಲಿತಿ

ಹಚ್ಚಹಸುರಿನ ಬರೀ ಹುಲ್ಲುಗಾವಲಿರುತ್ತದೆ. ಈ ಷೋಲಾ ಅರಣ್ಯಗಳ ವೃಕ್ಷಗಳ ಮೇಲೆ ಅನೇಕ ರೀತಿಯ ಝರಿಗಿಡಗಳೂ, ಮಾಸ್ (Moss)ಗಳೂ, ಕಲ್ಲು ಹೂಗಳೂ (Lichens), ಆರ್ಕಿಡ್ ಸಸ್ಯಗಳೂ, ಅನೇಕ ಅಡರು ಬಳ್ಳಿಗಳೂ ಕಂಡು ಬರುವುದುಂಟು.

ಮೈಸೂರಿನಲ್ಲಿರುವಂತೆಯೇ ಮದರಾಸಿನ ನೀಲಗಿರಿ, ಕೊಡೈಕೆನಾಲ್, ಪಳನಿ ಮುಂತಾದ ಪ್ರದೇಶಗಳಲ್ಲೂ ಈ ಬಗೆಯ ಷೋಲಾ ಅರಣ್ಯಗಳಿವೆ.

ಮೈಸೂರಿನ ಷೋಲಾ ಅರಣ್ಯಗಳಲ್ಲಿ ಮುಖ್ಯವಾಗಿ ಈ ಕೆಳಗಿನ ವೃಕ್ಷಗಳು ಬೆಳೆಯುತ್ತವೆ: ಬಿಳೀ ದೇವದಾರು (Dysoxylum malabaricum) ಕಿರಲ್‌ಬೋಘಿ (Hopea parviflora), ಅಡವಿ ಬಿಕ್ಕೆ (Gardenia obtusa), ನಾಗಸಂಪಿಗೆ (Mesua ferrea), ಗಂಧಗರಿಗೆ (Toona ciliata), ಹಲಸು (Artocarpus heterophyllus) ಹೆಬ್ಬಲ್ಸು (Artocarpus hirsuta), ಬಿಳೀ ಸಂಪಿಗೆ (Michelia nilagirica) ಸೌಲುದಿ (Vitex altissima), ಪಾದ್ರಿ (Stereospermum chelonioides), ದಾಲ್ಚಿನ್ನಿ (Cinnamomum zeylanicum), ಜಯಕಾಂತಳ (Sterculia gutta), ಮಂದಧೂಪ (Canarium strictum), ಕಣ್ಣುಟಿಕೆ Garcinia morella) ಮುಂತಾದುವು ರುದ್ರಾಕ್ಷಿ (Elaeocarpus tuberculatus), ಒಂಟಿಮರ (Artocarpus lakoocha), ಮಲ್ಲೈ (Diospyros ebenum), ಕುಂಕುಮದ ಮರ (Mallotus phillippenses) ಮುಂತಾದ ಸಣ್ಣ ಮರಗಳು ಕಂಡು ಬರುತ್ತವೆ.

ಈ ಪ್ರದೇಶದಲ್ಲಿ ಬೆಳೆಯುವ ಪೊದೆಗಳಲ್ಲಿ ಕಂಪಾಸಿಟಿ (Compositae) ಮತ್ತು ಏಕಾಂಥೇಸಿ (Acanthacae) ಕುಟುಂಬಕ್ಕೆ ಸೇರಿದ ಸಸ್ಯಗಳೂ, ಚಿನ್ನದಾವರೆ (Hypericum mysorense) ಮುಂತಾದವು ಮುಖ್ಯವಾದವುಗಳು.

ತುಂಬಿದ ಮೇಲ್ಛಾವಣಿ ಹೊಂದಿರುವ ನಿತ್ಯಹರಿದ್ವರ್ಣ ಕಾಡುಗಳು ಸಾಮಾನ್ಯವಾಗಿ ಮೂರು ವಿವಿಧ ಪದರಗಳ (canopy) ಸಸ್ಯವರ್ಗಗಳನ್ನೊಳಗೊಂಡಿರುತ್ತವೆ. (ಮೇಲ್ಪದರ, ಮಧ್ಯದ ಪದರ ಮತ್ತು ಕೆಳಗಿನ ಪದರ)

ಮೇಲ್ಪದರದ ವೃಕ್ಷಗಳು : (125 ಅಡಿಗಳಿಗಿಂತಲೂ ಹೆಚ್ಚು ಎತ್ತರವಿರುವ ನಮ್ಮ ಸಂಸ್ಥಾನದ ನಿತ್ಯಹರಿದ್ವರ್ಣ ಅರಣ್ಯಗಳ ಮೇಲ್ಪದರದಲ್ಲಿ (Top canopy) ಸಾಮಾನ್ಯವಾಗಿ ಈ ಕೆಳಗಿನ ವೃಕ್ಷಗಳಿರುತ್ತವೆ.

ನಾಗಸಂಪಿಗೆ (Mesua ferrea), ಕಿರಲ್‌ಬೋಘಿ (Hopea parviflora), ಧೂಪ (Vateria indica), ಬೂರುಗ (Bombax ceiba), ಹೈಗ (Hopea wightiana), ಗಂಧಗರಿಗೆ (Toona ciliata). ಮಂದ

ಧೂಪ (Canarium strictum), ವಾಲಿಮರ (Dipterocarpus indicus) ಕುವೆ (Calophyllum tomentosum), ಬೊಬ್ಬೆ (Calophyllum wightianum), ಮಾವು (Mangifera indica), ಕುಟುಗೇರಿ (Holigrana arnottiana), ಹವಳಿಗೆ (Acrocarpus fraxinifolius), ಪಗಡೆ ಮರ (Mimusops elengi), ಕಾಡುಹಿಪ್ಪೆ (Madhuca malabarica), ಕರಾಚಿ (Hardwickia binata), ಚಿಟ್ಟು ತಂದ್ರಿ ಮರ (Machilus macrantha), ಗೋಗುಲ್‌ಧೂಪ (Ailanthus malabarica), ಅಜ್ಜನಪಟ್ಟಿ (Antiaris toxicaria), ಹೆಬ್ಬಲ್ಸು (Artocarpus hirsuta), ಹಲಸು(Artocarpus heterophyllus), ದಾಲ್ಮರ(Chickrassia tabularis), ಗೊಬ್ರನೈರುಲ್ (Bischofia javanica), ಕಾಡು ಕುಂಬಳ(Trewia nudiflora),ಪಾವ್ಗೊಂಟ(Dolichopsis elliptica).

ಮಧ್ಯದ ಪದರ (ಸರಾಸರಿ ೫೦ ಅಡಿಗಳಿಗಿಂತ ಹೆಚ್ಚು ಎತ್ತರ ಉಳ್ಳದ್ದು) ಇಲ್ಲಿ ಬೆಳೆಯುವ ವೃಕ್ಷಗಳು ಕೆಳಗಿನಂತಿವೆ:

ಹೊಟ್ಟೆಬಾಗೆ (Albizzia chinensis)
ಸಂಪಿಗೆ (Michelia champaka)
ಕಲ್ತೇಗ (Dillenia pentagyna)
ಹಾಲ (Garuga pinnata)
ನಂದಿ (Lagerstroemia lanceolata)
ದೇವಗರಿಗೆ (Garcinia xanthochymus)
ಬಿಳೀ ಸಂಪಿಗೆ (Michclia nilagirica)
ರುದ್ರಾಕ್ಷಿ (Elaeocarpus tuberculatus)
ಕಾಡು ಹುಣಿಸೆ (Pithecellobium bigeminum)
ಒಂಟೆಮರ (Artocarpus lakoocha)
ದಾಲ್ಚಿನ್ನಿ (Cinnamomum zeylanicum)
ಕಾಡುಲವಂಗ (Cinnamomum macrocarpus)
ಜಂತಲ (Alstonia scholaris)
ಮಲ್ಲೈ (Diospyros ebenum)
ತಿಂಡುಕ (Diospyros paniculata)
ತೋರತ್ತಿ (Hydno carpus laurifolia)
ಅರದಳನ (Garcinia cambogia)
ಜಯಕಾಂತಳ (Sterculia gutta)

ಜಿಮ್ಮಿಮರ (Zanthoxylum budrunga)
ಸಗದೆ (Schleichera oleosa)
ನೇರಳೆ (Syzygium cumini)
ಚಲ್ಲ (Lagerstroemia speciosa)
ಕಾಡುಹಿಪ್ಪೆ (Madhuca malabarica)
ನಂಜಿನಕೊರಡು (Strychnos nux-vomica)
ಪಾದ್ರಿಮರ (Sterospermum chelonioides)
ಗೊಡ್ಡುಮಿತ್ತಿ (Ficus gibbosa)
ಅತ್ತಿಮರ (Ficus glomerata)
ಬೀಳಿಬಸುರಿ (Ficus tsiela)
ಜಂಬೆಮರ (Xylia xylocarpa)
ಹಾಲ್ಮಡ್ಡಿ (Litsaea wightiana)
ಪಿಂಡೆಕಾಯಿ ಮರ (Myristica malabarica)
ರಾಮನದಿಕೆ (Myristica magnifica)
ಸೌಲಾದಿ (Vitex altissima)

ಕೆಳಗಿನ ಹಂತ: (ಸರಾಸರಿ 25 ಅಡಿಗಳಷ್ಟು ಎತ್ತರ) ಇಲ್ಲಿಯ ಮುಖ್ಯವಾದ ಮರಗಳು ಈ ಕೆಳಗಿನವುಗಳಾಗಿವೆ:

ಬಸವನಪಾದ (Bauhinia malabarica)
ಅಶೋಕ (Saraca indica)
ಬೆಟ್ಟದನೆಲ್ಲಿ (Emblica officinalis)
ಕುಂಕುಮದ ಮರ (Mallotus phillippensis)
ಕಾವಲ್ (Careya arborea)
ಕೀಚಗ (Erythrina stricta)
ಮಟ್ಟನೇರಳೆ (Eugenia hemispherica)
ಕುನ್ನೇರಳೆಮರ (Eugenia zeylanica)
ಲವಂಗ (Syzygium aromaticum)
ಕಾಡುನೇರಳೆ (Eugenia laeta)
ಸೀಮೆ ನೇರಳೆ (Eugenia floccosa)
ಊದಾತಳ್ಳಿ (Memecylon edule)
ಬೀಲವಕಣ (Memecylon angustifolium)
ಲೋಕುಂದಿ (Memecylon malabaricum)

ಕರಿಬೇವು (Murraya koenigii)
ಬೆಂಡುಮರ (Trema orientalis)
ಕುಂಡೆ (Lonicera rainiflora)
ಗುರಿಗೆ (Bridelia retusa)
ಗೊರಿವಿ (Ixora arborea)

ಇವಲ್ಲದೆ ಕೆಳಗಿನ ಸಸ್ಯವರ್ಗದಲ್ಲಿ ಇವುಗಳ ಅಕ್ಕಪಕ್ಕದಲ್ಲಿ ಹಾಗೂ ಕೆಳಭಾಗಗಳಲ್ಲಿ ಸಣ್ಣ ಬೆತ್ತ (Calamus psuedotenuis), ದೊಡ್ಡ ಬೆತ್ತ (Calamus rotang), ಜೆಡ್ಡು ಬೆತ್ತ (Calamus thwaitessi), ಬಗನಿ (Caryota urens), ಕಿರು ಈಚಲು (Phoenix humilis), ವಾಟೆ (Ochlandra travencorica) ಮತ್ತು ಇದೇ ಜಾತಿಗೆ ಸೇರಿದ ಓಖ್ಲಾಂಡ್ರ ಷೀಡಿ (Ochlandra sheedi)ಕೇದಿಗೆ ಜಾತಿಯ ಪಾಂಡನಸ್ ಫ್ಯುರಿಯೇಟಸ್ ಮತ್ತು ಕೆನರೇನಸ್ (Pandanus fureatus and P. canaranus), ನಿರವಂಜಿ (Salix tetrasperma) ಮುಂತಾದವುಗಳೂ, ಪೊದೆಗಳಾದ ವಿಷ್ಣುಧಾರಿಗಿಡ (Clerodendrum inerme), ನಾಯಿತಕ್ಕಲೆ (Clerodendrum serratum), ಕಾರೆಗಿಡ (Canthium parviflorum), ನಾಯಿಬೇಲ (Limonia acidissima), ಎಡಮುರಿ (Helicteresisisora), ಕಂಚುಪ್ರಾಂತಿ (Macarahga roxburghii), ಬೆಳ್ಳೋರೆಗಿಡ (Mussaenda frondosa) ಅಲ್ಲಲ್ಲೆ ಇರುತ್ತವೆ. ಇವಲ್ಲದೆ ಶತಾವರಿ (Asparagus racemosus) ಮಂಗರೆ (Randia brandisii), ಬೋದೀನ (Ardisia solancea) ಮುಂತಾದುವುಗಳೂ ಕಂಡುಬಂದಿವೆ.

ಈ ಅರಣ್ಯಗಳಲ್ಲಿ ಅನೇಕ ಅಡರು ಸಸ್ಯಗಳು ಕಂಡುಬಂದಿವೆ. ಇವುಗಳಲ್ಲಿ ಮುಖ್ಯವಾದುವುಗಳು : ಮರ್ಸದ ಬಳ್ಳಿ (Calycopteris floribunda), ಮೆಣಸು (Piper nigrum), ಅಡಿಕೆ ಬೀಳು ಬಳ್ಳಿ (Pothos scandens), ಕಾಡುಮೆಣಸು (Toddalia aculeata), ಪೊಪ್ಲಿ (Ventilago madraspatana), ನೀಟವ್ (Gnetum ula), ಹುಣಸೆ ಬಳ್ಳಿ (Elaegnus latifolia), ಹೆಜ್ಜೇಲ (Elaeagnus kologa), ತಲೆಜಾದರಿ ಹಂಬು (Clematis gouriana) ಮುಂತಾದುವುಗಳಾಗಿವೆ.

II ಉಷ್ಣವಲಯದ ಭಾಗಶಃ ನಿತ್ಯಹರಿದ್ವರ್ಣ ಕಾಡುಗಳು

ಈ ಅರಣ್ಯ ಪ್ರದೇಶಗಳಲ್ಲಿ ಸಾಮಾನ್ಯವಾಗಿ 80″ ರಿಂದ 120″ ಗಳವರೆಗೂ ಮಳೆಯಾಗುತ್ತಿರುತ್ತದೆ. ವಾತಾವರಣದ ಶಾಖ 70°–80°F ನಷ್ಟು ಇರುತ್ತದೆ. ಅದರೆ ಒಮ್ಮೊಮ್ಮೆ ಶಾಖ 50°F ನಷ್ಟು ಕೆಳಗೆ ಹೋಗಿದ್ದ ದಾಖಲೆಗಳೂ ಉಂಟು.

ಈ ಅರಣ್ಯಗಳ ಭೂ ಪ್ರದೇಶಗಳು ಜಂಬುಮಣ್ಣಿನ ಗುಣವನ್ನೇ ಹೊಂದಿದ್ದು ಹೆಚ್ಚು ತೇವ ಪೂರಿತವಾಗಿರುತ್ತವೆ.

ಉಷ್ಣವಲಯದ ಭಾಗಶಃ ನಿತ್ಯಹರಿದ್ವರ್ಣ ಕಾಡುಗಳು ನಮ್ಮ ಸಂಸ್ಥಾನದಲ್ಲಿ ಮುಖ್ಯವಾಗಿ ಪಶ್ಚಿಮ ಘಟ್ಟಗಳ ಇಳಿಜಾರು ಪ್ರದೇಶಗಳಲ್ಲಿ ಸಮುದ್ರ ಮಟ್ಟಕ್ಕೆ 2500 ಅಡಿಗಳಿಂದ 3500 ಅಡಿಗಳಷ್ಟು ಎತ್ತರದಲ್ಲಿ ಬೆಳೆದುಕೊಂಡಿವೆ. ಕೊಡಗು, ಜೋಗ್, ಉತ್ತರ ಕನ್ನಡ ಜಿಲ್ಲೆ, ಬೆಳಗಾಂ ಮುಂತಾದ ಕಡೆಗಳಲ್ಲೆಲ್ಲಾ ಈ ವಿಧವಾದ ಅರಣ್ಯಗಳನ್ನು ನಾವು ನೋಡಬಹುದು.

ಈ ಅರಣ್ಯಗಳ ವಿಷಯದಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಇಲ್ಲಿ ನಾವು ನಿತ್ಯಹರಿದ್ವರ್ಣ ವೃಕ್ಷಗಳನ್ನೂ, ಬೇಸಿಗೆಯಲ್ಲಿ ಎಲೆಯುದುರುವ ವೃಕ್ಷಗಳನ್ನೂ ನೋಡಬಹುದು. ಈ ಅರಣ್ಯಗಳ ಸಸ್ಯಸಂಪತ್ತಿನಲ್ಲಿ ಈ ಕೆಳಗಿನ ಕೆಲವು ಮುಖ್ಯ ಸಸ್ಯಗಳನ್ನು ಹೆಸರಿಸಬಹುದಾಗಿದೆ.

ಮೇಲ್ಪದರ :

ಹೊಟ್ಟೆಬಾಗೆ (Albizzia chinensis)
ಹೆತ್ತೇಗೆ (Adina cordifolia)
ಬಿಲ್ವಾರ (Albizzia odoratissima)
ಹೆಬ್ಬಲ್ಸ್ (Artocarpus hirsuta)
ಹಲಸು (Artocarpus heterophyllus)
ಪಾದ್ರಿ (Steropermum chelonioides)
ಜಯಕಾಂತಳ (Sterculia gutta)
ನೌಲಾದಿ (Vitex altissima)
ನಂದಿ (Lagerstroemia lannceolata)
ಚಲ್ಲ (Legerstroemia speciosa)
ಕಡಃಣಿ (Mitragyna parviflora)
ಬೂರುಗ (Salmalia malabarica)
ಕುವೆ (Calophyllum tomentosum)
ಕಿರಲ್ ಬೋಘಿ (Hopea parviflora)
ಧೂಪ (Vateria indica)
ವಾಲಿಮರ (Dipterocarpus indicus)
ಮಂದಧೂಪ (Ailanthus malabarica)
ಹೈಗ (Hopea wightiana)
ಮಾವು (Mangifera indica)

ಹುಚ್ಚುಬೇವು (Melia composita)
ಸಗೆದ (Schleichera oleosa)
ಚಿಟ್ಟು ತಂಧ್ರಿ ಮರ (Machilus macrantha)
ಕುಟುಗೇರಿ (Holigrana arnottiana)
ಜಂಬೆ (Xylia xylocarpha)
ಗಂಧಗರಿಗೆ (Toona ciliata)

ಮತ್ತಿ ಜಾತಿಗೆ ಸೇರಿದ ತಾರೆ (Terminalia bellerica), ಅಳಲೆ (Terminalia ehebula), ಹುನಾಲ್ (Terminalia paniculata) ಮುಂತಾದ ಮರಗಳೂ ಬೆಳಗಾಂ ಮತ್ತಿತರ ಎಲ್ಲಾ ಪ್ರದೇಶಗಳಲ್ಲಿ ಕಂಡುಬಂದಿವೆ.

ಕೆಳಪದರ : ಈ ಅರಣ್ಯಗಳ ಕೆಳಪದರಗಳಲ್ಲಿ ಮುಖ್ಯವಾಗಿ ಲವಂಗಪಟ್ಟೆ ಮರ (Cinnamomum zeylanicum), ನಂಜಿನ ಕೊರಡು (Strychnos nuxvomica), ಕಾವಲ್ (Careya arborea), ರುದ್ರಾಕ್ಷಿ(Elaeocarpus tuberculatus), ಊದಾ ತಳ್ಳಿ (Memocylon edule), ಪಗಡೆ (Mimusops elengi), ಗುದ್ದ (Flacourita montana), ಬೆಂಡಿನ ಮರ (Trema orientalis), ಕುಂಕುಮದ ಮರ (Mallotus philippensis), ಕಂಚಿಗನ ಮರ (Diospyros buxifolia) ಮುಂತಾದ ಮರಗಳಿರುತ್ತವೆ.

ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಈ ಅರಣ್ಯಗಳಲ್ಲಿ ಹೈಗ, ಜಂಬೆ, ಲಿಟ್ಸಿಯ (Litsea), ಲಾಂಟಾನೆ ಮುಂತಾದುವುಗಳೆಲ್ಲಾ ಗುಂಪು ಗುಂಪುಗಳಾಗಿ ಬೆಳೆಯುತ್ತಿರುವುದು ಕಂಡುಬರುತ್ತದೆ. ಬಿದಿರಿನ ಜಾತಿಗೆ ಸೇರಿದ ಕಿರುಬಿದಿರು, (Dendrocalamus strictus), ಹೆಬ್ಬಿದಿರು (Bambussa arundinacea) ಗಳು ಅಲ್ಲಲ್ಲಿ ಬೆಳೆಯುತ್ತಿರುತ್ತವೆ. ಬೀಟೆ, ಮತ್ತಿ, ತೇಗ, ತಾರೆ, ಅಳಲೆ, ಹೆತ್ತೇಗ, ನೆಲ್ಲಿಕಾಯಿ ಮರಗಳು, ನಾಗಸಂಪಿಗೆ, ಹುನಾಲ್, ಕುವೆ, ತದಸಲ, ಕಲ್ತೇಗ,ನಿರಡಿವಿಟ್ಟಲು ಮುಂತಾದ ಆರ್ಥಿಕ ದೃಷ್ಟಿಯಿಂದ ಅತಿ ಪ್ರಾಮುಖ್ಯವನ್ನು ಗಳಿಸಿರುವ ವೃಕ್ಷಗಳೂ ಈ ಅರಣ್ಯಗಳಲ್ಲಿ ಕಂಡು ಬರುತ್ತವೆ.

ಈ ಮರಗಳ ಕೆಳಭಾಗದಲ್ಲಿ ಸಾಮಾನ್ಯವಾಗಿ ಏಲಕ್ಕಿ, ಝರಿ ಗಿಡಗಳು, ಶತಾವರಿ ಕಾಡುಮೆಣಸು, ಯಃಲಚಿಜಾತಿಯಗಿಡಗಳು,ಸ್ಟ್ರೊಬೈಲಾಂಥಸ್(Strobilanthus) ಆರ್ಕಿಡ್ ಸಸ್ಯಗಳು, ಮೆಣಸು, ಕೆಲವು ಅಡರು ಬಳ್ಳಿಗಳು ಇವೆಲ್ಲಾ ಕಂಡುಬರುತ್ತವೆ.

III ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಅರಣ್ಯಗಳು

ಈ ಬಗೆಯ ಕಾಡುಗಳು ಮೈಸೂರು,ಮಂಗಳೂರು,ಕೊಡಗು, ಚಿಕ್ಕಮಗಳೂರು ಹಾಸನ, ಶಿವಮೊಗ್ಗ ಜಿಲ್ಲೆಗಳ ಬೆಟ್ಟ ಗುಡ್ಡಪ್ರದೇಶಗಳಲ್ಲಿ ಕಂಡು ಬಂದಿವೆ. ಈ ಜಾಗ

ಗಳಲ್ಲಿ ಮಳೆ 60 ಇಂಚಿನಿಂದ 80 ಇಂಚುಗಳಷ್ಟಾಗುತ್ತಿದ್ದು ವರ್ಷದ 5,6 ತಿಂಗಳುಗಳ ಕಾಲ ಒಣಹವೆ ಇರುತ್ತದೆ. ಈ ಕಾಡುಗಳು ಸುಮಾರು 100 ರಿಂದ 120 ಅಡಿಗಳಷ್ಟು ಎತ್ತರ ಬೆಳೆಯಬಲ್ಲವಾಗಿವೆ. ಇಲ್ಲಿನ ಎತ್ತರದ ಮರಗಳು ಒಣ ಹವೆಯನ್ನು ತಡೆದು ಕೊಳ್ಳುವ ಶಕ್ತಿ ಹೊಂದಿರುತ್ತವೆ. ಈ ಕಾಡುಗಳ ಕೆಳಪದರದಲ್ಲಿ ಬಿದಿರುಗಳೂ ಕೆಲವು ಸಣ್ಣ ನಿತ್ಯಹರಿದ್ವರ್ಣವೃಕ್ಷಗಳೂ ಕಂಡುಬರುತ್ತವೆ.

ಅರಣ್ಯ ಇಲಾಖೆಯ ನಿರ್ಲಕ್ಷ್ಯ, ಜನಗಳ ಜವಾಬ್ದಾರಿರಹಿತ ನಡೆವಳಿಕೆ ಮತ್ತಿತರ ಅನೇಕ ಕಾರಣಗಳಿಂದ ಈ ಕಾಡುಗಳಲ್ಲಿ ಆಗಾಗ್ಗೆ ಬೆಂಕಿ ಬೀಳುತ್ತಿದ್ದು ಕೆಳಗಿನ ಸಸ್ಯವರ್ಗವನ್ನೆಲ್ಲಾ ಆಪೋಶನ ತೆಗೆದುಕೊಳ್ಳುತ್ತಿರುತ್ತದೆ. ಒಮ್ಮೊಮ್ಮೆ ಈ ಕಾಳ್ಗಿಚ್ಚುಗಳು ಅನೇಕ ವಾರಗಳ ತನಕವೂ ಉರಿದಿರುವುದುಂಟು.

ಈ ಅರಣ್ಯಗಳ ವೃಕ್ಷಗಳಲ್ಲಿ ಮುಖ್ಯವಾದ ತೇಗ, ಮತ್ತಿ, ನಂದಿ, ಹೊನ್ನೆ, ಹೆತ್ತೇಗ, ಬಿಳಿಮತ್ತಿ, ಬೀಟೆ, ಕಲ್ತೇಗ ಮುಂತಾದುವೆಲ್ಲಾ ಬೆಳೆಯುವುದರಿಂದ ಈ ಅರಣ್ಯಗಳು ಬಹಳ ಪ್ರಾಮುಖ್ಯವನ್ನು ಹೊಂದಿವೆ. ತೇಗ, ಮತ್ತಿ, ಬಂದರು, ಗಂಧ ಗರಿಗೆ, ಹೆತ್ತೇಗ ಮುಂತಾದ ಮರಗಳು ತಮ್ಮ ಎಲೆಗಳನ್ನು ಚಳಿಗಾಲದಲ್ಲಿ ಕಳೆದು ಕೊಳ್ಳುತ್ತವೆ. ಆದರೆ ಬೂರಗ, ಹಾಲುವಾಣ, ಕಕ್ಕೆ ಮುಂತಾದುವುಗಳು ಎಲೆಗಳು ಮೂಡುವ ಮೊದಲೇ ಪುಷ್ಪಭರಿತವಾಗಿರುತ್ತವೆ. ಮಲೆನಾಡಿನ ಈ ಅರಣ್ಯಗಳಲ್ಲಿ ಎತ್ತರದ ಮರಗಳಾಗಿ ನಂದಿ, ಬೀಟೆ, ತೇಗ ಹೆತ್ತೇಗ, ಮತ್ತಿ, ಬಿಳೀಮತ್ತಿ, ತಾರೆ, ಹುನಾಲ್ ಹೊನ್ನೆ, ಬಿಲ್ವರ, ಬೂರುಗ, ಕದಸಲ, ಹಾಲ, ಕಲ್ತೇಗ, ಕಡಾಣಿ, ಬಂದರು ಮುಂತಾದುವುಗಳು ಬೆಳೆಯುತ್ತಿದ್ದು ಕೆಳಗಿನ ಹಂತದಲ್ಲಿ ಜಂಬೆ, ನೆಲ್ಲಿಕಾಯಿಮರ, ಬಿಲ್ವಪತ್ರೆಮರ, ಹೊಂಗೆ, ಕಕ್ಕೆ, ನಂಜಿನಕೊರಡು, ಕುಂಕುಮದಮರ, ಸೌಲಾದಿ, ಹಾಲೆ ಕಾಡುಗಣಗಲು, ಮಸಿಮರ, ಬಿಳೀಕಂಚವಾಳ, ಸಗದೆ, ಹೆಸರೆ, ಜಾಲರಿ, ಕಾವಲ್, ಚೊಳ್ಳೆ, ಕೆಂಪುದಲೆ, ಬಿಳಿದಾಳೆ, ಲವಂಗಪಟ್ಟೆ, ಯಲಚಿ, ಬೆಂಡೆಮರ ಮುಂತಾದುವುಗಳಿರುತ್ತವೆ. ಅಲ್ಲಲ್ಲೆ ಎಡಮುರಿ, ಮಲ್ಲಿಗೆ ಜಾತಿಯ ಗಿಡಗಳ ಪೊದೆಗಳು ಕಂಡುಬರುತ್ತವೆ. ಶಿವಮೊಗ್ಗ ಮತ್ತು ಉತ್ತರ ಕರ್ನಾಟಕ ಜಿಲ್ಲೆಗಳ ಈ ಅರಣ್ಯಗಳಲ್ಲಿ ಅಲ್ಲಲ್ಲೇ ಬಿದಿರುಮೆಳೆಗಳು ಹೇರಳವಾಗಿ ಬೆಳೆದುಕೊಂಡಿರುತ್ತವೆ.

VI ಬೇಸಿಗೆಯಲ್ಲಿ ಎಲೆಯುದುರುವ ಮೈದಾನ ಸೀಮೆಯ ಒಣ ಕಾಡುಗಳು

ಈ ಅರಣ್ಯಗಳು ಅಷ್ಟು ದಟ್ಟವಾದ ಅರಣ್ಯಗಳಲ್ಲದಿದ್ದರೂ ಇಲ್ಲಿಯ ಮರಗಳು 50 ರಿಂದ 70 ಅಡಿಗಳಿಗೂ ಹೆಚ್ಚು ಬೆಳೆಯಬಲ್ಲವು ಈ ಪ್ರದೇಶಗಳಲ್ಲಿ 30 ರಿಂದ 60 ಇಂಚುಗಳಷ್ಟು ಮಳೆ ಆಗುತ್ತಿರುತ್ತದೆ. ಇಲ್ಲಿ ವರ್ಷದ ಕಡಿಮೆ ಉಷ್ಣತೆ 70ರಿಂದ90°F ಇದ್ದು ಆರ್ದ್ರತೆ ಶೇಕಡ 50 ರಿಂದ 70ರಷ್ಟಿರುತ್ತದೆ. ಸಾಮಾನ್ಯವಾಗಿ ಮೈದಾನಗಳಲ್ಲೂ

ಸಣ್ಣ ಸಣ್ಣ ಬೆಟ್ಟ ಗುಡ್ಡಗಳಲ್ಲೂ ಕಂಡುಬರುವ ಈ ಕಾಡಗಳು ಪೂರ್ವಕ್ಕೆ ಮಲೆನಾಡಿನ ಬೇಸಿಗೆಯಲ್ಲಿ ಎಲೆಯುದುರುವ ಅರಣ್ಯಗಳನ್ನು ಹೊಂದಿವೆ.

ಈ ಅರಣ್ಯಗಳಲ್ಲಿ ಕಂಡು ಬರುವ ವೃಕ್ಷಗಳು ಮತ್ತಿತರ ಸಸ್ಯಗಳು ಈ ರೀತಿ ಇವೆ. ಇವುಗಳ ಪೈಕಿ ಮೇಲು ಹಂತದಲ್ಲಿ ತೇಗ, ದಿಂಡಗ, ಬಾಗೆ, ಬಿಲ್ವರ, ಹೆತ್ತೇಗ ಹೊನ್ನೆ, ನಂದಿ, ಮತ್ತಿ, ತಾರೆ, ಅಳಲೆ, ಬಿಳೀಮತ್ತಿ, ಕಲ್ತೇಗ, ಬೂರುಗ, ತದಸಲ ದೊಡ್ಡಮರ ಹಿಪ್ಪೆ, ಹೆಸಾಲ್, ಬಂದರು, ನೇರಳೆ ಮುಂತಾದ ಮರಗಳಿರುತ್ತವೆ. ಕೆಳಹಂತದಲ್ಲಿ ಮುಖ್ಯವಾಗಿ ಮಸಿಮರ, ನೆಲ್ಲಿಕಾಯಿಮರ, ಗಂಧದಮರ, ಮುತ್ತುಗ, ಯಲಚಿ, ಹಾಲೆ, ಜಾಲರಿ, ಕಕ್ಕೆ, ಸಗದೆ, ಅಂಟವಾಳ, ಜಿನಿಂಗೆ ಮುಂತಾದಮರಗಳೂ ಲಾಂಟಾನ, ಎಡಮುರಿ, ಕಿರುಬಿದಿರುಗಳೂ ಕಂಡು ಬರುತ್ತವೆ. ಮರಗಳಕೆಳಗೆ ಅನೇಕ ಜಾತಿಯ ಹುಲ್ಲುಗಳೂ, ಅಡರು ಬಳ್ಳಿಗಳೂ ಇರುತ್ತವೆ.

V ಕಳ್ಳಿ ಕುರುಚಲು ಗಿಡಗಳನ್ನೊಳಗೊಂಡ ಅರಣ್ಯಗಳು

ಈ ಅರಣ್ಯಗಳು ಮೇಲೆ ಹೇಳಿದ ಇತರ ಅರಣ್ಯಗಳನ್ನು ಬಿಟ್ಟು ಮಿಕ್ಕ ಅರಣ್ಯ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡಿವೆ. ಇಲ್ಲಿ ಮಳೆ 19 ರಿಂದ 30 ಇಂಚುಗಳಷ್ಟು ಮಾತ್ರ ವಿದ್ದು ವರ್ಷಕ್ಕೆ ಆರು ತಿಂಗಳಿಗೂ ಹೆಚ್ಚು ಬೇಸಗೆಯ ಒಣ ಹವೆಯೇ ಇರುತ್ತದೆ. ಇಲ್ಲಿ ಆರ್ದತೆ 30 ರಿಂದ 60% ಇದ್ದು ಶಾಖ 90 ರಿಂದ 140°F ನಷ್ಟಿರುತ್ತದೆ. ಚಿತ್ರದುರ್ಗ,ಗುಲ್ಬರ್ಗ, ರಾಯಚೂರು, ಬಳ್ಳಾರಿ,ಬೆಳಗಾಂನ ಕೆಲವು ಪ್ರದೇಶಗಳು-ಇಲ್ಲೆಲ್ಲಾ ನಾವು ಈ ಬಗೆಯ ಅರಣ್ಯಗಳನ್ನು ಕಾಣಬಹುದು. ಈ ಅರಣ್ಯಗಳು ಸಾಮಾನ್ಯವಾಗಿ ಸ. ಮಟ್ಟಕ್ಕೆ 1500 ರಿಂದ 2000 ಅಡಿಗಳಷ್ಟು ಎತ್ತರದ ಪ್ರದೇಶಗಳಲ್ಲಿದ್ದು ಇವುಗಳ ಭೂಪ್ರದೇಶ ಕಲ್ಲು ಬಂಡೆಗಳನ್ನೊಳಗೊಂಡು ಒಮ್ಮೊಮ್ಮೆ ಪ್ರತ್ಯಾಮ್ಲೀಯ ಗುಣಗಳನ್ನು ಹೊಂದಿರುತ್ತದೆ. ಈ ಕಾಡುಗಳ ಮರಗಳು ಸಾಮಾನ್ಯವಾಗಿ ಬೇಸಗೆಯಲ್ಲಿ ಎಲೆಗಳನ್ನು ಕಳೆದುಕೊಳ್ಳುವಗುಣ ಹೊಂದಿದ್ದು ಹೆಚ್ಚು ಎತ್ತರಕ್ಕೆ ಬೆಳೆಯುವ ಶಕ್ತಿ ಕಳೆದುಕೊಂಡಿರುತ್ತವೆ. ಕುಬ್ಜಾಕೃತಿಗಳಂತೆ 20 ರಿಂದ 40ಅಡಿಗಳಷ್ಟು ಎತ್ತರಕ್ಕೆ ಬೆಳೆದರೆ ಅದೇಹೆಚ್ಚು

ಈ ಅರಣ್ಯಗಳ ಮೇಲ್ಪದರ ತೇಗ, ದಿಂಡಗ, ಗೊಬ್ಬಳಿಮರ (Acacia arabica) ಬಿಳಿಜಾಲಿ (Acacia leucophlaea), ಕಾಚುಮರ, (Acacia catechu) ಬನ್ನಿಮರ (Acacia ferruginea), ಮುಗಳಿ (Acacia suma), ಚುಜ್ಜಲ (Albizzia amara), ಚಿಕುಲ್ (Albizzia procera), ಬಿಲ್ವರ, (Albizzia odoratissima)ಬಾಗೆ,ಮತ್ತಿ,ತಾರೆ,ಅಳಲೆಕಾಯಿಮರ. ಬಿಳಿಮತ್ತಿ, ಸಿಶ್ಮಬಾಗೆ (Dalbergia sisso), ಬಿಲ್ವಪತ್ರೆಮರ, ಬೇಲದ ಹಣ್ಣಿನ ಮರ (Feronia limonia),ಆಲ,ಅತ್ತಿ,ಗೋಣಿ,ಕರಿಬಸರಿ,ಹಿಪ್ಪೆ, ಬಿಳಬಸರಿ, ಹುಣಸೆ, ಹೊನ್ನೆ,ಬೇವು,ಕರಿಗೇರು, ಸಾಂಬ್ರಾಣಿ (Boswellia serrata), ಹೆಬ್ಬೇವು, ಅಂಟವಾಳ, ಹಾಲ, ದೊಡ್ಡಮರ, ಕೂಳಿ (Gmelina arborea), ಜಿನಿಂಗೆ, ಸಗದೆ

ಜಾಲರಿ, ಕಕ್ಕೆ, ಕಡಾಣಿಮರ, ಕಂಚವಾಳ, ಬಸವನಪಾದ, ನಂಜಿನಕೊರಡು, ಸೌಲಾದಿ, ನೆಲ್ಲಿಕಾಯಿಮರ, ಕೆಂಪುದಳೇ, ಬಿಳೇದಳ, ಚೊಳ್ಳೆ, ಕುಂಕುಮದ ಮರ, ಹೊಂಗೆ, ಸುಂಕತ್ತಿ (Delonix elata) ಕೆಂಪುಕೆಂಜಿಗೆ (Delonix regia) ತೂಪ್ರ, ಮಲ್ಲೈ ಗಂಧದ ಮರ ಮುಂತಾದವುಗಳಿಂದ ಆಗಿರುತ್ತದೆ. ಇವಲ್ಲದೆ ಕೊಳ್ಳೆಗಾಲ, ಚಿತ್ರದುರ್ಗ ಬಳ್ಳಾರಿಗಳ ಕಾಡುಗಳಲ್ಲಿ ಈ ತರಹದ ಕಮ್ಮಾರ್‌ಮರ (Hardwickia binata) ಮರ ಹೇರಳವಾಗಿ ಬೆಳೆಯುತ್ತದೆ.

ಈ ಕಾಡುಗಳ ಕೆಳಪದರದಲ್ಲಿ ಬಿಕ್ಕೆ (Gardenia Gummifera), ಗೊರವಿ, ಯಲಚಿ, ಸೀತಾಫಲ, ಹಾಲೆ, ಕಾಡುಗಣಗಲು, ಈಚಲು, ಕೀಚಿಗ, ಇಜಿಮರ (Premna tomentosa) ಮುಂತಾದುವುಗಳಿರುತ್ತವೆ. ಪೊದೆಗಳಿಗೆ ಹೆಸರಾದ ಈ ಕಾಡುಗಳಲ್ಲಿ ಎಕ್ಕ, ಕಾರೆಗಿಡ, ಲಕ್ಕಿ, ಗೋರಂಟಿ, ನಾಯಿ ತುಳಸಿ, ಪಾಪಾಸ್ ಕಳ್ಳಿ, ಕಾಡು ಮೆಣಸು, ಕಾಡು ನೇವಲಿ, ಬೊಂತೆ ಕಳ್ಳಿ, ಎಲೆಗಳ್ಳಿ, ಲಾಂಟಾನ, ಚಂದ್ರಿಕೆ (Dodonaea viscosa) ಸೊಗದೆಬಳ್ಳಿ (Hemidesmus indicus), ಕರಿಹಂಬು (Ichno carpus frutescens), ಮಂಗರವಳ್ಳಿ, ಶತಾವರಿ, ಗುಲಗಂಜಿ ಗಿಡ (Abrus precatorius), ಸೀಗೆಮೆಳೆ, ಕಾಡುಹರಳು ಗಿಡ ಮತ್ತು ಮಜ್ಜಿಗೆ ಹುಲ್ಲೂ ಸೇರಿ ವಿವಿಧ ಜಾತಿಯ ಹುಲ್ಲುಗಳು ಈ ಕಾಡುಗಳಲ್ಲಿ ಕಂಡು ಬಂದಿವೆ.

ಉತ್ತರ ಕನ್ನಡ ಜಿಲ್ಲೆಯ ಜಂಬೆಮಣ್ಣು ಹೊಂದಿರುವ ಕೆಲವು ಒಣ ಕಾಡುಗಳು ಕೆಲವು ನಿತ್ಯಹರಿದ್ವರ್ಣ ವೃಕ್ಷಗಳನ್ನು ಹೊಂದಿವೆ. ಇವುಗಳಲ್ಲಿ ಮುಖ್ಯವಾದುವುಗಳೆಂದರೆ ಬಿಕ್ಕೆ, ನೇರಳೆ, ಸೌಲಾದಿ, ಉದಾತಳ್ಳಿ, ನಾಗರೆ (Ximenia americana), ಮಿರಡಿ ಮುಂತಾದವುಗಳ ಜಾತಿಗೆ ಸೇರಿದವುಗಳು.

ಮೇಲೆ ಹೇಳಿದ ವಿವಿಧ ರೀತಿಯ ಮುಖ್ಯ ಅರಣ್ಯ ವಿಧಗಳಲ್ಲದೆ ಅಲ್ಲಲ್ಲೆ ಕಮ್ಮಾರ್ ಮರದ ಅರಣ್ಯಗಳು (Hardwicka binata forests), ಮ್ಯಾಂಗ್ರೂವ್ ಅರಣ್ಯಗಳೂ (Mangrove forests), ಕಂಡು ಬರುತ್ತವೆ.

ಕಮ್ಮಾರ್ ಮರದ ಅರಣ್ಯಗಳು ಬೆಂಗಳೂರು, ಮಾದೇಶ್ವರಬೆಟ್ಟ, ತುಮಕೂರು, ಚಿತ್ರದುರ್ಗ, ಬಳ್ಳಾರಿ ಮುಂತಾದ ಕೆಲವು ಪ್ರದೇಶಗಳಲ್ಲಿ ಕಂಡು ಬಂದಿವೆ. ಇಲ್ಲಿ ಈ ಮರದ ಗುಂಪುಗಳು ಆಗಾಗ್ಗೆ ಮಸಿಮರದೊಂದಿಗೆ ಬೆಳೆಯುತ್ತಿರುತ್ತವೆ. ಈ ಮರದ ಎಲೆಗಳೆಂದರೆ ದನಗಳಿಗೆ ಬಹಳ ಪ್ರಿಯವಾದದ್ದು. ಆದ್ದರಿಂದ ರೈತರುಗಳು ಈ ಕಾಡುಗಳ ಉಪಯೋಗವನ್ನು ಚೆನ್ನಾಗಿ ಮಾಡಿಕೊಳ್ಳುತ್ತಾರೆ.

ನಮ್ಮ ಸಂಸ್ಥಾನದ ಅರಬ್ಬೀ ಸಮುದ್ರಕ್ಕೆದುರಾಗಿರುವ ಕರಾವಳಿ ಪ್ರದೇಶದಲ್ಲಿ ಮ್ಯಾಂಗ್ರೂವ್ ಅರಣ್ಯಗಳು ಉತ್ತರ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಈ ಕಾಡುಗಳಲ್ಲಿ ಮುಖ್ಯವಾಗಿ ಅವಿಸೀನಿಯ (Avicennia officinalis), ರೈಸೊಫೊರ ಕಾಂಜುಗೇಟ ಮತ್ತು ಮ್ಯೂಕ್ರನೇಟ (Rhizophora conjugata & R. mucro-

nata), ಸೊನ್ನರೇಷಿಯ ಆಸಿಡ (Sonneratia acida) ಮತ್ತು ನಿತ್ಯಹರಿದ್ವರ್ಣ ವೃಕ್ಷವಾದ ಬ್ರುಗಿಎರಜಿಮ್ನೋರೈಸ (Bruguiera gymnorhiza) ಮುಂತಾದ ಮರಗಳೂ ಅನೇಕ ಪೊದೆಗಳೂ, ಮೂಲಿಕೆಗಳೂ ಬೆಳೆಯುತ್ತವೆ.

ನಮ್ಮ ಅರಣ್ಯಗಳ ಪ್ರಾಮುಖ್ಯ :

ಮಾನವನಿಗೂ ಅರಣ್ಯಗಳಿಗೂ ಬಹಳ ಹತ್ತಿರದ ಸಂಬಂಧವಿದೆ. ವೇದಗಳಲ್ಲಿ ಅರಣ್ಯ ವೃಕ್ಷಗಳ ಬಗ್ಗೆ ಪ್ರಸ್ತಾಪವಿದೆ. ಪಾಣಿನಿಯ ಸೂತ್ರಗಳಲ್ಲಿ(ಕ್ರಿ.ಪೂ.ಸುಮಾರು 5ನೆಯ ಶತಮಾನ) ಅರಣ್ಯಗಳ ವರ್ಗೀಕರಣ, ಪ್ರಾಮುಖ್ಯ ಮುಂತಾದವುಗಳ ವಿಷಯವಾಗಿ ಮಾಹಿತಿ ಇದೆ. ನಮ್ಮ ಮಹಾಕಾವ್ಯಗಳಲ್ಲಂತೂ ಅರಣ್ಯಗಳ ವರ್ಣನೆ ಹೇರಳವಾಗಿ ಕಾಣಬರುತ್ತದೆ. ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಆಗಿನ ಕಾಲದಲ್ಲಿ ಅರಣ್ಯಗಳಿಗೆ ಎಷ್ಟು ಪ್ರಾಮುಖ್ಯವನ್ನು ಕೊಡಲಾಗಿತ್ತು, ಅರಣ್ಯಗಳನ್ನು ಹಾಳು ಮಾಡುವವರಿಗೆ ಯಾವ ಯಾವ ಕಠಿಣ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು ಎಂಬ ವಿಚಾರಗಳನ್ನೆಲ್ಲಾ ವಿಶದವಾಗಿ ವಿವರಿಸಿದ್ದಾನೆ. ಆತನೇ ಹೇಳಿಕೊಂಡಿರುವಂತೆ ಆಗ ಅರಣ್ಯಗಳ ರಕ್ಷಣೆಗೆಂದೇ ಒಬ್ಬ ಅರಣ್ಯ ರಕ್ಷಣಾಧಿಕಾರಿ ಇರುತ್ತಿದ್ದನು. ಅವನನ್ನು ಕುಪ್ಯಾಧ್ಯಕ್ಷ (Superintendent of Forest Produces) ಎಂದು ಕರೆಯಲಾಗುತ್ತಿತ್ತು. ಈತನ ಕೆಲಸ ಬರೀ ಅರಣ್ಯಗಳಿಂದ ಬರುವ ಆದಾಯ, ಆ ಅರಣ್ಯಗಳ ರಕ್ಷಣೆ ಇವುಗಳೇ ಆಗಿರದೆ ಅರಣ್ಯಗಳ ಪ್ರಾಮುಖ್ಯದ ಬಗ್ಗೆ ಜನಗಳಿಗೆ ತಿಳುವಳಿಕೆ ಕೊಡುವುದೂ ಆಗಿತ್ತು. ಆತನು ಅಂದಿನ ಅರಣ್ಯ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದನು.

ಅರಣ್ಯಗಳ ಮೇಲ್ವಿಚಾರಣೆ, ರಕ್ಷಣೆ, ಪ್ರಾಮುಖ್ಯದ ಬಗ್ಗೆ ಕೌಟಿಲ್ಯನ ಕಾಲದಲ್ಲೇ ಭಾರತೀಯರಿಗೆ ಹೆಚ್ಚು ತಿಳಿದಿದ್ದರೂ ಅನೇಕ ರಾಜಕೀಯ ಕಾರಣಗಳು, ಯುದ್ಧಗಳು, ಚಕ್ರಾಧಿಪತ್ಯಗಳ ಬದಲಾವಣೆ, ಆಡಳಿತದಲ್ಲಿನ ಅರಾಜಕತೆ ಮತ್ತು ಇನ್ನೂ ಅನೇಕ ಕಾರಣಗಳಿಂದಾಗಿ ಭಾರತದ ಬಹುಪಾಲು ಅರಣ್ಯಗಳು ನಾಶವಾಗಬೇಕಾಯಿತು. ಬ್ರಿಟಿಷರು ಬಂದ ಮೇಲೆ ಅವರಲ್ಲಿನ ಕೆಲವು ಅಧಿಕಾರಿಗಳು ಈ ಬಗ್ಗೆ ಅಧ್ಯಯನ ನಡೆಸಿ, ಅರಣ್ಯಗಳ ಪ್ರಾಮುಖ್ಯವನ್ನರಿತು ಆಡಳಿತಗಾರರ ಸಹಕಾರದಿಂದ ಎಲ್ಲ ದೇಶೀಯ ಸಂಸ್ಥಾನಗಳಲ್ಲೂ ಅರಣ್ಯ ಇಲಾಖೆಗಳನ್ನು ಸ್ಥಾಪಿಸಿ ಅರಣ್ಯಗಳ ರಕ್ಷಣೆಯ ಬಗ್ಗೆ ಮತ್ತು ದಕ್ಷ ಆಡಳಿತದ ಬಗ್ಗೆ ಗಮನ ಕೊಟ್ಟರು.

ನಮ್ಮ ಸಂಸ್ಥಾನದಲ್ಲಿ ಅರಣ್ಯ ಇಲಾಖೆ ಸ್ಥಾಪಿತವಾಗಿ ನೂರನಾಲ್ಕು ವರ್ಷಗಳು ಮಾತ್ರ ಕಳೆದಿದ್ದರೂ ನಮ್ಮ ಅರಣ್ಯ ಇಲಾಖೆ ಮೊದಲಿನಿಂದಲೂ ದಕ್ಷ ಆಡಳಿತಕ್ಕೆ ಪ್ರಸಿದ್ಧವಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಸಂಸ್ಥಾನದ ಆರ್ಥಿಕ ಭದ್ರತೆಯಲ್ಲಿ ಅರಣ್ಯಗಳ ಪಾತ್ರ ಹಿರಿದಾದದ್ದು ಎಂಬುದನ್ನು ಇಲ್ಲಿಯ ಹಿಂದಿನ ಮಹಾರಾಜರುಗಳೂ ತಿಳಿದುಕೊಂಡಿದುದು. ಇಂದೂ ಕೂಡ ಮೈಸೂರಿನ ಅರಣ್ಯಗಳಿಗೆ ಅಮೇಯ ಆರ್ಥಿಕ ಪ್ರಾಮುಖ್ಯವಿದೆ. ಇವುಗಳಿಂದ ಸಂಸ್ಥಾನಕ್ಕೆ ಬರುವ ಲಾಭ

ಅಪಾರ. 1962–63ರಲ್ಲಿ ಸರ್ಕಾರಕ್ಕೆ 8·79 ಲಕ್ಷ ರೂಗಳಷ್ಟು ನಿವ್ವಳ ಲಾಭ ಬಂದಿತ್ತು. ಅರಣ್ಯಗಳಿಂದ ದೊರೆಯುವ ಗಂಧದ ಮರ, ತೇಗ, ಮತ್ತಿ, ಬೀಟೆ, ನಂದಿ ಹೊನ್ನೆ ಮತ್ತಿತರ ಮರಗಳು, ಬಿದಿರುಗಳು, ಬೆತ್ತಗಳು, ಸೌದೆ, ಇದ್ದಿಲು, ಅಳಲೆಕಾಯಿ ಗಳು, ಜೇನು ಮುಂತಾದವುಗಳಲ್ಲಿ ಕೆಲವಾದರೂ ಇಲ್ಲದಿದ್ದರೆ ನಮ್ಮ ನಿತ್ಯಜೀವನ ನಡೆ ಯಲಾರದು.

ಅರಣ್ಯಗಳನ್ನೇ ನೇರವಾಗಿ ಅವಲಂಬಿಸಿಕೊಂಡಿರುವ ಅನೇಕ ಕೈಗಾರಿಕೆಗಳು ನಮ್ಮಲ್ಲಿವೆ. ಇವುಗಳಲ್ಲಿ ಗಂಧದ ಕೈಗಾರಿಕೆ, ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ, ಕಾಗದದ ಕೈಗಾರಿಕೆ. ಮರಕೊಯ್ಯುವ ಕಾರ್ಖಾನೆಗಳು ಮುಂತಾದವು ಮುಖ್ಯವಾದುವುಗಳಾಗಿವೆ. ಮೈಸೂರಿನ ಗಂಧದ ಮರ ಪ್ರಪಂಚದ ಎಲ್ಲ ಕಡೆಗಳಲ್ಲೂ ಪ್ರಸಿದ್ಧಿ ಪಡೆದಿದೆ. ಇಂದು ಪ್ರಪಂಚದ ಎಲ್ಲ ಮೂಲೆಗಳಿಂದಲೂ ಗಂಧದ ಎಣ್ಣೆ ಮತ್ತು ಗಂಧದ ಸಾಬೂನುಗಳಿಗೆ ಹೆಚ್ಚು ಬೇಡಿಕೆ ಇದೆ. ಸುಮಾರು 2 ಲಕ್ಷ ಪೌಂಡುಗಳಷ್ಟು ಗಂಧದ ಎಣ್ಣೆ ಉತ್ಪತ್ತಿ ಮಾಡುವ ಚೈತನ್ಯವುಳ್ಳ ಎರಡು ಬೃಹತ್ ಗಂಧದ ಎಣ್ಣೆ ಕಾರ್ಖಾನೆಗಳು ಇಂದು ನಮ್ಮ ಸಂಸ್ಥಾನದಲ್ಲಿವೆ. ಇವುಗಳಲ್ಲೊಂದು ಮೈಸೂರಿನಲ್ಲಿದ್ದು ಮತ್ತೊಂದು ಶಿವಮೊಗ್ಗೆಯಲ್ಲಿದೆ. ನಮ್ಮ ಅರಣ್ಯ ಇಲಾಖೆ ವರ್ಷಕ್ಕೆ ಸುಮಾರು 2000 ಟನ್‌ಗಳಷ್ಟು ಗಂಧದ ಮರವನ್ನು ಈ ಕಾರ್ಖಾನೆಗಳಿಗೆ ಒದಗಿಸಬೇಕಾಗುತ್ತದೆ. 1960–61ರಲ್ಲೇ ಮೈಸೂರಿಗೆ ಗಂಧದ ಎಣ್ಣೆಯ ರಫ್ತಿನಿಂದ 144 ಲಕ್ಷ ರೂ. ಬಂದಿತ್ತು. ಗಂಧದ ಸಾಬೂನಿನ ಕಾರ್ಖಾನೆ ಗಂತೂ ವರ್ಷಕ್ಕೆ ಸುಮಾರು 20ಲಕ್ಷ ರೂಗಳಷ್ಟು ಆದಾಯವಿದೆ.

ಕಾಗದದ ಕಾರ್ಖಾನೆಗಳಿಗಂತೂ ಅರಣ್ಯಗಳ ಬಿದರೇ ಆಧಾರ. 1960ರಲ್ಲೇ ಇಲಾಖೆ 1,38099 ಟನ್‌ಗಳಷ್ಟು ಬಿದಿರನ್ನು ಈ ಕಾರ್ಖಾನೆಗಳಿಗೆ ಒದಗಿಸಿತ್ತು. ನಮ್ಮ ಸಂಸ್ಥಾನದಲ್ಲಿ ಇಂದು ಚೆನ್ನಾಗಿ ಕೆಲಸ ಮಾಡುತ್ತಿರುವ ಮೂರು ಕಾಗದದ ಕಾರ್ಖಾನೆ ಗಳಿವೆ. ಇವಕ್ಕೆಲ್ಲಾ ಬೇಕಾಗುವ ಬಿದಿರನ್ನು ಅರಣ್ಯಇಲಾಖೆಯೇ ಒದಗಿಸುತ್ತಿದೆ. ಭದ್ರಾವತಿಯಲ್ಲಿರುವ ಕಾಗದದ ಕಾರ್ಖಾನೆಗೆ ವರ್ಷಕ್ಕೆ ಸುಮಾರು 50 ಸಾವಿರ ಟನ್‌ಗಳಷ್ಟು ಬಿದಿರು ಬೇಕಾಗುತ್ತದೆ. ಇಲ್ಲಿ ದಿನಕ್ಕೆ 30 ಟನ್ನಿಗೂ ಹೆಚ್ಚು ಕಾಗದ ತಯಾರಿಸಲಾ ಗುತ್ತಿದೆ. ದಾಂಡೇಲಿಯ ಕಾರ್ಖಾನೆಗಾದರೋ ವರ್ಷಕ್ಕೆ 90,000 ಟನ್‌ಗಳಷ್ಟು ಬಿದಿರು ಬೇಕಾಗಿರುತ್ತದೆ.

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ 60 ಸಾವಿರ ಟನ್ನಿಗೂ ಹೆಚ್ಚು ಸೌದೆ (Firewood) ಬೇಕಾಗುತ್ತದೆ. ಇದನ್ನು ಅರಣ್ಯಇಲಾಖೆಯೇ ಪೂರೈಸುತ್ತಿದೆ. ಇಂದು ನಮ್ಮ ಸಂಸ್ಥಾನದಲ್ಲಿ ಸುಮಾರು 200ಕ್ಕೂ ಹೆಚ್ಚು ಮರ ಕೊಯ್ಯುವ ಖಾಸಗಿ ಕಾರ್ಖಾನೆಗಳಿವೆ. ಸರ್ಕಾರಿ ಸ್ವಾಮ್ಯದಲ್ಲಿ ನಾಲ್ಕು ಮರ ಕೊಯ್ಯುವ ಕಾರ್ಖಾನೆಗಳು ಇವೆ. ಮರದ ಸಾಮಾನುಗಳನ್ನು ಮಾಡುವ ಕಾರ್ಯಾಗಾರವೊಂದು ತುಮುಕೂರಿನಲ್ಲಿದೆ. ಕಳಸೌಂನಲ್ಲಿ ಒಂದು ರೇಯಾನ್ ಕಾರ್ಖಾನೆಯೂ, ಹುಣಸೂರು ದಾಂಡೇಲಿ ಗಳಲ್ಲಿ ಪ್ಲೈವುಡ್ ಕಾರ್ಖಾನೆಗಳೂ ಇವೆ. ಇವಕ್ಕೆಲ್ಲ ಬೇಕಾದ ದಿಮ್ಮಿಗಳು

ಮತ್ತಿತರ ಕಚ್ಚಾ ಸಾಮಾಗ್ರಿಗಳನ್ನು ನಮ್ಮ ಅರಣ್ಯಗಳೇ ಒದಗಿಸಬೇಕಾಗಿದೆ. ರೈಲ್ವೆ ಮತ್ತು ವಿದ್ಯುತ್ ಇಲಾಖೆಗಳಿಗೆ ಬೇಕಾದ ಮರವನ್ನೆಲ್ಲಾ ಭದ್ರಾವತಿಯ ವುಡ್ ಪ್ರಿಸರ್ವೇಷನ್ ಪ್ಲಾಂಟ್ ಒದಗಿಸುತ್ತದೆ. ವಿದ್ಯಾಸಂಸ್ಥೆಗಳಿಗೆ ಬೇಕಾದ ಮೇಜು, ಕುರ್ಚಿ ಬೆಂಚುಗಳು ಮುಂತಾವುಗಳನ್ನೆಲ್ಲಾ ತುಮಕೂರಿನ ಮರದ ಸಾಮಾನುಗಳನ್ನು ತಯಾರಿಸುವ ಕಾರ್ಯಾಗಾರದಲ್ಲಿ ಮಾಡಲಾಗುತ್ತಿದೆ. ರಾಜ್ಯದ ವಸತಿ ಇಲಾಖೆಗೆ ಬೇಕಾದ ಕಿಟಕಿಗಳು, ಬಾಗಿಲುಗಳು ಮುಂತಾದ ಮರದ ಸಾಮಾನುಗಳನ್ನೆಲ್ಲಾ ಸರ್ಕಾರಿ ಸ್ವಾಮ್ಯದಲ್ಲಿರುವ ಮರಕೊಯ್ಯುವ ಕಾರ್ಖಾನೆಗಳೇ ಒದಗಿಸುತ್ತಿವೆ. ಇವಲ್ಲದೆ ಖಾಸಗಿ ವಲಯದಲ್ಲಂತೂ ಲಕ್ಷೋಪ ಲಕ್ಷ ಘನ ಅಡಿಗಳಷ್ಟು ಮರವನ್ನು ದಿನ ನಿತ್ಯವೂ ಕೊಯ್ಯಲಾಗುತ್ತಿದೆ. ಉಪಯೋಗಿಸಲಾಗುತ್ತಿದೆ. ಬಹಳ ಹಿಂದೆಯೇ ನಮ್ಮ ಅರಣ್ಯಗಳು ವರ್ಷಕ್ಕೆ 0·6 ಮಿಲಿಯನ್ ಟನ್ ಸೌದೆ, 0.8 ಮಿಲಿಯನ್ ಟನ್ ಇದ್ದಿಲುಗಳನ್ನು ವರ್ಷ ವರ್ಷವೂ ಪೂರೈಸುತ್ತಿವೆ ಎಂದು ಅಂದಾಜು ಮಾಡಲಾಗಿತ್ತು. ಅರಣ್ಯಗಳ ಮರಗಳನ್ನು ಶೇಕಡ 60 ಕ್ಕೂ ಹೆಚ್ಚು ಪಾಲು ಸೌದೆ ಇದ್ದಿಲುಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಇದು ನಿಜಕ್ಕೂ ಖಂಡನಾರ್ಹವಾದದ್ದು. ಪುರಾತನ ಕಾಲದಲ್ಲಿ ಅರಣ್ಯಗಳು ಹೆಚ್ಚಿದ್ದಾಗ, ಬೇರೆ ಇಂಧನಗಳು ದೊರೆಯದಿದ್ದಾಗ ಹೇರಳವಾಗಿ ಉಪಯೋಗಿಸಲ್ಪಡುತ್ತಿದ್ದ ಈ ಸೌದೆ, ಇದ್ದಿಲುಗಳೇ ಈ 20ನೆಯ ಶತಮಾನದಲ್ಲೂ ಬಹು ಪಾಲು ಗೃಹಿಣಿಯರ ಮುಖ, ಕೈಗಳನ್ನು ಮಸಿ ಮಾಡುತ್ತಿರುವುದು ನಿಜಕ್ಕೂ ಶೋಚನೀಯ ಸಂಗತಿಯಾಗಿದೆ. ದಿನ ನಿತ್ಯವೂ ಇದ್ದಿಲು ಗೂಡುಗಳನ್ನು ಸುಡಿಸಿ, ಸೌದೆಯನ್ನು ಹೇರಳವಾಗಿ ಹಾಳುಮಾಡುತ್ತಿದ್ದೇವೆ. ರಾಜ್ಯ ಬೃಹತ್ ವಿದ್ಯುತ್ ಯೋಜನೆಗಳಿಂದ ಸಾಧಿಸಿರುವ ಪ್ರಗತಿಯೇನು ? ಇಂದೇನು ಹಿಂದಿದ್ದಂತೆ ರಾಜ್ಯದ ಬಹು ಭಾಗ ಅರಣ್ಯಮಯವಾಗಿದೆಯೇ? ವಿದ್ಯುಚ್ಛಕ್ತಿಯ ಸಾರ್ವತ್ರಿಕ ಬಳಕೆ ಆಗುವುದೆಂದು? ಇತ್ತೀಚಿನ ಬೆಳವಣಿಗೆಗಳನ್ನು ನೋಡಿದರೆ ಅರಣ್ಯ ನಿರ್ಮೂಲನವೇ ಕೆಲವು ರಾಜಕಾರಣಿಗಳ ಗುರಿ ಇದ್ದಂತೆ ಕಾಣುತ್ತದೆ. ಇವಕ್ಕೆ ಹಿನ್ನಲೆ ಏನೇ ಇದ್ದರೂ ಇದು ಅವರ ಪ್ರಕೃತಿ ವಿಜ್ಞಾನ ಮೌಢ್ಯ, ಅರಣ್ಯಗಳ ಪ್ರಾಮುಖ್ಯದ ಬಗ್ಗೆ ಅವರಿಗೆ ತಿಳವಳಿಕೆ ಇಲ್ಲದಿರುವುದು, ರಾಜ್ಯದ ಹಿತಾಕಾಂಕ್ಷೆಗಳ ಬಗ್ಗೆ ಅವರಿಗೆ ದೂರದೃಷ್ಟಿಯಿಲ್ಲದಿರುವುದು ಇವನ್ನು ಎತ್ತಿ ತೋರಿಸುತ್ತದೆ. ಇದು ನಿಜಕ್ಕೂ ಒಂದು ದುರದೃಷ್ಟಕರ ಸಂಗತಿ. ವ್ಯವಸಾಯದ ಹೆಸರಿನಲ್ಲಿ ದಿನವೂ ಅನೇಕ ಎಕರೆಗಳನ್ನು ಅರಣ್ಯ ಪ್ರದೇಶಗಳಿಂದ ಅಕ್ರಮವಾಗಿಯೋ ಅಥವಾ ಪ್ರಭಾರಿಗಳ ನೆರವಿನಿಂದಲೋ ಆಕ್ರಮಿಸಿಕೊಳ್ಳಲಾಗುತ್ತಿದೆ. ಬೇಸಿಗೆಯಲ್ಲಿ ಪ್ರತಿ ವರ್ಷವೂ ಅರಣ್ಯಗಳಲ್ಲಿ ಬೆಂಕಿಯ ಆಕಸ್ಮಿಕಗಳು ಇದ್ದೇ ಇರುತ್ತವೆ. ಕೆಲವೊಮ್ಮೆ ಇವುಗಳು ವಾರಗಳವರೆಗೂ ಉರಿದರೂ ಅವುಗಳನ್ನು ತಕ್ಷಣವೇ ಆರಿಸಲು ಅರಣ್ಯ ಇಲಾಖೆ ಯಾವ ಜಿಲ್ಲೆಯಲ್ಲೂ ಇನ್ನೂ ಸಜ್ಜಾಗಿಲ್ಲ. ವರ್ಷ ವರ್ಷವೂ ಸಂಭವಿಸುವ ಈ ಪಿಡುಗಿನ ಅಪಾರ ಅಪಾಯ ಇಲಾಖೆಗೆ ತಿಳಿದಿದ್ದರೂ ಅಮೆರಿಕ, ಬ್ರಿಟನ್

ಮುಂತಾದ ಮುಂದುವರಿದ ದೇಶಗಳ ಅರಣ್ಯ ಇಲಾಖೆಗಳು ವಿಶಿಷ್ಟ ಅಗ್ನಿಶಾಮಕ ಸಾಧನಗಳನ್ನಿಟ್ಟುಕೊಂಡಿರುವಂತೆ ಈ ಇಲಾಖೆ ಇಟ್ಟುಕೊಂಡಿಲ್ಲ.

ನಮ್ಮ ಅರಣ್ಯಗಳ ಮತ್ತೊಂದು ಕಾಯಿಲೆ ಎಂದರೆ ಕಡಿದಮರವನ್ನು ಅಲ್ಲೇ ಬಹಳ ಕಾಲ ಬಿಟ್ಟಿರುವುದು. ಒಳ್ಳೆ ಜಾತಿಯ ಮರಗಳನ್ನು ಕಡಿದು ಬಹಳ ಕಾಲ ಅಲ್ಲಿ ಬಿಟ್ಟು ಅವು ಫಂಗೈ ಮುಂತಾದ ಸಸ್ಯಗಳ ಸಹಾಯದಿಂದ ಕೊಳೆತು ಇಲ್ಲವೇ ಪ್ರಕೃತಿಯ ಪ್ರಕೋಪಗಳಿಗೆ ಗುರಿಯಾಗಿ ಬೆಂಡಾಗಿ ಹೋದ ಅನಂತರ ಅವುಗಳ ಬಗ್ಗೆ ಗಮನ ಕೊಡುವುದು.

ಇಷ್ಟೆಲ್ಲ ದುರಾಡಳಿತ, ದುರಾಚಾರಗಳನ್ನು ನಮ್ಮ ಅರಣ್ಯಗಳು ಬಹಳ ಕಾಲ ಸಹಿಸಿಕೊಂಡಿರಲಾರವು. ಹಿಂದೆಯೇ ಹೇಳಿರುವಂತೆ ಇಂದು ನಮ್ಮ ಸಂಸ್ಥಾನದ ಒಟ್ಟು ವಿಸ್ತೀರ್ಣದ ಕೇವಲ ಶೇಕಡ 18.5 ರಷ್ಟು ಪ್ರದೇಶ ಮಾತ್ರ ಅರಣ್ಯಮಯ ವಾಗಿದೆ. ಇದೇ ರೀತಿ ಅರಣ್ಯಗಳ ದುರುಪಯೋಗ ಮುಂದುವರಿದರೆ ಬಹಳ ಕಷ್ಟಕರ ಪರಿಣಾಮಗಳನ್ನು ಎದುರಿಸಬೇಕಾದೀತು. ಇಂದು ಪ್ರತಿ ಭಾರತೀಯನ ತಲಾ ಅರಣ್ಯ ಪ್ರದೇಶ ಕೇವಲ 0·54 ಎಕರೆಗಳಾಗಿದೆ. ಆದರೆ ಕ್ನಡಿಗನಾದರೋ ಕೇವಲ 0·46 ಮಾತ್ರ. 1952ರ ಭಾರತ ಸರ್ಕಾರದ ಅರಣ್ಯಗಳ ಕರಾರು ಪತ್ರದ ಪ್ರಕಾರ ಎಲ್ಲ ಗುಡ್ಡ ಪ್ರದೇಶಗಳಲ್ಲೂ ಶೇ. 66 ರಷ್ಟು ಅರಣ್ಯಗಳನ್ನೂ ಮೈದಾನ ಪ್ರದೇಶಗಳಲ್ಲಿ ಶೇ. 33 ರಷ್ಟು ಅರಣ್ಯಗಳನ್ನು ಬೆಳೆಸಬೇಕಾಗಿದೆ. ವ್ಯವಸಾಯದ ಉತ್ಪತ್ತಿಯನ್ನು ಹೆಚ್ಚಿಸುವುದು ಅರಣ್ಯಗಳನ್ನು ನೆಲಸಮ ಮಾಡಿಯಲ್ಲ; ತಾತನ ಕಾಲದ ಮೋಟು ನೇಗಿಲು ಬಿಟ್ಟು, ಕೃತಕ ಗೊಬ್ಬರಗಳನ್ನೂ, ಆಧುನಿಕ ಯಂತ್ರ ಸಲಕರಣೆಗಳನ್ನೂ, ಸುಧಾರಿತ ತಳಿಯ ಬೀಜಗಳನ್ನೂ ಬಳಸುವುದರ ಮೂಲಕ. ಈ ವಿಷಯವಾಗಿ ಪಂಡಿತ್ ಜವಾಹರಲಾಲ್ ನೆಹರೂರವರ ಮಾತುಗಳನ್ನೇ ಹೇಳುವುದಾದರೆ, "Our forests are essential for us from many points of view. Let us preserve them. As it is we have destroyed them far too much. It is true that as the population grows, the need for greater food production becomes necessary. But this should be by more intensive cultivation and not by destruction of the forests which play a vital role in the nation's econamy "(J.Nehru 20th feb. 1964. Extract in his forward to "The wild life of India" by E.P. Gee 1964).

ರಾಜ್ಯದ ಬೃಹತ್ ಜಲ ವಿದ್ಯುತ್ ಯೋಜನೆಗಳು ಈಗಾಗಲೇ ಅರಣ್ಯಮಯ ವಾಗಿದ್ದ ಅನೇಕ ಕಣಿವೆಗಳು ಮತ್ತಿತರ ಪ್ರದೇಶಗಳನ್ನು ಮುಳುಗಿಸಿವೆ. ಕಣಿವೆ

ಗಳನ್ನೆಲ್ಲಾ ಜಲಮಯ ಮಾಡಿ, ಮೈದಾನವನ್ನೆಲ್ಲಾ ನೇಗಿಲುಮಯಮಾಡಿ ಬರೇ ಬೆಟ್ಟಗಳ ಬೋಳು ತುದಿಗಳನ್ನು ತೋರಿಸಿ ಅಲ್ಲಿ ವನಮಹೋತ್ಸವ ಮಾಡಿ, ಅರಣ್ಯಗಳನ್ನು ಬೆಳೆಸಿ ಅಂದರೆ ಇಲಾಖೆಯವರೇನೂ ಮಾಡಲಾರರು. ನಮ್ಮ ರಾಜ್ಯದ ಕೆಲವು ವನಮಹೋತ್ಸವದ ಯೋಜನೆಗಳು ಕಾರ್ಯಗತವಾಗಿದ್ದರೂ ಕೆಲವು ಘಟನೆಗಳಂತೂ ತೀರ ಹಾಸ್ಯಾಸ್ಪದವಾಗಿರುತ್ತವೆ. ಕೆಲವೊಮ್ಮೆ ಅನೇಕ ಮಂತ್ರಿಗಳು ಬೇರೆ ಬೇರೆ ವರ್ಷಗಳಲ್ಲಿ ಒಂದೇ ಗುಂಡಿಯಲ್ಲಿ ಅನೇಕ ಬಾರಿ ಸಸ್ಯಗಳನ್ನು ನೆಟ್ಟಿರುವುದುಂಟು. ಸಂದಿ, ಬೀಟೆ, ಮತ್ತಿ, ಹೊನ್ನೆ, ಮೊದಲಾದ ಬೆಲೆ ಬಾಳುವ ಮರಗಳನ್ನೆಲ್ಲಾ ಕಡಿದು ಆ ಜಾಗದಲ್ಲಿ ಅದೇ ವೃಕ್ಷಗಳನ್ನು ಮತ್ತೆ ಬೆಳೆಸದೆ ಯೂಕಲಿಪ್ಟಸ್ ತಂದು ಹಾಕುವುದಂತೂ ಅರಣ್ಯ ಇಲಾಖೆಗೆ ಸುಲಭದ ಕೆಲಸವಾಗಿದೆ. ಇಂದು ಎಲ್ಲೆಲ್ಲೂ ಕಂಡು ಬರುತ್ತಿರುವ ಯೂಕಲಿಪ್ಟಸ್ ಬೆಳವಣಿಗೆ ಸ್ವಾಗತಾರ್ಹವಾದರೂ ಇವು ನಮ್ಮ ಬೆಲೆ ಬಾಳುವ ಮರಗಳ ಸ್ಥಾನದಲ್ಲಿ ನಿಲ್ಲುವುದು ಭವಿಷ್ಯತ್ತಿನ ದೃಷ್ಟಿಯಿಂದ ಹಿತಕರವಲ್ಲ. ಸರ್ಕಾರ ಅರಣ್ಯಗಳ ರಕ್ಷಣೆಯ ಬಗ್ಗೆ ಇನ್ನೂ ಹೆಚ್ಚಿನ ಗಮನ ಕೊಡಬೇಕಾಗಿದೆ. ಇಂದು ಇಲಾಖೆಯ ಒಬ್ಬನೇ ಬೀಟ್ ಗಾರ್ಡ್ 10-20 ಚ.ಮೈ. ಅರಣ್ಯ ಪ್ರದೇಶವನ್ನು ನೋಡಿಕೊಳ್ಳಬೇಕಾಗಿದೆ. ಇದು ಎಷ್ಟು ಯಶಸ್ವಿಯಾಗಿದೆ ಎನ್ನುವುದಕ್ಕೆ ಅರಣ್ಯಗಳಲ್ಲಿ ಕಳವಾಗುತ್ತಿರುವ ಗಂಧದಮರ, ಇವುಗಳ ಕಪ್ಪುವ್ಯಾಪಾರ, ಅರಣ್ಯಗಳ ದುರುಪಯೋಗ, ಬೆಂಕಿ ಆಕಸ್ಮಿಕಗಳು ಮುಂತಾದುವೆಲ್ಲಾ ದುರಂತ ಸಾಕ್ಷಿಗಳಾಗಿವೆ. ಇತ್ತೀಚಿಗೆ ದೊಡ್ಡ ಸಮಸ್ಯೆಯಾಗಿರುವ ಸ್ಪೈಕ್ ಕಾಯಿಲೆಯಂತೂ ರಾಜ್ಯಕ್ಕೆ ದೊಡ್ಡ ತಲೆ ನೋವಾಗಿದೆ. ಇದನ್ನು ಹೀಗೆಯೇ ಬಿಟ್ಟರೆ ರಾಜ್ಯದ ಗಂಧದ ಮರಗಳ ಸರ್ವನಾಶವಾಗುವುದಂತೂ ಸರ್ವವಿದಿತ.

ಅರಣ್ಯಗಳ ನಿರ್ಮೂಲನೆಯಿಂದ ಉದ್ಭವವಾಗುವ ಇನ್ನೊಂದು ಸಮಸ್ಯೆ ಕಾಡು ಮೃಗಗಳಿಗೆ ಸಂಬಂಧಿಸಿದ್ದಾಗಿದೆ. ವನ್ಯ ಪ್ರಾಣಿಗಳಿಗೆ ನೈಸರ್ಗಿಕ ರಕ್ಷಣೆ ಇಲ್ಲದಿದ್ದರೆ ಅವು ಬಹುಕಾಲ ಬಾಳಲಾರವು. ಮೈಸೂರಿನ ಪ್ರಾಣಿಸಂಪತ್ತು ನಿಜಕ್ಕೂ ಅಪಾರವಾಗಿದೆ ಮತ್ತು ಉಲ್ಲೇಖ ಯೋಗ್ಯವಾಗಿದೆ. ಪ್ರಪಂಚದಲ್ಲಿ ನೆಲದ ಮೇಲೆ ವಾಸಿಸುವ ಪ್ರಾಣಿಗಳಲ್ಲೆಲ್ಲಾ ಅತಿ ದೊಡ್ಡ ಜೀವಿಯಾದ ಆನೆ ಇಲ್ಲಿನ ನಿತ್ಯಹರಿದ್ವರ್ಣ ಹಾಗೂ ಬೇಸಿಗೆಯಲ್ಲಿ ಎಲೆಯುದುರುವ ಮಲೆನಾಡಿನ ಅರಣ್ಯಗಳಲ್ಲಿ ವಾಸಿಸುತ್ತದೆ. ತೆರೆದ ಗುಡ್ಡಗಾಡುಗಳಲ್ಲಂತೂ ಬಂಡೆಗಳ ಸಮೂಹವೆ ಉರುಳಿ ಬರುತ್ತಿರುವುದೋ ಎಂಬಂತೆ ಈ ಗಜ ಸಮೂಹಗಳು ಸಂಚರಿಸುತ್ತಿರುತ್ತವೆ. ಈ ಅರಣ್ಯಗಳಲ್ಲಿ ಕಾಡೆಮ್ಮೆಗಳು, ಹುಲಿಗಳು, ಚಿರತೆಗಳು, ಕಿರುಬಗಳು, ನರಿಗಳು, ಮುಳ್ಳು ಹಾಗೂ ಕಾಡುಹಂದಿಗಳು, ಕೆಂಪು ಹಾಗೂ ಹಾರುವ ಅಳಿಲುಗಳು, ಕಾಡುನಾಯಿಗಳು, ಜಿಕ್ಕೆಗಳು, ಉಡಗಳು, ಪುನುಗಿನ ಬೆಕ್ಕು, ಬೊಗಳುವ ಜಿಂಕೆ, ಮೊಲಗಳು ಮತ್ತು ಇನ್ನೂ ಅನೇಕ ವೈವಿಧ್ಯಮಯ ಪ್ರಾಣಿವರ್ಗಗಳಿರುತ್ತವೆ.

ಬಗೆಬಗೆಯ ಸರೀಸೃಪಗಳು, ಪಕ್ಷಿಗಳಿಗೇನೂ ಕೊರತೆ ಇಲ್ಲ. ಹೆಬ್ಬಾವು, ಮಂಡಲದ ಹಾವು, ಹಸಿರು ಹಾವು, ಮರದ ಹಾವು, ಇಲಿ ಹಾವು, ದಾಸರ ಹಾವು ಹೀಗೆ ಅನೇಕ ವಿಧದ ಹಾವುಗಳಿವೆ.

ನಮ್ಮಲ್ಲಿನ ಪಕ್ಷಿಸಂಪತ್ತಂತೂ ನಿಜಕ್ಕೂ ಪ್ರಶಂಸಾರ್ಹವಾದದ್ದಾಗಿದೆ. ನವಿಲುಗಳು, ಕೋಗಿಲೆಗಳು, ಮೈನಾಹಕ್ಕಿಗಳು. ಸುಂದರ ಗಿಳಿಗಳು, ಕಾಡುಕೋಳಿಗಳು, ಸುಂದರ ಪಾರಿವಾಳಗಳು, ಮರಕುಟುಗಗಳು, ಗೌಜಲಗಳು, ಗರುಡಗಳು, ಹದ್ದುಗಳು, ಗೂಬೆಗಳು, ಭಾರದ್ವಾಜ ಪಕ್ಷಿಗಳು, ಕೊಕ್ಕರೆಗಳು ಮತ್ತು ಇನ್ನೂ ಅನೇಕ ವೈವಿಧ್ಯಮಯ ಸುಂದರ ವಿಹಂಗಮಗಳಿವೆ.

ಪ್ರಾಣಿಗಳಿಗೇ ಮಿಸಲಾಗಿರುವ ಅಭಯಾರಣ್ಯಗಳು ಅಪಾರ ಜನಮೆಚ್ಚಿಗೆಗಳಿಸಿವೆ. ಹೀಗೆಯೇ ಒಳ್ಳೆಯ ಮರಗಳ ಮೀಸಲು ಅರಣ್ಯಗಳನ್ನೂ ಹೆಚ್ಚು ಹೆಚ್ಚಾಗಿ ಬೆಳಸಿಕೊಂಡು ಕಾಪಾಡುವುದು ನಾವು ಮಾಡಬೇಕಾಗಿರುವ ಕೆಲಸವಾಗಿದೆ.

ಅರಣ್ಯಗಳಿಂದ ಅನೇಕ ಪರೋಕ್ಷ ಪ್ರಯೋಜನಗಳಾಗುತ್ತಿರುತ್ತವೆ. ಅರಣ್ಯಗಳು ಯಾವ ಪ್ರದೇಶದಲ್ಲೇ ಇರಲಿ ಆ ಪ್ರದೇಶದ ವಾಯುಗುಣದ ಮೇಲೆ ಅವು ತಮ್ಮ ಹತೋಟಿ ಇಟ್ಟುಕೊಂಡಿರುತ್ತವೆ. ಭೂಮಿ ಫಲವತ್ತಾಗಿರುವಂತೆ ಮತ್ತು ಭೂಮಿಯಲ್ಲಿ ಸಾವಯವ ಪದಾರ್ಥಗಳು ಹೆಚ್ಚುತ್ತಿರುವಂತೆ ಅವು ಮಾಡುವ ಸಹಾಯ ಅಷ್ಟಿಷ್ಟಲ್ಲ. ನೆಲದಿಂದ ನೀರನ್ನು ಹೀರಿಕೊಂಡು ಅದನ್ನು ಅವು ಆವಿಯ ಮೂಲಕ ವಾತಾವರಣಕ್ಕೆ ದಿನ ದಿನವೂ ಬಿಡುತ್ತಿರುತ್ತವೆ. ಇದರಿಂದ ಸುತ್ತಲಿನ ಹವೆಯೆಲ್ಲಾ ಸ್ವಲ್ಪ ತಂಪಾಗಿರುತ್ತದೆ. ಇಷ್ಟೇ ಅಲ್ಲದೆ ಅವು ಸೂರ್ಯನ ಶಾಖ ನೇರವಾಗಿ ಭೂಮಿಯ ಮೇಲೆ ಬೀಳದಂತೆ ತಡೆಯುತ್ತವೆ. ಹೆಚ್ಚು ಅರಣ್ಯಮಯ ಪ್ರದೇಶಗಳಲ್ಲಿ ಮರುಭೂಮಿ ಪ್ರದೇಶಗಳಂತೆ ಎಂದೂ ದಿನದಲ್ಲಿ ಬಹಳ ಸೆಕೆ, ರಾತ್ರಿಯಲ್ಲಿ ಅಸಾಧ್ಯ ಚಳಿ ಆಗುವುದಿಲ್ಲ. ನಮ್ಮ ದೇಶದ ಕೆಲವು ಪ್ರದೇಶಗಳಲ್ಲಿ ತಲೆದೋರಿರುವ ಹವಾಮಾನ ವೈಪರೀತ್ಯ, ಪ್ರಕೋಪಗಳಿಗೆ ಮುಖ್ಯ ಕಾರಣಗಳಲ್ಲಿ ಅರಣ್ಯ ನಿರ್ಮೂಲನವೆ ಮೊದಲನೆಯದಾಗಿದೆ. ನಮಗೆಲ್ಲ ತಿಳಿದಿರುವಂತೆ ಮೆಸಪಟೋಮಿಯಾ ಒಂದಾನೊಂದು ಕಾಲದಲ್ಲಿ ಒಂದು ಫಲವತ್ತಾದ ಸಂಪದ್ಭರಿತ ಪ್ರದೇಶವಾಗಿತ್ತು. ಇಂದಾದರೋ ಅದೊಂದು ಬರಿಯ ಮರಳುಗಾಡು.

ಮಣ್ಣಿನ ಸವೆತ (soil erosion) ನಮ್ಮ ದೇಶದ ಇನ್ನೊಂದು ಸಮಸ್ಯೆಯಾಗಿದೆ. ಬೆಟ್ಟ ಗುಡ್ಡಗಳ ಇಳಿಜಾರು ಪ್ರದೇಶಗಳಲ್ಲೂ, ನದಿ, ತೊರೆ, ಹಳ್ಳಕೊಳ್ಳಗಳ ತೀರದಲ್ಲೂ ಮರಗಳು ಹೇರಳವಾಗಿದ್ದರೆ ಅವು ನೀರನ್ನು ಸ್ವಲ್ಪ ಮಟ್ಟಿಗೆ ಹೀರಿಕೊಳ್ಳುವುದರ ಮೂಲಕವೂ, ತಮ್ಮ ಬೇರುಗಳ ಸಮೂಹದ ಭದ್ರ ಹಿಡಿತದಲ್ಲಿ ಮಣ್ಣನ್ನು ಅವಚಿಕೊಂಡಿರುವುದರ ಮೂಲಕವೂ ಮಣ್ಣಿನ ಸವೆತವನ್ನು ಬಹಳಷ್ಟು ತಡೆಯುತ್ತವೆ. ಬಿರುಗಾಳಿಯ ಹಾವಳಿ ತಡೆಯುವುದು ಅರಣ್ಯಗಳ ಮತ್ತೊಂದು ಕೆಲಸವಾಗಿದೆ.

ಒಣಗಾಳಿ ಅರಣ್ಯದ ಮೇಲೆ ಬೀಸಿಕೊಂಡು ಬಂದರೆ ಅದು ತೇವ ಪೂರಿತವಾಗುತ್ತದೆ. ಅರಣ್ಯಗಳು ಹೇಗೆ ಮಳೆ ಬೀಳುವುದನ್ನು ನಿಯಂತ್ರಿಸುತ್ತವೆ ಎಂಬ ಬಗ್ಗೆ ಸಾಕಷ್ಟು ವಿಷಯಗಳು ಗೊತ್ತಿಲ್ಲದಿದ್ದರೂ ಕೆಲವು ಪ್ರದೇಶಗಳಲ್ಲಿ ಅರಣ್ಯ ನಿರ್ಮೂಲನದ ಅನಂತರ ಮಳೆಯ ಗತಿ ಬದಲಾಯಿಸಿದ್ದಕ್ಕೆ ನಿದರ್ಶನಗಳಿವೆ.

ಇಷ್ಟೆಲ್ಲಾ ಪ್ರಾಮುಖ್ಯ ಹೊಂದಿರುವ ಅರಣ್ಯಗಳನ್ನು ನಾವು ಹೆಚ್ಚಾಗಿ ಬೆಳೆಸಬೇಕಾದ ಅಗತ್ಯವನ್ನು ಈಗಲಾದರು ಅರಿಯಬೇಕು. ನಮ್ಮ ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಂತೂ ಅರಣ್ಯ ಪ್ರದೇಶ ಬಹಳ ಕಡಿಮೆ ಇದೆ. ಉದಾಹರಣೆಗೆ ಮಂಡ್ಯಜಿಲ್ಲೆಯಲ್ಲಿ ಅದರ ಒಟ್ಟು ವಿಸ್ತೀರ್ಣದ ಕೇವಲ ಶೇಕಡ 2 ಭಾಗ ಮಾತ್ರ ಅರಣ್ಯ ಪ್ರದೇಶವಾಗಿದೆ. ರಾಯಚೂರು, ಗುಲ್ಬರ್ಗ ತುಮಕೂರು ಜಿಲ್ಲೆಗಳಲ್ಲಿ ತಲಾ 5%, 4·4% ಮತ್ತು 8.3% ಗಳಷ್ಟು ಮಾತ್ರ ಅರಣ್ಯ ಪ್ರದೇಶವಿದೆ. ಧಾರಾವಾಡ, ಕೋಲಾರ ಚಿತ್ರದುರ್ಗಗಳಲ್ಲಿ 8·3%, 10·7%, 9% ನಷ್ಟು ಅರಣ್ಯ ಪ್ರದೇಶವಿದೆ. ಮಲೆನಾಡಿನ ಪ್ರದೇಶಗಳಾದ ಹಾಸನದಲ್ಲಿ 7·5% ರಷ್ಟು ಚಿಕ್ಕಮಗಳೂರು ಮತ್ತು ಶಿವಮೊಗ್ಗಗಳಲ್ಲಿ ತಲಾ 28.6% ರಷ್ಟು ಮಾತ್ರ ಅರಣ್ಯ ಪ್ರದೇಶವಾಗಿರುವುದು ನಿಜಕ್ಕೂ ಶೋಚನೀಯ. ಈ ಎಲ್ಲ ಜಿಲ್ಲೆಗಳಲ್ಲೂ ಸಾಕಷ್ಟು ಮಟ್ಟಿಗೆ ಇರುವ ಅರಣ್ಯಗಳನ್ನು ರಕ್ಷಿಸಿ ಹೆಚ್ಚು ಹೆಚ್ಚಾಗಿ ಹೊಸ ಕ್ರಿಯಾತ್ಮಕ ಯೋಜನೆಗಳನ್ನು ರೂಪಿಸಿ ಅರಣ್ಯಗಳ ಸರ್ವತೋಮುಖ ಅಭಿವೃದ್ಧಿಗೆ ಗಮನ ಕೊಡಬೇಕಾದದ್ದು ಅತಿ ಅಗತ್ಯ. ಇತರ ಜಿಲ್ಲೆಗಳ ಒಟ್ಟು ಶೇಕಡ ಅರಣ್ಯ ಪ್ರದೇಶಗಳನ್ನೆಲ್ಲಾ ಭೂಪಟದಲ್ಲಿ ತೋರಿಸಲಾಗಿದೆ. 3 ಪಂಚವಾರ್ಷಿಕ ಯೋಜನೆಗಳ ಕಾಲಾವಧಿಯಲ್ಲಿ ತೇಗ, ಗೋಡಂಬಿ, ರಬ್ಬರ್, ಸಿಂಕೋನ, ಲಿನೋಲೆ ಮುಂತಾದುವುಗಳನ್ನು ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆಸುವ ಬಗ್ಗೆ ಪ್ರಗತಿ ಸಾಧಿಸಲಾಗಿದ್ದ ಸೌದೆ ಮರಗಳು, ಮೃದು ಮರಗಳು, ಬೀಟೆ, ಗಂಧ ಮುಂತಾದ ಆರ್ಥಿಕ ದೃಷ್ಟಿಯಿಂದ ಮುಖ್ಯವಾದ ಮರಗಳನ್ನು ಹೆಚ್ಚು ಬೆಳೆಸಬಹುದಾಗಿದೆ.

ಅರಣ್ಯಗಳು ಎಲ್ಲೇ ಇರಲಿ ಅವು ನಿರುಪದ್ರವ ಜೀವಿಗಳು. ಮಾನವ ಕಲ್ಯಾಣದ ಮಹತ್ಕಂಣ ತೊಟ್ಟು ಅವು ಬೆಳೆಯುತ್ತಿರುತ್ತವೆ. ಗೌತಮ ಬುದ್ಧನ ಮಾತುಗಳಲ್ಲೇ ಹೇಳುವುದಾದರೆ, "The forest is a peculiar organism of unlimited kindness that makes no demands for its sustenance and extends generously the products of its life activity ; it affords protection to all beings, offering shade even to the axeman who destroys it".

ಕರ್ಣಾಟಕದ ಅರಣ್ಯ ವೃಕ್ಷಗಳು

ಅಗಸೆ (Sesbania grandiflora Pers.)

ಅಗಸೆ ಮರವು 20 ರಿಂದ 30 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ಅಲ್ಪಾಯು ವಾದ ಈ ವೃಕ್ಷವನ್ನು ವಿಶೇಷವಾಗಿ ಮನೆಯ ಕೈ ತೋಟಗಳಲ್ಲಿಯೂ, ಅಡಿಕೆ ತೋಟ ಗಳಲ್ಲೂ, ಸುಂದರ ಪುಷ್ಪಗಳಿಗಾಗಿ ಉದ್ಯಾನವನಗಳಲ್ಲೂ ಬೆಳೆಸುತ್ತಾರೆ. ಮಾರಿಷಸ್ ಈಜಿಪ್ಟ್, ಮಲಯಾ, ಆಸ್ಟ್ರೇಲಿಯಾ ದೇಶಗಳಲ್ಲೂ ಇದು ಹೆಚ್ಚಾಗಿ ಬೆಳೆಯುತ್ತದೆ.



ಅಗಸೆ ಮರ

ಸಸ್ಯಶಾಸ್ತ್ರ ವಿವರಣೆ . ಪಾಪಿಲಿಸೋಸಿ (Papilionaceae) ಕುಟುಂಬಕ್ಕೆ ಸೇರಿದ ಈ ಮರ ಸಂಯುಕ್ತ ಪರ್ಣಗಳನ್ನು ಹೊಂದಿರುತ್ತದೆ. ಎಲೆಗಳು 1″ ರಿಂದ $1\frac{1}{4}$ ಇಂಚು ಉದ್ದ, $\frac{1}{4}$″ ರಿಂದ $\frac{1}{2}$ ಇಂಚು ಅಗಲವಿದ್ದು ಅಂಡಾಕೃತಿ ಹೊಂದಿರುತ್ತವೆ. ಹೂಗಳು ದೊಡ್ಡವಾಗಿದ್ದು ಕೆಂಪಗೆ ಆಕರ್ಷಕವಾಗಿರುತ್ತವೆ. ಗ್ರಾಂಡಿಫ್ಲೋರ (grandiflora) ಎಂಬ ಪ್ರಭೇದದ ಹೆಸರು ಇದಕ್ಕೆ ಬರಬೇಕಾದರೆ ಈ ಹೂವುಗಳೇ ಕಾರಣ. ಇದರ ಪುಷ್ಪದಳ (corolla) ಗಳಂತೂ ಎರಡರಿಂದ ಮೂರು ಇಂಚು ಗಳಷ್ಟು ದೊಡ್ಡವಾಗಿರುತ್ತವೆ.

ಉಪಯೋಗಗಳು : ವೀಳೆಯದೆಲೆ ತೋಟಗಳಲ್ಲಿ ಆಶ್ರಯದಾತ ವೃಕ್ಷಗಳಾಗಿ ವೀಳೆಯದೆಲೆ ಬಳ್ಳಿ ಹಬ್ಬಿಸಲು ಈ ಮರಗಳನ್ನು ಬೆಳೆಸುವುದುಂಟು. ಮರದ ಎಲೆ

ಗಳು ಮತ್ತು ಕಾಯಿಗಳನ್ನು ತರಕಾರಿಯಾಗಿ ಉಪಯೋಗಿಸುತ್ತಾರೆ. ಹೂಗಳು, ಮರದ ಅಂಟು, ಕಾಯುಗಳು ಮತ್ತು ಎಲೆಗಳನ್ನು ಸ್ಥಳೀಯ ವೈದ್ಯರುಗಳು ಅನೇಕ ಕಾಯಿಲೆಗಳಿಗೆ ಉಪಯೋಗಿಸುತ್ತಾರೆ.

ಅಜ್ಜನಪಟ್ಟೆ (ಜಾರ್ಝುಗ್ರಿ, ಜಾಗುರಿ) (Antiaris toxicaria Lesch.)

ತಂಪಾದ ಹವೆಯಿರುವ ನಿತ್ಯಹರಿದ್ವರ್ಣದ ಅರಣ್ಯಗಳಲ್ಲಿ ಬೆಳೆಯುವ ಈ ವೃಕ್ಷವು ಪಶ್ಚಿಮ ಘಟ್ಟಗಳಲ್ಲಿ ಬೊಂಬಾಯಿಯಿಂದ ಹಿಡಿದು ಕನ್ಯಾಕುಮಾರಿಯವರೆಗೂ ಬೆಳೆಯುತ್ತದೆ. ಸಸ್ಯವರ್ಗೀಕರಣಶಾಸ್ತ್ರಕೋವಿದರಾಗಿದ್ದ ಬೆಡ್ಡೋಮ್ (Beddome) ಅವರ ಹೇಳಿಕೆಯ ಪ್ರಕಾರ ಈ ಭವ್ಯ ವೃಕ್ಷವು 250 ಅಡಿಗಳ ಎತ್ತರದವರೆಗೂ ಬೆಳೆಯಬಲ್ಲದು. ಮೈಸೂರು ಸಂಸ್ಥಾನದಲ್ಲಿ ಇದು ಕೊಡಗು ಜಿಲ್ಲೆಯಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಹಿಂದೆ ಜಾವಾ, ಮಲಯಾ ಮತ್ತು ಬರ್ಮಾಗಳಲ್ಲಿ ಈ ಮರದ ತೊಗಟೆಯನ್ನು ಕೆತ್ತಿ ಬಂದ ಅಂಟನ್ನು ಒಣಗಿಸಿ ಅದನ್ನು ಬಾಣದ ತುದಿಗೆ ವಿಷ ಪದಾರ್ಥವಾಗಿ ಬಳಿಯುತ್ತಿದ್ದರು. ಆದರೆ ಈ ವಿಷ ಕೋಳಿಗಳ ಮೇಲೆ ಕೆಲಸ ಮಾಡುವುದಿಲ್ಲ ಎಂದು ಹೇಳಲಾಗಿದೆ.


ಸಸ್ಯಶಾಸ್ತ್ರ ವಿವರಣೆ : ಈ ಮರ ಮೋರೇಸಿ (Moraceae) ಕುಟುಂಬಕ್ಕೆ ಸೇರಿದೆ. ಪರ್ಯಾಯ ಜೋಡಣೆ ಹೊಂದಿರುವ ಎಲೆಗಳಿಗೆ ಸಣ್ಣ ತೊಟ್ಟುಗಳಿರುತ್ತವೆ. ಎಲೆಗಳ ಆಕಾರ ಅಂಡಾಕೃತಿಯಾಗಿದ್ದು ತುದಿಯು ಚೂಪಾಗಿರುತ್ತದೆ. ಎಳೆಯದಾಗಿದ್ದಾಗ ವಿಶೇಷ ತುಪ್ಪಳ ಹೊಂದಿದ್ದು ಬಲಿತಮೇಲೆ ನುಣುಪಾಗುತ್ತವೆ. ಪ್ರತಿ ಎಲೆಯ ಸರಾಸರಿ ಅಗಲ ಉದ್ದಗಳು $2 \times 5\frac{1}{2}$ ಇಂಚುಗಳಾಗಿರುತ್ತದೆ. ಈ ಮರದ ಹೂವುಗಳು ಏಕಲಿಂಗ ಪುಷ್ಪಗಳಾಗಿದ್ದಾಗ್ಯೂ, ಅಷ್ಟೇನೂ ಆಕರ್ಷಕವಾಗಿರುವುದಿಲ್ಲ. ಅತ್ತಿ ಹಣ್ಣಿನಂತೆ ಕೆಂಪಾದ ಬುಗುರಿಯಾಕಾರದ ಹಣ್ಣುಗಳು ಬಹಳ ಕಹಿಯಾಗಿರುತ್ತವೆ. ಬೀಜಗಳು ವಿಷಪೂರಿತವಾಗಿರುತ್ತವೆ. ಆಂಟಿಯಾರಿನ್ (Antiarin) ಎಂಬ ವಸ್ತು ಬೀಜಗಳಲ್ಲಿರುವುದೇ ಇದಕ್ಕೆ ಕಾರಣ. ಇದರ ಮರವು ಮೃದುವಾಗಿದ್ದು ಬೆಳ್ಳಗೆ ಇರುತ್ತದೆ. ತೂಕವು ಒಂದು ಘನ ಅಡಿಗೆ 24 ಪೌಂಡುಗಳಾಗಿರುತ್ತದೆ.

ಉಪಯೋಗಗಳು : ಕೊಡಗು, ತಿರುವಾಂಕೂರು ಮತ್ತು ಇತರ ಕಡೆಗಳಲ್ಲಿ ಈ ಮರದ ಕೊಂಬೆಗಳನ್ನು ಕಡಿದು ಚೆನ್ನಾಗಿ ನೆನೆಸಿ ಅನಂತರ ಕಲ್ಲಿನ ಮೇಲೆ ಬಡಿದು ನಾರನ್ನು ಪಡೆಯುತ್ತಾರೆ. ಈ ನಾರಿನಿಂದ ದವಸ ಧಾನ್ಯಗಳನ್ನು ಹಾಕುವ ದೊಡ್ಡ ದೊಡ್ಡ ಚೀಲಗಳನ್ನು ಮಾಡುತ್ತಾರೆ. ಈ ಚೀಲಗಳು ಇಲ್ಲಿ ಸಾಧಾರಣ ನಿತ್ಯಬಳಕೆಯವಾದರೂ ಯೂರೋಪಿನ ವಸ್ತು ಸಂಗ್ರಹಾಲಯಗಳಲ್ಲಿ ಅಪರೂಪ ವಸ್ತುಗಳಾಗಿವೆ. ಒಳಗಡೆಯ ತೊಗಟೆ ಮೃದುವಾಗಿರುತ್ತದೆ. ಆದ್ದರಿಂದ ಇದನ್ನು ಚಾಪೆಮಾಡಲು, ಹಗ್ಗ ಹೊಸೆಯಲು ಒಮ್ಮೊಮ್ಮೆ ಬಳಸುತ್ತಾರೆ. ಇದರ ಬೀಜಗಳ ಕಹಿ ಪದಾರ್ಥವನ್ನು

ಜ್ವರನಿವಾರಕವಾಗಿ ಹಾಗೂ ಆಮಶಂಕೆಗೆ ವಿರುದ್ಧವಾಗಿ ಬಳಸುತ್ತಾರೆ. ಮರಮುಟ್ಟು ಗಳಿಗೆ ಈ ಮರ ಯೋಗ್ಯವಾದುದಲ್ಲ.

ಅತ್ತಿಮರ(Ficus glomerata Roxb.) (Syn. F. goolereca Roxb.)

ಸಾಮಾನ್ಯವಾಗಿ ಚಳಿಗಾಲದ ಕೊನೆಯಲ್ಲಿ ಎಲೆಗಳನ್ನು ಕಳೆದುಕೊಳ್ಳುವ ಈ ಮರ 50 ರಿಂದ 60 ಅಡಿಗಳ ಎತ್ತರಕ್ಕೆ ಬೆಳೆಯಬಲ್ಲದು. ಇಂಡಿಯಾ, ಸಿಲೋನ್‌ಗಳಲ್ಲಿ ಬೆಳೆಯುವ ಈ ಮರವು ಮೈಸೂರಿನ ಎಲ್ಲಾ ಜಿಲ್ಲೆಗಳಲ್ಲೂ ಕಂಡುಬರುತ್ತದೆ.



ಅತ್ತಿ ಮರ

ಸಸ್ಯಶಾಸ್ತ್ರ ವಿವರಣೆ :–ಈ ಮರ ಮೋರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=26 (condit 1928). ಎಲೆಗಳು 3 ರಿಂದ 4 ಇಂಚು ಉದ್ದ. 1½ ಯಿಂದ 3 ಇಂಚು ಅಗಲವಿರುತ್ತವೆ. ಬುಗುರಿಯಾಕಾರದ ಹಣ್ಣುಗಳು ಗೊಂಚಲು ಗೊಂಚಲುಗಳಾಗಿ ಕಾಂಡದ ಮೇಲೂ ಹಾಗೂ ರೆಂಬೆಗಳ ಮೇಲೂ ನೇರವಾಗಿ ಬೆಳೆದಿರುತ್ತವೆ. ಈ ಮರವನ್ನು ಬೀಜಗಳ ಮೂಲಕ ಹಾಗೂ ಸಣ್ಣ ಸಣ್ಣ ರೆಂಬೆಗಳ ಮೂಲಕ ಬೆಳೆಸಬಹುದು. ಈ ಮರದ ಹಣ್ಣುಗಳೆಂದರೆ ಹಕ್ಕಿಗಳಿಗೂ ಕೀಚಪಾಲದ ಹಕ್ಕಿಗಳಿಗೂ (ಸಸ್ತನಿ) ಬಹಳ ಪ್ರೀತಿ.

ಉಪಯೋಗಗಳು : ಅತ್ತಿಯ ಹಣ್ಣುಗಳನ್ನು ಕೆಲವು ಕಡೆ ತಿನ್ನುತ್ತಾರೆ. ಕೆಳಗೆ ಬಿದ್ದ ಹಣ್ಣುಗಳನ್ನು ದನ ಕರುಗಳು ತಿನ್ನುತ್ತವೆ. ಔಷಧಿಯಾಗಿ ಅತ್ತಿಯ ಮರದ ಹಾಲನ್ನು ಹುಣ್ಣುಗಳಿಗೆ ಲೇಪಿಸುವುದುಂಟು. ಮರ ಮುಟ್ಟುಗಳಿಗೆ ಈ ಮರ

ಉಪಯೋಗವಲ್ಲ. ಈ ಮರ ಒಂದು ಘನ ಅಡಿಗೆ 25 ರಿಂದ 30 ಪೌಂಡ್ ತೂಕವಿರುತ್ತದೆ. ಒಳ್ಳೆಯ ನೆರಳನ್ನು ಕೊಡುವ ಹಾಗೂ ಕೆಳಗೆ ತಂಪಾದ ವಾತಾವರಣವನ್ನು ಸೃಷ್ಟಿಸಿಕೊಳ್ಳುವ ಈ ಮರವನ್ನು ಕಾಫಿ ತೋಟಗಳಲ್ಲಿ ನೆರಳಿಗಾಗಿ ಬೆಳಸಿಕೊಳ್ಳಬಹುದು.

ಅಡಿಕೆ ಜಪ್ಲೆ (ದೊಡ್ಡ ಜಪಲೆ, ಜಪಲೆ ಮರ) (Scolopia crenata Clos.)

ಮಲೆನಾಡಿನ ಕಾಫಿ ತೋಟಗಳಲ್ಲಿ ಹಾಲುವಾಣ, ಸಿಲ್ವರ್ ಮತ್ತಿತರ ಮರಗಳ ಮಧ್ಯೆ ಬೆಳೆಯುವ ಈ ಮರ ಎತ್ತರವಾಗಿ ಬೆಳೆಯಬಲ್ಲುದು.

ಸಸ್ಯಶಾಸ್ತ್ರ ವಿವರಣೆ: ಈ ಮರ ಬಿಕ್ಸೇಸಿ (Bixaceae) ಕುಟುಂಬಕ್ಕೆ ಸೇರಿದೆ. ಇದರ ಚೇಗುಮರ ಬೆಳ್ಳಗಿದ್ದು ಗಟ್ಟಿಯಾಗಿರುತ್ತದೆ.

ಉಪಯೋಗಗಳು : ಈ ಮರದಿಂದ ಕಾಫಿಯ ಗಿಡಗಳಿಗೆ ಒಳ್ಳೆಯ ನೆರಳು ಸಿಕ್ಕುತ್ತದೆ. ಜಪಲೆ ಹಣ್ಣುಗಳನ್ನು ಎಸ್ಟೇಟುಗಳಲ್ಲಿ ಕೆಲಸ ಮಾಡುವವರು ಆಗಾಗ್ಗೆ ರುಚಿ ನೋಡುವುದುಂಟು. ಅವು ಸ್ವಲ್ಪ ಹುಳಿಯಾಗಿರುತ್ತವೆ. ಸೌದೆ ಇದ್ದಿಲುಗಳಿಗಾಗಿಯೋ ಇತ್ತೀಚೆಗೆ ಈ ಮರಗಳನ್ನು ಕಂಡ ಕಡೆ ಕಡಿಯುವುದು ರೂಢಿಯಾಗಿದೆ.

ಅಡಿಕೆ ಮರ (Areca catechu Linn.)

ನಮ್ಮ ದೇಶದಲ್ಲಿ ಕಾಫಿ, ತೆಂಗಿನ ತೋಟಗಳಿರುವಂತೆ ಅಡಿಕೆ ತೋಟಗಳೂ ವಿಶೇಷವಾಗಿವೆ. ಬಂಗಾಲ, ಅಸ್ಸಾಂಗಳಂತೆಯೇ ಮೈಸೂರಿನಲ್ಲೂ ಹೆಚ್ಚು ಅಡಿಕೆ ತೋಟಗಳಿವೆ. ಎಲ್ಲ ಮಂಗಳ ಕಾರ್ಯಗಳಲ್ಲೂ, ಅತಿಥಿ ಸತ್ಕಾರದ ಅನಂತರದಲ್ಲೂ ತಾಂಬೂಲಾರ್ಪಣೆ ಮಾಡುವುದು ಪುರಾತನ ಕಾಲದಿಂದಲೂ ನಮ್ಮ ದೇಶದಲ್ಲಿರುವ ಪದ್ಧತಿಯಾಗಿದೆ. ಪುಷ್ಕಳ ಮೃಷ್ಟಾನ್ನ ಭೋಜನವಾದ ಮೇಲಂತೂ ಎಲೆ ಅಡಿಕೆ ಹಾಕಿಕೊಂಡು ತಾಂಬೂಲ ರಾಗದಿಂದ ಜಿಹ್ವಾಧರಗಳನ್ನು ಕೆಂಪೇರಿಸಿಕೊಂಡು ನಿಧಾನವಾಗಿ ಮೆಲ್ಲುವುದು ರಸಿಕತೆಯ ಪ್ರತೀಕ. ಈ ಅಡಿಕೆ ತಿನ್ನುವ ಸ್ವಭಾವ ಸಾಮಾನ್ಯವಾಗಿ ಪೌರ್ವಾತ್ಯ ದೇಶಗಳಲ್ಲೆಲ್ಲಾ ಬಳಕೆಯಲ್ಲಿದೆ.

ಸಸ್ಯಶಾಸ್ತ್ರ ವಿವರಣೆ : ಅಡಿಕೆ ಮರ ಪಾಮೆ (palmae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=32 (Abraham. etal 1961) ತೆಂಗಿನ ಮರಕ್ಕೆ ಹೋಲಿಸಿ ನೋಡಿದರೆ ಇದರ ಕಾಂಡ ಬಲು ತೆಳುವಾಗಿರುತ್ತದೆ. ಬೆಳ್ಳಗೆ ನಯವಾದ ಹೊರ ಮೈ ಹೊಂದಿರುತ್ತದೆ. ಈ ಮರ ಚೆನ್ನಾಗಿ ಬೆಳೆಯಬೇಕಾದರೆ ತಣ್ಣಗಿನ ತೇವವಾದ ವಾತಾವರಣ ಇರಬೇಕು. ಮಳೆ 70 ರಿಂದ 200 ಇಂಚಿನ

ಷ್ಟಿದ್ದರೆ ಚೆನ್ನ. ಪಶ್ಚಿಮ ಕರಾವಳಿಯ ಕೆಂಪುಮಿಶ್ರಿತ ಬಿಳಿನೆಲದಲ್ಲಿ ಚೆನ್ನಾಗಿ ಬೆಳೆಯುವ ಈ ಮರಗಳ ತೋಟಗಳಲ್ಲಿ ತೆಂಗಿನ ಮರಗಳು, ಮಾವಿನ ಮರಗಳು, ಹಲಸಿನ ಮರಗಳನ್ನು ಬೆಳೆಸಿರುವುದುಂಟು.

ವ್ಯವಸಾಯ ಪದ್ಧತಿ : ಮೊದಲು ಕಾದಿಟ್ಟ ಜಾಗದಲ್ಲಿ ಸಸಿಗಳನ್ನು ಬೆಳೆಸಿಕೊಂಡು, 2-3 ವರ್ಷಗಳ ಅನಂತರ 12 ಅಡಿ ಅಂತರವಿರುವಂತೆ ತೆಗೆಸಿದ ಗುಣಿಗಳಲ್ಲಿ ಸಾಲಾಗಿ ನೆಡುತ್ತಾರೆ. ಚಿಕ್ಕಂದಿನಲ್ಲಿ ದನ ಕರುಗಳ ಗೊಬ್ಬರವನ್ನೇ ಹಾಕುವುದು ರೂಢಿ. ಸಾಮಾನ್ಯವಾಗಿ ಒಂದು ಎಕರೆಗೆ ಸುಮಾರು 700 ರಿಂದ 800 ಮರಗಳ ವರೆಗೂ ಹಾಕಿರುತ್ತಾರೆ.

ಉಪಯೋಗಗಳು : 1894 ರಲ್ಲೇ ಇಂಡಿಯಾಕ್ಕೆ ಒಂದು ವರ್ಷಕ್ಕೆ 30,500,000 ಪೌಂಡು ಅಡಿಕೆ ಬೇಕು ಎಂದು ಕ್ಯಾಮರಾನ್ ಅಂದಾಜು ಮಾಡಿದ್ದರು. ಅಡಿಕೆ ಮರ ಬಹಳ ಆರ್ಥಿಕ ಪ್ರಾಮುಖ್ಯವುಳ್ಳದ್ದು. ಒಂದು ಎಕರೆಗೆ 700-800 ಪೌಂಡುಗಳವರೆಗೂ ಅಡಿಕೆ ಸಿಕ್ಕುತ್ತದೆ. ಕೆಲವೆಡೆಗಳಲ್ಲಿ ಪೂರ್ತಿಯಾಗಿ ಮಾಗದ ಕಾಯಿಗಳನ್ನು ಕೀಳುವ ಪದ್ಧತಿಯಿದ್ದರೆ ಇನ್ನು ಕೆಲವು ಕಡೆ ಪೂರ್ತಿಯಾಗಿ ಕಿತ್ತಲೆ ಬಣ್ಣಕ್ಕೆ ಬಂದ ಕಾಯಿಗಳನ್ನು ಮಾತ್ರ ಕೀಳುತ್ತಾರೆ. ಎಳೆಯ ಅಡಿಕೆಯಲ್ಲಿ ಟ್ಯಾನಿನ್ ಇರುತ್ತದೆ. ಸುಮಾರು ಎರಡು ಗಂಟೆಗಳ ಕಾಲ ನೀರಿನಲ್ಲಿ ಕುದಿಸಿದರೆ ಇದು ಹೋಗುತ್ತದೆ. ಅನಂತರ ಇದನ್ನು ಒಣಗಿಸಿ ಮಾರುಕಟ್ಟೆಗಳಿಗೆ ಕಳಿಸುತ್ತಾರೆ. ಮೈಸೂರಿನ ಅಡಿಕೆ ಮೈಸೂರು ವೀಳೆಯದೆಲೆಯಂತೆಯೇ ಪ್ರಸಿದ್ಧವಾದದ್ದು. ಹೊರಗಡೆಯಲ್ಲೂ ಬೇರೆ ಪ್ರದೇಶದಲ್ಲಿನ ಅಡಿಕೆಗಳಿಗಿಂತ ಸುಮಾರು 25-30% ಅಧಿಕ ಬೆಲೆಗೆ ಈ ಅಡಿಕೆ ಮಾರಾಟವಾಗುತ್ತಿದೆ.

ಅಡವಿಮರ (ಕಾಡುಚೆಂಡೆ, ಹಳದಿ ಮರ) Erinocarpus cnimmonianus Grah.) :

ಹಾಸನ ಜಿಲ್ಲೆಯ ಅರಣ್ಯಗಳಲ್ಲಿ ಕಂಡು ಬರುವ ಈ ಮರವು ಸುಮಾರು 20 ರಿಂದ 25 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದು ಸಮುದ್ರ ಮಟ್ಟಕ್ಕೆ 3000 ದಿಂದ 3050 ಅಡಿಗಳಷ್ಟು ಎತ್ತರದಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಅಡವಿ ಮರ ಟಿಲಿಯೇಸಿ (Tiliaceae) ಕುಟುಂಬಕ್ಕೆ ಸೇರಿದೆ. ಇದರ ಹೂವುಗಳು ಹಳದಿ ಬಣ್ಣವಾಗಿದ್ದು ಲಕ್ಷಣವಾಗಿರುತ್ತವೆ. ಇದರ ತೊಗಟೆಯು ಕಂದುಬಣ್ಣಕ್ಕಿರುತ್ತದೆ. ಇದರ ಎಲೆಗಳು ಹೃದಯಾಕಾರ ಹೊಂದಿರುತ್ತವೆ.

ಉಪಯೋಗಗಳು : ಈ ಮರ ಅಷ್ಟೇನೂ ಉಪಯೋಗಕರವಲ್ಲದಿದ್ದರೂ ಹಗ್ಗಗಳನ್ನು ಮಾಡಲು ಇದರ ತೊಗಟೆಯಿಂದ ನಾರನ್ನು ಪಡೆಯುತ್ತಾರೆ. ಈ

ಮರವು ಮೃದುವಾಗಿರುವುದರಿಂದ ನೊಗಗಳು ಮತ್ತಿತರ ಸಾಮಾನುಗಳನ್ನು ಇದರಿಂದ ಮಾಡುತ್ತಾರೆ.

ಅಡವಿ ಗೋರಟ (ದೇವದಾರು) (Erythroxylum monogynum Roxb.) :

ಬೆಟ್ಟಗಳ ತಪ್ಪಲಿನಲ್ಲಿ ಬೆಳೆಯುವ ಈ ಸಸ್ಯವು ವಾತಾವರಣಕ್ಕೆ ತಕ್ಕ ಹಾಗೆ ಪೊದೆ ಅಥವಾ ಒಂದು ಸಣ್ಣ ಮರದಂತಿರುತ್ತದೆ. ಸಾಮಾನ್ಯವಾಗಿ ಮೈಸೂರಿನಲ್ಲಿ ಇದನ್ನು ಕೆಂಪು ದೇವದಾರು ಎಂದು ಕರೆಯುತ್ತಾರೆ. ಒಣ ಹವೆಯಿರುವ ಪ್ರದೇಶಗಳ ಎಲ್ಲ ಕಾಡುಗಳಲ್ಲಿಯೂ ಇದು ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಇದು ಎರಿತ್ರೋಕ್ಸೈಲೇಸಿ (Erythroxylaceae) ಕುಟುಂಬಕ್ಕೆ ಸೇರಿದೆ. ಬೀಜಗಳಿಂದ ಬಹಳ ಸುಲಭವಾಗಿ ಸಸಿಯನ್ನು ಪಡೆಯಬಹುದು. ಗುಡ್ಡ, ಬಂಡೆಗಳಿರುವ ಒಣ ಪ್ರದೇಶಗಳಲ್ಲಿ ಇದು ಒಂದು ಸಣ್ಣ ಪೊದೆಯಂತಿರುತ್ತದೆ. ಇದು 25 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಎಲೆಗಳು ಸಣ್ಣದಾಗಿದ್ದು ಸ್ವಲ್ಪ ಅಂಡಾಕೃತಿ ಹೊಂದಿರುತ್ತವೆ. ಇದರ ಹಣ್ಣುಗಳು ಕೆಂಪು ಬಣ್ಣವಾಗಿದ್ದು $\frac{1}{4}$ ಇಂಚು ಉದ್ದವಿರುತ್ತದೆ. ಇದರ ಚೇಗು ಕಪ್ಪುಮಿಶ್ರಿತ ಕಂದುಬಣ್ಣ ಹೊಂದಿರುತ್ತದೆ. ತೂಕ ಒಂದು ಘನ ಅಡಿಗೆ 63 ಪೌಂಡುಗಳು.

ಉಪಯೋಗಗಳು : ಇದರ ಚೇಗು ಭಾಗವು ಬಹಳ ಗಟ್ಟಿಯಾಗಿದ್ದು ಸುವಾಸನೆಯುಳ್ಳದಾಗಿರುತ್ತದೆ. ದೇವರ ಹಾಗೂ ಇತರ ಬೊಂಬೆಗಳನ್ನು ಕೆತ್ತಲು ಕೆಲವೊಮ್ಮೆ ಇದನ್ನು ಉಪಯೋಗಿಸುತ್ತಾರೆ. ಈ ಮರದಿಂದಲೇ "ಎಂಪೆರು ಮಾಟಿಕ್ ಎಣ್ಣೆ" ಎಂಬ ಸುವಾಸಿತ ಎಣ್ಣೆಯನ್ನು ತೆಗೆಯುತ್ತಾರೆ. ಎಲೆಗಳನ್ನೂ, ತೊಗಟೆಯನ್ನೂ ಸ್ಥಳೀಯ ವೈದ್ಯರುಗಳು ಕೆಲವು ಕಾಯಿಲೆಗಳಿಗಾಗಿ ಉಪಯೋಗಿಸುತ್ತಾರೆ. ಕೆಂಪಗಿರುವ ಹಣ್ಣುಗಳನ್ನು ಕೆಲವೊಮ್ಮೆ ಕ್ಷಾಮ ಕಾಲದಲ್ಲಿ ತಿನ್ನುತ್ತಾರೆ. ಎಲೆಗಳನ್ನೂ ಬೇಯಿಸಿ ತಿನ್ನುತಾರೆ.

ಅಡವಿ ಲವಂಗ ಪಟ್ಟೆ (ಎಲ್ಲಗಮರ. ಕಾಡು ಲವಂಗ) (Cinnamomum-iners Reinw.) :

ಇದು ಪಶ್ಚಿಮ ಮಲೆನಾಡು ತಪ್ಪಲುಗಳಲ್ಲಿ ಬೆಳೆಯುವ ಸಣ್ಣ ವೃಕ್ಷ. ಶಿವಮೊಗ್ಗ ಜಿಲ್ಲೆ. ಮೈಸೂರು ಹಾಗೂ ಕೊಡಗಿನ ನಿತ್ಯಹರಿದ್ವರ್ಣ ಅರಣ್ಯಗಳಲ್ಲಿ ಕಂಡು ಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಲಾರೇಸಿ (Lauraceae) ಕುಟುಂಬಕ್ಕೆ ಸೇರಿದ ಈ ಮರ ದಾಲ್ಚಿನ್ನಿ ಮರ (Cinnamomum zeylanicum) ದಷ್ಟು ದೊಡ್ಡದಾಗಿ

ಬೆಳೆಯದಿದ್ದರೂ ಇದರ ಎಲೆಗಳು ಅದಕ್ಕಿಂತಲೂ ದೊಡ್ಡವಾಗಿರುತ್ತದೆ. ಇದರ ವರ್ಣ ತಂತುಗಳ ಸಂಖ್ಯೆ n=12 (Sugiura)

ಉಪಯೋಗಗಳು : ತೊಗಟೆಯು ಒಳ್ಳೆಯ ವಾಸನೆಯುಳ್ಳದ್ದಾಗಿರುತ್ತದೆ ಆದ್ದರಿಂದ ಕೆಲವೆಡೆಗಳಲ್ಲಿ ದಾಲ್ಚಿನ್ನಿಗೆ ಬದಲಾಗಿ ಇದನ್ನೇ ಉಪಯೋಗಿಸುವ ಪ್ರಯತ್ನ ನಡೆದಿದೆ. ಇದರ ತೊಗಟೆಯಿಂದ ತೆಗೆಯಲ್ಪಡುವ ಎಣ್ಣೆಯಲ್ಲಿ ಸ್ವಲ್ಪ ಲವಂಗದ ವಾಸನೆ ಇರುತ್ತದೆ. ಇದರ ಮರ ಸ್ವಲ್ಪ ಕಂದು ಬಣ್ಣಕ್ಕಿದ್ದು ಗಟ್ಟಿಯಾಗಿ ಹೊಳಪುಳ್ಳದ್ದಾಗಿರುತ್ತದೆ. ಒಂದು ಘನ ಅಡಿಗೆ 41 ಪೌಂಡುಗಳಷ್ಟು ತೂಗುತ್ತದೆ. ಈ ಮರವನ್ನು ಸಣ್ಣ ಬೀರುಗಳು, ಪುಸ್ತಕಗಳನ್ನಿಡುವ ಗೂಡುಗಳು ಮುಂತಾದುವುಗಳನ್ನು ಮಾಡಲು ಉಪಯೋಗಿಸುತ್ತಾರೆ.

ಅಡವಿ ನಿಂಬೆ (ಕಾಡು ನಿಂಬೆ, ನೈಬಾಲ್ಯದ (Atalantia monophylla Correa.) :

ಮರಗಳ ಪಕ್ಕದಲ್ಲಿ ಬೆಳೆದರೆ ಅಡರು ಸಸ್ಯದಂತೆ ವರ್ತಿಸುವ ದೊಡ್ಡ ಈ ಸಣ್ಣ ಮರ ಮಲೆನಾಡಿನ ಅರಣ್ಯಗಳಲ್ಲೆಲ್ಲಾ ಗುಡ್ಡ ಪ್ರದೇಶಗಳಲ್ಲಿ ಕಂಡು ಬರುತ್ತದೆ. “ಸ್ಕೋನಿಯಸ್” (Schoneus) ನ ಮಗಳಾದ ಅಟ್ಲಾಂಟ (Atlanta) ಎಂಬುವಳ ಹೆಸರೇ ಈ ಮರಕ್ಕೆ ಅಟ್ಲಾಂಟಿಯಾ ಎಂದು ಹೆಸರು ಬರಲು ಕಾರಣ.

ಸಸ್ಯಶಾಸ್ತ್ರ ವಿವರಣೆ : ಈ ಮರ ರುಟೇಸಿ (Rutaceae) ಕುಟುಂಬಕೆ ಸೇರಿದೆ. ಈ ಮರದ ಹೂವುಗಳು ಸುವಾಸಿತವಾಗಿದ್ದು ಬೆಳ್ಳಗಿರುತ್ತವೆ. ಚೆನ್ನಾಗಿ ಹೂವು ಬಿಟ್ಟಾಗಲಂತೂ ಮರವೆಲ್ಲಾ ಬೆಳ್ಳಗೇ ಕಾಣುತ್ತಿರುತ್ತದೆ. ಇದರ ಹಣ್ಣುಗಳು ಹೊಂಬಣ್ಣವಾಗಿದ್ದು ನೋಡಲು ಆಕರ್ಷಕವಾಗಿರುತ್ತವೆ.

ಅಬಲು (**ಅಬ್ಲು**) (Canthium dicoccum (Gaetn) Merril)

ನಿತ್ಯಹರಿದ್ವರ್ಣದ ಈ ಸುಂದರ ವೃಕ್ಷ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮತ್ತು ಕೊಡಗು ಜಿಲ್ಲೆಗಳ ಕಾಡುಗಳಲ್ಲಿ ಕಂಡು ಬರುತ್ತದೆ. ಈ ಸುಂದರವಾದ ಮರವನ್ನು ಉದ್ಯಾನಗಳಲ್ಲೂ ಬೆಳೆಸಬಹುದು. ಬಾಬಾಬುಡನ್ ಬೆಟ್ಟದ ಸಾಲಿನಲ್ಲಂತೂ ಕೆಲವೆಡೆಗಳಲ್ಲಿ ಇವುಗಳ ಸಮೂಹವೇ ಬೆಳೆದು ನಿಂತಿದ್ದು ದಾರಿಗರ ಗಮನವನ್ನು ಸೆಳೆಯುತ್ತವೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೊಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ.

ಉಪಯೋಗ : ಗಟ್ಟಿಮುಟ್ಟಾದ ಮರವನ್ನು ಕೊಡಬಲ್ಲ ಈ ಮರದ ಒಂದು ಘನ ಅಡಿ 46 ರಿಂದ 57 ಪೌಂಡುಗಳಷ್ಟು ತೂಗಬಲ್ಲದು. ಹತ್ತಿರದ ಎಳೆಗಳ ರಚನೆ ಮರವಲ್ಲಿರುತ್ತದೆ. ವ್ಯವಸಾಯದ ಉಪಕರಣಗಳನ್ನು ತಯಾರಿಸಲು ಈ ಮರವನ್ನು ಬಳಸುತ್ತಾರೆ.

ಅಮಟೆಕಾಯಿ ಆಮ್ರ (Mangifera pinnata Linn.)
(Syn. Spondias mangifera Willd.)

ತಿನ್ನಲು ಅರ್ಹವಾದ ಹಣ್ಣುಗಳಿಗಾಗಿ ಮೈಸೂರು, ಆಂಧ್ರಪ್ರದೇಶ, ಪಂಜಾಬು, ಮಹಾರಾಷ್ಟ್ರ, ಬಂಗಾಳ ಮತ್ತು ಅಸ್ಸಾಂಗಳಲ್ಲಿ ಬೆಳೆಸುತ್ತಾರೆ. ಇದೊಂದು ಸಣ್ಣ ಮರ. ಚಳಿಗಾಲದಲ್ಲಿ ಎಲೆಗಳು ಉದುರಿ ಹೋಗುತ್ತವೆ.

ಸಸ್ಯಶಾಸ್ತ್ರ ವಿಚಾರ : ಈ ಮರ ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಬೀಜಗಳನ್ನು ನೆಟ್ಟರೆ ಸುಲಭವಾಗಿ ಸಸಿಗಳನ್ನು ಪಡೆಯಬಹುದು. ಈ ಮರದ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ನುಣುಪಾಗಿರುತ್ತವೆ. ಹೂವುಗಳು ಸಣ್ಣವಾಗಿದ್ದು ಸ್ವಲ್ಪ ಬೂದುಮಿಶ್ರಿತ ಬಿಳೀವರ್ಣದವಾಗಿರುತ್ತವೆ. ಕಾಯಿಗಳು ಸಣ್ಣ ಮಾವಿನಕಾಯಿಯಂತೆ ಇರುತ್ತವೆ. ಈ ಮರದ ತೊಗಟೆ ಬೂದು ಬಣ್ಣವಾಗಿರುತ್ತದೆ.

ಉಪಯೋಗಗಳು : ಕಾಯಿಗಳು ಬಲಿಯಲು ಪ್ರಾರಂಭಿಸುವ ಸಮಯದಲ್ಲಿ ಅವುಗಳನ್ನು ಉಪ್ಪಿನಕಾಯಿಗಳಿಗಾಗಿ ಬಳಸುತಾರೆ. ಮರ ಬಹಳ ಮೃದುವಾಗಿದ್ದು ಸೌದೆಗಲ್ಲದೆ ಬೇರೆ ಯಾವ ಕೆಲಸಕ್ಕೂ ಬರುವುದಿಲ್ಲ. ಟ್ಯಾನ್ ಪಡೆಯಲು ತೊಗಟೆಯನ್ನು ಉಪಯೋಗಿಸುತ್ತಾರೆ.

ಅರಿಶಿನ ತೇಗ (ಹೆತ್ತೇಗ, ಹೆಡ್ಡೆ ಬಾಚಣಿಗೆ) (Adina cordifolia Benth & Hook.f.)

ಮಲೆನಾಡಿನ ಬೆಟ್ಟಗುಡ್ಡಗಳ ಪ್ರದೇಶದ ಅರಣ್ಯಗಳಲ್ಲೂ ಪೂರ್ವ ಘಟ್ಟಗಳ ಬೆಟ್ಟಗಳ ಹತ್ತಿರದ ಪ್ರವಾಸಗಳಲ್ಲೂ, ಕೊಡಗು ಜಿಲ್ಲೆಯಲ್ಲೂ ಅರಸಿನ ತೇಗ, ಚೆನ್ನಾಗಿ ಬೆಳೆಯುತ್ತದೆ. ಅತ್ಯಂತ ಎತ್ತರಕ್ಕೆ ಬೆಳೆಯಬಲ್ಲ ಈ ಮರವು ಚೆನ್ನಾಗಿ ದಪ್ಪವೂ ಆಗಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಅರಿಸಿನ ತೇಗದ ಎಲೆಗಳು ಕಾಲ ಕಾಲಕ್ಕೆ ಉದುರಿ ಹೋಗುವ ಗುಣ

ಹೊಂದಿದ್ದು, ದುಂಡಗೆ ಹೃದಯಾಕಾರವಾಗಿದ್ದು ಚರ್ಮದಂತೆ ಒರಟಾಗಿರುತ್ತದೆ. ಈ ಮರದ ವೃಂತ ಪರ್ಣಗಳು (Stipules) ಬಹಳ ಬೇಗ ಬಿದ್ದುಹೋಗುವ ಗುಣವನ್ನು ಹೊಂದಿರುತ್ತವೆ. ಮರವು ಹಳದಿ ಬಣ್ಣವನ್ನು ಹೊಂದಿರುತ್ತದೆ. ಒಂದು ಘನ ಅಡಿಗೆ 42 ರಿಂದ 50 ಪೌಂಡು ತೂಕ ಇರುವ ಈ ಮರ ನೀರಿನಲ್ಲಿ ಬಹುಕಾಲ ಬಾಳಬಲ್ಲದು. ಆದರೆ ಒಣಮರವನ್ನು ಬಡಗಿ ದುಂಬಿ (Apis xylocarpa) ಎಂಬ ಕೀಟ ಕೊರೆದು ಹಾಳು ಮಾಡುತ್ತದೆ. ಈ ಮರವನ್ನು ಬೀಜಗಳಿಂದಲೂ, ರೆಂಬೆಗಳಿಂದಲೂ ಬೆಳೆಸ ಬಹುದು.

ಉಪಯೋಗಗಳು: ಬಂದೂಕದ ಹಿಡಿಗಳನ್ನೂ, ಬಾಚಣಿಗೆಗಳನ್ನೂ, ಅಲಂಕಾರಿಕ ಪೆಟ್ಟಿಗೆಗಳನ್ನೂ ತಯಾರಿಸಲು ಉಪಯೋಗಿಸುತ್ತಾರೆ. ಅಲ್ಲದೆ ರೈಲ್ವೆ ಕ್ಯಾರೇಜುಗಳನ್ನು ಮಾಡಲೂ ಉಪಯೋಗಿಸುತ್ತಾರೆ. ನೀರಿನಲ್ಲಿ ಬಹುಕಾಲ ಬಾಳಿಕೆ ಬರುವುದರಿಂದ ದೋಣಿಗಳ ಉಪಕರಣಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಕಹಿಯಾದ ಇದರ ತೊಗಟೆಯನ್ನು ರೈತರುಗಳು ಪೂತಿನಾಶಕವಾಗಿ ಬಳಸುವುದುಂಟು.

ಅರಳಿಮರ ಅಶ್ವತ್ಥ (Ficus religiosa L.)

ಹಿಂದೂಗಳಿಗೂ ಬೌದ್ಧರಿಗೂ ಅತ್ಯಂತ ಪವಿತ್ರವಾದ ವೃಕ್ಷಗಳಲ್ಲಿ ಅಶ್ವತ್ಥವೂ ಒಂದು. ಅತ್ಯಂತ ಉನ್ನತವಾಗಿ ಬೆಳೆಯುವ ಈ ಮರವು 30 ರಿಂದ 100 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಹಿಂದೂ ಸಮಾಜದಲ್ಲಿ ಅರಳಿಮರದ ಸ್ಥಾನ ವಿಶಿಷ್ಟವಾದುದ್ದು. ದೇವ ವೃಕ್ಷವಾದ ಇದು ಬ್ರಹ್ಮ, ವಿಷ್ಣು, ಮಹೇಶ್ವರ ಆವಾಸ ಸ್ಥಾನವೆಂಬ ನಂಬಿಕೆಯುಂಟು. ಹಳ್ಳಿಗಳಲ್ಲಿ ದೇವಾಲಯಗಳ ಹತ್ತಿರ ಬೆಳೆಸುವ ಈ ಮರವೆಂದರೆ ಬಹಳ ಜನಕ್ಕೆ ಭಕ್ತಿ. ಮಕ್ಕಳಿಲ್ಲದವರಂತೂ ಹರಕೆಮಾಡಿಕೊಂಡು ಮೂರು ತಿಂಗಳ ತನಕ ಪೂಜೆ, ಪುರಸ್ಕಾರ, ಪ್ರದಕ್ಷಿಣೆಗಳನ್ನು ಮಾಡುವುದುಂಟು. ಅರಳಿಯ ಮರಕ್ಕೆ ಬೇವಿನ ಮರದ ಜೊತೆ ಮದುವೆ ಮಾಡಿಸುವುದಂತೂ ಕೆಲವು ಕಡೆ ವೈಭವದಿಂದಲೇ ನಡೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ ಇದರ ವರ್ಣತಂತುಗಳ ಸಂಖ್ಯೆ 2n=26 (Condit 1933). ಕಾಲ ಕಾಲಕ್ಕೆ ಎಲೆಗಳುದುರುತ್ತಿರುವ ಈ ಮರದ ಚಿಗುರೆಲೆಗಳು ಸುಂದರ ತಾಮ್ರವರ್ಣದವಾಗಿರುತ್ತವೆ. ಎಲೆಗಳಿಗೆ ದೊಡ್ಡ ತೊಟ್ಟುಗಳಿರುತ್ತವೆ. ಎಲೆಗಳು ಕೆಳಗೆ ಹೃದಯಾಕಾರವಾಗಿದ್ದು ಮೇಲೆ ಚೂಪಾದ ಉದ್ದ ಬಾಲದ ಆಕಾರವನ್ನು ಹೊಂದಿರುತ್ತದೆ. ಕಾಂಡವು ಸ್ವಲ್ಪ ಕೆಂಪು ಮಿಶ್ರಿತವಾದ ಬೂದು ಬಣ್ಣವಾಗಿರುತ್ತದೆ. ಆಶ್ಚರ್ಯಕರವಾದ ವಿಷಯವೆಂದರೆ ಈ ಮರವು 2000 ವರ್ಷದಿಂದ 8000 ವರ್ಷಗಳವರೆಗೂ ಬದುಕಬಲ್ಲದು. ಇದೂ ಕೂಡ ಆಲದಂತೆ ಚಿಕ್ಕಂದಿನಲ್ಲಿ ಇತರ ಮರಗಳ ಮೇಲೆ ಹುಟ್ಟಿಕೊಂಡು ಕ್ರಮೇಣ ಬೇರೂರಿ ದೊಡ್ಡ ವೃಕ್ಷವಾಗುವ ಗುಣವನ್ನು ಹೊಂದಿದೆ. ಇದು ಗೋಡೆಗಳ ಮೇಲೂ, ಬಂಡೆಗಳ ಸಂದಿನಲ್ಲೂ ಬೆಳೆಯಬಲ್ಲದು.

ಉಪಯೋಗಗಳು : ಇದರ ಮರ ಉಪಯೋಗವಿಲ್ಲದ್ದು. ಮೈಸೂರು ದೇಶದಲ್ಲಂತೂ ಅರಳಿಮರವನ್ನು ಕಡಿದರೆ ಅದರಲ್ಲಿರುವ ದೇವತೆಗಳಿಗೆ ನೆಲೆ ತಪ್ಪಿ ಅವರು ಶಪಿಸಿ ತೊಂದರೆಯುಂಟಾಗುತ್ತದೆಯೆಂಬ ನಂಬಿಕೆ ಮೊದಲಿನಿಂದಲೂ ಇದೆ. ಮರದ ತೂಕ ಒಂದು ಘನ ಅಡಿಗೆ 30 ರಿಂದ 45 ಪೌಂಡುಗಳು. ಇದರ ರಸದಿಂದ ತುಂಬಾ ಕೆಳದರ್ಜೆಯ ರಬ್ಬರ್ ಪಡೆಯಲು ಸಾಧ್ಯ. ಈ ರಸವನ್ನು ಗೊನೋರಿಯಾ, ಆಸ್ತಮಾ, (ಗೂರಲು) ಹಾಗೂ ನಪುಂಸಕತೆ ನಿವಾರಣೆ ಇವುಗಳಿಗೆ ಉಪಯೋಗಿಸುತ್ತಾರೆ. ರಸ್ತೆಗಳಲ್ಲಿ ಬೆಳೆಸಲು ಇದೊಂದು ಉತ್ಕೃಷ್ಟವಾದ ಮರವಾಗಿದೆ. ಕೊಡಗಿನಲ್ಲಿ ಈ ಮರದ ಎಳೆಯ ಎಲೆಗಳನ್ನು ಆಡು, ಕುರಿ, ದನಗಳು ತಿಂದಲ್ಲಿ ಹೆಚ್ಚು ಹಾಲು ಕೊಡುತ್ತವೆಂಬ ನಂಬಿಕೆ ಇದೆ.

ಅರಿಸಿನಬೂರುಗ (Cochlospermum religiosum (L.) Alston. (Syn C. gossypium DC.)

ಭಾರತದ್ದೇ ಆದ ಈ ವೃಕ್ಷ ಮೈಸೂರು ದೇಶಕ್ಕಿಂತ ಆಂಧ್ರ ಪ್ರದೇಶ, ಮಧ್ಯ ಪ್ರದೇಶ ಮತ್ತು ಬಿಹಾರಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿಚಾರ : ಹಳದಿ ದೂದಿಹತ್ತಿ ಮರವಾದ ಈ ಅರಿಸಿನ ಬೂರುಗವು ಕಾಕ್ಲೋಸ್ಪರ್ಮೇಸಿ (Cochlospermaceae) ಕುಟುಂಬಕ್ಕೆ ಸೇರಿದೆ. ಮೈಸೂರಿನಲ್ಲಿ ಒಣಹವೆಯ ಬೆಟ್ಟಗುಡ್ಡಗಳು, ಕಾಡುಗಳು ಇರುವ ಜಾಗದಲ್ಲಿ ಬೆಳೆಯುವ, ಬೇಸಿಗೆಯಲ್ಲಿ ಎಲೆಗಳು ಉದುರುವ ಈ ಸಣ್ಣ ಮರವು ಮಾರ್ಚಿ ತಿಂಗಳಿನಲ್ಲಿ ಪುಷ್ಪಭರಿತವಾಗಿರುತ್ತದೆ. ಎಲೆಗಳು ದೊಡ್ಡವಾಗಿದ್ದು ತಮ್ಮ ಕೆಳಭಾಗದಲ್ಲಿ ಮೃದುವಾದ ತುಪ್ಪಳವನ್ನು ಹೊಂದಿರುತ್ತವೆ. ಕಾಯಿಗಳು ತುಪ್ಪಳ ಹೊಂದಿದ್ದು ಬಲಿತ ಅನಂತರ ಬೀಜಗಳ ಸುತ್ತ ಮೃದುವಾದ ಹತ್ತಿಯನ್ನು ಹೊಂದಿರುತ್ತವೆ. ಹೂವುಗಳು ಹೊಂಬಣ್ಣಕ್ಕಿರುತ್ತವೆ.

ಉಪಯೋಗಗಳು : ಹಾಸಿಗೆ ದಿಂಬುಗಳನ್ನು ಮಾಡಲು ಇದರ ಹತ್ತಿಯಂತ ಮೃದುವಾದ ತುಪ್ಪಳವನ್ನು ಉಪಯೋಗಿಸುತ್ತಾರೆ. ಇದರ ಅಂಟು ತಿನ್ನಲು ಯೋಗ್ಯವಾದದ್ದಾಗಿದೆ. ಈ ಮರ ಅಷ್ಟೇನೂ ಬೆಲೆ ಬಾಳುವುದಿಲ್ಲ. ತೂಕವು ಒಂದು ಘನ ಅಡಿಗೆ 17 ಪೌಂಡು ಆಗಿರುತ್ತದೆ.

ಅರೆಬೇವು (ಚಿಕ್ಕಬೇವು, ಹುಚ್ಚುಬೇವು) (Melia azedarch L.)

ಅರಣ್ಯಗಳಲ್ಲಿ ಅಷ್ಟೇನೂ ಕಂಡು ಬರದಿದ್ದರೂ ಪರ್ಷಿಯಾದ ಈ ಮರಗಳನ್ನು ಹಳ್ಳಿಗಳಲ್ಲೂ, ಪಟ್ಟಣಗಳಲ್ಲೂ, ಸ್ವಂತ ಮತ್ತು ಸಾರ್ವಜನಿಕ ಸ್ಥಳಗಳಲ್ಲಿಯೂ ಬೆಳಸಲಾಗುತ್ತದೆ. ಈ ನಿತ್ಯಹರಿದ್ವರ್ಣದ ವೃಕ್ಷದ ಹೂವುಗಳು ಸುಗಂಧಭರಿತವಾಗಿರುತ್ತವೆ.

ಆದರೆ ಹಳ್ಳಿಗಳಲ್ಲಿ ಕುರಿಗಳಿಗೆ ಹಾಗೂ ಆಡುಗಳಿಗೆ ಸೊಪ್ಪಿಗೋಸ್ಕರ ಇದನ್ನು ವಿಶೇಷ ವಾಗಿ ಉಪಯೋಗಿಸುವುದರಿಂದ ಬರೀ ಬೋಳು ಮರ ಅಸಹ್ಯವಾಗಿ ನಿಂತಿರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ "ಮಿಲಿಯೇಸಿ" (Miliaceae) ಕುಟುಂಬಕ್ಕೆ ಸೇರಿದ. ಇದರ ವರ್ಣ ತಂತುಗಳ ಸಂಖ್ಯೆ 2n = 28 (Marifray–1963b). 15 ರಿಂದ 25 ಅಡಿ ಎತ್ತರಕ್ಕೆ ಬೆಳೆಯಬಲ್ಲ ಈ ಮರದ ಬೆಳವಣಿಗೆ ಬಹು ವೇಗಪೂರಿತವಾಗಿರುತ್ತದೆ. ಡಿಸೆಂಬರ್, ಜನವರಿ ತಿಂಗಳಲ್ಲಿ ಎಲೆಗಳೆಲ್ಲಾ ಉದುರಿ ಹೋಗಿ ಮಾರ್ಚಿಯಲ್ಲಿ ಹೊಸ ಎಲೆಗಳು ಹೂವುಗಳು ಮೂಡುತ್ತವೆ. ಹಳದಿ ಬಣ್ಣದ ಪ್ರತಿ ಹಣ್ಣಿನಲ್ಲೂ 5 ಬೀಜಗಳಿರುತ್ತವೆ. ಈ ಮರದ ಬೇರುಗಳು ಅಷ್ಟು ಆಳವಾಗಿ ಭೂಮಿಗೆ ಸೇರಿರುವುದಿಲ್ಲವಾದ್ದರಿಂದ ಗಾಳಿ ಜೋರಾಗಿ ಬೀಸಿದಾಗಲೆಲ್ಲಾ ಕೆಳಗುರುಳುವುದಂತೂ ಸರ್ವೇ ಸಾಮಾನ್ಯವಾಗಿರುತ್ತದೆ. ಈ ಮರಗಳನ್ನು ಬೀಜಗಳಿಂದಲೇ ಬೆಳಸಬಹುದು.

ಉಪಯೋಗಗಳು : ಈ ಮರದ ಬೇರಿನ ಚೂರ್ಣವನ್ನು ಜಂತುಹುಳು ಮತ್ತಿತರ ಹೊಟ್ಟೆಯ ಹುಳುಗಳ ನಿರ್ಮೂಲನಕ್ಕೋಸ್ಕರ ಔಷಧಿಯಾಗಿ ಉಪಯೋಗಿಸುತ್ತಾರೆ. ಮರ ಅಷ್ಟೇನೂ ಬೆಲೆ ಬಾಳುವಂತಹುದಲ್ಲ. ಒಂದು ಘನ ಅಡಿಗೆ 35 ಪೌಂಡುಗಳಷ್ಟು ತೂಕವಿರುತ್ತದೆ.

ಅಳಲೆ ಮರ (Terminalia chebula Retz.)

ಕಾಲ ಕಾಲಕ್ಕೆ ಎಲೆ ಉದುರುವ ಈ ವೃಕ್ಷವು ಮಲೆನಾಡು, ಕೊಡಗು ಮತ್ತು ಮೈಸೂರು ಜಿಲ್ಲೆಯ ಅರಣ್ಯಗಳಲ್ಲಿ ಬೆಳೆಯುತ್ತದೆ. ಉತ್ತರ ಇಂಡಿಯಾದಲ್ಲಂತೂ ವಿಶೇಷವಾಗಿ ಬೆಳೆಯುತ್ತದೆ. ಬೆಂಗಳೂರು ಜಿಲ್ಲೆಯ ಸಾವನದುರ್ಗದಲ್ಲೂ ಕೆಲವು ಮರಗಳಿವೆ.

ಸಸ್ಯಶಾಸ್ತ್ರ ವಿವರಣೆ : ಈ ವೃಕ್ಷ "ಕೋಂಬ್ರಿಟೇಸಿ" (Combretaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=7 (Nanda 1962). ಮಧ್ಯಮ ಎತ್ತರದ ಈ ಮರವು ಸುಮಾರು 30–40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ತೊಗಟೆ ಕಪ್ಪುಮಿಶ್ರಿತ ಕಂದುಬಣ್ಣವನ್ನುಹೊಂದಿರುತ್ತದೆ. ಎಲೆಗಳು ಅಭಿಮುಖ ಜೋಡಣೆ ಹೊಂದಿದ್ದು ಕೆಳಗೆಮಾತ್ರ ತುಪ್ಪಳವನ್ನು ಹೊಂದಿರುತ್ತವೆ. ಸುಮಾರು 4 ಇಂಚುಗಳಷ್ಟು ಉದ್ದ, 2 ಇಂಚಿನಷ್ಟು ಅಗಲವಾಗಿರುತ್ತವೆ. ಇದರ ಹೂವುಗಳು ಹಳದಿ ಬಣ್ಣವಾಗಿದ್ದು ಸಣ್ಣ ತೊಟ್ಟುಗಳನ್ನು ಹೊಂದಿರುತ್ತವೆ. ಈ ದ್ವಿಲಿಂಗ ಪುಷ್ಪಗಳನ್ನು ಹೊಂದಿರುವ ಹೂಗೊಂಚಲು 6 ಇಂಚಿನಷ್ಟು ದೊಡ್ಡದಾಗಿರುತ್ತದೆ. ಇದರ ಕಾಯಿ ಗುಂಡಗೆ ಉದ್ದಕ್ಕೆ ಐದು ಮೂಲೆಗಳನ್ನು ಹೊಂದಿರುತ್ತದೆ. ಇದು ಮಾರ್ಚಿಯಿಂದ ಮೇ ತಿಂಗಳವರೆಗೆ ಪುಷ್ಪ ಫಲಭರಿತವಾಗಿರುತ್ತದೆ.

ಉಪಯೋಗಗಳು : ಮರದ ಕಾಯಿಗಳಾದ ಅಳಲೆ ಕಾಯಿಗಳಿಂದ ಒಳ್ಳೆಯ ಟ್ಯಾನಿನ್ ದೊರೆಯುತ್ತದೆ. ಈ ಮರದ ಎಲೆಗಳ ಮೇಲೆ ಆಗುವ ಕೀಟದ 'ಗಾಲ್' ಗಳಿಂದ ಒಳ್ಳೆಯ ಶಾಯಿ ತಯಾರಿಸುವ ಅಭ್ಯಾಸವು ಹಿಂದೆ ಬಳಕೆಯಲ್ಲಿತ್ತು. ಅನೇಕ ಖಾಯಿಲೆಗಳಿಗೆ ಆಯುರ್ವೇದದಲ್ಲಿ ಅಳಲೆ ಕಾಯಿಗಳನ್ನು ಚೂರ್ಣಮಾಡಿ ಇತರ ಔಷಧಗಳ ಜೊತೆ ಸೇರಿಸಿ ಕೊಡುವುದುಂಟು. ಮುಂಗಾರು ಕಾಲದಲ್ಲಿ ಹಳ್ಳಿಯ ರೈತರುಗಳಿಗಾಗುವ ಕೆಸರು ಗುಳ್ಳೆಗಳನ್ನು ಹೋಗಲಾಡಿಸಿಕೊಳ್ಳಲು ಮಂಜರಾಬಾದ್ ಮುಂತಾದ ಕಡೆಗಳಲ್ಲಿ ಎಳೆಯ ಕಾಯಿಗಳ ರಸವನ್ನು ಔಷಧಿಯಾಗಿ ಬಳಸುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಇದರಿಂದ ಒಳ್ಳೆಯ ಮರ ಸಿಕ್ಕುತ್ತದೆ. ಒಂದು ಘನ ಅಡಿಗೆ 53 ರಿಂದ 66 ಪೌಂಡುಗಳವರೆಗೂ ತೂಗಬಲ್ಲ ಈ ವೃಕ್ಷದ ಒಳ ಮರವು ಕಪ್ಪು ಮಿಶ್ರಿತವಾದ ಕಂದು ಬಣ್ಣವಾಗಿರುತ್ತದೆ. ವ್ಯವಸಾಯದ ಸಲಕರಣೆಗಳನ್ನು ಮಾಡುವುದಕ್ಕೂ, ಗಾಡಿಗಳ ಹಾಗೂ ಮನೆಯ ಮರದ ಸಾಮಾನುಗಳನ್ನು ತಯಾರಿಸಲೂ ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿ ಈ ಮರವನ್ನು ಉಪಯೋಗಿಸುತ್ತಾರೆ.

ಅಶೋಕ ವೃಕ್ಷ (Saraca indica Linn.)

ಈ ಸುಂದರ ನಿತ್ಯಹರಿದ್ವರ್ಣದ ವೃಕ್ಷವು ಸಮುದ್ರಮಟ್ಟಕ್ಕೆ 3000 ಅಡಿಗಳಿಗಿಂತಲೂ ಮೇಲಿರುವ ಮಲೆನಾಡಿನ ಹಾಗೂ ಕೊಡಗಿನ ಅರಣ್ಯಗಳಲ್ಲಿ ವಿಶೇಷವಾಗಿ ಬೆಳೆಯುತ್ತದೆ. ಹಿಂದುಗಳಿಗೆ ಪವಿತ್ರವಾದ ವೃಕ್ಷಗಳಲ್ಲಿ ಅಶೋಕವೃಕ್ಷವೂ ಒಂದಾಗಿದೆ. ಅಶೋಕ ಎಂಬ ಹೆಸರು ದುಃಖವಿಲ್ಲದಿರುವುದನ್ನು ಸೂಚಿಸುತ್ತದೆ. ನಮ್ಮ ಪುರಾಣ, ಪುಣ್ಯ ಚರಿತ್ರೆಗಳಲ್ಲೆಲ್ಲಾ ಅಶೋಕ ವೃಕ್ಷದ ವರ್ಣನೆ ಬರುತ್ತದೆ. ರಾವಣನಿಂದ ಅಪಹೃತಳಾದ ಸೀತೆಯು ಅಶೋಕ ವೃಕ್ಷದ ಕೆಳಗೆ ಕುಳಿತಿದ್ದಳು. ಸಿದ್ಧಾರ್ಥ ಬುದ್ಧನಾದಮೇಲೆ ಅಶೋಕವೃಕ್ಷದ ಕೆಳಗೆ ತನ್ನ ಪ್ರಥಮ ಉಪದೇಶವನ್ನು ಕೊಟ್ಟನು. ಉತ್ತರ ಇಂಡಿಯಾದ ಕೆಲವೆಡೆಗಳಲ್ಲಂತೂ ಅಶೋಕ ವೃಕ್ಷವು ಪ್ರೇಮದ ಸಂಕೇತವಾಗಿದೆ. ಪ್ರತಿ ಚೈತ್ರಮಾಸದ 13ನೇ ದಿನ ವಿರಹಿಗಳೂ, ಪ್ರೇಮಿಗಳೂ ಈ ಮರಕ್ಕೆ ಪೂಜೆಯನ್ನು ಸಲ್ಲಿಸುತ್ತಾರೆ.

ಸಂಸ್ಕೃತ ಕಾವ್ಯಗಳಲ್ಲಿ ಅಶೋಕ ವೃಕ್ಷದ ಸೌಂದರ್ಯ ವರ್ಣನೆ ಅದ್ಭುತವಾಗಿದೆ. ಅಶೋಕವು ಎಷ್ಟು ಸೂಕ್ಷ್ಮವೆಂದರೆ ಅದು ಹೂವು ಬಿಡದಿದ್ದರೆ ಸರ್ವಾಂಗ ಸುಂದರಿಯೂ ಪ್ರೇಮಮಯಿಯೂ ಆದ ಸ್ತ್ರೀಯೊಬ್ಬಳು ತನ್ನ ಎಡಗಾಲಿನ ಹೆಬ್ಬೆಳರಸ ತುದಿಯನ್ನು ಆ ಮರದ ಬುಡಕ್ಕೆ ಮುಟ್ಟಿಸಿದರೆ ಸಾಕು ಮರವೆಲ್ಲಾ ಹೂ ಹಾಗೂ ಚಿಗುರುಗಳಿಂದ ಕೆಂಪೇರುತ್ತಿತ್ತು ಈ ವಿಧಾನವನ್ನು "ದೋಹದ" ಎಂದು ಕರೆಯುತ್ತಿದ್ದರು.

ಸಸ್ಯಶಾಸ್ತ್ರ ವಿವರಣೆ : ಅಶೋಕ ವೃಕ್ಷವು "ಸಿಸಾಲ್ಪಿನೇಸಿ" (Caesalpinaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=12$



ಅಶೋಕ

(Atchison 1951). 20 ರಿಂದ 30 ಅಡಿಗಳ ಎತ್ತರಕ್ಕೆ ಬೆಳೆಯುವ ಈ ಮರವು ಸುತ್ತಲೂ ಹರಡಿಕೊಳ್ಳುವ ತನ್ನ ಸುಂದರ ರೆಂಬೆಗಳೊಂದಿಗೆ ಭವ್ಯವಾದ ನಿಲುವನ್ನು ಹೊಂದಿರುತ್ತದೆ. ರೆಂಬೆಗಳಿಂದ ಕೆಳಗೆ ಜೋತು ಬೀಳುವ ತೆಳ್ಳಗಿನ ಎಳೆಯ ಚಿಗುರು ಮಾವಿನ ಮರದ ಚಿಗುರಿನಂತೆಯೇ ಕೆಂಪಾಗಿರುತ್ತದೆ. ಇದರ ಹೂ ಬಿಡುವ ಕಾಲವು ಜನವರಿಯಿಂದ ಮೇ ತಿಂಗಳವರೆಗೂ ಇರುತ್ತದೆ. ಗುಂಪು ಗುಂಪಾಗಿ ಬಿಡುವ ಈ ಹೂವುಗಳು ಮೊದಲು ಹೊಳಪಾದ ಕಿತ್ತಳೆ ಬಣ್ಣವನ್ನು ಹೊಂದಿದ್ದು, ಅನಂತರ ಕೆಂಪಾಗುತ್ತವೆ. ಮರವೆಲ್ಲಾ ಕೆಂಪು ಹಸಿರುಗಳಾಗಿ ಕಾಣುವ ಈ ಕಾಲದಲ್ಲಿ ಅಶೋಕ ವೃಕ್ಷದ ಸೌಂದರ್ಯವು ಮನೋಹರವಾಗಿರುತ್ತದೆ.. ಬೀಜಗಳನ್ನು ನೆಡುವುದರ ಮೂಲಕ ಈ ಮರದ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಇಂಡಿಯಾದೇಶದ ಕೆಲವೇ ಸುಂದರ ವೃಕ್ಷಗಳಲ್ಲಿ ಇದು ಒಂದು. ಉದ್ಯಾನವನಗಳಲ್ಲಿ, ದೇವಸ್ಥಾನಗಳ ಹತ್ತಿರ ಈ ಮರವನ್ನು ಬೆಳೆಸುತ್ತಾರೆ. ಈ ಮರದ ಒಳಭಾಗ ಗಟ್ಟಿಯಾಗಿರುತ್ತದೆ. ಈ ಮರದಿಂದ ಮನೆ ಕಟ್ಟುವ ಸಾಮಾನುಗಳನ್ನು ತಯಾರಿಸಬಹುದು. ಆದರೂ ಸೌಂದರ್ಯಕ್ಕೆ ಹೆಸರಾದ ಈ ಅಶೋಕ ವೃಕ್ಷವನ್ನು ಕಡಿದುರುಳಿಸುವುದು ಅಪರೂಪವಾಗಿದೆ. ಈ ಮರದ ತೊಗಟೆಯನ್ನು ಹಾಲಿನಲ್ಲಿ ಕಷಾಯಮಾಡಿ ಕುಡಿಸಿದಲ್ಲಿ ಗರ್ಭಕೋಶದ ಕೆಲವು ಕಾಯಿಲೆಗಳು ಗುಣವಾಗುತ್ತವೆ ಎಂದು ಹೇಳಲಾಗಿದೆ.

ಆಸಗಗುರ್ಗಿ (ಕರಾಚಿ ಕಮ್ಮಾರ್, ಕಮ್ರು) (Hardwickia binata Roxb.)

ಈ ಮರವು ಮೊದಲು ತುಮಕೂರು ಮತ್ತು ಚಿತ್ರದುರ್ಗದ ಅರಣ್ಯಗಳಲ್ಲಿ ಬೆಳೆಯುತ್ತಿತ್ತು. ಆದರೆ ಈಗ ಈ ಅರಣ್ಯಗಳನ್ನೆಲ್ಲಾ ಮೂಲೋತ್ಪಾಟನೆಗೊಳಿಸಿರುವುದರಿಂದ ಅಲ್ಲೊಂದು ಇಲ್ಲೊಂದು ಕಂಡುಬರುತ್ತವೆ. ಸಿರಾ ತಾಲ್ಲೂಕಿನ ಬುಕ್ಕಪಟ್ಟಣದ ಕಾಡಿನಲ್ಲಿಯೂ ಬಹಳ ಹೇರಳವಾಗಿ ಬೆಳೆಯುತ್ತಿತ್ತು. ಬೇಸಿಗೆಯಲ್ಲಿ ಎಲೆಗಳು ಉದುರುವ ಈ ಮರವು 100 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇಂಡಿಯಾದ ಅತ್ಯುತ್ತಮ ಮರಗಳಲ್ಲಿ ಇದೂ ಒಂದಾಗಿದೆ. ಈ ಮರವು ಮಧ್ಯಪ್ರದೇಶ ಉತ್ತರಪ್ರದೇಶ, ಬಿಹಾರ್‌ಗಳಲ್ಲಿಯೂ ಬೆಳೆಯುತ್ತಿದೆ.

ಸಸ್ಯಶಾಸ್ತ್ರ ವಿಚಾರ : ಈ ಮರವು ಸಿಸಾಲ್ಪಿನೇಸಿ (Caesalpinaceae) ಕುಟುಂಬಕ್ಕೆ ಸೇರಿದೆ. ಸುಮಾರು 120 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರವು 15 ಅಡಿಗಳಿಗಿಂತ ಹೆಚ್ಚು ಸುತ್ತಳತೆಗಳಿಸಬಲ್ಲದು. ಈ ಮರದ ತೊಗಟೆಯು ಕಪ್ಪುಮಿಶ್ರಿತ ಬೂದು ಬಣ್ಣ ಹೊಂದಿದ್ದು ಆಗಾಗ್ಯೆ ತೆಳ್ಳನೆಯ ಹುರುಪುಗಳ ರೂಪ

ದಲ್ಲಿ ಸುಲಿಯುತ್ತಿರುತ್ತದೆ. ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ಎರಡೆರಡು ಬಿಡಿ ಎಲೆಗಳನ್ನು ಹೊಂದಿರುತ್ತವೆ. ಕಾಯಿಗಳು ಉದ್ದವಾಗಿ ಚಪ್ಪಟೆಯಾಗಿರುತ್ತವೆ. ಮೇ ತಿಂಗಳಿನಲ್ಲಿ ಇದರ ಕಾಯಿಗಳು ಉದುರಲು ಪ್ರಾರಂಭಿಸುತ್ತವೆ. ಇದರ ಹೂವುಗಳು ಹಸಿರು ಮಿಶ್ರಿತ ಹಳದಿ ಬಣ್ಣ ಹೊಂದಿದ್ದು ಹೂ ಗೊಂಚಲುಗಳಲ್ಲಿ ಮೂಡುತ್ತವೆ. ಇದರ ಒಳಭಾಗದ ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಕೆಂಪು ನೇರಳೆ ಬಣ್ಣ ವನ್ನು ಹೊಂದಿರುತ್ತದೆ. ಹಸಿಯಾಗಿದ್ದಾಗ ಕತ್ತರಿಸುವುದಕ್ಕಾಗಲೀ ಅಥವಾ ಇನ್ನಾವ ಕೆಲಸ ಮಾಡುವುದಕ್ಕಾಗಲೀ ಮೃದುವಾಗಿರುತ್ತದೆ. ಆದರೆ ಒಣಗಿದ ಮೇಲೆ ಬಹಳ ಗಟ್ಟಿಯಾಗುತ್ತದೆ. ಈ ಮರವು ಒಂದು ಘನ ಅಡಿಗೆ 75 ರಿಂದ 62 ಪೌಂಡುಗಳಷ್ಟು ತೂಕ ಹೊಂದಿರುತ್ತದೆ. (ವೆಲ್ತ್ ಆಫ್ ಇಂಡಿಯಾದಲ್ಲಿ 69 ಪೌಂಡುಗಳೆಂದು ಕೊಟ್ಟಿದೆ) ಒಣಗಿದ ಮೇಲೆ ತೂಕವು ಸ್ವಲ್ಪ ಕಡಿಮೆಯಾಗುತ್ತದೆ. ಈ ಮರಕ್ಕೆ ಚೆನ್ನಾಗಿ ಪಾಲೀಷ್ ತೆಗೆದು ಕೊಳ್ಳಬಲ್ಲದು.

ಉಪಯೋಗಗಳು : ಕಂಬಗಳನ್ನು ಮಾಡಲೂ, ರೈಲ್ವೆ ಸ್ಲೀಪರ್ ಕೋಚು ಗಳನ್ನು ಮಾಡಲೂ, ಸೇತುವೆಗಳಿಗಾಗಿಯು ಹಾಗೂ ಅಲಂಕಾರಿಕ ವಸ್ತುಗಳನ್ನು ತಯಾರಿಸಲೂ ಈ ಮರವನ್ನು ಉಪಯೋಗಿಸುತ್ತಾರೆ. ಮೈಸೂರಿನಲ್ಲಿ ಇದನ್ನು ವಿಶೇಷವಾಗಿ ಮನೆಯ ಮರಮುಟ್ಟುಗಳನ್ನು ತಯಾರಿಸಲೂ, ವ್ಯವಸಾಯದ ಉಪಕ ರಣಗಳನ್ನು ಮಾಡಿಕೊಳ್ಳಲೂ ಉಪಯೋಗಿಸುತ್ತಾರೆ. ಮರದ ತೊಗಟೆಯಿಂದ ಸಿಕ್ಕುವ ನಾರಿನಿಂದ ಹಗ್ಗಗಳನ್ನೂ ಮಾಡುವುದುಂಟು. ಒಳಮರದಿಂದ ಪಡೆದ ಒಂದು ಬಗೆಯ ರಾಳತೈಲವನ್ನು (oleo-resin) ಮೆರುಗೆಣ್ಣೆ (Varnish) ಗಳಿ ಗಾಗಿ ಉಪಯೋಗಿಸುತ್ತಾರೆ. ದನಗಳಿಗೆ ಈ ಮರದ ಸೊಪ್ಪು ವಿಶೇಷ ಪ್ರೀತಿ. ಆದ್ದರಿಂದ ಹಳ್ಳಿಗಳ ಸುತ್ತಮುತ್ತ ಎಲ್ಲಿದ್ದರೂ ರೈತರು ಈ ಮರಗಳನ್ನು ಬೋಳಾಗಿ ನಿಲ್ಲುವಂತೆ ಮಾಡಿರುತ್ತಾರೆ.

ಆಲದಮರ (Ficus bengalensis Linn.)

ಹಿಮಾಲಯದ ಹತ್ತಿರದ ಕಾಡುಗಳೇ ಈ ಆಲದ ಮರದ ತವರು. ಬೃಹತ್ತಾಗಿ ಬೆಳೆದು ಒಳ್ಳೆಯ ನೆರಳನ್ನು ಕೊಡುವ ಈ ವೃಕ್ಷವು ಹಿಂದೂಗಳಿಗೆ ಪವಿತ್ರವಾದದ್ದಾ ಗಿದೆ ರಸ್ತೆಗಳಲ್ಲಿ ಸಾಲ ಮರವಾಗಿ ಬೆಳೆಸಲಾಗುವ ಈ ಮರವು ಬೇಸಿಗೆಯಲ್ಲಿ ತಂಪಾದ ನೆರಳು ಕೊಡಬಲ್ಲುದಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ವೃಕ್ಷವು ಮೋರೇಸಿ (Moraceae) ಕುಟುಂಬಕ್ಕೆ ಸೇರಿದೆ. ಈ ಮರದ ವರ್ಣತಂತುಗಳ ಸಂಖ್ಯೆ $2n = 26$ (Condit 1933) ಈ ಮರದ ಸಣ್ಣ ಹಳದಿ ಮಿಶ್ರಿತ ಕೆಂಪು ವರ್ಣದ ಹಣ್ಣುಗಳನ್ನು ತಿಂದು ಹಕ್ಕಿಗಳು ಜೇರಾವ ಮರದ ಮೇಲಾದರೂ ಬಂದು ಕುಳಿತಾಗ ಬಿದ್ದ ಬೀಜಗಳು

ಅಲ್ಲಿಯೇ ಮೊಳೆತು ಸಣ್ಣ ಸಸಿಗಳಾಗಿ ಬೆಳೆಯುತ್ತವೆ. ಹೀಗೆ ತನ್ನ ಶೈಶವಾವಸ್ಥೆಯಲ್ಲಿ ಬೇರೊಂದು ಮರದ ಮೇಲೆ ಚಿಕ್ಕ ಸಸಿಯಾಗಿ ತನ್ನ ಜೀವನವನ್ನು ಪ್ರಾರಂಭಿಸುವ ಈ ಸಸ್ಯವು ಬಗನಿ ಮರಗಳ ಮೇಲೆ ಕಾಣಬರುತ್ತದೆ. ಮೈಸೂರಿನಲ್ಲಿ ವಿಶೇಷವಾಗಿ ಇದು ಕಂಡು ಬರುತ್ತದೆ. ಇದರ ಬೇರುಗಳು ಕ್ರಮೇಣ ನೆಲವನ್ನು ಮುಟ್ಟಿ ನೀರು, ಲವಣ ದ್ರಾವಣವನ್ನು ಹೀರಲು ಪ್ರಾರಂಭಿಸುವುದೇ ತಡ, ಮೇಲಿನ ಕಾಂಡದ ಭಾಗವು ಬೃಹತ್ತಾಗಿ ಬೆಳೆಯಲು ಪ್ರಾರಂಭಿಸುತ್ತದೆ. ಕೆಲವು ವರ್ಷಗಳಲ್ಲೇ ಆಲದ ಮರ ಬಹಳ ಬೇಗನೆ ಬೆಳೆದು ಈ ಆಲದ ಮರದೊಳಗೆ ಒಂದು ಬಗನಿ ಮರವು ಬೆಳೆದುಕೊಂಡಿರುವಂತೆ ಕಾಣುತ್ತದೆ. ಆಶ್ರಯದಾತನನ್ನೇ ಸುತ್ತುವರಿದು ಕ್ರಮೇಣ ತನ್ನ ಬಿಳಿಲುಗಳನ್ನುನೆಲಕ್ಕೆಊರಿ ತನ್ನದೇ ಆದ ರೀತಿಯಲ್ಲಿ ಗಾತ್ರದಲ್ಲಿ ಹಿಗ್ಗುವ ಈ ಮರದ ಹಿಗ್ಗುವಿಕೆಗೆ ಎಣೆಯಿಲ್ಲ. ಕಲ್ಕತ್ತೆಯ ಸಿಬ್‌ಪುರದಲ್ಲಿರುವ ಸಸ್ಯ ತೋಟದಲ್ಲಿ 1782 ರಲ್ಲಿ ನೆಲಕ್ಕೆ ಹಾಕಿಸಿದ ಆಲದ ಮರದ ಅಳತೆಯು 1965ರಲ್ಲಿ ಈ ರೀತಿಯಿತ್ತು : ಸುತ್ತಳತೆ 416 ಮೀಟರ್; ಬಿಳಿಲು ಕಂಬಗಳಿಂದಾದ ಬುಡಗಳು 1044. ಇದಕ್ಕಿಂತ ದೊಡ್ಡದಾದ ವೃಕ್ಷವು ಮಹಾರಾಷ್ಟ್ರದ ಸತಾರದ ಹತ್ತಿರವಿತ್ತು.

ಕೆಲವು ವೇಳೆ ಪಕ್ಷಿಗಳ ಮೂಲಕ ಮನೆಯ ಗೋಡೆಗಳ ಮೇಲೆ ಅಥವಾ ಪುರಾತನ ಭವನಗಳ ಮೇಲೆ, ದೇವಾಲಯಗಳ ಮೇಲೆ ಆಲದ ಬೀಜಗಳು ಬಿದ್ದು ಆಗುತ್ತಿರುವ ಅನಾಹುತಗಳು ಮತ್ತು ನಷ್ಟಗಳು ಅಸದಳವಾಗಿದೆ. ಬೊಂಬಾಯಿಯ ಹತ್ತಿರ ಈಗ ಇರುವ ಕೆಲವು ಚಾರಿತ್ರಿಕ ಕೋಟೆಗಳಂತೂ ಹಾಳಾಗುತ್ತಿವೆ. ಅದ್ಭುತ ಶಕ್ತಿಯಿರುವ, ಗಾತ್ರದಲ್ಲಿ ಹಿಗ್ಗುವ ಇವುಗಳ ಬೇರುಗಳು ಕೋಟೆಯ ಗೋಡೆಗಳನ್ನೆಲ್ಲಾ ಛಿದ್ರ ಛಿದ್ರಗಳಾಗಿ ಮಾಡಿವೆ. ಶ್ರೀರಂಗಪಟ್ಟಣದ ಕೋಟೆಗೂ ಇದೇ ಗತಿ ಬರುತ್ತಿದೆ. ಅರಣ್ಯಗಳಲ್ಲಂತೂ ಇವುಗಳ ನಿರ್ಮೂಲನ ಅತ್ಯಗತ್ಯವಾಗಿದೆ: ಈ ಮರಗಳಿರುವಲ್ಲಿ ಬೇರೆ ವೃಕ್ಷಗಳು ಚೆನ್ನಾಗಿ ಬೆಳೆಯಲು ಅವಕಾಶವಾಗುವುದಿಲ್ಲ.

ಉಪಯೋಗಗಳು : ಇದರಿಂದ ಆಗುವ ಮರದಲ್ಲಿ ಅಷ್ಟೇನೂ ಒಳ್ಳೆಯ ಗುಣವಿಲ್ಲದಿದ್ದರೂ ಇದನ್ನು ನೀರಿನಲ್ಲಿ ಕೆಲವು ದಿನ ಮುಳುಗಿಸಿದ್ದು ಅನಂತರ ಹಲಗೆಗಳನ್ನು ಪಡೆಯಲು ಉಪಯೋಗಿಸುತ್ತಾರೆ. ಒಂದು ಘನ ಅಡಿಗೆ ಸುಮಾರು 37 ಪೌಂಡು ತೂಕವಿರುತ್ತದೆ. ಮಲೆನಾಡಿನಲ್ಲಿ ಈ ಮರದ ದಪ್ಪಬಿಳಿಲುಗಳಿಂದ ನೊಗಗಳನ್ನು ಮಾಡಿ ಕೊಳ್ಳುತ್ತಾರೆ. ವರ್ಷಕ್ಕೊಂದು ಬಾರಿ ಉದುರುವ ಎಲೆಗಳಿಂದ ಒಳ್ಳೆಯ ಗೊಬ್ಬರವಾಗುತ್ತದೆ. ಹಸಿ ಎಲೆಗಳನ್ನು ಸೇರಿಸಿ ಊಟದ ಎಲೆಗಳನ್ನು ತಯಾರಿಸುವುದುಂಟು. ಮರದ ಹಾಲನ್ನು ಹುಣ್ಣುಗಳಿಗೆ ಲೇಪಿಸಲು ಉಪಯೋಗಿಸುತ್ತಾರೆ.

ಆವಕ್ (ಹಾಲಿಪ್ಪೆ, ಕರ್ಪೂರ) (Ehretia laevis Roxb.)


ಇಂಡಿಯಾದ ಎಲ್ಲಾ ಕಡೆಗಳಲ್ಲೂ ಬೇಸಿಗೆಯಲ್ಲಿ ಎಲೆಗಳುದುರುವ ಕಾಡುಗಳಲ್ಲಿ ಈ ಮರವು ಸಮುದ್ರ ಮಟ್ಟಕ್ಕೆ 3000 ಅಡಿಗಳಷ್ಟು ಎತ್ತರದ ವರೆಗೂ ಬೆಳೆಯುತ್ತದೆ

ಸಸ್ಯಶಾಸ್ತ್ರ ವಿವರಣೆ: ಈ ಮರವು ಹಿಂದೆ ಬೊರಾಜಿನೇಸಿ (Boraginaceae) ಕುಟುಂಬದಲ್ಲಿತ್ತು. ಈಗ ಇದನ್ನು ಎರ್ಹಿಷಿಯೇಸಿ (Ehretiaceae) ಕುಟುಂಬಕ್ಕೆ ಸೇರಿಸಲಾಗಿದೆ. ಈ ಮರವು 40 ಅಡಿಗಳಷ್ಟು ಎತ್ತರಕ್ಕೆ ಬೆಳೆದು ಸುಮಾರು ನಾಲ್ಕು ಅಡಿಗಳಷ್ಟು ಸುತ್ತಳತೆಯನ್ನು ಗಳಿಸಿಕೊಳ್ಳಬಲ್ಲದು. ದುಂಡಗಿನ ಸ್ವಲ್ಪ ಅಂಡಾಕೃತಿಯ ಎಲೆಗಳನ್ನೂ, ಬಿಳಿಗಿರುವ ಹೂವುಗಳನ್ನೂ, ಕಿತ್ತಲೆ ಬಣ್ಣದ ಸಣ್ಣ ಹಣ್ಣುಗಳನ್ನೂ ಹೊಂದಿರುತ್ತದೆ. ಇದರ ಮರವು ಘನ ಅಡಿಗೆ 39 ಪೌಂಡುಗಳಷ್ಟು ತೂಕಹೊಂದಿದ್ದು ಹಳದಿ ಇಲ್ಲವೇ ಕಂದು ಮಿಶ್ರ ಬೂದು ಬಣ್ಣವನ್ನು ಹೊಂದಿರುತ್ತದೆ.

ಉಪಯೋಗಗಳು : ಕ್ಷಾಮ ಕಾಲದಲ್ಲಿ ಈ ಮರದ ಹಣ್ಣುಗಳನ್ನು ತಿನ್ನಲಾಗುತ್ತದೆ. ದನಗಳಿಗಂತೂ ಈ ಮರದ ಎಲೆಗಳೆಂದರೆ ತುಂಬಾ ಪ್ರೀತಿ. ಮರವು ಗಟ್ಟಿಯಾಗಿಲ್ಲದಿದ್ದರೂ ವ್ಯವಸಾಯದ ಉಪಕರಣಗಳನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ಬೆಂಕಿ ಪೆಟ್ಟಿಗೆಗಳನ್ನು ಮಾಡಲು ಈ ಮರ ಒಳ್ಳೆಯದು.

ಆಶ (ಕಂಡಸೋಲ, ಊರ್ವಶಿ, ಹೂವರಾಶಿ) (Thespesia populenea (L) Soland. Ex. Corr.)

ಪಶ್ಚಿಮ ಕರಾವಳಿಯಲ್ಲಿ, ಬಂಗಾಳದಲ್ಲಿ ಮತ್ತು ಅಂಡಮಾನ್‌ನಲ್ಲಿ ಹೆಚ್ಚಾಗಿ ಬೆಳೆಯುವ ಈ ಮರವು ಮೈಸೂರಿನಲ್ಲೂ ಹೇರಳವಾಗಿ ಬೆಳೆಯುತ್ತಿದೆ. ಮನೋಹರ ಸೌಂದರ್ಯವುಳ್ಳ ಈ ವೃಕ್ಷವನ್ನು ಮೈಸೂರಿನ ಎಲ್ಲ ಜಿಲ್ಲೆಗಳಲ್ಲೂ ಬೆಳೆಸಲಾಗುತ್ತಿದೆ. ಮರಳುಮಿಶ್ರಿತ ಭೂಮಿಯಲ್ಲಿ ಬಹಳ ಚೆನ್ನಾಗಿ ಬೆಳೆಯುವ ಈ ಮರವನ್ನು ರಸ್ತೆಯ ಇಕ್ಕೆಲಗಳಲ್ಲೂ ಸಾಲುಮರವನ್ನಾಗಿ ಬೆಳೆಸುವ ಅಭ್ಯಾಸವೂ ಉಂಟು.



ಸಸ್ಯಶಾಸ್ತ್ರ ವಿವರಣೆ : ಈ ಮರವು ಮಾಲ್ವೇಸಿ (Malvaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=26 (Youngman 1931) 30-35 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರದ ಹೊಳಪುಳ್ಳ ಹೃದಯಾಕಾರದ ಎಲೆಗಳು ಹಳದಿಬಣ್ಣದ ದೊಡ್ಡ ಆಕರ್ಷಕ ಹೂವುಗಳ ಹಿನ್ನೆಲೆಯಲ್ಲಿ ಬಹಳ ಸುಂದರವಾಗಿ ಕಾಣುತ್ತವೆ. ಮರದ ಕಾಯಿಯು ಬಹಳ ಕಾಲದವರೆಗೆ ಮರಕ್ಕೆ ಅಂಟಿಕೊಂಡೇ ಇರುತ್ತದೆ. ವನಮಹೋತ್ಸವಕ್ಕೆ ಹಾಗೂ ಸಾಲು ಮರಗಳಾಗಿ ಬೆಳೆಸಲು ಈ ಮರವು ಉತ್ಕೃಷ್ಟವಾಗಿದೆ. ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು:— ಮರವು ಗಟ್ಟಿಯಾಗಿದ್ದು ಸುಂದರ ಎಳೆಗಳಿಂದ ಕೂಡಿರುತ್ತದೆ. ದೋಣಿಕಟ್ಟಲು, ಬಂದೂಕದ ಹಿಡಿಗಳನ್ನು ತಯಾರಿಸಲು, ಗಾಡಿಗಳ ಚಕ್ರಗಳನ್ನು ತಯಾರಿಸಲು ಇದನ್ನು ಉಪಯೋಗಿಸುತ್ತಾರೆ. ತೊಗಟೆಯಿಂದ ಒಳ್ಳೆಯ ನಾರು ಸಿಕ್ಕುತ್ತದೆ. ಹಿಂದೆ ಕಾಯಿಗಳು ಹಾಗೂ ಹೂವುಗಳಿಂದ ಒಂದು ಬಗೆಯ ಹಳದಿ ಬಣ್ಣವನ್ನು ಪಡೆಯುತ್ತಿದ್ದರು. ಮರದ ತೊಗಟೆಯಿಂದ ಒಳ್ಳೆಯ ಗಟ್ಟಿಯಾದ ನಾರು ಸಿಕ್ಕುತ್ತದೆ. ಆದ್ದರಿಂದ ಹಗ್ಗ ಮಾಡಲು ಈ ನಾರನ್ನು ಉಪಯೋಗಿಸುತ್ತಾರೆ. ಬೀಜಗಳಿಂದ ತೆಗೆದ ಎಣ್ಣೆಯನ್ನು ದೀಪಗಳಿಗೆ ಹಾಕಿ ಉಪಯೋಗಿಸಬಹುದು.

ಅಂಕೋಲೆ (ಅಂಕಾಲಿಗೆ) Alangium salvifolium (Linn f.) wang (Syn Alangium lamarckii Thw.)

ಅಂಕೋಲೆ ವರ್ಷಂಪ್ರತಿ ಎಲೆಗಳುದುರುವ ಒಂದು ಸಣ್ಣ ಮರ. ಇದು ಪೊದೆಯಂತಿರುವುದೇ ಹೆಚ್ಚು. ಆದ್ದರಿಂದ ಮೈಸೂರು ರಾಜ್ಯದಲ್ಲಿ ಕೆಲವೆಡೆ ಬೇಲಿಯ ಪಕ್ಕದಲ್ಲಿ ಉದ್ದಕ್ಕೂ ಇದನ್ನು ನೆಟ್ಟಿರುತ್ತಾರೆ. ಈ ಮರದ ವಿಷಯವಾಗಿ ಮಲೆನಾಡಿನ ಕೆಲವೆಡೆಗಳಲ್ಲಿ ಹಲವು ಮೂಢನಂಬಿಕೆಗಳು ಇಂದಿಗೂ ಇವೆ. ತಿಥಿ ಪೂರ್ಣಿಮೆಯಾಗಿದ್ದು, ವಾರ ಭಾನುವಾರವಾಗಿದ್ದು, ಮಧ್ಯರಾತ್ರಿಯಲ್ಲಿ ಈ ಮರವನ್ನು ಕಡಿದು ಮನೆಗೆ ತಂದರೆ ಮನೆಯಲ್ಲೇನಾದರೂ ಭೂತ ಸಂಚಾರವಿದ್ದರೆ ಆ ಭೂತಗಳೆಲ್ಲಾ ಓಡಿ ಹೋಗುತ್ತವೆಂದು ಹೇಳುತ್ತಾರೆ. ಬೆಂಗಳೂರು, ಸಾವನದುರ್ಗ, ರಾಮನಗರಗಳಲ್ಲೆಲಾ ಈ ಮರವು ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ :— ಈ ಮರವು ಕಾರ್ನೇಸಿ (Cornaceae) ಕುಟುಂಬಕ್ಕೆ ಸೇರಿದೆ. ಬೀಜಗಳಿಂದಲಾಗಲೀ, ರೆಂಬೆಗಳಿಂದಲಾಗಲೀ, ಈ ಮರವನ್ನು ಸುಲಭವಾಗಿ ಬೆಳೆಸಬಹುದು. ಆದರೆ ಇದರ ಬೆಳವಣಿಗೆ ಬಹಳ ನಿಧಾನ. ಇದರ ವರ್ಣತಂತುಗಳ ಸಂಖ್ಯೆ 2n=16 (Gopinath 1945). 30–35 ಅಡಿ

ಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ತೆಳ್ಳಗಿರುವ ತೊಗಟೆಯು ಆಗಾಗ್ಗೆ ಉದುರಿ ಹೋಗುತ್ತಿರುತ್ತದೆ. ಇದರ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ಸ್ವಲ್ಪ ಒರಟಾಗಿರುತ್ತವೆ. ತುಪ್ಪಳ ಹೊಂದಿರುವ ಈ ಎಲೆಗಳ ಮೇಲುಭಾಗ ಹಸಿರಾಗಿದ್ದು ಕೆಳಭಾಗ ಸ್ವಲ್ಪ ಬೂದು ಬಣ್ಣವಾಗಿರುತ್ತದೆ. ಎಲೆಗಳು 5 ಅಂಗುಲದಷ್ಟು ಉದ್ದವಿದ್ದು $1\frac{1}{2}$ ಯಿಂದ $2\frac{1}{2}$ ಇಂಚಿನಷ್ಟು ಅಗಲವಾಗಿರುತ್ತವೆ. ಇದರ ಹೂವುಗಳು ಹಳದಿ ಮಿಶ್ರವಾದ ಹಸಿರು ಬಣ್ಣ ಹೊಂದಿದ್ದು ಸುವಾಸನಾಭರಿತವಾಗಿರುತ್ತವೆ. ಇದರ ಪುಷ್ಪದಳಗಳು ಆರಿದ್ದರೂ ಕೇಸರಗಳು ಮಾತ್ರ 30-40 ರಷ್ಟು ಇರುತ್ತವೆ. ಇದರ ಕಾಯಿಯು ಮೊದಲು ಹಸಿರಾಗಿದ್ದು ಮಾಗಿದಮೇಲೆ ಕೆಂಪು ಆಗುತ್ತದೆ.

ಉಪಯೋಗಗಳು : ಕಾಡು ಪ್ರದೇಶಗಳಲ್ಲಿ ಸೌದೆಗಾಗಿ ಉಪಯೋಗಿಸುತ್ತಾರೆ. ಈ ಮರ ಒಳಗೆ ಒತ್ತಾದ ಎಳೆಗಳನ್ನು ಹೊಂದಿದ್ದು ಹೊರಭಾಗದಲ್ಲಿ ಸ್ವಲ್ಪ ಹಳದಿ ವರ್ಣ ಹೊಂದಿದ್ದು ಒಳಗೆ ಕಂದುಮಿಶ್ರಿತವಾದ ಕಪ್ಪುಬಣ್ಣ ಹೊಂದಿರುತ್ತದೆ. ತೂಕವು ಘನ ಅಡಿಗೆ 42 ರಿಂದ 56 ಪೌಂಡುಗಳಷ್ಟಿರುತ್ತದೆ. ಒನಕೆಗಳನ್ನು ಮಾಡಲೂ, ಮರದ ಘಂಟೆಗಳನ್ನು ಮಾಡಲೂ ಇದನ್ನು ಉಪಯೋಗಿಸುತ್ತಾರೆ. ಹುಳಿಯಾದ ರುಚಿಯನ್ನು ಹೊಂದಿರುವ ಈ ಮರದ ಹಣ್ಣುಗಳನ್ನು ತಿನ್ನುತ್ತಾರೆ ಈ ಮರದ ಎಲ್ಲಾ ಭಾಗಗಳನ್ನೂ ಔಷಧದಲ್ಲಿ ಉಪಯೋಗಿಸುತ್ತಾರೆ.

ಅಂಟುವಾಳ (**ಅರ್ತಳ, ಕುಗತಿ.**) (Sapindus laurifolius vahl.)
(Syn. S. trifoliatus Hiern, S. emarginatus vahl.)

ಇಂಡಿಯಾದ ಸೋಪು ಮರವೆಂದು ಕರೆಸಿಕೊಳ್ಳುವ ಈ ಅಂಟುವಾಳದ ಮರವನ್ನು ಹಳ್ಳಿಗಳ ಹತ್ತಿರ ಹೊಲದ ಬದು ಮತ್ತಿತರ ಕಡೆಗಳಲ್ಲಿ ಬೆಳೆಸಲಾಗುತ್ತದೆ. 30-35 ಅಡಿಗಳ ಎತ್ತರಕ್ಕೆ ಬೆಳೆಯುವ ಈ ವೃಕ್ಷವು ಅಷ್ಟೇನೂ ದೊಡ್ಡ ಮರವಲ್ಲ. ಇದು ಸಾವನದುರ್ಗ, ಬೆಂಗಳೂರು, ಮೈಸೂರು ಇಲ್ಲೆಲ್ಲಾ ಸಾಮಾನ್ಯವಾಗಿ ಕಂಡು ಬರುತ್ತದೆ.

ಸಸ್ಯಶಾಸ್ತ್ರ ವಿಚಾರ : ಈ ಮರವು ಸಪಿಂಡೇಸಿ (Sapindaceae) ಎಂಬ ಕುಟುಂಬಕ್ಕೆ ಸೇರಿದೆ. ಮಾರ್ಚಿ, ಏಪ್ರಿಲ್ ತಿಂಗಳುಗಳಲ್ಲಿ ಸಂಪೂರ್ಣ ಪರ್ಣ ರಹಿತವಾಗಿರುವ ಈ ಮರವು ಅಕ್ಟೋಬರ್ ತಿಂಗಳಿನಲ್ಲಿ ಹೂ ಬಿಟ್ಟು ಫೆಬ್ರುವರಿಯಲ್ಲಿ ಮಾಗಿದ ಹಣ್ಣುಗಳನ್ನು ಬಿಡುತ್ತದೆ. ಇದರ ಬೀಜಗಳು ಕಪ್ಪಗಿದ್ದು ಗಟ್ಟಿಯಾಗಿರುತ್ತವೆ. ಬೀಜಗಳಿಂದಲೇ ಗಿಡಗಳನ್ನು ಸುಲಭವಾಗಿ ಪಡೆಯಬಹುದು.

ಉಪಯೋಗಗಳು : ಬಡವರು ತಮ್ಮ ಬಟ್ಟೆಗಳನ್ನು ಶುಭ್ರಗೊಳಿಸಲು ಈ ಅಂಟುವಾಳದ ಕಾಯಿಗಳನ್ನು ಉಪಯೋಗಿಸುತ್ತಾರೆ. ಇತ್ತೀಚೆಗೆ ಉಲ್ಲನ್ ಬಟ್ಟೆಗ

ಳನ್ನು ತೊಳೆಯಲೂ ಇದನ್ನೇ ಉಪಯೋಗಿಸುತ್ತಾರೆ. ಮರವು ಗಟ್ಟಿಯಾಗಿರುತ್ತದೆ. ಅಡ್ಡ ಎಳೆಗಳಿರುವ ಹಳದಿ ಬಣ್ಣದ ಈ ಮರವು ಅಷ್ಟೇನೂ ಬಾಳಿಕೆ ಬರುವುದಿಲ್ಲ. ಆದರೂ ಗಾಡಿ ಕಟ್ಟಲೂ ಕೊಡಲಿ ಕಾವುಗಳನ್ನು ತಯಾರಿಸಲೂ, ಬಾಚಣಿಗೆಗಳನ್ನು ಮಾಡಲೂ ಉಪಯೋಗಿಸುತ್ತಾರೆ.

ಬೇರು, ತೊಗಟೆ, ಕಾಯಿ ಮತ್ತು ಎಣ್ಣೆಗಳನ್ನು ಔಷಧಿಗಳಲ್ಲಿ ಉಪಯೋಗಿಸುತ್ತಾರೆ.

ಇಜಿಮರ (ನರವೆ, ನರವಲು) Premna Tomentosa Willd.

ಮೈಸೂರು ಮತ್ತು ಕೊಡಗಿನ ಅರಣ್ಯಗಳಲ್ಲಿ ಕಂಡುಬರುವ ಈ ಸಣ್ಣ ಮರವು ಒಂದೊಂದು ಸಾರಿ 40-50 ಅಡಿಗಳಷ್ಟು ಎತ್ತರಕ್ಕೂ ಬೆಳೆಯಬಲ್ಲದು. ನಂದೀ ದುರ್ಗದಲ್ಲಂತೂ ಹೇರಳವಾಗಿ ಬೆಳೆಯುತ್ತದೆ. ದೇವನದುರ್ಗ, ರಾಮನಗರಂ ಇವುಗಳ ಮೈದಾನದ ಪ್ರದೇಶದಲ್ಲಿ ಇವು ಸಣ್ಣ ಪೊದೆಯಂತಿವೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ವರ್ಬಿನೇಸಿ (Verbenaceae) ಎಂಬ ಕುಟುಂಬಕ್ಕೆ ಸೇರಿದೆ. ಈ ಮರದ ಎಲೆಗಳು ಒಂದು ವಿಧದ ಸುವಾಸನೆಯಿಂದ ಕೂಡಿರುತ್ತವೆ. ಒಳಭಾಗದ ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಒಳ್ಳೆಯ ಮೆರುಗು (Polish) ತೆಗೆದುಕೊಳ್ಳುವ ಗುಣವನ್ನು ಹೊಂದಿದೆ. ಈ ಮರದ ಬೀಜಗಳು ಸುಲಭ ಕ್ರಮಗಳಿಂದ ಮೊಳೆಯುವುದಿಲ್ಲವಾದ್ದರಿಂದ ಇದರ ರೆಂಬೆಗಳನ್ನು ಕತ್ತರಿಸಿ ನೆಡುವ ರೂಢಿ ಇದೆ. ಇದರ ಎಲೆಗಳು ಸ್ವಲ್ಪ ಹಳದಿ ಮಿಶ್ರಿತ ಕಂದು ಬಣ್ಣವನ್ನು ಹೊಂದಿದ್ದು ಅಭಿಮುಖ ಜೋಡಣೆ ಹೊಂದಿರುತ್ತವೆ. ಎಲೆಯ ಕೆಳ ಭಾಗವು ಹೃದಯಾಕಾರವನ್ನು ಹೊಂದಿದ್ದು, ಚೂಪಾದ ತುದಿಯನ್ನು ಹೊಂದಿರುತ್ತದೆ. ಎಲೆಗಳ ಉದ್ದ ಅಗಲಗಳು 10″ × 9″. ಈ ಮರವು ಹೂ, ಕಾಯಿಗಳನ್ನು ಬಿಡುವ ಕಾಲ ಮಾರ್ಚಿಯಿಂದ ಮೇ. ಇದರ ಕಾಯಿಯು ಸ್ವಲ್ಪ ದುಂಡಗಿದ್ದು ಸುಮಾರು 4 ಬೀಜಗಳನ್ನು ಹೊಂದಿರುತ್ತದೆ.

ಉಪಯೋಗಗಳು : ಬುಡುಬುಡಿಕೆಯವರು ಈ ಮರದ ಎಲೆಗಳನ್ನು ಸಾರಿಗೆ ಹಾಕುತ್ತಾರೆ. ಎಲೆಗಳು ಸುವಾಸನಾಭರಿತವಾಗಿರುವುದರಿಂದ ಆಹಾರ ಪದಾರ್ಥಗಳನ್ನು ಎಲೆಗಳ ಮೇಲಿಟ್ಟು ಅತಿಥಿಗಳಿಗೆ ಕೊಡುವ ಅಭ್ಯಾಸವೂ ಉಂಟು. ಬಾಚಣಿಗೆಗಳನ್ನು ತಯಾರಿಸಲು ಈ ಮರವನ್ನು ಉಪಯೋಗಿಸುತ್ತಾರೆ.

ಈಚಲ ಮರ (Phoenix sylvestris Roxb.)

ಮೈಸೂರಿನ ಹೆಂಡದ ಮರವಾದ ಈ ಈಚಲು ಮರವನ್ನು ಕಾಡು ಖರ್ಜೂರದ ಮರವೆಂದೂ ಕರೆಯುತ್ತಾರೆ. 1894 ರಲ್ಲೇ ಈ ಈಚಲು ಮರಗಳು ಮೈಸೂರು

ಸಂಸ್ಥಾನದ 30,000 ಎಕರೆಗಳಲ್ಲಿ ಬೆಳೆಯುತ್ತಿದ್ದವು. ಮೈಸೂರಿನಲ್ಲಂತೂ ಫಲವತ್ತಾದ ಎಲ್ಲಾ ಭೂಮಿಗಳಲ್ಲೂ ಈ ಈಚಲು ಮರವು ಬೆಳೆಯುವುದರಿಂದ ಜನಸಾಮಾನ್ಯರಲ್ಲಿ ಈಚಲು ಮರ ಎಲ್ಲೆಲ್ಲಿ ಬೆಳೆಯುವುದೊ ಅಲ್ಲೆಲ್ಲಾ ಭೂಮಿ ಫಲವತ್ತಾಗಿರುತ್ತದೆ ಎಂಬ ನಂಬಿಕೆ ಇದೆ.

ಸಸ್ಯಶಾಸ್ತ್ರ ವಿವರಣೆ : ಈಚಲು ಮರವು ಪಾಮೇ (Arecaceae or Palmae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=36 (Bowden 1945 b.) ಕವಲೊಡೆಯುವ ಈ ಮರದ ಎತ್ತರವು ಚೆನ್ನಾಗಿ ಬೆಳೆದಲ್ಲಿ 30-40 ಅಡಿಗಳಷ್ಟಿರುತ್ತದೆ. ಮರದ ತುದಿಯಲ್ಲಿ ಸಂಯುಕ್ತ ಪರ್ಣಗಳಿಂದೊಡಗೂಡಿದ ಎಲೆಗಳ ಕಿರೀಟ ಸುಂದರವಾಗಿರುತ್ತದೆ. ಗಟ್ಟಿಯಾದ ಎಲೆಗಳ ತಳಭಾಗಗಳು ಹಾಗೆಯೇ ಉಳಿದುಕೊಳ್ಳುತ್ತದೆ. ತುಪ್ಪಳ ರಹಿತವಾದ ಪ್ರತಿ ಎಲೆಯ ಉದ್ದವು ಹತ್ತರಿಂದ ಹದಿನೈದು ಅಡಿಗಳಷ್ಟಿರುತ್ತದೆ. ಹೂಗಳು ಭಿನ್ನ ಲಿಂಗಿಗಳಾಗಿರುತ್ತವೆ (Dioecious). ನೆಲ್ಲು ಹುಲ್ಲಿನ ಬಣ್ಣದ ಹೂವುಗಳಲ್ಲಿ ಗಂಡು ಹೂವುಗಳು ಸ್ವಲ್ಪ ಕಾಲದಲ್ಲಿಯೇ ಉದುರಿ ಹೋಗುತ್ತವೆ. ಹಣ್ಣುಗಳು ಕಿತ್ತಳೆ ಹಳದಿ ಬಣ್ಣವನ್ನು ಹೊಂದಿರುತ್ತವೆ. ಬೀಜಗಳಿಂದ ಸುಲಭವಾಗಿ ಈ ಮರಗಳನ್ನು ಬೆಳಸಬಹುದು.

ಉಪಯೋಗಗಳು : ಹಣ್ಣುಗಳನ್ನು ತಿನ್ನುತ್ತಾರೆ. ಈಚಲು ಗರಿಗಳಿಂದ ಚಾಪೆಗಳನ್ನು ಹೆಣೆಯುತ್ತಾರೆ. ಹಳ್ಳಿಗಳಲ್ಲಿ ಈಚಲು ಮರವನ್ನು ದನದ ಕೊಟ್ಟಿಗೆಗಳಿಗೆ ತೊಲೆಗಳಿಗಾಗಿಯೂ, ಕಂಬಗಳಿಗಾಗಿಯೂ ಉಪಯೋಗಿಸುತ್ತಾರೆ. ಹೆಂಡ ನೀರಾಗಳಿಗಾಗಿ ಈ ಮರಗಳನ್ನು ಚೆನ್ನಾಗಿ ಬಳಸಬಹುದು. ವರ್ಷವೆಲ್ಲಾ ಮರಗಳಿಗೆ ಗಡಿಗೆಯನ್ನು ಕಟ್ಟುವುದರಿಂದ ಈ ಮರದ ವಂಶವೇ ನಾಶವಾಗುವ ಪರಿಸ್ಥಿತಿಯು ಬರುತ್ತದೆ. ಆದ್ದರಿಂದ ವಾತಾವರಣವು ಸ್ವಲ್ಪ ತಣ್ಣಗಿರುವ ಡಿಸೆಂಬರ್ ಮತ್ತು ಜನವರಿ, ಫೆಬ್ರುವರಿ ತಿಂಗಳುಗಳಲ್ಲಿ ಉಪಯೋಗಿಸಿಕೊಳ್ಳುವುದು ಒಳ್ಳೆಯದು. ಮಲೆನಾಡಿನ ಈಡಿಗರು ಈ ಕಲೆಯಲ್ಲಿ ನಿಷ್ಣಾತರಾಗಿದ್ದಾರೆ. ಅವರು ಮರಹತ್ತಿ ತುದಿಯಲ್ಲಿ ತ್ರಿಕೋಣಾಕಾರದ ಗಾಯಮಾಡಿ ಮಡಿಕೆ ಕಟ್ಟಿ ಬರುತ್ತಾರೆ. ಇದರೊಳಕ್ಕೆ ಸುರಿದು ಬರುವ ಸ್ವಲ್ಪ ಹುಳಿ ಬಂದಿರುವ (Fermented) ರಸವೇ ಹೆಂಡ. ಸ್ವಲ್ಪ ಹುಳಿ ವಾಸನೆ ಬರುತ್ತಿರುವ ಆದರೂ ಕೊಂಚ ಸಿಹಿಯಾಗಿರುವ ಈ ಹೆಂಡವನ್ನು ಹಳ್ಳಿಗಳಲ್ಲಿ ಕೆಲವರು ವಿಶೇಷವಾಗಿ ಕುಡಿಯುತ್ತಾರೆ.

ಆದರೆ ಕೆಲವೆಡೆಗಳಲ್ಲಿ ಸುಸಂಸ್ಕೃತರು ಈ ರಸವನ್ನೇ ಕುದಿಸಿ ಬೆಲ್ಲ ಮಾಡುವ ಪದ್ಧತಿ ಇಟ್ಟುಕೊಂಡಿದ್ದಾರೆ. ಈ ಮರದ ಹೂಗೊಂಚಲ ಕೆಳಭಾಗದಿಂದ ಒಳ್ಳೆಯ ಕುಂಚಗಳನ್ನು ಮಾಡುತ್ತಾರೆ.

ಊಬ (ಉದ್ದಿ, ಉಡಿ) (Dolichandrone falcata Seem)

ಸಮುದ್ರ ಮಟ್ಟಕ್ಕೆ ಅತಿ ಎತ್ತರ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುವ, ಕಾಲ ಕಾಲಕ್ಕೆ ಎಲೆಗಳುದುರುವ ಈ ಮರವು ಪಶ್ಚಿಮಘಟ್ಟಗಳ ಪೂರ್ವಾರಣ್ಯಗಳಲ್ಲೆಲ್ಲ ಕಂಡುಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಫೆಬ್ರುವರಿ, ಮಾರ್ಚಿ ತಿಂಗಳುಗಳಲ್ಲಿ ಹೂ ಬಿಡುವ ಈ ಮರವು ಜೂಲೈ ಹೊತ್ತಿಗೆ ಫಲಭರಿತವಾಗುತ್ತದೆ. ಒಣಹವೆಯಲ್ಲೂ ಈ ಮರ ಚೆನ್ನಾಗಿ ಬೆಳೆಯಬಲ್ಲದು.

ಉಪಯೋಗಗಳು : ಒರಟಾದ ಒಂದು ಬಗೆಯ ನಾರನ್ನು ಈ ಮರದ ಒಳತೊಗಟೆಯಿಂದ ಪಡೆಯಲಾಗುತ್ತದೆ. ಹಳ್ಳಿಗಳಲ್ಲಿ ಮನೆಯ ಮರ ಮುಟ್ಟುಗಳಿಗಾಗಿ ಈ ಮರವನ್ನು ಉಪಯೋಗಿಸುತ್ತಾರೆ. ಈ ಮರದ ಕೆಲವುಭಾಗಗಳನ್ನು ಗರ್ಭಪಾತಕ್ಕೆ ಕೊಡಲಾಗುವುದೆಂದು ಫಾರ್ಮಕೋಗ್ರಾಫಿಯಾ ಇಂಡಿಕಾ (Pharmacographia Indica) ದಲ್ಲಿ ಹೇಳಿದ್ದಾರೆ. ಇದು ಇದರ ಕಾಯಿನಿಂದಲೇ ಇರಬೇಕು. ಮೀನನ್ನು ಕೊಲ್ಲುವ ವಿಷ ತೊಗಟೆಯಿಂದ ಬರಬಹುದೆಂಬ ಪ್ರತೀತಿಯಿದೆ.

ಊದಾತಳ್ಳಿ (ಲಿಂಬತೊಳೀ, ಹುಲಿಸೊಪ್ಪು, ಅಂಬತ್ತೋಳಿ) Memecylon edule Roxb. (Syn M. tinctorium Koenig.)

ಹಾಸನ, ಕ್ಲೋಸ್‌ಪೇಟೆ ಮುಂತಾದ ಕಡೆಗಳಲ್ಲಿ ಬೆಳೆಯುವ ಈ ಮರವು ಬಹಳ ಸಣ್ಣ ಮರವಾಗಿರುತ್ತದೆ.

ಫ್ಲೋರ ಆಫ್ ಬ್ರಿಟಿಷ್ ಇಂಡಿಯದಲ್ಲಿ ಈ ಮರದಲ್ಲಿ 12 ವೆರೈಟಿ (Variety) ಗಳಿವೆ ಎಂದು ತಿಳಿಸಿದ್ದಾರೆ. ಒರಿಸ್ಸಾ, ಅಸ್ಸಾಂಗಳಲ್ಲೂ ಈ ಮರ ಚೆನ್ನಾಗಿ ಬೆಳೆಯುತ್ತದೆ. ಬೆಂಗಳೂರು, ಬನ್ನೆರು ಘಟ್ಟಗಳಲ್ಲೂ ಈ ಮರ ಕಂಡುಬರುತ್ತದೆ. ಸುಮಾರು 15-20 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಸಣ್ಣ ಮರದ ತೊಗಟೆಯು ಒರಟಾಗಿದ್ದು ಬೂದು ಬಣ್ಣ ಹೊಂದಿರುತ್ತದೆ. ಇದರ ಎಲೆಗಳು ಅಭಿಮುಖ ಜೋಡಣೆ ಹೊಂದಿದ್ದು ಸ್ವಲ್ಪ ಒರಟಾಗಿರುತ್ತವೆ. ಎಲೆಗಳ ಉದ್ದ, ಅಗಲಗಳು $9'' \times 1\frac{1}{2}''$ ಹೂಗಳ ಬಣ್ಣ ನೀಲಿಯಾಗಿದ್ದು ಪುಷ್ಪದಳಗಳು ನಾಲ್ಕು ಇರುತ್ತವೆ. ಹಣ್ಣುಗಳು ದುಂಡಾಗಿರುತ್ತವೆ. ಈ ಮರ ಹೂ ಬಿಡುವ ಕಾಲ ಜನವರಿ ತಿಂಗಳಿಂದ ಮೇ ತಿಂಗಳು.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೆಲಾಸ್ಟ್ರಮೇಸಿ (Melastromaceae) ಕುಟುಂಬಕ್ಕೆ ಸೇರಿದೆ. ಗಾಜಿನಂತೆ ಮಿಂಚುವ ಎಲೆಗಳನ್ನು ಹೊಂದಿದ್ದು ನೀಲಿ ಹೂ

ಗೊಂಚಲುಗಳನ್ನು ಪಡೆದಿರುತ್ತದೆ. ಮರ ಬಹಳ ಗಟ್ಟಿಯಾಗಿರುತ್ತದೆ. ಆದ್ದರಿಂದ ಹಾಸನದ ಕಡೆ ಇದನ್ನು ಕಬ್ಬಿಣದ ಮರ ಎಂಬುದಾಗಿ ಕರೆಯುತ್ತಾರೆ.

ಉಪಯೋಗಗಳು : ಈ ಮರದ ಹಣ್ಣುಗಳು ತಿನ್ನಲು ಯೋಗ್ಯವಾಗಿರುತ್ತವೆ. ಹೂವುಗಳಿಂದ ತೆಗೆದ ಬಣ್ಣವನ್ನು ಚಾಪೆಗಳಿಗೆ ಹಾಗೂ ಹತ್ತಿ ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ.

ಕಕ್ಕೆಮರ (ಕಾಕಿ) (Cassia fistula.)

ಪಶ್ಚಿಮ ಮೈಸೂರು ಹಾಗೂ ಕೊಡಗು ಪ್ರದೇಶಗಳಲ್ಲಿ 30–40 ಅಡಿಗಳಷ್ಟು ಎತ್ತರವಾಗಿ ಈ ಮರವು ಬೆಳೆಯುತ್ತದೆ. ಹೂ ಬಿಟ್ಟಾಗ ನೋಡಲು ಈ ಮರವು ಬಹಳ ಸುಂದರವಾಗಿರುತ್ತದೆ. ಈಗ ನಮ್ಮ ದೇಶದಲ್ಲಿರುವ ಅತ್ಯಂತ ಸುಂದರ ವೃಕ್ಷಗಳಲ್ಲಿ ಕಕ್ಕೆ ಮರವೂ ಒಂದಾಗಿದೆ.



ಕಕ್ಕೆಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpinaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=24 (Tischler-1922), 2n=28 (Pantulu 1940). ಸಂಯುಕ್ತ ಪತ್ರಗಳನ್ನು ಹೊಂದಿದ ಈ ಮರ ಹೊಂಬಣ್ಣದ ಸುಂದರ ಪುಷ್ಪಗಳನ್ನು ಬಿಡುತ್ತದೆ. ಕಾಯಿಗಳು 1 ರಿಂದ 2

ಅಡಿ ಉದ್ದವಿದ್ದು 40 ರಿಂದ 100 ಬೀಜಗಳನ್ನು ಹೊಂದಿರುತ್ತವೆ. ಬೀಜಗಳನ್ನು ಕೆಲವುಕಾಲ ಸಂಗ್ರಹಿಸಿಟ್ಟಿದ್ದು ಅನಂತರ ನೆಟ್ಟರೆ ಅವು ಮೊಳೆತು ಸಸಿಗಳಾಗುತ್ತವೆ.

ಉಪಯೋಗಗಳು : ಕಾಯಿನ ತಿರುಳನ್ನು ವಿರೇಚಕವಾಗಿ ಉಪಯೋಗಿಸುತ್ತಾರೆ. ಸಂತಾಲರು ಇದರ ಹೂಗಳನ್ನು ತಿನ್ನುತ್ತಾರೆ. ಬಂಗಾಳದಲ್ಲಿ ಇದರ ತಿರುಳನ್ನು ಹೊಗೆಸೊಪ್ಪಿಗೆ ವಾಸನೆ ಕೊಡಲು ಉಪಯೋಗಿಸುತಾರೆ. ಇದರ ಮರ ಸಣ್ಣದಾದರೂ ಬಹಳ ಬಾಳಿಕೆ ಬರುವಂತಹದು. ಘನ ಅಡಿ ಒಂದಕ್ಕೆ 56 ಪೌಂಡುಗಳಷ್ಟು ತೂಕ ಬರುತ್ತದೆ. ಒಳ ಮರ ಇಟ್ಟಿಗೆ ಬಣ್ಣದಾಗಿರುತ್ತದೆ. ಒನಕೆಗಳನ್ನು ಮಾಡಲು, ಕಂಬಗಳನ್ನು ಮಾಡಲು ಮತ್ತು ವ್ಯವಸಾಯದ ಕೆಲವು ಉಪಕರಣಗಳನ್ನು ತಯಾರಿಸಲು ಈ ಮರವನ್ನು ಉಪಯೋಗಿಸುತ್ತಾರೆ.

ಕಡವಲಮರ (ಕದಂಬ) Anthocephalus cadamba Miq.

ಮಲೆನಾಡಿನಲ್ಲಿ 35–40 ಅಡಿಗಳಷ್ಟೆತ್ತರ ಬೆಳೆಯಬಲ್ಲ ಈ ಮರ 5 ರಿಂದ 8 ಅಡಿ ಸುತ್ತಳತೆ ಪಡೆಯಬಲ್ಲದು. ಇಂಡಿಯದ ಒಣ ಹವೆಯ ಎಲ್ಲಾ ಪ್ರದೇಶಗಳಲ್ಲೂ ಬೆಳೆಯುವ ಈ ಮರ ನೇಪಾಳ, ಬರ್ಮಾಗಳಲ್ಲೂ ಬೆಳೆಯುತ್ತದೆ. ನಮ್ಮ ಪಶ್ಚಿಮ ಘಟ್ಟಗಳಲ್ಲಂತೂ ಬಹಳ ಚೆನ್ನಾಗಿ ಬೆಳೆಯುತ್ತದೆ. ಕದಂಬ ವೃಕ್ಷವೆಂದರೆ ಶ್ರೀ ಕೃಷ್ಣನ ನೆನಪು ಸಹಜವಾಗಿಯೆ ಬರುತ್ತದೆ. ಬೃಂದಾವನದಲ್ಲಿ ಕದಂಬ ವೃಕ್ಷಗಳ ನಡುವೆ, ಗೋಪಿಕಾಸ್ತ್ರೀಯರೊಡನೆ ಕೊಳಲೂದಿ ಕ್ರೀಡಿಸುತ್ತಿದ್ದ ಕೃಷ್ಣನ ರೂಪ ಯಾರಿಗೆ ತಿಳಿದಿಲ್ಲ? ಈಗಲೂ ಮಥುರಾ ಮತ್ತು ಭರತಪುರಗಳ ಮಧ್ಯೆ ಕದಂಬ ವನಗಳ ಅವಶೇಷಗಳನ್ನು ಕಾಣಬಹುದು.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ನೇರವಾದ ಕಾಂಡದಿಂದ ಕೂಡಿದ ಈ ಮರಕ್ಕೆ ದೊಡ್ಡದಾದ ಅಂಡಾಕೃತಿಯ ಹೊಳೆಯುವ ಹಾಗೂ ಮೇಲ್ಮೈಯಲ್ಲಿ ತುಪ್ಪಳ ರಹಿತವಾಗಿರುವ ಎಲೆಗಳಿರುತ್ತವೆ. ಜೂನ್‌ನಿಂದ ಆಗಸ್ಟ್ ತಿಂಗಳವರೆಗೂ ಪುಷ್ಪಭರಿತವಾಗಿರುತ್ತದೆ. ಹೂವುಗಳು ದುಂಡನೆಯ ಚೆಂಡುಗಳಂತೆ ಗೊಂಚಲಲ್ಲಿದ್ದು ಸುವಾಸನಾಭರಿತವಾಗಿರುತ್ತವೆ. ಕಿತ್ತಳೆ ಬಣ್ಣದ ಹಣ್ಣುಗಳು ಮಳೆಗಾಲದ ಕೊನೆಗೆ ಬಲಿಯುತ್ತವೆ. ಒಳ್ಳೆಯ ವಾಸನೆಯಿದ್ದು ಹುಳಿಯಾಗಿರುವ ಈ ಹಣ್ಣುಗಳನ್ನು ಹಾರುವ ನರಿಗಳು (Flying Foxes) ಮತ್ತಿತರ ಪಕ್ಷಿಗಳು ತಿನ್ನುತ್ತವೆ. ಬೀಜಗಳನ್ನು ಉದುರಿಸಿ ಬೀಜಪ್ರಸಾರ ಮಾಡುತ್ತವೆ.

ಉಪಯೋಗಗಳು : ಮರ ಮೃದುವಾಗಿದ್ದು ಬಿಳೀ ಹಳದಿ ಬಣ್ಣಕ್ಕಿರುತ್ತದೆ. ಬಹಳ ದಿನ ಹೊರವಾತಾವರಣದಲ್ಲೇ ಬಿಟ್ಟರೆ ಬಿರುಕು ಬಿಡುತ್ತದೆ. 1 ಘನ ಅಡಿಗೆ

34 ರಿಂದ 40 ಪೌಂಡುಗಳಷ್ಟು ತೂಕ ಬರುತ್ತದೆ. ಮರ ಅಷ್ಟೇನೂ ಗಟ್ಟಿಯಾಗಿರುವುದಿಲ್ಲ. ಆದರೂ ದೊಂಬರ ಆಟದ ಸಾಮಾನುಗಳನ್ನು ಮಾಡಲೂ, ಇಟ್ಟಿಗೆ ಹುಯ್ಯಲು ಬೇಕಾದ ಸಲಕರಣೆಗಳನ್ನು ಮಾಡಲೂ ಇದನ್ನೇ ಉಪಯೋಗಿಸುತ್ತಾರೆ. ದೇವಸ್ಥಾನದ ಹತ್ತಿರ ಬೆಳೆಸುವ ಪದ್ಧತಿಯೂ ಉಂಟು. ಇತ್ತೀಚೆಗೆ ಈ ಮರವನ್ನು ಸುತ್ತುಕಟ್ಟಿನ ಪೆಟ್ಟಿಗೆಗಳು, ಟೀ ಪೆಟ್ಟಿಗೆಗಳು ಇವನ್ನುಮಾಡಲು ಬಳಸುತ್ತಾರೆ. ಕಾಗದ ಮಾಡಲೂ ಇದನ್ನು ಬಳಸಬಹುದು ಎಲೆಗಳನ್ನು ದನಕರುಗಳಿಗೆ ತಿನ್ನಿಸಬಹುದು.

ಕಣ್ಣು ಕುಟುಂಗಲ (ಕಣ್ಕುಟಿಕ, ಹದಕಳ, ಜಾರಿಜೆ.)

(Garcinia morella Desr.)

ಮಲೆನಾಡಿನ ಘಾಟಿಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಬೆಳೆಯುವ ಈ ಮರ ಅಸ್ಸಾಂನ ಖಾಸಿಯಾ ಬೆಟ್ಟಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ನಿತ್ಯ ಹರಿದ್ವರ್ಣದ ಈ ಸಣ್ಣ ಮರ ನಾಲ್ಕು ಮೂಲೆಗಳಿರುವ ಸ್ವಲ್ಪ ದುಂಡಗಿನ ಹಣ್ಣು ಬಿಡುತ್ತದೆ. ಮಲೆನಾಡಿನ ಹೊರಗಡೆ ಈ ಮರ ಅಷ್ಟು ಚೆನ್ನಾಗಿ ಬೆಳೆಯಲಾರದು. ಸುಮಾರು 30 ರಿಂದ 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರದ ಎಲೆಗಳು 4 ರಿಂದ 6 ಇಂಚು ಉದ್ದ ಇದ್ದು ಸ್ವಲ್ಪ ಒರಟಾಗಿರುತ್ತವೆ. ಏಕಲಿಂಗ ಪುಷ್ಪಗಳಲ್ಲಿ ಹೆಣ್ಣು ಹೂವೇ ಗಂಡಿಗಿಂತ ದೊಡ್ಡದಿರುತ್ತದೆ. ಪ್ರತಿ ಹಣ್ಣಿಗೆ 4 ಬೀಜಗಳಿರುತ್ತವೆ. ಈ ಬೀಜಗಳು ಕಂದು ಬಣ್ಣಕ್ಕಿರುತ್ತವೆ.

ಉಪಯೋಗಗಳು: ಇದನ್ನು ಮನೆ ಬಾಗಿಲು ಕಿಟಕಿಗಳಿಗಾಗಿಯೂ. ಸೌದೆಗಾಗಿಯೂ ಉಪಯೋಗಿಸುತ್ತಿದ್ದಾರೆ. ಈ ಮರದ ತಿರುಳು, ಎಲೆಗಳು, ಹೂ ಹಣ್ಣುಗಳಿಂದ ಪಡೆಯುವ ಗ್ಯಾಂಬೋಗೆ (gamboge) ಎಂಬ ಪದಾರ್ಥವನ್ನು ಜಲವರ್ಣ (water colour)ಗಳ ತಯಾರಿಕೆಯಲ್ಲೂ ಹಾಗೂ ಲೋಹಗಳಿಗೆ ಚಿನ್ನದ ಬಣ್ಣದ ಮದ್ಯಸಾರದ ಮೆರುಗೆಣ್ಣೆಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಸಯಾಂನಲ್ಲಿ ಇದನ್ನು ಶಾಯಿಮಾಡಿ ಕಪ್ಪು ಕಾಗದದ ಮೇಲೆ ಬರೆಯಲು ಉಪಯೋಗಿಸುತ್ತಾರೆ. ಬೀಜಗಳಿಂದ ಎಣ್ಣೆಯನ್ನು ತೆಗೆಯಲಾಗುತ್ತದೆ. ಈ ಎಣ್ಣೆಯನ್ನು ಅಡಿಗೆಯಲ್ಲೂ, ಔಷಧಿಯಲ್ಲೂ ಉಪಯೋಗಿಸಲಾಗುತ್ತದೆ. ಇದರ ಎಲೆ, ತೊಗಟೆ ಮತ್ತು ಬೀಜಗಳು ಬ್ಯಾಕ್ಟೀರಿಯ ನಾಶಕಗುಣವನ್ನು ಹೊಂದಿವೆ.

ಕಣಗಲು (ಬೆಟ್ಟದಕಣಗಲು, ಗಣಗಲು) Dillenia indica Linn.

ಹಿಮಾಲಯದ ಹತ್ತಿರದ ಅರಣ್ಯಗಳೇ ಈ ಮರದ ತವರು, ಅಸ್ಸಾಂ, ಬಂಗಾಳ, ಮಧ್ಯಪ್ರದೇಶ ಹಾಗೂ ಮೈಸೂರಿನಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಮಲೆನಾಡಿನ ಸುಂದರ ವೃಕ್ಷಗಳಲ್ಲಿ ಇದೂ ಒಂದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಡಿಲ್ಲೆನಿಯೇಸಿ (Dilleniaceae) ಕುಟುಂಬಕ್ಕೆ ಸೇರಿದೆ. 5 ರಿಂದ 8 ಇಂಚಿನಷ್ಟು ದೊಡ್ಡವಾಗಿರುವ ಈ ಹೂವುಗಳ ಬಣ್ಣ ಬೆಳ್ಳಗಿರುತ್ತದೆ. ಪುಷ್ಪದಳಗಳು ಸುವಾಸನಾಭರಿತವಾಗಿರುತ್ತವೆ. ಮರ ಸ್ವಲ್ಪ ಕಂದು ಬಣ್ಣಕ್ಕಿದ್ದು ಮೃದುವಾದ ಎಳೆಗಳಿಂದ ಕೂಡಿರುತ್ತದೆ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು. ಈ ಮರ ಸುಮಾರು 30 ರಿಂದ 60 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳ ಉದ್ದ 8 ರಿಂದ 14 ಇಂಚುಗಳಷ್ಟಿದ್ದು, ಅಗಲ 2 ರಿಂದ 4 ಇಂಚಿನಷ್ಟಿರುತ್ತದೆ ತುದಿ ಚೂಪಾಗಿರುತ್ತದೆ. ಇದರ ಹಣ್ಣುಗಳು 3 ರಿಂದ 5 ಇಂಚಿನಷ್ಟು ದಪ್ಪವಿರುತ್ತವೆ. ಇದರ ತಿರುಳಿನಲ್ಲಿ ಮೂತ್ರಪಿಂಡದ ಆಕಾರದ ಬೀಜಗಳಿರುತ್ತವೆ.

ಉಪಯೋಗಗಳು : ಹೂವುಗಳನ್ನು ಹಾಗೂ ಹಣ್ಣುಗಳನ್ನು ತಿನ್ನಲಾಗುತ್ತದೆ. ಮರವನ್ನು ರೈಲ್ವೆ ಸ್ಲೀಪರ್‌ಗಳನ್ನೂ, ಸುತ್ತುಕಟ್ಟಿನ ಪೆಟ್ಟಿಗೆಗಳು, (Packing cases) ಮತ್ತು ಪದರ ಹಲಿಗೆಗಳನ್ನು (Plywood) ಮಾಡಲು ಉಪಯೋಗಿಸುತ್ತಾರೆ. ಆನೆಗಳಿಗೆ ಈ ಹಣ್ಣೆಂದರೆ ಪ್ರೀತಿ. ಆದ್ದರಿಂದ ಬೀಜ ಪ್ರಸಾರ ಆನೆಯಿಂದಾಗುತ್ತದೆ. ಇದರ ಹಣ್ಣಿನ ರಸಕ್ಕೆ ಸಕ್ಕರೆ ಸೇರಿಸಿ ಪಾನಕ ಮಾಡುತ್ತಾರೆ. ಇದರ ಹಣ್ಣನ್ನು ಹೊಟ್ಟೆ ನೋವಿಗಾಗಿ ಉಪಯೋಗಿಸುತ್ತಾರೆ. ಉಪ್ಪುಕಾಗದಕ್ಕೆ ಬದಲು ದಂತ, ಕೊಂಬು, ಮುಂತಾದುವನ್ನು ಉಜ್ಜಲು ಇದರ ಎಲೆಗಳನ್ನು ಉಪಯೋಗಿಸುತ್ತಾರೆ.

ಕನಗಿಕಾಯಿಮರ (ಪಿಂಡಿಕಾಯಿ) Myristica malabarica Lamk·

ಮಲಬಾರ್, ಬೊಂಬಾಯಿ ಮುಂತಾದ ಕಡೆಗಳಲ್ಲಿ ಬೆಳೆಯುವ ಈ ಮಲಬಾರ್ ಜಾಯಿಕಾಯಿ ಮರ ಮೈಸೂರಿನಲ್ಲೂ, ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ. ಇದೊಂದು ನಿತ್ಯಹರಿದ್ವರ್ಣ ವೃಕ್ಷ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಿಸ್ಟಿಕೇಸಿ (Myristicaceae) ಕುಟುಂಬಕ್ಕೆ ಸೇರಿದೆ. ಈ ಮರದ ಕಾಯಿಗಳು ಉದ್ದಕ್ಕಿಂತ ಹೆಚ್ಚು ದಪ್ಪವಾಗಿರುತ್ತವೆ. ಇವಕ್ಕೆ ಏರಿಲ್ (Aril) ಎಂಬ ಗಾಳಿಯಲ್ಲಿ ಹಾರಲು ಉಪಯುಕ್ತವಾದ ಅಂಗ ಇರುತ್ತದೆ. ಜಾಪತ್ರೆಯಂತೆಯೇ ಇದರಲ್ಲಿರುವ ಪದಾರ್ಥವನ್ನು ಗುಜರಾತಿನಲ್ಲಿ ರಾಮಪತ್ರೆ ಎಂದೂ ಕರೆಯುತ್ತಾರೆ. ಜಾಪತ್ರೆಯಷ್ಟು ಒಳ್ಳೆಯ ವಾಸನೆಯು ಇದಕ್ಕೆ ಇರುವುದಿಲ್ಲ.

ಉಪಯೋಗಗಳು : ಸ್ವಲ್ಪ ಕೆಂಪಗಿರುವ ಈ ಮರವು ಗಟ್ಟಿಯಾಗಿರುವುದರಿಂದ ಮನೆಯ ಮರಮುಟ್ಟುಗಳಿಗಾಗಿ ಇದನ್ನು ಉಪಯೋಗಿಸುತ್ತಾರೆ. ಬೀಜಗಳಿಂದ ಔಷಧಿಗಳಿಗೆ ಉಪಯೋಗಿಸುವ ಒಂದು ಬಗೆಯ ಎಣ್ಣೆಯನ್ನು ಪಡೆಯುತ್ತಾರೆ. ಈ ಎಣ್ಣೆಯನ್ನು ದೀಪ ಉರಿಸಲೂ ಉಪಯೋಗಿಸಬಹುದು.

ಕಪ್ಪುಬಸುರಿ (ಸಿಲ್ವರ್‌ಮರ) Ficus tsjakela Burm.

ಕಾನಕಾನಹಳ್ಳಿ, ಮುಂತಾದ ಕಡೆಗಳಲ್ಲಿ ಬೆಳೆಯುವ ಈ ಮರಕ್ಕೆ ಬಿಳಿಲುಗಳಿರುವುದಿಲ್ಲ. ದಕ್ಷಿಣ ಇಂಡಿಯಾದ ಎಲ್ಲಾ ರಾಜ್ಯಗಳಲ್ಲೂ ಕಂಡು ಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಎಲೆಗಳು ಹಸುರಾಗಿ ಹೊಳಪಾಗಿದ್ದು ಉದ್ದನೆಯ ತೊಟ್ಟುಗಳನ್ನು ಹೊಂದಿರುತ್ತವೆ. ಹಣ್ಣುಗಳು ಗೊಂಚಲು ಗೊಂಚಲುಗಳಾಗಿ ಮೂಡುತ್ತವೆ ಮತ್ತು ತಿಳಿ ಹಳದಿ ಬಣ್ಣಕ್ಕಿರುತ್ತವೆ. ಎಲೆಗಳ ಉದ್ದ ಅಗಲಗಳು 6″ × 3″ ಇರುತ್ತವೆ

ಉಪಯೋಗಗಳು : ಇದರ ಬೇರಿನತೊಗಟೆಯನ್ನು ಔಷಧಿಯಲ್ಲೂ, ಎಲೆಗಳನ್ನು ಆಹಾರ ಪದಾರ್ಥಗಳನ್ನು ಇಟ್ಟು ಕೊಡಲೂ ಉಪಯೋಗಿಸುತ್ತಾರೆ. ಈ ಮರದ ಎಲೆಗಳನ್ನು ರೇಷ್ಮೆ ಹುಳುಗಳಿಗೆ ಆಹಾರವಾಗಿ ಉಪಯೋಗಿಸಬಹುದು.

ಕಾಮಾರಕ್ಷಿಗಿಡ (ಕಮಾರಕ್) Averrhoa Carambola Linn.

ಮೂಲತಃ ಅಮೆರಿಕದಲ್ಲಿ ಬೆಳೆಯುತ್ತಿದ್ದ ಈ ಮರವನ್ನು ಪೋರ್ಚುಗೀಸರು ನಮ್ಮ ದೇಶಕ್ಕೆ ತಂದರೆಂಬ ನಂಬಿಕೆ ಇದೆ. ಇದು ಬಹಳ ಸಣ್ಣಮರ. 15 ರಿಂದ 30 ಅಡಿಗಳಷ್ಟು ಎತ್ತರಕ್ಕೆ ಮಾತ್ರ ಬೆಳೆಯಬಲ್ಲದು. ಇದನ್ನು ಉದ್ಯಾನಗಳಲ್ಲಿ ಬೆಳೆಸುತ್ತಾರೆ. ಬೆಂಗಳೂರಿನ ಹತ್ತಿರ ಇರುವ ಹೆಬ್ಬಾಳಿನ ಬಹುಭಾಗದಲ್ಲಿ ಈ ಮರ ಕಂಡು ಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಆಕ್ಸಾಲಿಡೇಸಿ (Oxalidaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 24 (Krishnaswamy R.F. 1949). ಇದರ ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿದ್ದು 5 ಇಂಚಿನಷ್ಟು ದೊಡ್ಡವಾಗಿರುತ್ತವೆ. ಬಿಡಿ ಎಲೆಗಳು 2 ಇಂಚು ಉದ್ದ 1 ಇಂಚು ಅಗಲವಾಗಿರುತ್ತವೆ. ಇದರ ಹೂವುಗಳಿಗೆ ಸ್ವಲ್ಪ ಕೆಂಪು ಮಿಶ್ರಿತವಾದ ನೀಲಿ ಬಣ್ಣವಿರುತ್ತದೆ. ಫೆಬ್ರುವರಿ ಮತ್ತು ಮಾರ್ಚಿ ತಿಂಗಳಿನಲ್ಲಿ ಈ ಮರವು ಫಲಪುಷ್ಪ ಭರಿತವಾಗಿರುತ್ತದೆ. ಇದರ ಮರ ಬೆಳ್ಳಗಿದ್ದು ಸ್ವಲ್ಪ ಗಟ್ಟಿಯಾಗಿರುತ್ತದೆ ಮತ್ತು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ತೂಕವು ಘನ ಅಡಿಗೆ 40 ಪೌಂಡುಗಳಾಗಿರುತ್ತದೆ. ಏಣುಗಳುಳ್ಳ, ಕೋಣಾಕೃತಿಯ ಹಣ್ಣುಗಳಿಗೆ ಹುಳಿವಾಸನೆ ಇರುತ್ತದೆ. ಇವು ಮೂರರಿಂದ ನಾಲ್ಕು ಅಂಗುಲ ಉದ್ದವಿರುತ್ತವೆ. ರಸ್ತೆಗೆ ಒಳ್ಳೆಯ ಸಾಲುಮರವಾಗ ಬಲ್ಲ ಈ ಮರವು ವರ್ಷಕ್ಕೆ ಎರಡು ಬಾರಿ ಫಲಭರಿತವಾಗುತ್ತದೆ : (1) ಬೇಸಿಗೆ ಮತ್ತು (2) ಸೆಪ್ಟೆಂಬರ್.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನುತ್ತಾರೆ. ಕಾಯಿಯಿಂದ ಒಮ್ಮೊಮ್ಮೆ ಸಾರು ಹಾಗೂ ಉಪ್ಪಿನಕಾಯಿಗಳನ್ನು ಮಾಡುತ್ತಾರೆ. ಇದರ ಪಾನಕ

ಮಾಡುವ ಸಂಪ್ರದಾಯವೂ ಇದೆ. ಕೆಲವೆಡೆಗಳಲ್ಲಿ ಮನೆಕಟ್ಟುವ ಸಾಮಾನುಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ಕರಬೇವು (Murrya Koenigii (L) Spreng.)

ಸಾರು, ಉಪ್ಪಿಟ್ಟು ಮೊದಲಾದುವುಗಳಿಗೆ ಒಳ್ಳೆಯ ಸುವಾಸನೆ **ಕೊಡಲು** ಉಪಯೋಗಿಸುವ ಸೊಪ್ಪಿನ ಮರವೇ ಕರಬೇವು. ಇದು ಸಮುದ್ರ ಮಟ್ಟಕ್ಕೆ 4,500 ಅಡಿಗಳಷ್ಟು ಎತ್ತರದ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇಂಡಿಯಾ, ಅಂಡಮಾನ್‌ಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ದೊಡ್ಡ ಪೊದೆಯಾಗಿ, ಇಲ್ಲವೆ ಸಣ್ಣಮರವಾಗಿ ಬೆಳೆಯುವ ಈ ಸಸ್ಯವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=18 (E.K J.). ಈ ಮರದ ಬಿಡಿ ಎಲೆಗಳು ಗ್ರಂಥಿಗಳ ಚುಕ್ಕೆಗಳನ್ನು ಹೊಂದಿರುತ್ತವೆ. ಹೂವುಗಳು ಬಿಳುಪಾಗಿದ್ದು ವಾಸನಾಭರಿತವಾಗಿರುತ್ತವೆ. ಹಣ್ಣುಗಳು ಸ್ವಲ್ಪ ಕೆಂಪಗಿದ್ದು ಎರಡು ಬೀಜಗಳನ್ನು ಹೊಂದಿರುತ್ತವೆ. ಇದರ ಎಲೆಗಳಲ್ಲಿ ಜೀವಸತ್ವ "A" ಅಧಿಕವಾಗಿರುತ್ತದೆ. ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಗಟ್ಟಿಯಾಗಿರುತ್ತದೆ. 1 ಘನ ಅಡಿಗೆ 43 ಪೌಂಡುಗಳಷ್ಟು ತೂಕ ಬರುತ್ತದೆ.

ಉಪಯೋಗಗಳು : ಇದರ ಎಲೆಗಳಿಂದ ಎಣ್ಣೆಯನ್ನು ತೆಗೆಯುತ್ತಾರೆ. ಮೇಲೆ ತಿಳಿಸಿದಂತೆ ಈ ಮರದ ಎಲೆಗಳನ್ನು ಸಾರು, ಉಪ್ಪಿಟ್ಟು, ಚಟ್ನಿ ಮೊದಲಾದ ಆಹಾರ ಪದಾರ್ಥಗಳಿಗೆ ಒಳ್ಳೆಯ ವಾಸನೆ ಬರುವಂತೆ ಮಾಡಲು ಉಪಯೋಗಿಸಿಕೊಳ್ಳುವ ದೃಷ್ಟಿಯಿಂದ ಮನೆಯ ಹತ್ತಿರವೇ ಈ ಮರವನ್ನು ಬೆಳೆಸುತ್ತಾರೆ. ಕಾಡುಗಳಲ್ಲಿ ಬೆಳೆಯುವ ಮರಗಳನ್ನು ಕಡಿದು ವ್ಯವಸಾಯೋಪಕರಣಗಳನ್ನು ತಯಾರಿಸುತ್ತಾರೆ. ವಾಂತಿ ಭೇದಿಗಳನ್ನು ನಿಲ್ಲಿಸಲು ಈ ಮರದ ಎಲೆಗಳನ್ನು ಔಷಧಿಯ ರೂಪದಲ್ಲಿಯೂ ಉಪಯೋಗಿಸುತ್ತಾರೆ. ಇದರ ಬೇರಿನ ಕಷಾಯವನ್ನು ಮೂತ್ರಪಿಂಡದಿಂದುಂಟಾದ ನೋವು ನಿವಾರಣೆಗೆ ಉಪಯೋಗಿಸುತ್ತಾರೆ.

ಕರಿಗೇರು (Semecarpus anacardium Linn.)

ಕರಿಗೇರು ಮರವು ಒಣಹವೆಯುಳ್ಳ ಮೈಸೂರಿನ ಎಲ್ಲಾ ಅರಣ್ಯಗಳಲ್ಲೂ ಬೆಳೆಯುತ್ತದೆ. ಸುಮಾರು 40-50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರವು ಅಸ್ಸಾಂ, ಖಾಸಿಯಾ, ಪಂಜಾಬ್, ಮಧ್ಯಪ್ರದೇಶಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=60

(EKJ). ಬೇಸಿಗೆಯಲ್ಲಿ ಉದುರುವ ಈ ಮರದ ಎಲೆಗಳು ಗಟ್ಟಿಯಾಗಿ ದೊಡ್ಡದಾಗಿ ರುತ್ತವೆ. ಇವುಗಳು 7 ರಿಂದ 24 ಇಂಚು ಉದ್ದವೂ 2 ರಿಂದ 12 ಇಂಚು ಅಗಲವೂ ಆಗಿರುತ್ತವೆ. ತುದಿಯಲ್ಲೂ ಕೆಳಭಾಗದಲ್ಲೂ ಗುಂಡಾಗಿರುತ್ತವೆ. ಮಳೆಗಾಲದ ಕೊನೆಯಲ್ಲಿ ಹೂವುಗಳು ಬರುತ್ತವೆ. ಹಣ್ಣುಗಳು ಒಂದು ಇಂಚು ಉದ್ದವಿದ್ದು ಪಕ್ವವಾಗಿದ ಮೇಲೆ ಕಪ್ಪಗಾಗುತ್ತವೆ. ಬೀಜಗಳ ಮೂಲಕವೇ ಈ ಮರಗಳನ್ನು ಬೆಳೆಸ ಬಹುದು.

ಉಪಯೋಗಗಳು : ಈ ಮರದ ಬೀಜದಿಂದ ಬರುವ ಎಣ್ಣೆಯನ್ನು ಕಾಡಾನೆಗಳನ್ನು ಪಳಗಿಸಲು ಉಪಯೋಗಿಸುತ್ತಾರೆ. ಈ ಮರದ ಹಾಲು ಮೈಗೆ ತಗುಲಿದರೆ ಮೈಯೆಲ್ಲಾ ಊದುವಂತೆ ಮಾಡಬಲ್ಲ ಶಕ್ತಿಯನ್ನು ಹೊಂದಿದೆ. ಈ ಹಣ್ಣಿನ ರಸವನ್ನು ನಿಂಬೆಯನೀರಿನ ಜೊತೆ ಬೆರೆಸಿ ಧೋಬಿಗಳು ಹತ್ತಿ ಮತ್ತು ಲಿನನ್ ಬಟ್ಟೆ ಗಳ ಮೇಲೆ ಗುರ್ತಿನ ಗೆರೆಗಳನ್ನು ಹಾಕಲು ಉಪಯೋಗಿಸುತ್ತಾರೆ. ಆಯುರ್ವೇದ ವೈದ್ಯದಲ್ಲೂ ಈ ಮರದ ಕೆಲವು ಭಾಗಗಳನ್ನು ಉಪಯೋಗಿಸುತ್ತಾರೆ.

ಕರಿಜಾಲಿ (**ಗೊಬ್ಬಳಿಮರ**) Acacia nilotica (L) Del. (= Acacia arabica willd.)


ಮೈಸೂರಿನ ಒಣಹವೆಯ ಎಲ್ಲಾ ಪ್ರದೇಶಗಳಲ್ಲಿಯೂ ಬೆಳೆಯುವ ಈ ಗೊಬ್ಬಳಿ ಮರದ ಮುಳ್ಳುಗಳ ರುಚಿಯು ಎಲ್ಲ ಹಳ್ಳಿಗರ ಕಾಲುಗಳಿಗೂ ತಿಳಿದಿರು ತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೊಸೇಸಿ (Mimosaeeae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=52$ (Atchison-- 1948). ನೀರು ಕಡಿಮೆಯಿದ್ದು ನೆಲಗಟ್ಟು ಫಲವತ್ತಾಗಿಲ್ಲದಿದ್ದರೂ ಚೆನ್ನಾಗಿ ಬೆಳೆಯ ಬಲ್ಲ ಈ ಮರದ ಶಕ್ತಿಯು ಅದ್ಭುತವಾದದ್ದು. ಹೂಗೊಂಚಲು ಹಳದಿ ಬಣ್ಣಕ್ಕಿರು ತ್ತದೆ. ಈ ಮರವು ಘನ ಅಡಿಗೆ 54 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಈ ಮರದ ಎಲ್ಲ ಭಾಗಗಳೂ ಒಂದಿಲ್ಲೊಂದು ಉಪಯೋಗಕ್ಕೆ ಬರುತ್ತವೆ. ಈ ಮರದ ಸೊಪ್ಪು, ಕಾಯಿಗಳೆಂದರೆ ಆಡು, ಕುರಿಗಳಿಗೆ ಬಹಳ ಪ್ರೀತಿ. ಮರವನ್ನು ವ್ಯವಸಾಯದ ಉಪಕರಣಗಳನ್ನು ಮಾಡಲೂ, ಗಾಡಿ ಚಕ್ರಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಈ ಮರದ ಗೋಂದನ್ನು 'ಗಂ ಅರಾಬಿಕ್' ಎಂದು ಕರೆಯುತ್ತಾರೆ. ಇದನ್ನು ದಿನಬಳಕೆಯ ಗೋಂದು ಆಗಿಯೂ ಹಾಗೂ ಪೆಪ್ಪರ್‌ಮೆಂಟ್ ಕಾರ್ಖಾನೆಗಳಲ್ಲಿಯೂ ಉಪಯೋಗಿಸುತ್ತಾರೆ. ತೊಗಟೆ ಯಿಂದ ಬಣ್ಣವನ್ನು ತೆಗೆಯುವ ಅಭ್ಯಾಸವೂ ರೂಢಿಯಲ್ಲಿದೆ.

ಕರಿಬುರಿ Ficus lacor Buch-Hach. (Syn. Ficus infectoria Roxb.)

ನಿತ್ಯ ಹರಿದ್ವರ್ಣದ ಹಾಗೂ ಕಾಲಕಾಲಕ್ಕೆ ಎಲೆಗಳುದುರುವ ಕಾಡುಗಳ ಈ ಕರಿಬಸುರಿ ಮರವು 35-40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಮೈಸೂರು, ಹಾಸನ ಜಿಲ್ಲೆಗಳಲ್ಲಿ ಕಂಡುಬರುವ ಈ ಮರವನ್ನು ಇತ್ತೀಚೆಗೆ ಉತ್ತರಪ್ರದೇಶ ಹಾಗೂ ಡೆಲ್ಲಿ ಮುಂತಾದ ಕಡೆಗಳಲ್ಲಿ ಬೆಳೆಸುತ್ತಿದ್ದಾರೆ.



ಕರಿಬಸುರಿ ಮರ

ಸಸ್ಯಶಾಸ್ತ್ರವಿವರಣೆ: ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಈ ಮರಕ್ಕೆ ಬಿಳಿಲುಗಳೂ ಇರುತ್ತವೆ. ತುಪ್ಪಳರಹಿತ ತೆಳುವಾದ ಸ್ವಲ್ಪ ಚೂಪಾದ ತುದಿಯುಳ್ಳ ಈ ಮರದ ಎಲೆಗಳು ಉದ್ದವಾಗಿರುವ ತೊಟ್ಟುಗಳನ್ನು ಹೊಂದಿರುತ್ತವೆ. ಎಲೆಗಳ ಉದ್ದಗಲಗಳು 5″ × 2″ ಇರುತ್ತವೆ. ತೊಟ್ಟಿಲ್ಲದ ಸಣ್ಣ ಹಣ್ಣುಗಳು ಸ್ವಲ್ಪ ಕೆಂಪಗೆ, ಬೆಳ್ಳಗೆ ಗುಂಡಾಗಿರುತ್ತವೆ. ಮರವು ಬಹಳ ಮೃದುವಾಗಿದ್ದು ಒಂದು ಘನ ಅಡಿಗೆ 35 ರಿಂದ 45 ಪೌಂಡು ತೂಕ ಹೊಂದಿರುತ್ತದೆ. ಬೀಜಗಳ ಮೂಲಕವೂ ಹಾಗೂ ಕತ್ತರಿಸಿದ ಚಿಕ್ಕರೆಂಬೆಗಳ ಮೂಲಕವೂ ಈ ಮರಗಳನ್ನು ಬೆಳೆಸಬಹುದು.

ಉಪಯೋಗಗಳು ಕಾಫಿಗಿಡಗಳ ನೆರಳಿಗಾಗಿ ಈ ಮರವನ್ನು ಬೆಳೆಸಬಹುದು. ಮರದಿಂದ ಗಟ್ಟಿಯಾದ ಸಾರನ್ನು ಪಡೆಯಬಹುದು. ಆನೆಗಳಿಗೆ ಈ ಮರದ ಎಲೆಗ

ಳೆಂದರೆ ಬಹಳ ಪ್ರೀತಿ. ದನಗಳೂ ಇದರ ಎಲೆಗಳನ್ನು ತಿನ್ನುತ್ತವೆ. ಸೌದೆಗಾಗಿಯೂ ಈ ಮರವನ್ನು ಉಪಯೋಗಿಸಬಹುದು.

ಕರಿಸುಳಿ Melanthesa rhamnoides (Retz.) Bl.
(Breynia rhamnoides Muell-Arg.)

ಒಣ ಹವೆಯುಳ್ಳ ಪ್ರದೇಶಗಳಲ್ಲಿ ಕಂಡುಬರುವ ಈ ಸಸ್ಯವು ಪೊದೆಯಂತೆ ತನ್ನ ಜೀವನವನ್ನು ಪ್ರಾರಂಭಿಸಿದರೂ ಬಹಳಕಾಲ ಬಿಟ್ಟಲ್ಲಿ 12 ರಿಂದ 15 ಅಡಿಗಳಷ್ಟು ಎತ್ತರದ ಸಣ್ಣ ಮರವಾಗಬಲ್ಲುದು. ಬೆಂಗಳೂರು ಜಿಲ್ಲೆಯಲ್ಲಿ ಈ ಮರವು ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯುಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇವರ ಹಣ್ಣುಗಳು ಬಟಾಣಿ ಕಾಳಿನಷ್ಟು ದಪ್ಪವಿದ್ದು ಎರಡು ಕಡೆಯೂ ಚಪ್ಪಟೆಯಾಗಿರುತ್ತವೆ. ಹಣ್ಣುಗಳು ಮೊದಲು ಕೆಂಪು ಬಣ್ಣಕ್ಕಿದ್ದು ಅನಂತರ ಕಪ್ಪು ಮಿಶ್ರಿತ ಹಸಿರು ಬಣ್ಣವನ್ನು ತಾಳುತ್ತವೆ. ಇದರ ಏಕಲಿಂಗ ಪುಷ್ಪಗಳು ಕಂದುಮಿಶ್ರಿತವಾದ ಬಣ್ಣವನ್ನು ಹೊಂದಿರುತ್ತವೆ. ಹೂ ಬಿಡುವ ಕಾಲವು ಆಗಸ್ಟ್‌ನಿಂದ ಜನವರಿ ಮತ್ತು ಮಾರ್ಚಿ ತಿಂಗಳು.

ಉಪಯೋಗಗಳು : ಗಂಟಲಿನ ಊತಗಳಿದ್ದಾಗ ಈ ಮರದ ಎಲೆಗಳನ್ನು ಒಣಗಿಸಿ ಹೊಗೆಸೊಪ್ಪು ಸೇದಿದಂತೆ ಸೇದಿಸುತ್ತಾರೆ. ಜೇಲಿಗಳಿಗಾಗಿ ಹಾಕುತ್ತಾರೆ. ಗುಡಿಸಲುಗಳ ಮಾಡುಗಳನ್ನು ಮುಚ್ಚಲು ಉಪಯೋಗಿಸುತ್ತಾರೆ.

ಕಲ್ಬಾಗಿ (ಹೊಟ್ಟೆಬಾಗೆ, ಕೋಟೆಪಲೆ) Albizzia 'chinensis (osbeck) Merr =Albizzia stipulata Boiv.

ಹಾಸನ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈ ದೊಡ್ಡ ಮರವು ಚೆನ್ನಾಗಿ ಬೆಳೆಯುತ್ತದೆ. ಬೇಸಿಗೆಯ ಒಂದು ತಿಂಗಳು ಪೂರ್ತ ಎಲೆಗಳಿಲ್ಲದೆ ನಿಂತಿರುತ್ತದೆ. ನಿಕೋಬಾರ್ ದ್ವೀಪಗಳಲ್ಲೂ ಈ ಮರವು ಕಂಡುಬಂದಿದೆ. ಕೊಡಗಿನಲ್ಲಿ ಇದನ್ನು ಕೋಟೆಪಲೆ ಎಂದು ಕರೆಯುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಈ ಮರದ ವೃಂತಪರ್ಣ (Stipules) ಗಳು ಬಹಳ ದೊಡ್ಡವಿರುತ್ತವೆ. ಮರದ ತೊಗಟೆಯು ಬೂದು ಬಣ್ಣಕ್ಕಿರುತ್ತದೆ. ಇದರ ಬಿಡಿ ಎಲೆಗಳ ತುದಿಯು ಸ್ವಲ್ಪ ಮೊನಚಾಗಿರುತ್ತದೆ. ಇದರ ಹೂವುಗಳು ಬೆಳ್ಳಗಿದ್ದು ಸ್ವಲ್ಪ ತಿಳಿಗೆಂಪಾದ ಕೇಸರ ದಂಡಗಳನ್ನು ಹೊಂದಿರುತ್ತವೆ. ಪುಷ್ಪ ಪಾತ್ರೆಯು ಆಲಿಕೆಯ

ಆಕಾರವನ್ನು ಹೊಂದಿರುತ್ತದೆ. ಕಾಯಿಗಳು ·75 ರಿಂದ 1·5 ಇಂಚು ಅಗಲವಿದ್ದು ತೆಳ್ಳಗೆ ಕೆಂಪು ಮಿಶ್ರಿತವಾದ ಕಂದು ಬಣ್ಣವನ್ನು ಹೊಂದಿರುತ್ತದೆ. ಅಸ್ಸಾಂ ಟೀ ತೋಟಗಳಲ್ಲಿ ಮೊದಲು ನೆರಳಿಗಾಗಿ ಈ ಮರವನ್ನು ಉಪಯೋಗಿಸುತ್ತಿದ್ದರು. ಹುಲ್ಲಿನ ಬಣ್ಣದ ಈ ಮರದ ಹೂವುಗಳು ಜೂನ್ ತಿಂಗಳಿನಲ್ಲಿ ಮರವನ್ನೇ ಬಹು ಆಕರ್ಷಕ ವಾಗಿ ಮಾಡಿರುತ್ತವೆ.

ಉಪಯೋಗಗಳು : ಇದರಿಂದ ಉತ್ತಮವಾದ ಮರವು ಸಿಕ್ಕುತ್ತದೆ. ಘನ ಅಡಿಯೊಂದಕ್ಕೆ 35 ರಿಂದ 45 ಪೌಂಡು ತೂಗುವ ಈ ಮರದಿಂದ ಮೈಸೂರಿನ ಹಳ್ಳಿ ಗಳಲ್ಲಿ ಇದ್ದಿಲು ತಯಾರಿಸುತ್ತಾರೆ. ಸಾಲು ಮರವನ್ನಾಗಿ ಇದನ್ನು ಬೆಳೆಸಬಹುದು. ಆದರೆ ಬೇಸಿಗೆಯ ಕೆಲವು ದಿನಗಳಲ್ಲಿ ಈ ಮರವು ಪತ್ರರಹಿತವಾರುತ್ತದೆ. ದನಗಳು ಈ ಮರದ ಎಲೆಯನ್ನು ತಿನ್ನುತ್ತವೆ. ಕಾಫಿ ತೋಟಗಳಲ್ಲೂ ನೆರಳಿಗಾಗಿ ಈ ಮರ ವನ್ನು ಬೆಳೆಸಬಹುದು.

ಕಲ್ಲಾಲದಮರ (ಕಲ್ಲರಳಿ) Ficus tomentosa Roxb.

ಚೆನ್ನಾಗಿ ನೆರಳು ಕೊಡಬಲ್ಲ ಈ ದೊಡ್ಡಮರವು ಒಣಹವೆಯಿರುವ ಪ್ರದೇಶ ಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಕೆಳಗಿನ ರೆಂಬೆಗಳಿಂದ ಸಣ್ಣ ಬಿಳಿಲುಗಳು ಜೋತು ಬಿದ್ದಿರುತ್ತವೆ. ಎಳೆಯ ಭಾಗಗಳು ಹಾಗೂ ಎಲೆಯ ಕೆಳಭಾಗಗಳು ದಟ್ಟವಾದ ತುಪ್ಪಳ ಹೊಂದಿರುತ್ತವೆ. ವರ್ಷಕ್ಕೊಮ್ಮೆ ಎಲೆಗಳೆಲ್ಲಾ ಉದುರಿ ಮತ್ತೆ ಹುಟ್ಟುತ್ತವೆ. ಹಣ್ಣುಗಳಿಗೆ ತೊಟ್ಟಿರುವು ದಿಲ್ಲ. ಇದರ ಬೀಜಪ್ರಸಾರ ಕೀಚಪಾಲದಹಕ್ಕಿ ಮುಂತಾದುವುಗಳಿಂದ ನಡೆಯುತ್ತದೆ.

ಉಪಯೋಗಗಳು : ಇದರ ಆರ್ಥಿಕ ಪ್ರಾಮುಖ್ಯದ ಬಗ್ಗೆ ಎಲ್ಲಿಯೂ ಉಲ್ಲೇಖ ವಿಲ್ಲ. ಆದರೂ ಸೌದೆಗಾಗಿ ಈ ಮರವನ್ನು ಕಡಿಯುವುದು ಶತಸ್ಸಿದ್ಧ.

ಕಲ್ಹೊನ್ನೆ (ಬೊಬ್ಬೆ) Calophyllum wightianum wall.

ಮೈಸೂರಿನ ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಈ ಮರವು ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಸುಂದರ ನಿತ್ಯ ಹರಿದ್ವರ್ಣ ವೃಕ್ಷವು ಕೆಂಪಾದ ತಿನ್ನಲು ಅರ್ಹವಾದ ಹಣ್ಣುಗಳನ್ನು ಬಿಡುತ್ತದೆ. ಈ ಮರ ಗಟ್ಟಿಫೆರಿ (Gutti-ferae) ಕುಟುಂಬಕ್ಕೆ ಸೇರಿದೆ. ಈ ಮರ ಕೆಂಪು ಮಿಶ್ರಿತವಾದ ಬಿಳಿಯ ಬಣ್ಣ ವನ್ನು ಹೊಂದಿದ್ದು ಘನ ಅಡಿಯೊಂದಕ್ಕೆ 42 ಪೌಂಡುಗಳಷ್ಟು ತೂಗುತ್ತದೆ. ಮರಕ್ಕೆ ಒಂದು ಬಗೆಯ ವಾಸನೆ ಇರುತ್ತದೆ.

ಉಪಯೋಗಗಳು : ಈ ಮರದಿಂದ ಪ್ಲೈವುಡ್, ಪ್ಯಾಕಿಂಗ್ ಕೇಸ್‌ಗಳು, ವ್ಯಾನೀರ್‌ಗಳು ಇವನ್ನು ತಯಾರಿಸುತ್ತಾರೆ. ಹೊಸದಾಗಿ ಕೊಯ್ದಾಗ ಮರದ ಬಣ್ಣವು ಕಪ್ಪುಮಿಶ್ರಿತವಾದ ಕೆಂಪು ಆಗಿರುತ್ತದೆ. ಮರದ ಹಣ್ಣುಗಳು ತಿನ್ನಲು ಯೋಗ್ಯವಾದವುಗಳಾಗಿರುತ್ತವೆ. ಇತ್ತೀಚೆಗೆ ಈ ಮರವನ್ನು ದೋಣಿಗಳನ್ನು ಕಟ್ಟಲೂ ಮನೆ ಕಟ್ಟುವ ಸಾಮಾನುಗಳನ್ನು ಮಾಡಲೂ ಉಪಯೋಗಿಸುತ್ತಾರೆ.

ಕಸ್ತೂರಿಜಾಲಿ (ಕಗ್ಗೊಬ್ಬಳಿಮರ) Acacia farnesiana willd.

ವೆಸ್ಟ್ ಇಂಡೀಸ್‌ನ ಮತ್ತು ಉಷ್ಣವಲಯದ ಅಮೆರಿಕಾ ನಿವಾಸಿಯಾಗಿದ್ದ ಈ ಮರವು ಒಣಹವೆಯುಳ್ಳ ಮೈಸೂರಿನ ಎಲ್ಲಾ ಮೈದಾನಗಳಲ್ಲೂ ಕಂಡುಬರುತ್ತದೆ. ಮುಳ್ಳುಗಳಿಂದ ಕೂಡಿ ಪೊದೆಯಂತಿರುವ ಈ ಸಸ್ಯವು ಒಳ್ಳೆಯ ವಾತಾವರಣವಿದ್ದಲ್ಲಿ ಒಂದು ಸಣ್ಣ ಮರವಾಗಿ ಬೆಳೆಯಬಲ್ಲುದಾಗಿದ್ದು 15 ರಿಂದ 18 ಅಡಿಗಳಷ್ಟು ಎತ್ತರ ಬೆಳೆಯುತ್ತದೆ



ಕಸ್ತೂರಿಜಾಲಿ ಮರ

ಸಸ್ಯಶಾಸ್ತ್ರ ವಿವರಣೆ: ಈ ಮರವು ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=52 (Atchison 1948). ಇದರ ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿದ್ದು ಸುಮಾರು 5 ಅಂಗುಲಗಳಷ್ಟು ಉದ್ದವಿರುತ್ತವೆ. ಇದರ ವೃಂತಪರ್ಣಗಳು (Stipules) ಮುಳ್ಳುಗಳಾಗಿ ಮಾರ್ಪಾಟು ಹೊಂದಿವೆ ಬಿಡಿ ಎಲೆಗಳು ಅಭಿಮುಖವಾಗಿದ್ದು 13 ರಿಂದ 15

ಜೊತೆ ಇರುತ್ತವೆ. ಈ ಮರದ ದುಂಡುಗಿನ ಸುವಾಸನಾಭರಿತವಾದ ಹಳದಿ ಹೂ ಗೊಂಚಲುಗಳ ವಾಸನೆಯು ಹಾವುಗಳಿಗೆ ಆಗುವುದಿಲ್ಲವೆಂಬ ಪ್ರತೀತಿ ಇದೆ. ಇದರ ಕಾಯಿಯು 3 ರಿಂದ 4 ಇಂಚು ಉದ್ದವಿದ್ದು ಕಂದು ಮಿಶ್ರಿತವಾದ ಕಪ್ಪು ಬಣ್ಣವನ್ನು ಹೊಂದಿರುತ್ತದೆ.

ಉಪಯೋಗಗಳು : ಇದರ ಹೂವುಗಳನ್ನು ದೇವರ ಪೂಜೆಗೆ ಉಪಯೋಗಿಸುತ್ತಾರೆ. ಕಸ್ಸೀ (Cassie) ಎಂಬ ಸುಗಂಧದ್ರವ್ಯವನ್ನು ಇದರ ಹೂವುಗಳಿಂದ ತೆಗೆಯುತ್ತಾರೆ. ಈ ಮರವು ಪೊದೆಯಂತೆಯೇ ಬಹಳ ಕಾಲವಿರುವುದರಿಂದ ಬೇಲಿಯ ಅಂಚುಗಳಲ್ಲಿ ಹಾಕುವುದುಂಟು. ಇದರ ಮರವು ಬೆಳ್ಳಗಿರುತ್ತದೆ. ತೂಕವು ಘನ ಅಡಿಗೆ 49 ಪೌಂಡುಗಳಷ್ಟು ಬರುತ್ತದೆ. ಕಾಂಡದಿಂದ ಒಳ್ಳೆಯ ಅಂಟು ಬರುತ್ತದೆ. ತೊಗಟೆ ಮತ್ತು ಕಾಯಿಗಳನ್ನು ಔಷಧಿಯಲ್ಲಿ ಬಳಸಲಾಗುತ್ತದೆ. ಇದರ ಎಲೆಗಳನ್ನು ಕೆಲವು ಕಡೆ ಚಟ್ನಿ ಮಾಡಲು ಹುಣಿಸೆಹಣ್ಣಿಗೆ ಬದಲಾಗಿ ಉಪಯೋಗಿಸುತ್ತಾರೆ. ಬೇಲಿಗಾಗಿ ಇದನ್ನು ಬೆಳೆಸುತ್ತಾರೆ.

ಕಾಚಿನಮರ (**ಕಗ್ಗಲಿಮರ, ತಾರಾ, ತೆರೆ** (Acacia catechu (L.F.) Willd.)

ಕಗ್ಗಲಿಮರವೆಂದು ಮಲೆನಾಡಿನಲ್ಲಿ ಪ್ರಸಿದ್ಧವಾಗಿರುವ ಈ ಮರವು 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಕಲ್ಲು ಮಿಶ್ರಿತವಾದ ಗುಡ್ಡಗಾಡುಗಳಲ್ಲಂತೂ ಚೆನ್ನಾಗಿ ಬೆಳೆಯುತ್ತದೆ.



ಕಾಚಿನ ಮರ

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ಬಿಡಿ ಎಲೆಗಳು ಒಂದು ಇಂಚಿನಷ್ಟು ಉದ್ದವಿರುತ್ತವೆ. ತೊಗಟೆಯು ಕಪ್ಪು ಮತ್ತು ಕಂದು ಮಿಶ್ರಿತವಾದ ಬೂದುಬಣ್ಣವನ್ನು ಹೊಂದಿರುತ್ತದೆ. ಮಧ್ಯಮ ಎತ್ತರದ ಈ ಮರದ ಹೂವುಗಳ ಬಣ್ಣವು ಕೆಂಪು ಮಿಶ್ರಿತವಾದ ಹಳದಿ ಬಣ್ಣವನ್ನು ಹೊಂದಿರುತ್ತದೆ. ಪುಷ್ಪದಳಗಳು ಸ್ವಲ್ಪ ಅಗಲವಾಗಿರುತ್ತವೆ. ಇದರ ಕಾಯಿಗಳು ಎರಡು ಕಡೆಗಳಲ್ಲಿಯೂ ಚೂಪಾದ ಮೊನೆಗಳನ್ನು ಹೊಂದಿದ್ದು 2 ರಿಂದ 3 ಇಂಚು ಉದ್ದವಿದ್ದು ಅಗಲವು 4 ಇಂಚು ಇರುತ್ತದೆ. ಈ ಮರದ ಒಳಭಾಗವು ಬಹಳ ಗಟ್ಟಿಯಾಗಿದ್ದು ಕಪ್ಪು ಮಿಶ್ರಿತವಾದ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಹೊರಭಾಗದ ಮರವು ಹಳದಿ ಮಿಶ್ರಿತವಾದ ಬಿಳಿ ಬಣ್ಣದ್ದಾಗಿರುತ್ತದೆ. ಈ ಮರಕ್ಕೆ ಒಳ್ಳೆಯ ಮೆರಗು ತೆಗೆದುಕೊಳ್ಳುವ ಗುಣವಿದೆ. ಗೆಜ್ಜಲು ಹುಳುಗಳು ಈ ಮರದ ಉಪಕರಣಗಳನ್ನು ನಾಶಮಾಡಲಾರವು. ಈ ಮರವು ಘನ ಅಡಿಗೆ 60 ರಿಂದ 70 ಪೌಂಡುಗಳು ತೂಕವಿರುತ್ತದೆ. ಈ ಮರದ ಬೀಜಗಳಿಂದಲೇ ಸಸಿಯನ್ನೆಬ್ಬಿಸಿ ಬೆಳೆಸಬಹುದು. ಈ ಮರದ ವರ್ಣತಂತುಗಳ ಸಂಖ್ಯೆ 2n=26 (Atchison 1948).

ಉಪಯೋಗಗಳು : ಎಲೆ ಅಡಿಕೆಗಳ ಜೊತೆಯಲ್ಲಿ ಹಾಕಿಕೊಳ್ಳುವ ಕಾಚನ್ನು ತಯಾರಿಸಲು ಈ ಮರದ ಒಳಭಾಗದ ಚಕ್ಕೆಗಳನ್ನು ನೀರಿನಲ್ಲಿ ಕುದಿಸುತ್ತಾರೆ. ಬಹಳ ಒಳ್ಳೆಯ ಮರವಾದ ಇದನ್ನು ಕೆಲವೆಡೆಗಳಲ್ಲಿ ಆಯುಧಗಳ ಹಿಡಿಗಳು ವ್ಯವಸಾಯೋಪಕರಣಗಳನ್ನು ಮಾಡಲೂ, ಕಬ್ಬು ಹಿಂಡುವ ಯಂತ್ರಗಳ ಭಾಗಗಳನ್ನು ಮಾಡಲೂ ಕೆಲವೆಡೆಗಳಲ್ಲಿ ಉಪಯೋಗಿಸುತ್ತಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಈ ಒಳ್ಳೆಯ ಮರವನ್ನು ಹೆಚ್ಚಾಗಿ ಇದ್ದಿಲಿಗಾಗಿಯೂ, ಸೌದೆಗಾಗಿಯೂ ಉಪಯೋಗಿಸುತ್ತಿರುವುದು ವಿಷಾದಕರ.

ಕಾಟಿಕುಂಬಳ (Trewia nudiflora Linn.)

ಉನ್ನತವಾಗಿ ಬೆಳೆಯುವ ಈ ಮರವು 60 ರಿಂದ 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಮೈಸೂರು ದೇಶದಲ್ಲಲ್ಲದೆ ,ಬಂಗಾಳ ಬಿಹಾರ, ಅಸ್ಸಾಂಗಳಲ್ಲೂ ಸಹ ಈ ಮರವು ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=22 (Bhadhuri 1949). ಫೆಬ್ರುವರಿ ಅಥವಾ ಮಾರ್ಚಿ ತಿಂಗಳಿನಲ್ಲಿ ಸುಮಾರು 20 ದಿನಗಳ ಕಾಲ ಈ ಮರದಲ್ಲಿ ಎಲೆಗಳಿರುವುದಿಲ್ಲ. ಗಂಡು ಮತ್ತು ಹೆಣ್ಣು ಹೂವುಗಳು ಬೇರೆ ಬೇರೆಯೇ ಇರುತ್ತವೆ. ಗಂಡು ಹೂವಿಗೆ ಸಣ್ಣ ತೊಟ್ಟು ಮಾತ್ರ

ಇರುತ್ತದೆ. ಹಣ್ಣುಗಳು ಗಟ್ಟಿಯಾಗಿದ್ದು ಮರದ ಕೆಳಗೆಲ್ಲಾ ಉದುರಿರುತ್ತವೆ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಈ ಮರ ಬಹಳ ಮೃದುವಾಗಿರುತ್ತದೆ. ಆದ್ದರಿಂದ ಬೆಂಕಿಕಡ್ಡಿಗಳ ತಯಾರಿಕೆಯಲ್ಲಿ ಈ ಮರವನ್ನು ಉಪಯೋಗಿಸುತ್ತಾರೆ. ಹಣ್ಣುಗಳು ತಿನ್ನಲು ಯೋಗ್ಯವೆಂದು ಹೇಳುತ್ತಾರೆ.

ಕಾಡರಳಿ (ಬೆಟ್ಟದ ಅರಳಿ) Ficus rumphii Blume.

ಬೆಟ್ಟಗುಡ್ಡ ಪ್ರದೇಶಗಳಲ್ಲಿ ಬೆಳೆಯುವ ಈ ಮರವು ಅರಳಿ ಮರದಂತೆಯೇ ಕಾಣುವುದರಿಂದ ಕಾಡರಳಿ, ಬೆಟ್ಟದರಳಿ ಎಂದು ಕರೆಯುತ್ತಾರೆ. ಇದು ಮೈಸೂರಿನಲ್ಲಲ್ಲದೆ ಪಂಜಾಬ್. ಮಧ್ಯಪ್ರದೇಶ ಮತ್ತು ಅಸ್ಸಾಂಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರವಿರವಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಅರಳಿಮರದ ಎಲೆಗಳಿಗಿಂತಲೂ ಈ ಮರದ ಎಲೆಗಳು ಚಿಕ್ಕದಾಗಿರುತ್ತವೆ. ಕಾಲಕಾಲಕ್ಕೆ ಎಲೆಗಳುದುರುವ ಮಧ್ಯಮ ಎತ್ತರದ ಈ ಮರವು ಜೊತೆ ಜೊತೆಯಾಗಿ ಬಿಡುವ ದುಂಡಗಿರುವ ತೊಟ್ಟಿಲ್ಲದ ಹಣ್ಣುಗಳನ್ನು ಬಿಡುತ್ತದೆ. ಇವು ½" ಇಂಚಿನಷ್ಟು ದಪ್ಪವಾಗಿದ್ದು ಮಾಗಿದ ಮೇಲೆ ಕಪ್ಪಗಾಗುತ್ತವೆ. ವರ್ಣತಂತುಗಳ ಸಂಖ್ಯೆ $2n=26$ (condit 1964)

ಉಪಯೋಗಗಳು : ಇದರ ಹಣ್ಣುಗಳು ತಿನ್ನಲು ಯೋಗ್ಯವಾದರೂ ಮೈಸೂರಿನಲ್ಲಿ ಇದನ್ನು ಉಪಯೋಗಿಸುವುದಿಲ್ಲ. ಆದರೆ ಈ ಮರದ ಹಾಲನ್ನು ಅರಿಶಿನ, ತುಪ್ಪ, ಮೆಣಸುಗಳ ಜೊತೆ ಸೇರಿಸಿ ಗೂರಲಿಗೆ ಔಷಧವಾಗಿ ಕೊಡುತ್ತಾರೆ. ಈ ಮರದ ರಸಕ್ಕೆ ವಾಂತಿಮಾಡಿಸುವ ಶಕ್ತಿಯೂ ಇದೆ.

ಕಾಡುಗಣಿಗಲ (Wrightia tomentosa Roem & Schult.)

ಈ ಸಣ್ಣಮರವು 25-30 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಈ ಮರದ ಹೂವುಗಳನ್ನು ಪೂಜೆಗಾಗಿ ಬಳಸುವುದು ಮೈಸೂರಿನಲ್ಲಿ ರೂಢಿಯಲ್ಲಿದೆ.

ಸಸ್ಯಶಾಸ್ತ್ರವಿವರಣೆ : ಈ ಮರವು ಅಪೋಸಯನೇಸಿ (Apocyanaceae) ಕುಟುಂಬಕ್ಕೆ ಸೇರಿದೆ. ಅಭಿಮುಖಪತ್ರ ಸಂಯೋಗವುಳ್ಳ ಇದರ ಎಲೆಗಳು 3 ರಿಂದ 6 ಇಂಚು ಉದ್ದಕ್ಕಿರುತ್ತದೆ. ಗುಂಪು ಗುಂಪಾಗಿ ಬೆಳೆಯುವ ಹೂವುಗಳು ಮೊದಲು ಬಿಳುಪಾಗಿದ್ದು ಕಿತ್ತ ಸ್ವಲ್ಪ ಹೊತ್ತಿನ ಅನಂತರ ಬಿಳಿಮಿಶ್ರಿತ ಹಳದಿ ಬಣ್ಣವನ್ನು ಹೊಂದುತ್ತವೆ. ½ ಅಂಗುಲ ಉದ್ದವಿರುವ ಬೀಜಗಳಿಗೆ ಧುಮುಕುಕೊಡೆ (Parachute) ಯಂತೆ ರೇಷ್ಮೆ ಎಳೆಗಳಂತಹ ತುಪ್ಪಳವಿರುತ್ತದೆ. ಈ ಮರವನ್ನು ಬೆಳೆಸ

ಬೇಕಾದರೆ ಮಾರ್ಚಿ, ಏಪ್ರಿಲ್ ತಿಂಗಳುಗಳಲ್ಲಿ ಬೀಜಗಳನ್ನು ನೆಡಬೇಕು. ಈ ಮರದ ವರ್ಣತಂತುಗಳ ಸಂಖ್ಯೆ 2n=22 (Roy & Tapadar 1964.). ಗಾಳಿಯಿಂದ ಬೀಜವು ಪ್ರಸಾರವಾಗುತ್ತದೆ.

ಉಪಯೋಗಗಳು : ಸಂತಾಲರು ಇದರ ಎಲೆಗಳನ್ನು ತಿನ್ನುತ್ತಾರೆ. ಈ ಮರವು ಬಹಳ ಮೃದುವಾಗಿರುತ್ತದೆ. ಆದರಿಂದ ಬಾಚಣಿಗೆಗಳನ್ನು ಮಾಡಲು, ಮೂರ್ತಿಗಳನ್ನು ಕೊರೆಯಲು ಬಳಸುತ್ತಾರೆ. ಈ ಮರದಿಂದ ಬರುವ ಹಳದಿಯ ಬಣ್ಣದ ಹಾಲನ್ನು ನೀರಿನೊಂದಿಗೆ ಸೇರಿಸಿ ಹಳದಿ ಬಣ್ಣವನ್ನು ತಯಾರಿಸುತ್ತಾರೆ.

ಕಾಡುಕಣಿಗಲ (ಕಲ್ತೇಗ, ಮಳೆಗೇರು) Dillenia pentagyna Roxb.

ನಮ್ಮ ರಾಜ್ಯದ ಬೆಟ್ಟಗುಡ್ಡಗಳ ಪ್ರದೇಶದಲ್ಲೆಲ್ಲಾ ಈಮರವು ಬೆಳೆಯುತ್ತದೆ. ಕೊಡಗಿನಲ್ಲಿ ಇದನ್ನು ಮಳೆಗೇರು ಎಂದು ಕರೆಯುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಡಿಲ್ಲಿನಿಯೇಸಿ (Dilleniaceae) ಕುಟುಂಬಕ್ಕೆ ಸೇರಿದೆ. ಫೆಬ್ರುವರಿಯ ಕೆಲ ದಿನಗಳಲ್ಲಿ ಎಲೆಗಳೆಲ್ಲಾ ಉದುರಿ ಬೋಳಾಗಿ ನಿಂತಿರುತ್ತದೆ. ಅಂಡಾಕೃತಿಯ ಎಲೆಗಳಿಗೆ ಮೊನಚಾದ ತುದಿಯಿರುತ್ತದೆ. ಹೂವುಗಳ ಹೂಗೊಂಚಲು ಛತ್ರಮಂಜರಿ (umbel) ಆಗಿರುತ್ತದೆ. ಪುಷ್ಪಗಳು ಹಳದಿ ಬಣ್ಣಕ್ಕಿರುತ್ತವೆ. ಹಣ್ಣುಗಳಿಗೆ ಒಳ್ಳೆಯ ವಾಸನೆ ಇರುತ್ತದೆ.

ಉಪಯೋಗಗಳು : ಮರವು ಒರಟಾದ ಎಳೆಗಳುಳ್ಳದ್ದಾಗಿ ಬಹಳ ಭಾರವಾಗಿರುತ್ತದೆ. ಘನ ಅಡಿಯೊಂದಕ್ಕೆ 56 ಪೌಂಡುಗಳಿಗಿಂತಲೂ ಹೆಚ್ಚಾಗಿ ತೂಗುತ್ತದೆ. ಹಸಿಯ ಎಲೆಗಳನ್ನು ಕೆಲವೆಡೆಗಳಲ್ಲಿ ಆಹಾರ ಪದಾರ್ಥಗಳನ್ನು ಇಟ್ಟು ಕೊಡಲು ಉಪಯೋಗಿಸುತ್ತಾರೆ. ಕೆಲವು ಕಡೆಗಳಲ್ಲಿ ಗುಡಿಸಿಲುಗಳು ಸೋರದಂತೆ ಮಾಡಲು ಗುಡಿಸಿಲುಗಳ ಮೇಲೆ ಈ ಎಲೆಗಳನ್ನು ರಾಶಿ ಹಾಕಿ ಬಿದಿರುಗಳಿಂದ ಕಟ್ಟುತ್ತಾರೆ.

ಕಾಡಗದ ಮರ (ಕಡಾಣಿ ಮರ) Mitragyna parvifolia (Roxb) korth. (=Stephegyne parvifolia (Roxb) korth.)

ಮಲೆನಾಡಿನ ಬೆಟ್ಟಗುಡ್ಡಗಳ ತಂಪಾದ ಹವೆಯುಳ್ಳ ಕಣಿವೆಗಳಲ್ಲಿ ಈ ಮರವು ಚೆನ್ನಾಗಿ ಬೆಳೆಯುತ್ತದೆ. ಇತ್ತೀಚೆಗೆ ಸಾವನದುರ್ಗದಲ್ಲಿಯೂ ಈ ಮರ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಇತ್ತೀಚಿಗೆ ಮಲೆನಾಡಿನ ಕಣಿವೆಗಳಲ್ಲಿ ಹಳೆಯ ಮರದ ಬೀಜ

ಗಳನ್ನು ತೆಗೆದುಕೊಂಡು ವನಮಹೋತ್ಸವದ ಅಂಗವಾಗಿ ಈ ಮರಗಳನ್ನು ಬೆಳೆಸುವ ಸಂಪ್ರದಾಯವು ಬಂದಿದೆ. ಸುಮಾರು 20 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ತೊಗಟೆಯು ಮೃದುವಾಗಿದ್ದು ಸ್ವಲ್ಪ ಬೂದು ಬಣ್ಣಕ್ಕಿರುತ್ತದೆ. ಎಲೆಗಳು ಅಭಿಮುಖ ಜೋಡಣೆ ಹೊಂದಿದ್ದು, ಉದ್ದವಾಗಿರುವ ತೊಟ್ಟುಗಳನ್ನು ಹೊಂದಿರುತ್ತವೆ. ಎಲೆಗಳು 6 ರಿಂದ $7\frac{1}{2}$ ಇಂಚುಗಳಷ್ಟು ಅಗಲವಾಗಿದ್ದು 10 ಇಂಚಿನಷ್ಟು ಉದ್ದವಾಗಿರುತ್ತವೆ. ಈ ಮರವು ಹೂ ಬಿಡುವ ಕಾಲವು ಮೇ-ಜೂಲೈ ಆಗಿರುತ್ತದೆ. ಗೊಂಚಲುಗಳಲ್ಲಿ ಬಿಡುವ ಇದರ ಹೂವುಗಳು ಬೆಳ್ಳಗಿರುತ್ತವೆ. ಈ ಮರದ ತೂಕವು ಘನ ಅಡಿಯೊಂದಕ್ಕೆ 35 ರಿಂದ 47 ಪೌಂಡುಗಳಷ್ಟಿರುತ್ತದೆ. ತೇವದ ಸಂಪರ್ಕವಿಲ್ಲದಿದ್ದರೆ ಮರ ಬಹುಕಾಲ ಬಾಳಬಲ್ಲದು. ಪ್ರತಿ ಕಾಯಿಯಲ್ಲಿಯೂ ಅನೇಕ ಬೀಜಗಳಿದ್ದು ಬೀಜಗಳಿಗೆ ರೆಕ್ಕೆಗಳಿರುತ್ತವೆ.

ಉಪಯೋಗಗಳು : ವ್ಯವಸಾಯದ ಸಲಕರಣೆಗಳನ್ನು ಮಾಡಿಕೊಳ್ಳಲೂ, ಬಾಚಣಿಗೆಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಮರದ ಚಮಚಗಳು, ಸೌಟುಗಳು, ಬಟ್ಟಲುಗಳು ಇವುಗಳನ್ನು ಈ ಮರದಿಂದ ಮಾಡುತ್ತಾರೆ. ಒಮ್ಮೊಮ್ಮೆ ಬಡಗಿಗಳು ಮರವನ್ನು ಕೊರೆದು ವಿಗ್ರಹಗಳನ್ನು ಮಾಡುತ್ತಾರೆ.

ಕಾಡತ್ತಿಮರ (Ficus hispida) Linn. f.

ಸಂಸ್ಕೃತದಲ್ಲಿ "ಕಾಕೌದುಂಬರಿಕಾ" ಅಥವಾ ಕಾಗೆಯ ಅತ್ತಿ ಎಂದು ಕರೆಯಿಸಿಕೊಳ್ಳುವ ಮರವೇ ಕಾಡತ್ತಿ ಮರವಾಗಿದೆ. ಈ ಸಣ್ಣ ಮರವು ಸಮುದ್ರಮಟ್ಟಕ್ಕೆ 4000 ಅಡಿಗಳ ಎತ್ತರದಲ್ಲಿರುವ ಗುಡ್ಡಗಳಲ್ಲಿಯೂ ಬೆಳೆಯಬಲ್ಲುದಾಗಿದೆ.

ಸಸ್ಯಶಾಸ್ತ್ರ ವಿವರಣೆ : ಇದು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=52 (condit 1964). ಈ ಮರವು ಬಹಳ ಹಣ್ಣುಗಳನ್ನು ಬಿಡುತ್ತದೆ.

ಉಪಯೋಗಗಳು : ಈ ಮರದ ಹಣ್ಣುಗಳನ್ನು ಹಾಲು ಕೊಡುವ ಹಸುಗಳಿಗೆ ಕೊಟ್ಟಲ್ಲಿ ಹಾಲು ಬರುವುದೇ ನಿಂತು ಹೋಗುತ್ತದೆಂದು ಕ್ಯಾಮರಾನ್ (1894) ಹೇಳಿದ್ದಾರೆ. ಈ ಮರದ ಹಣ್ಣುಗಳನ್ನು ಆಡಿನ ಹಾಲಿನಲ್ಲಿ ಕುದಿಸಿ ಕೊಟ್ಟಲ್ಲಿ ಪಿತ್ತಕೋಶದ ಪ್ರತಿಬಂಧಕವೇನಿದ್ದರೂ ನಿವಾರಣೆಯಾಗುತ್ತದೆಯೆಂದು ಆಯುರ್ವೇದದಲ್ಲಿ ಹೇಳಲಾಗಿದೆ.

ಕಾಡುಬಾಳೆ ಬೆಟ್ಟದ ಬಾಳೆ) Ensete superbum (Roxb) cheeseman. (Musa superba) Roxb.

ಅಲಂಕಾರಕ್ಕೆಂದೇ ಬೆಳೆಸುವ ಈ ಸುಂದರ ಮರವು 12 ರಿಂದ 15 ಅಡಿಗಳಷ್ಟು ಎತ್ತರವಾಗಿ ಬೆಳೆಯುತ್ತದೆ. ಈ ಮರವು ಮಲೆನಾಡಿನಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮ್ಯೂಸೇಸಿ (Musaceae) ಕುಟುಂಬಕ್ಕೆ ಸೇರಿದೆ. ಎಲೆಗಳು 8 ರಿಂದ 10 ಅಡಿ ಉದ್ದವಿದ್ದು 2 ಅಡಿ ಅಗಲ ವಿರುತ್ತದೆ.

ಉಪಯೋಗಗಳು : ಕಾಂಡ ಹಾಗೂ ಎಲೆಗಳ ತೊಟ್ಟಿನಿಂದ ಒಳ್ಳೆಯ ನಾರು ಸಿಕ್ಕುತ್ತದೆ. ಈ ಕಾಡುಬಾಳೆಯ ಹಣ್ಣುಗಳನ್ನು ತಿನ್ನುವುದಿಲ್ಲ. ಆಶ್ಚರ್ಯ ವೆಂದರೆ ಈ ಬಾಳೆಯ ಹಣ್ಣುಗಳಲ್ಲಿ ಬೀಜಗಳಾಗುತ್ತವೆ. ಈ ಬೀಜಗಳಿಂದ ಸಸಿಗಳನ್ನು ಪಡೆಯಬಹುದು.

ಕಾಡು ಹಿಪ್ಪೆ Madhuca indica J. F. Gmel. (Syn. M. latifolia Roxb. Bassialatifolia Roxb.).

ಈ ಮರವು ಮೈಸೂರಿನ ಅರಣ್ಯಗಳಲ್ಲಿ ಅಷ್ಟೇನೂ ಕಂಡುಬರುವುದಿಲ್ಲ. ಆದರೆ ಕೆಲವೆಡೆಗಳಲ್ಲಿ ಇದನ್ನು ಬೆಳೆಸಲಾಗಿದೆ. ಮರದ ಎಲೆಗಳು ವರ್ಷಕ್ಕೊಂದು ಬಾರಿ ಉದುರಿ ಹೋಗುತ್ತವೆ.



ಕಾಡುಹಿಪ್ಪೆ (ಚಿತ್ರ A)

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಪೋಟೇಸಿ (Sapotaceae) ಕುಟುಂಬಕ್ಕೆ ಸೇರಿದೆ. ಮರದ ತೊಗಟೆಯು ಕಂದು ಮಿಶ್ರಿತವಾದ ಬೂದು ಬಣ್ಣ ವನ್ನು ಹೊಂದಿರುತ್ತದೆ ಮತ್ತು ಸುಕ್ಕು ಸುಕ್ಕಾಗಿರುತ್ತದೆ. ಎಲೆಗಳು ಚರ್ಮ ದಂತೆ ಒರಟಾಗಿದ್ದು ಎಳೆಯದಾಗಿದ್ದಾಗ ಕೆಂಪಗೆ ಸುಂದರವಾಗಿರುತ್ತವೆ. ಫೆಬ್ರುವರಿ ಮತ್ತು ಮಾರ್ಚಿ ತಿಂಗಳುಗಳಲ್ಲಿ ಇವುಗಳನ್ನು ನೋಡುವುದೇ ಒಂದು ರಮ್ಯ ಮನೋ

ಹರ ಸ್ನೋಟವಾಗಿರುತ್ತದೆ. ಈ ಮರವು ರಾತ್ರಿಯ ವೇಳೆಯಲ್ಲಿಯೇ ಹೂ ಬಿಡುತ್ತದೆ. ಸೂರ್ಯೋದಯದ ಹೊತ್ತಿಗೆ ಎಲ್ಲ ಹೂವುಗಳೂ ಕೆಳಗೆ ಉದುರಿರುತ್ತವೆ. ಫೆಬ್ರುವರಿ-ಏಪ್ರಿಲ್ ತಿಂಗಳುಗಳು ಈ ಮರದ ಹೂ ಬಿಡುವ ಕಾಲವಾಗಿದೆ. ಜೂನ್-ಜೂಲೈ ತಿಂಗಳುಗಳಲ್ಲಿ ಮಾಗುವ ಈ ಮರದ ಹಸಿರು ಬಣ್ಣದ ಹಣ್ಣುಗಳನ್ನು ತಿನ್ನುತ್ತಾರೆ.



ಕಾಡುಹಿಪ್ಪೆ (ಚಿತ್ರ B)

ಉಪಯೋಗಗಳು : ಈ ಮರದ ಹೂಗಳನ್ನು ಹಸಿಯಾಗಿಯೇ ತಿನ್ನುತ್ತಾರೆ. ಬೇಯಿಸಿ ತರಕಾರಿಯಂತೆ ಉಪಯೋಗಿಸುವುದೂ ಉಂಟು. ಹೂವುಗಳನ್ನು ಕೊಳೆಯಿಸಿ ಮಧ್ಯಸಾರ ಪಡೆಯಬಹುದು. ಬೀಜಗಳಿಂದ ಎಣ್ಣೆಯನ್ನು ತೆಗೆದು ತುಪ್ಪಕ್ಕೆ ಬದಲಾಗಿ ಉಪಯೋಗಿಸುತ್ತಾರೆ. ಎಣ್ಣೆಯನ್ನು ತೆಗೆದ ಅನಂತರ ಉಳಿಯುವ ಹಿಂಡಿಯನ್ನು ಗೊಬ್ಬರಕ್ಕೆ ಉಪಯೋಗಿಸಲಾಗುತ್ತದೆ. ಈ ಮರದ ತೊಗಟೆಯಿಂದ ಬಣ್ಣವನ್ನು ತೆಗೆಯುತ್ತಾರೆ. ಇದನ್ನು ರಸ್ತೆಯ ಸಾಲು ಮರವಾಗಿ ಬೆಳೆಯಿಸಬಹುದು. ಒಳ್ಳೆಯ ನೆರಳನ್ನು ಕೊಡುತ್ತದೆ. ಬೀಜಗಳಿಂದಲೇ ಸಸಿಯನ್ನು ಪಡೆಯಬಹುದು. ಸಂಧಿವಾತ ಕಾಯಿಲೆಯನ್ನು ಗುಣಪಡಿಸಲು ಈ ಮರದ ಹಾಲಿನಂತಹ ದ್ರವವನ್ನು ಉಪಯೋಗಿಸುತ್ತಾರೆ. ಒಳಭಾಗದ ಮರವು ಕಂದು ಮಿಶ್ರಿತವಾದ ಕೆಂಪು ಬಣ್ಣವನ್ನು ಹೊಂದಿರುತ್ತದೆ.

ಕಾಡುಹರಳು (ತುರುಕಹರಳು, ಮರಹರಳು) Jotropha curcas L.

ಮೂಲತಃ ಅಮೇರಿಕದಲ್ಲಿ ಬೆಳೆಯುತ್ತಿದ್ದ ಈ ಮರವನ್ನು ಬ್ರೆಜಿಲ್‌ನಿಂದ ಪೋರ್ಚುಗೀಸರು ಇಂಡಿಯಾಕ್ಕೆ ತಂದರೆಂಬ ನಂಬಿಕೆಯಿದೆ. ನಮ್ಮಲ್ಲಿ ಬೇಲಿಯಂಚಿನಲ್ಲಿ ಈ ಮರವನ್ನು ಬೆಳೆಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 5n = 22 (Perry 1943) ಈ ಮರಕ್ಕೆ ಮೈಯೆಲ್ಲಾ ಹಾಲು. 3-4 ಮೀಟರುಗಳಷ್ಟು ಎತ್ತರ ಬೆಳೆಯುತ್ತದೆ. ಹೃದಯಕಾರದ ಈ ಮರದ ಎಲೆಗಳು 3 ರಿಂದ 5 ಮೂತಿಗಳನ್ನು ಹೊಂದಿರುತ್ತವೆ. ಇದರ ಹೂವುಗಳು ಹಳದಿ ಮಿಶ್ರಿತ ಹಸಿರು ಬಣ್ಣವನ್ನುಹೊಂದಿದ್ದು 7 ಮಿ. ಮೀಟರ್‌ಗಳಷ್ಟು ದೊಡ್ಡದಾಗಿರುತ್ತವೆ. ಕಾಳುಗಳು ಒಂದು ಇಂಚಿನಷ್ಟು ದೊಡ್ಡವಿರುತ್ತವೆ. ಬೀಜಗಳು ಕಂದು ಮಿಶ್ರಿತವಾದ ಕಪ್ಪು ಬಣ್ಣವನ್ನು ಹೊಂದಿದ್ದು ಆಕಾರದಲ್ಲಿ ಹರಳಿನಂತೆಯೇ ಇರುತ್ತವೆ.

ಉಪಯೋಗಗಳು : ಇದರ ಎಲೆಗಳ ರಸವನ್ನು ಸವರಿದರೆ ಸಸ್ತನಿಗಳಲ್ಲಿ ಹಾಲೊಸರುವುದು ಹೆಚ್ಚಾಗುವುದೆಂಬ ನಂಬಿಕೆ ಇದೆ. ದನಗಳು ಇದನ್ನು ತಿನ್ನುವುದಿಲ್ಲ ವಾದರಿಂದ ತೋಟಗಳ ಬೇಲಿಗೆ ಈ ಮರಗಳನ್ನು ಹಾಕುತ್ತಾರೆ. ಎಲೆಯು ಕಡ್ಡಿಗಳು ಹಲ್ಲುಜ್ಜಲು ಒಳ್ಳೆಯದೆಂದು ರೈತರು ಹೇಳುತ್ತಾರೆ. ಬೀಜಗಳಿಂದ ತೆಗೆದ ಎಣ್ಣೆಯನ್ನು ಮೇಣದ ಬತ್ತಿಯ ತಯಾರಿಕೆಯಲ್ಲೂ, ಸೋಪು ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಇದರ ಬೀಜಗಳಿಗೆ ವಿರೇಚಕ ಗುಣವಿದೆ ತಿರುವಾಂಕೂರಿನಲ್ಲಿ ಇದರ ಬೀಜಗಳನ್ನು ಅರೆದು ಕೊಬ್ಬರಿ ಎಣ್ಣೆಯನ್ನು ಸೇರಿಸಿ ಇಲಿ ಪಾಷಾಣವನ್ನಾಗಿ ಉಪಯೋಗಿಸುತ್ತಾರೆ. ಸಂಧಿವಾತ ಹಾಗೂ ಕುಷ್ಠ ರೋಗಗಳನ್ನು ಗುಣಪಡಿಸಲು ಇದರ ತೊಗಟೆ ಹಾಗೂ ಬೇರಿನ ಕಷಾಯಗಳನ್ನು ಉಪಯೋಗಿಸುತ್ತಾರೆ. ಜಾವಾ, ಮಲಯಾಗಳಲ್ಲಿ ಇದರ ಎಳೆಯ ಎಲೆಗಳನ್ನು ಬೇಯಿಸಿ ತಿನ್ನುತ್ತಾರೆ. ಇದರ ಎಲೆ ಮತ್ತು ತೊಗಟೆಗಳಿಂದ ಹಳದಿಯ ಬಣ್ಣವೊಂದನ್ನು ತೆಗೆದು ಹತ್ತಿ ಬಟ್ಟೆಗಳಿಗೆ ಹಾಕುತ್ತಾರೆ.

ಕಾಲ್ಬನ್ ಮರ (ಹೈಗ, ಹರಿಬೋವಿಗೆ, ಉಣ್ಣೆ, ನಾಯಿಇರುವು)
Hopea wightiana Wall.

ನಿತ್ಯಹರಿದ್ವರ್ಣದ ಈ ದೊಡ್ಡ ಮರವು ಮೈಸೂರಿನ ಗುಡ್ಡಗಾಡಿನ ಎತ್ತರದ ಷೋಲಾ ಅರಣ್ಯಗಳಲ್ಲೆಲ್ಲಾ ಬೆಳೆಯುತ್ತದೆ. ಆಕಾರದಲ್ಲಿ ಇದು ಕಿರಲ್‌ಬೋಘಿ ಮರವನ್ನೇ (Hopea parviflora Bedd.) ಹೋಲುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಡಿಪ್ಟಿರೋಕಾರ್ಪೇಸಿ (Diptero carpaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು 5 ರಿಂದ 8 ಇಂಚು ಉದ್ದ 23 ಇಂಚು ಅಗಲವಿರುತ್ತವೆ. ಹೂವುಗಳು ಬಿಳುಪು ಮಿಶ್ರಿತವಾದ ಕೆಂಪು ಬಣ್ಣವನ್ನು ಹೊಂದಿರುತ್ತವೆ. ಕಾಯಿಗಳು ದುಂಡಗೆ ಇದ್ದು ರೆಕ್ಕೆಗಳನ್ನು ಹೊಂದಿರುತ್ತವೆ.

ಉಪಯೋಗಗಳು : ಸೌದೆಗಾಗಿಯೂ, ಇದ್ದಿಲಿಗಾಗಿಯೂ ಈ ಮರವನ್ನು ಉಪಯೋಗಿಸುತ್ತಿದ್ದಾರೆ. ಇಂತಹ ಒಳ್ಳೆಯ ಮರವನ್ನು ಇದಕ್ಕಾಗಿ ಬಳಸುತ್ತಿರುವುದು ವಿಷಾದಕರ. ಕೆಂಪುಮಿಶ್ರಿತ ಕಂದು ಬಣ್ಣವನ್ನು ಹೊಂದಿರುವ ಗಟ್ಟಿಯಾದ ಈ ಮರವು ಘನ ಅಡಿಯೊಂದಕ್ಕೆ 62 ರಿಂದ 68 ಪೌಂಡುಗಳಷ್ಟು ತೂಗುತ್ತದೆ. ಈ ಮರವನ್ನು ತೊಲೆಗಳಿಗೂ, ಕಂಬಗಳಿಗೂ, ಗಾಡಿ ಮತ್ತು ಮನೆ ಕಟ್ಟುವ ಸಾಮಾನುಗಳನ್ನು ಮಾಡಲೂ ಉಪಯೋಗಿಸಬಹುದು.

ಕಾಲಾದ್ರಿ (ರಸಬೀಜ, ಥಪ್ಸಿ)

Holoptelea integrifolia (Roxb) planch.

ಈ ಮರವು ಹಾಸನ, ಶಿವಮೊಗ್ಗ, ಕಡೂರು ಪ್ರದೇಶಗಳಲ್ಲಿ ವಿಶೇಷವಾಗಿ ಕಂಡು ಬರುತ್ತದೆ. ಒಳ್ಳೆಯ ವಾತಾವರಣವಿದ್ದಲ್ಲಿ ಈ ಮರವು ಬಹಳ ಎತ್ತರಕ್ಕೆ ಬೆಳೆಯಬಲ್ಲುದು. ಇದು ಅಜ್ಮೀರ್, ಬಿಹಾರ್, ಒರಿಸ್ಸಾಗಳಲ್ಲೂ ಇದೆ.



(ಮರದ ಅಡ್ಡಸೀಳಿನ ಒಂದು ಭಾಗ) ಕಾಲಾದ್ರಿ

ಸಸ್ಯಶಾಸ್ತ್ರ ವಿವರಣೆ : ಈ ಮರವು ಅಲ್ಮೇಸಿ (Ulmaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=28$ (Kapoor 1937). ಬೀಜಗಳಿಂದಲೋ ಅಥವಾ ಸಣ್ಣಪುಟ್ಟ ರೆಂಬೆಗಳನ್ನು ಕಡಿದು ನೆಡುವುದರಿಂದಲೋ ಈ ಮರವನ್ನು ಬೆಳೆಸಬಹುದು. ಈ ದೊಡ್ಡ ಮರವು ಸಮುದ್ರ ಮಟ್ಟಕ್ಕೆ 2000 ಅಡಿ ಎತ್ತರದ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ. ಇದರ ತೊಗಟೆಯು ಬೂದು ಬಣ್ಣಕ್ಕಿರುತ್ತದೆ ಇದರ ಎಲೆಗಳ ಕೆಳಭಾಗವು ದುಂಡಗಿದ್ದರೂ ತುದಿಯು ಚೂಪಾ

ಗಿರುತ್ತದೆ. ಹೂವುಗಳು ಹಸಿರುಮಿಶ್ರಿತ ಹಳದಿ ಬಣ್ಣವನ್ನು ಹೊಂದಿರುತ್ತವೆ. ಕಾಯಿಗಳಿಗೆ ತೆಳ್ಳನೆಯ ರೆಕ್ಕೆ ಇರುತ್ತದೆ. ಬೀಜಗಳು ಚಪ್ಪಟೆಯಾಗಿರುತ್ತವೆ.

ಉಪಯೋಗಗಳು : ಮೃದುವಾದ ಈ ಮರವು ತೆರೆದ ಎಳೆಗಳನ್ನು ಹೊಂದಿದ್ದು ಗಟ್ಟಿಯಾಗಿರುತ್ತದೆ. ಒಂದು ಘನ ಅಡಿಗೆ 37 ಪೌಂಡುಗಳಷ್ಟು ತೂಗುತ್ತದೆ. ಬೂದು ಬಣ್ಣದ ತೊಗಟೆಯು ಆಗಾಗ್ಗೆ ಬೀಳುತ್ತಿರುತ್ತದೆ. ಈ ಮರವನ್ನು ಮನೆಯ ಮರಮುಟ್ಟುಗಳಿಗಾಗಿ ಹಾಗೂ ಗಾಡಿಗಳನ್ನು ತಯಾರಿಸಲೂ, ಕೊರೆದು ಸಾಮಾನುಗಳನ್ನು ತಯಾರಿಸಲೂ ಉಪಯೋಗಿಸಲಾಗುತ್ತದೆ. ಇದ್ದಿಲನ್ನು ಮಾಡುವುದಕ್ಕೆ ಈ ಮರದ ವಂಶವನ್ನೇ ನಾಶಮಾಡುವ ಹವಣಿಕೆಯು ಈಗ ನಡೆಯುತ್ತಿದೆ. ದನಗಳು ಇದರ ಎಲೆಗಳನ್ನು ತಿನ್ನುತ್ತವೆ.

ಕಾವಲ್ (ಕಾವಲು, ಗೊಂಜು, ಗವುಲ್ಲು) Careya arborea Roxb.

ಮೈದಾನ ಪ್ರದೇಶಗಳಲ್ಲಿ ಈ ಮರವು ಸಣ್ಣಗಿದ್ದರೂ ಬೆಟ್ಟ ಗುಡ್ಡಗಳ ತಂಪಾದ ಪ್ರದೇಶವಲ್ಲಿ ದೊಡ್ಡವಾಗಿ ಬೆಳೆಯುತ್ತದೆ. ಈ ಮರವು ಬಂಗಾಳ. ಮಧ್ಯಪ್ರದೇಶ, ಒರಿಸ್ಸಾ ಹಾಗೂ ಮಹಾರಾಷ್ಟ್ರಗಳಲ್ಲೂ ಬೆಳೆಯುತ್ತದೆ. ಬೇಸಿಗೆಯಲ್ಲಿ ಎಲೆಗಳು ಉದುರುವ ಕಾಡುಗಳ ಈ ಮರವು 30 ರಿಂದ 60 ಅಡಿಗಳಷ್ಟು ಎತ್ತರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಟೇಸಿ (Myrataceae) ಕುಟುಂಬಕ್ಕೆ ಸೇರಿದೆ. ಈ ಮರದ ಚೇಗು ಕೆಂಪು ಮಿಶ್ರಿತವಾದ ಕಂದು ಬಣ್ಣಕ್ಕಿದ್ದು ಹೊರಗೆ ಬೆಳ್ಳಗಿರುತ್ತದೆ. ತೂಕವು ಒಂದು ಘನ ಅಡಿಗೆ 43 ರಿಂದ 46 ಪೌಂಡುಗಳಾಗಿರುತ್ತದೆ. ಪ್ರತಿ ಹಣ್ಣಿನಲ್ಲೂ 10 ರಿಂದ 18 ಬೀಜಗಳಿರುತ್ತವೆ. ಈ ಬೀಜಗಳಿಂದ ಸಸಿಗಳನ್ನು ಪಡೆಯುಬಹುದು.

ಉಪಯೋಗಗಳು : ಹಿಂದೆ ಈ ಮರವನ್ನು ಸಿಪಾಯಿಗಳ ತಮಟೆಗಳ ಮರದ ಭಾಗವನ್ನು ಮಾಡಲು ಉಪಯೋಗಿಸುತ್ತಿದ್ದರು. ಆದರೆ ಈಗ ಮೈಸೂರಿನಲ್ಲಿ ಇದರಿಂದ ಮರದ ಪಾತ್ರೆಗಳನ್ನೂ, ವ್ಯವಸಾಯದ ಉಪಕರಣಗಳನ್ನೂ, ಮಾಡಲು ಮಾತ್ರ ಉಪಯೋಗಿಸಲಾಗುತ್ತಿದೆ. ಚೀಲಗಳನ್ನು ತಯಾರಿಸಲು ತೊಗಟೆಯಿಂದ ತೆಗೆದ ನಾರನ್ನು ಉಪಯೋಗಿಸುತ್ತಾರೆ. ಅಲ್ಲದೆ ಬಣ್ಣ ತೆಗೆಯಲೂ ಉಪಯೋಗಿಸುತ್ತಾರೆ. ಬೀಜಗಳು ವಿಷ ಪೂರಿತವೆಂದು ಹೇಳಲಾಗಿದೆ. ಎಲೆಗಳನ್ನು ಬೀಡಿ ಸುತ್ತಲು ಉಪಯೋಗಿಸುತ್ತಾರೆ. ಈ ಮರವನ್ನು ಹದಮಾಡಿ ಬಂದೂಕದ ಹಿಡಿಗಳು, ಹಲಗೆಗಳು ಮನೆಕಂಬಗಳು. ರೈಲ್ವೆಸ್ಲೀಪರುಗಳು ಮುಂತಾದುವುಗಳನ್ನು ಮಾಡಲೂ ಉಪಯೋಗಿಸಬಹುದು. ಇವರ ಹಣ್ಣುಗಳನ್ನು ತಿಂದರೆ ಆಹಾರ ಜೀರ್ಣಕ್ರಿಯೆ ಚೆನ್ನಾಗುತ್ತದೆಯೆಂದು ಹೇಳಲಾಗಿದೆ. ಈ ಮರದ ಒಳತೊಗಟೆಯನ್ನು ಪಾದರಕ್ಷೆಗಳಿಗೆ ಉಜ್ಜಿದರೆ ಜಿಗಣೆ

ಗಳು ಪಾದರಕ್ಷೆಗೆ ಹತ್ತುವುದಿಲ್ಲ. ಇದರ ಎಲೆಗಳಲ್ಲಿ ಶೇ. 19 ರಷ್ಟು ಟ್ಯಾನಿನ್ ಇರುತ್ತದೆ. ಇದರ ತೊಗಟೆಯಿಂದ ನಾರು ತೆಗೆಯಬಹುದು. ಕಂದು ಬಣ್ಣದ ಕಾಗದವನ್ನು ಮಾಡಲು ಹಿಂದೆ ಈ ಮರದ ತೊಗಟೆಯನ್ನು ಉಪಯೋಗಿಸುತ್ತಿದ್ದರು.

ಕಿರಲ್ ಬೋಘಿ (ಬೋಗಿ, ತಿರ್ಪುಲ್, ತಿರ್ಪು ಬೋವಿಗೆ.)

Hopea parviflora Bedd.

ನಿತ್ಯ ಹರ್ಿದ್ವರ್ಣದ ಮೈಸೂರಿನ ಷೋಲಾ ಅರಣ್ಯಗಳಲ್ಲೆಲ್ಲಾ ಈ ಉನ್ನತ ವೃಕ್ಷ ಬೆಳೆಯುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ಶಿವಮೊಗ್ಗೆಯಲ್ಲೂ, ಉತ್ತರ ಕನ್ನಡ ಜಿಲ್ಲೆಯಲ್ಲೂ ಚೆನ್ನಾಗಿ ಬೆಳೆಯುತ್ತದೆ. ಪಶ್ಚಿಮ ಘಟ್ಟಗಳಲ್ಲೂ ಹೇರಳವಾಗಿದೆ.



(ಮರದ ಅಡ್ಡಸಿಳೀನ ಒಂದು ಭಾಗ) ಕಿರಲ್‌ಬೋಘಿ

ಸಸ್ಯಶಾಸ್ತ್ರ ವಿವರಣೆ : ಈ ಮರವು ಡಿಪ್ಟಿರೋ ಕಾರ್ಪೇಸಿ (Diptero carpaceae) ಕುಟುಂಬಕ್ಕೆ ಸೇರಿದೆ. ಅಲಂಕಾರಿಕ ವೃಕ್ಷವಾಗಿ ಬೆಳೆಸಲು ಇದು ಯೋಗ್ಯವಾದದ್ದಾದರೂ ಇದು ಸಮುದ್ರ ಮಟ್ಟಕ್ಕೆ 2500 ಅಡಿಗಳ ಕೆಳಗೆ ಚೆನ್ನಾಗಿ ಬೆಳೆಯುವುದಿಲ್ಲ. ಸುಮಾರು 120 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರವು 18 ಅಡಿಗಳಷ್ಟು ಸುತ್ತಳತೆಯನ್ನು ಗಳಿಸಬಲ್ಲುದು. ಎಳೆಯ ಮರಗಳಲ್ಲಿ ತೊಗಟೆಯು ಸ್ವಲ್ಪ ಕಂದು ಬಣ್ಣಕ್ಕಿದ್ದು ಮೃದುವಾಗಿದ್ದರೂ, ಬಲಿತ ಮರಗಳಲ್ಲಿ ಒರಟಾಗಿರುತ್ತದೆ. ಎಲೆಗಳು ಚೂಪಾದ ತುದಿಯನ್ನು ಹೊಂದಿದ್ದು $3\frac{1}{2}$ ಇಂಚು ಉದ್ದವಿದ್ದು 1.5 ಇಂಚು ಅಗಲವಿರುತ್ತವೆ. ಇದರ ಹೂವುಗಳು ಸಣ್ಣಗಿದ್ದು ಹಳದಿ ಮಿಶ್ರಿತ ಮುಂಕಾದ ಬಿಳಿಯ ಬಣ್ಣವನ್ನು ಹೊಂದಿದ್ದು ವಾಸನಾಭರಿತವಾಗಿರುತ್ತದೆ. ಗೊಂಚಲುಗಳಲ್ಲಿ ಹೂ

ಬಿಡುತ್ತದೆ. ಇದರ ಕಾಯಿಯು ಚಿಕ್ಕದಾಗಿದ್ದು, ಛತ್ತದ ಒಣ ಹುಲ್ಲಿನ ಬಣ್ಣಕ್ಕಿದ್ದು ರೆಕ್ಕೆಗಳನ್ನು ಹೊಂದಿರುತ್ತದೆ.

ಇದರ ಮರವು ಕೆಂಪು ಮಿಶ್ರಿತ ಕಂದುಬಣ್ಣಕ್ಕಿದ್ದು ಅಲ್ಲಲ್ಲೆ ಬಿಳಿ ಜಾಗಗಳನ್ನು ಹೊಂದಿರುತ್ತದೆ. ಒಳ್ಳೆಯ ಎಳೆಗಳನ್ನು ಹೊಂದಿದ್ದು ತೂಕವಾಗಿರುತ್ತದೆ. (ನೋಡಿ : ಚಿತ್ರ) ಘನ ಅಡಿಯೊಂದಕ್ಕೆ 58 ರಿಂದ 62 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಈ ಮರವು ಬಹಳ ಗಟ್ಟಿಯಾದದ್ದು. ಆದ್ದರಿಂದ ದೋಣಿಗಳನ್ನು ಕಟ್ಟಲು, ರೈಲ್ವೆ ಸ್ಲೀಪರುಗಳನ್ನು ಮಾಡಲು, ಗಾಡಿಗಳನ್ನು ಮಾಡಲು ಉಪಯೋಗಿಸುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇವಸ್ಥಾನಗಳನ್ನು ಕಟ್ಟುವುದಕ್ಕಾಗಿಯೇ ಈ ಮರವನ್ನು ಮಡುಪಾಗಿಡುತ್ತಾರೆ. ಕೋಲಾರದ ಚಿನ್ನದ ಗಣಿಗಳಲ್ಲಿ ತೊಲೆಗಳಿಗಾಗಿ ಈ ಮರವನ್ನು ಉಪಯೋಗಿಸಿದ್ದಾರೆ.

ಕಿರುನೆಲ್ಲಿ ಮರ Cicca acida (L) Merr. (Syn. Phyllanthus distichus, P. acidus (L) Skeels.

ಮಡಗಾಸ್ಕರ್ ಮತ್ತು ಮಲಯಾಗಳಲ್ಲಿ ಬೆಳೆಯುತ್ತಿದ್ದ ಈ ಮರವನ್ನು ಇಂಡಿಯಾದ ಎಲ್ಲ ಕಡೆಗಳಲ್ಲೂ ಬೆಳೆಸಲಾಗುತ್ತಿದೆ. ದುಂಡನೆಯ ತಲೆಯುಳ್ಳ ಈ ಮರವು 20 ರಿಂದ 30 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ಬೆಂಗಳೂರಿನಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಈ ಮರವು ಸುಮಾರು 15–20 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ಮರದ ತೊಗಟೆಯು ಬೂದು ಬಣ್ಣಕ್ಕಿದ್ದು ಒರಟಾಗಿರುತ್ತದೆ. ಬೇಸಿಗೆಯ ಕೊನೆಗೆ ಎಲೆಗಳೆಲ್ಲ ಉದುರಿ ಹೋಗುತ್ತವೆ. ಆದರೆ ಜೂನ್‌ನಲ್ಲಿ ಎಲೆಗಳಿಗೆ ಮುಂಚೆಯೇ ಹೂವುಗಳು ಮೂಡುತ್ತವೆ. ಈ ಏಕಲಿಂಗ ಪುಷ್ಪಗಳ ಬಣ್ಣ ಸ್ವಲ್ಪ ಕೆಂಪು. ಆದರೆ ಬೆಂಗಳೂರಿನಲ್ಲಿ ಈ ಮರವು ಫೆಬ್ರುವರಿ, ಮಾರ್ಚ್‌ಗಳಲ್ಲಿ ಫಲಪುಷ್ಪ ಭರಿತವಾಗಿರುತ್ತದೆ. ಗುಂಪು ಗುಂಪಾಗಿ ಮರದ ಎಲ್ಲ ರೆಂಬೆಗಳ ಮೇಲೂ ನೆಲ್ಲಿಕಾಯಿಗಳು ಅನಂತರ ಹುಟ್ಟುತ್ತವೆ. ಇವುಗಳ ಬಣ್ಣವು ಹಸಿರು ಮಿಶ್ರಿತ ಹಳದಿ ಬಣ್ಣವಾಗಿರುತ್ತದೆ. ಈ ಮರದ ಬೀಜಗಳನ್ನು ಕರ್ಪೂರದ ನೀರಿನಲ್ಲಿ ಅದ್ದಿ ಅನಂತರ ನೆಲಕ್ಕೆ ಹಾಕಿದರೆ ಚೆನ್ನಾಗಿ ಬೆಳೆಯುತ್ತದೆಯೆಂದು ಕ್ಯಾಮರಾನ್ (1894) ಹೇಳಿದ್ದಾರೆ.

ಉಪಯೋಗಗಳು : ಈ ನೆಲ್ಲಿಕಾಯಿಗಳನ್ನು ಉಪ್ಪಿನಕಾಯಿ ಹಾಕಲು ಉಪಯೋಗಿಸುತ್ತಾರೆ. ಟ್ಯಾನಿನ್ ಪಡೆಯಲು ತೊಗಟೆಯನ್ನು ಉಪಯೋಗಿಸುತ್ತಾರೆ.

ಕೀಚಕ (ಗೆ) (Erythrina stricta Roxb.)

ಈ ಮರವು ಕೊಡಗು, ಉತ್ತರಪ್ರದೇಶ, ಮತ್ತು ಮೈಸೂರಿನಲ್ಲಿ ಕಂಡುಬರುತ್ತದೆ. ಈ ಮರದ ಬುಡ ಹಾಗೂ ರೆಂಬೆಗಳ ಮೇಲೆ ಸಣ್ಣ ಸಣ್ಣ ಮುಳ್ಳುಗಳಿರುತ್ತವೆ. (prickles). ಹೂವುಗಳು ಕೆಂಪು ಬಣ್ಣಕ್ಕಿದ್ದು ಸುಂದರವಾಗಿರುತ್ತವೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪಾಪಿಲಿನೊಸೀ (papilionaceae) ಕುಟುಂಬಕ್ಕೆ ಸೇರಿದೆ. ಬೀಜಗಳಿಂದಲೂ, ರೆಂಬೆಗಳಿಂದಲೂ ಈ ಮರವನ್ನು ಬೆಳೆಸಬಹುದು.

ಉಪಯೋಗಗಳು : ಇದರ ಮರವು ಬಿಳುಪಾಗಿದ್ದು, ಮೃದುವಾಗಿದ್ದರೂ ಗಟ್ಟಿಯಾಗಿರುತ್ತದೆ. ತೂಕವು ಒಂದು ಘನ ಅಡಿಗೆ 16 ಪೌಂಡುಗಳು. ಜ್ವರ, ಸಂಧಿವಾತ, ಅಸ್ತಮಾ, ಕುಷ್ಠರೋಗ ಮುಂತಾದುವುಗಳಿಗೆ ಇದರ ತೊಗಟೆಯ ಚೂರ್ಣವನ್ನು ಉಪಯೋಗಿಸುತ್ತಾರೆ. ಇದರ ಹೂವುಗಳನ್ನು ವಿಷಾಪಹಾರಿಗಳಾಗಿ ಉಪಯೋಗಿಸುತ್ತಾರೆ.

ಕುಟುಗೇರಿ (**ಕೊಟಿಘೇರಿ**) Holigrana caustica (Dennst) oken. (Syn. H. longifolia Roxb.)

ಬಂಗಾಳದಲ್ಲಿ ಕಂಡು ಬರುವ ಈ ಮರವು ನಮ್ಮ ಪಶ್ಚಿಮ ಘಟ್ಟಗಳಲ್ಲಿಯೂ ವಿಶೇಷವಾಗಿ ಬೆಳೆಯುತ್ತದೆ. ಈ ಮರವು ಬಹು ಎತ್ತರಕ್ಕೆ ಬೆಳೆಯುವ ಶಕ್ತಿಯನ್ನು ಹೊಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಮರವು ಬೂದು ಬಣ್ಣಕ್ಕಿದ್ದು ಮಧ್ಯೆ ಹಳದಿ ಎಳೆಗಳು ಬಂದಿರುತ್ತವೆ. ಈ ಮರದ ರಸವು ಮೈ ಮೇಲೆ ಹಾರಿದರೆ ಬೊಬ್ಬೆಗಳು ಏಳುವಂತೆ ಮಾಡುತ್ತದೆ. ಹೂವುಗಳು ಗುಂಪಾಗಿ ಮೂಡುತ್ತವೆ. ಹಣ್ಣು ದುಂಡಗೆ ಗಟ್ಟಿಯಾಗಿರುತ್ತದೆ.

ಉಪಯೋಗಗಳು : ಈ ಮರದ ಹಣ್ಣುಗಳಿಂದ ಕಪ್ಪುವಾರ್ನಿಷ್ ತಯಾರಿಸುತ್ತಾರೆ.

ಕುನ್ನೇರಿಳೆ (**ಕುನ್ನೇರಲು**) Eugenia Zeylanica wight.

ಶಿವಮೊಗ್ಗ, ಹಾಸನ ಜಿಲ್ಲೆಗಳಲ್ಲಿ ಈ ನಿತ್ಯ ಹರಿದ್ವರ್ಣದ ವೃಕ್ಷವು ಬೆಳೆಯುತ್ತದೆ. ಪಶ್ಚಿಮ ಘಟ್ಟಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಟೇಸಿ (Myrtaceae) ಕುಟುಂಬಕ್ಕೆ ಸೇರಿದೆ. ಇದರ ಹೂವುಗಳು ಹಾಗೂ ಹಣ್ಣುಗಳು ಬೆಳ್ಳಗಿರುತ್ತವೆ.

ಉಪಯೋಗಗಳು ; ಹಾಸನ ಮತ್ತು ಶಿವಮೊಗ್ಗಗಳಲ್ಲಿ ಇದನ್ನು ಕಟ್ಟಿಗೆ ರೂಪದಲ್ಲಿ ಉಪಯೋಗಿಸುತ್ತಾರೆ. ಮರದ ತೊಗಟೆಯನ್ನು ಔಷಧಿಯಾಗಿ ಉಪಯೋಗಿಸುತ್ತಾರೆ.

ಕುವೆ (ಸಿರುಪುನೆಕುವೆ, ಸುರಪೊನ್ನೆ, ಬೊಬ್ಬಿ) Calophyllum tomentosum wight.

ಈ ಮರವು ಪಶ್ಚಿಮ ಘಟ್ಟಗಳಲ್ಲಿ ಅತ್ಯಂತ ಉನ್ನತವಾಗಿ 150 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಉತ್ತರ ಕರ್ನಾಟಕ ಹಾಗು ತಿರುವಾಂಕೂರಿನಲ್ಲಿಯೂ ಇದು ಸಾಮಾನ್ಯವಾಗಿ ಬೆಳೆಯುತ್ತದೆ. ಪಶ್ಚಿಮ ಮಲೆನಾಡಿನ ತಂಪಾದ ಹವೆಯುಳ್ಳ ಗುಡ್ಡ ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ಈ ಮರವನ್ನು ಕಡಿದ ಮೇಲೆ ತೇವವಾದ ಗಾಳಿಯಲ್ಲಿಟ್ಟರೆ ಹಾಳಾಗುತ್ತದೆ ಎಂದು ಹೇಳುತ್ತಾರೆ. ಮರವು ಘನ ಅಡಿಗೆ 48 ಪೌಂಡುಗಳಷ್ಟು ತೂಗುತ್ತದೆ. ಈ ಮರವು ಮೈದಾನ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಲಾರದು.

ಉಪಯೋಗಗಳು : ಈ ಮರವನ್ನು ಹಡಗು ಕಟ್ಟಲು, ರೈಲ್ವೆ ಸ್ಲೀಪರ್ (Railway sleepers) ಗಳನ್ನು ಮಾಡಲು, ಮನೆ ಸಾಮಾನುಗಳನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಬೀಜದಿಂದ ಬಂದ ಎಣ್ಣೆಯನ್ನು ದೀಪ ಉರಿಸಲು ಬಳಸುತ್ತಾರೆ.

ಕುಂಕುದಮರ (ಚಂದ್ರ ಹಿಟ್ಟುಮರ, ಹುಳಿಚೆಲ್ಲು, ವಸರೆ.) Mallotus phillippensis (Lamk) Muell-Arg.

ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಚೆನ್ನಾಗಿ ಬೆಳೆಯುವ ಈ ಮರವು ಮೈಸೂರಿನಲ್ಲಿಯೇ ಅಲ್ಲದೆ ಬಂಗಾಳ, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲೂ ಬೆಳೆಯುತ್ತದೆ. ಈ ಮರದಿಂದ ಬಂದ ಕುಂಕುಮವನ್ನೇ ನಮ್ಮಲ್ಲಿ ಹೆಂಗಸರು ಮಂಗಳ ಸೂಚಕವಾಗಿಯೂ, ಅಲಂಕಾರವಾಗಿಯೂ, ಸಿಂಧೂರ ಚೂರ್ಣವಾಗಿ ಬಳಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಸಣ್ಣ ಮರವು ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಈ ಮರವು ಘನ ಅಡಿಗೆ 48

ಪೌಂಡುಗಳಷ್ಟು ತೂಗುತ್ತದೆ. ಇದೇ ಜಾತಿಗೆ ಸೇರಿದ ಬೇರೆ ಪ್ರಭೇದಗಳಾದ M. albus Muell. M. repandus Muell. M. lawii. Muell. ಮುಂತಾದುವೆಲ್ಲಾ ಮಲೆನಾಡಿನ ಅರಣ್ಯಗಳಲ್ಲಿವೆ. ಆದರೆ ಅವುಗಳ ಉಪಯೋಗದ ಬಗ್ಗೆ ಮಾಹಿತಿಯಿಲ್ಲ.



ಬಿರಟೆಮರ (Millingtonia hortensis)

ಈ ಮರದ ತೊಗಟೆಯು ತೆಳುವಾಗಿ ಬೂದು ಬಣ್ಣ ಹೊಂದಿದ್ದು ಸ್ವಲ್ಪ ಒರಟಾಗಿರುತ್ತದೆ. ಎಲೆಗಳು ಮೇಲ್ಭಾಗದಲ್ಲಿ ತುಪ್ಪಳ ರಹಿತವಾಗಿದ್ದರೂ ಕೆಳಭಾಗದಲ್ಲಿ ತುಪ್ಪಳ ಹೊಂದಿದ್ದು ಕೆಂಪು ಗ್ರಂಥಿಗಳನ್ನು ಹೊಂದಿರುತ್ತದೆ. ಇದರ ಪುಷ್ಪಗಳು ಏಕಲಿಂಗ ಪುಷ್ಪಗಳಾಗಿದ್ದು ಸಣ್ಣ ಆಕಾರದಲ್ಲಿರುತ್ತವೆ. ಗೊಂಚಲು ಗೊಂಚಲುಗಳಾಗಿ ಹೂ ಬಿಡುತ್ತವೆ. ಕಾಯಿಗಳು ದುಂಡಗಿರುತ್ತವೆ. ಮೂರು ಭಾಗವಾಗುವ ಈ ಕಾಯಿಗಳು 0.75 ರಿಂದ 1.25 ಸೆಂಟಿಮೀಟರ್ ಸುತ್ತಳತೆಯನ್ನು ಹೊಂದಿದ್ದು, ಕೆಂಪು ಮಿಶ್ರಿತ ಕಂದು ಬಣ್ಣದ ಗ್ರಂಥಿಗಳ ತುಪ್ಪಳದಿಂದ ಮುಚ್ಚಿರುತ್ತವೆ.

ಈ ಮರವು ಒಣಹವೆಯಲ್ಲೂ ಬೆಳೆಯಬಲ್ಲುದು. ಕಾಡುಗಳಿದ್ದರೆ ಗುಂಪು ಗುಂಪಾಗಿ ಬೆಳೆಯುತ್ತಿರುತ್ತದೆ.

ಉಪಯೋಗಗಳು: ಈ ಕಾಯಿಗಳ ಮೇಲೆ ಇರುವ ಕೆಂಪು ಪುಡಿಯೇ ನಮ್ಮ ಹಿಂದಿನ ಕುಂಕುಮ ಇಂದಿನ ಉತ್ತರ ಇಂಡಿಯಾದ 'ಕಮಲ'. ರೇಷ್ಮೆ ಬಟ್ಟೆಗಳಿಗೆ ಬಣ್ಣ ಹಾಕಲು ಇದನ್ನು ಉಪಯೋಗಿಸುತ್ತಾರೆ. ಹೊಟ್ಟೆಯಲ್ಲಿ ಜಂತು ಹುಳುಗಳು ಇದ್ದರೆ ಈ ಪುಡಿಯನ್ನು ಕೊಡುತ್ತಾರೆ. ಇದರ ಬೀಜಗಳಿಂದ ಎಣ್ಣೆಯನ್ನು ತೆಗೆಯುತ್ತಾರೆ. ಈ ಮರವು ಸೌದೆಗಲ್ಲದೆ ಬೇರೆ ಯಾವ ಕೆಲಸಕ್ಕೂ ಬರುವುದಿಲ್ಲ. ಕಾಯಿಗಳ ಮೇಲ್ಭಾಗದ ಕೆಂಪು ಗ್ರಂಥಿಯ ತುಪ್ಪಳದಿಂದ ಕುಂಕುಮವನ್ನು ಪಡೆದು ಅದನ್ನು ಸಿಂಧೂರ ಚೂರ್ಣವಾಗಿ ಬಳಸುತ್ತಾರೆ.

ಕೂಳಿಮರ (ಕಾಶ್ಮೀರಿಮರ) Gmelina arborea Roxb.


ಕೂಳಿ ಮರವು ಒಣ ಹವೆಯಿರುವ ಮೈಸೂರಿನ ಎಲ್ಲ ಅರಣ್ಯಗಳಲ್ಲೂ ಬೆಳೆಯುತ್ತದೆ. ಮೈಸೂರಲ್ಲದೆ ಮಹಾರಾಷ್ಟ್ರ, ಮದರಾಸು, ಮಲಬಾರ್ ಹಾಗೂ ಆಂಧ್ರ ಪ್ರದೇಶಗಳಲ್ಲೂ ಈ ಮರ ಬೆಳೆಯುತ್ತದೆ.



ಕೂಳಿಮರ (ಚಿತ್ರ A)

ಸಸ್ಯಶಾಸ್ತ್ರ ವಿವರಣೆ : ಕೂಳಿ ಮರವು ವರ್ಬಿನೇಸಿ (verbenaceae) ಕುಟುಂಬಕ್ಕೆ ಸೇರಿದೆ. ಈ ಮರದ ಎಲೆಗಳು ಅಭಿಮುಖ ಜೋಡಣೆಯನ್ನು ಹೊಂದಿದ್ದು ದೊಡ್ಡ ತೊಟ್ಟುಗಳನ್ನು ಹೊಂದಿರುತ್ತವೆ. ಎಲೆಗಳು ಎಳೆಯವಾಗಿದ್ದಾಗ ತುಪ್ಪಳ ಹೊಂದಿದ್ದು, ಬಲಿತ ಮೇಲೆ ಮೇಲ್ಮೈ ತುಪ್ಪಳ ರಹಿತವಾಗಿ ಹೊಳೆಯುತ್ತದೆ. ಹೃದಯ

ಆಕಾರದ ಈ ಎಲೆಗಳು 7 ರಿಂದ $7\frac{1}{2}$ ಇಂಚು ಉದ್ದ ಅಗಲವಾಗಿರುತ್ತವೆ. ಜೂನ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಈ ಮರ ಹೂ ಬಿಡುತ್ತದೆ. ಹೂಗಳು ಹೊರಭಾಗದಲ್ಲಿ ಕಂದು ಮಿಶ್ರಿತ ಹಳದಿ ಬಣ್ಣವನ್ನು ಹೊಂದಿದ್ದು ಒಳಭಾಗದಲ್ಲಿ ಹಳದಿಯಾಗಿರುತ್ತವೆ. ಆಕರ್ಷಣೆ ಮತ್ತು ಸುವಾಸನೆ ಎರಡನ್ನೂ ಹೊಂದಿರುತ್ತವೆ. ಹಣ್ಣುಗಳು ದುಂಡಗಿದ್ದು ಹಳದಿ ಬಣ್ಣವಾಗಿರುತ್ತವೆ. ಪ್ರತಿ ಹಣ್ಣಿನಲ್ಲಿ 1 ರಿಂದ 2 ಬೀಜಗಳಿರುತ್ತವೆ. ಈ ಮರದ ವರ್ಣತಂತುಗಳ ಸಂಖ್ಯೆ $n=19$ (Raman & Kes 1963 a)



(ಅಡ್ಡಸೀಳಿನ ಒಂದು ಭಾಗ) **ಕೂಳಿಮರ** (ಚಿತ್ರ B)

ಉಪಯೋಗಗಳು : ಈ ಮರದ ತಿರುಳನ್ನು ಕಾಗದದ ತಯಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಈ ಮರವು ಹಗುರವಾಗಿದ್ದರೂ ಬಹಳ ಗಟ್ಟಿಯಾಗಿರುತ್ತದೆ. ಘನ ಅಡಿಗೆ 30 ರಿಂದ 40 ಪೌಂಡುಗಳಷ್ಟು ತೂಗುತ್ತದೆ. ರೈಲ್ವೆ ಗಾಡಿಗಳಿಗಾಗಿಯೂ, ಮನೆಯ ಸಾಮಾನುಗಳನ್ನು ತಯಾರಿಸಿಕೊಳ್ಳಲೂ, ಕೃತಕ ಕಾಲುಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಇದರಿಂದ ಬಾಚಣಿಗೆಯಿಂದ ಹಿಡಿದು ಎಲ್ಲ ಅಲಂಕಾರಿಕ ಸಾಮಾನುಗಳನ್ನೂ ತಯಾರಿಸಬಹುದು. ತಬಲಗಳ ಮರದ ಭಾಗವನ್ನು ಈ ಮರದಿಂದಲೇ ಮಾಡಲಾಗುತ್ತದೆ. ಕೂಳಿ ಮರದ ಒಳಭಾಗದ ಮರವು ಕೆಂಪಗಿದ್ದು ಹೊರ ಭಾಗದ ಮರವು ಸ್ವಲ್ಪ ಹಳದಿ ಬಣ್ಣ ಹೊಂದಿರುತ್ತದೆ. ಮರದ ಅಡ್ಡಸೀಳಿನ ಒಳರಚನೆ ಚಿತ್ರದಲ್ಲಿ ತೋರಿಸಿರುವಂತಿರುತ್ತದೆ.

ಕ್ಯೂರಿ (Grewia laevigata Vahl.)

ಈ ಮರವು ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಸಣ್ಣ ಮರವು ಟೀಲಿಯೇಸಿ (Tiliaceae) ಕುಟುಂಬಕ್ಕೆ ಸೇರಿದೆ.

ಉಪಯೋಗಗಳು : ಇದರಿಂದ ಒಳ್ಳೆಯ ನಾರನ್ನು ತೆಗೆಯುತ್ತಾರೆ.

ಕೆಂಡಾಲ (ಚೊಟ್ಟೆಮರ, ಕಾಡುಸೊಳ್ಳೆ, ಸೊಳ್ಳೆ.) Cordia dichotoma Forsst. f.=(Cordia myxa Linn.)

ನೋಡಲಿಕ್ಕೆ ಅಂದವಲ್ಲದ ಅಸಹ್ಯಕರವಾದ ರೂಪವನ್ನು ಹೊಂದಿದ್ದು ಕಾಲ ಕಾಲಕ್ಕೆ ಎಲೆಗಳುದುರುದ ಈ ಮರವು 30-35 ಅಡಿಗಳ ಎತ್ತರಕ್ಕೆ ಬೆಳೆಯಬಲ್ಲುದು.

ಸಸ್ಯಶಾಸ್ತ್ರ ವಿವರಣೆ : ಇದು ಬೊರಾಜಿನೇಸಿ (Boraginaceae) ಕುಟುಂಬಕ್ಕೆ ಸೇರಿದೆ. ಪಿ. ಮಹೇಶ್ವರಿಯವರು ಭಾರತದ ಆರ್ಥಿಕ ಸಸ್ಯಗಳ ನಿಘಂಟಿನಲ್ಲಿ ಇದನ್ನು ಎಹ್ರಿಷಿಯೇಸಿ (Ehretiaceae) ಕುಟುಂಬದಲ್ಲಿ ಸೇರಿಸಿದ್ದಾರೆ. ಇದರ ಹಣ್ಣುಗಳು ಲೋಳೆ ದ್ರವವನ್ನು ಹೊಂದಿರುತ್ತವೆ. ಈ ಮರವು ಬೂದು ಬಣ್ಣಕ್ಕಿರುತ್ತದೆ. ಕೀಟಗಳು ಸುಲಭವಾಗಿ ಈ ಮರವನ್ನು ಕೊರೆದು ಹಾಳುಮಾಡುತ್ತವೆ.

ಉಪಯೋಗಗಳು : ಸೌದೆಗಾಗಿಯೂ, ವ್ಯವಸಾಯದ ಉಪಕರಣಗಳಿಗಾಗಿಯೂ ಉಪಯೋಗಿಸುತ್ತಾರೆ. ತೊಗಟೆಯಿಂದ ನಾರು ತೆಗೆದು ಹಗ್ಗ ಮಾಡುತ್ತಾರೆ. ಎದೆನೋವು ಹಾಗೂ ಕೆಮ್ಮುಗಳಿಗೆ ಒಣಗಿದ ಹಣ್ಣುಗಳನ್ನು ಔಷಧಿಯಾಗಿ ಕೊಡುತ್ತಾರೆ.

ಕೆಂಪುಗಂಧದ ಚಕ್ಕೆ (ರಕ್ತಚಂದನ) Pterocarpus santalinus Linn.

ಹಿಂದಿನ ಕಡಪ ಹಾಗೂ ಉತ್ತರ ಆರ್ಕಾಟ್ ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದ ಈ ಕೆಂಪು ಗಂಧದ ಮರವು ಮೈಸೂರಿನ ಪೂರ್ವದ ಬೆಟ್ಟಗಳಲ್ಲಿಯೂ ಬೆಳೆಯುತ್ತದೆ. ಇತ್ತೀಚೆಗೆ ಇದನ್ನು ನಂದೀದುರ್ಗದಲ್ಲೂ ಬೆಳೆಸಲಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ಹೂವುಗಳು ಹಾಗೂ ಹಣ್ಣುಗಳು ಹೊನ್ನೆ ಮರದವುಗಳಂತಿರುತ್ತವೆ. ಆದರೆ ಇದೊಂದು ಸಣ್ಣ ಮರ. ಮತ್ತು ಇವರಲ್ಲಿ ಮೂರಕ್ಕಿಂತ ಹೆಚ್ಚು ಬಿಡಿ ಎಲೆಗಳಿರುವುದಿಲ್ಲ. ಹೊಸದಾಗಿ ಕಡಿದಾಗ ಇದರ ಒಳಮರವು ಕಿತ್ತಳೆ ಬಣ್ಣಕ್ಕಿರುತ್ತದೆ. ಅನಂತರ ಕಪ್ಪುಮಿಶ್ರಿತ ಕೆಂಪಾಗುತ್ತದೆ. ಇದರ ಗಂಧವನ್ನು ಕೆಲವು ಸಂದರ್ಭಗಳಲ್ಲಿ ಮೈಗೆಲ್ಲಾ ಹಚ್ಚಿಕೊಳ್ಳುವುದುಂಟು. ಈ ಮರವು ಬಹಳ ತೂಕವಾಗಿರುತ್ತದೆ. ಒಂದು ಘನ ಅಡಿಗೆ 76 ಪೌಂಡುಗಳಷ್ಟು ತೂಗುತ್ತದೆ. ಆದ್ದರಿಂದ ನೀರಿನಲ್ಲಿ ಈ ಮರ ಮುಳುಗುತ್ತದೆ. ಈ ಮರವನ್ನು ಗೆಜ್ಜಲು ಹುಳು

ಗಳು ಏನೂ ಮಾಡಲಾರವು. ಆದ್ದರಿಂದಲೇ ಯೂರೋಪಿನಲ್ಲೆಲ್ಲಾ ಪ್ರಸಿದ್ಧವಾಗಿರುವ "ಫ್ರೆಂಚ್ ಪಾಲಿಷ್" ನಲ್ಲಿ ಇದನ್ನು ಸೇರಿಸಿರುತ್ತಾರೆ.

ಉಪಯೋಗಗಳು : ಈ ಮರದ ಬುಡಗಳಿಂದ ಹಾಗೂ ಬೇರುಗಳಿಂದ ಬಣ್ಣ ತೆಗೆಯುತ್ತಾರೆ. ಇದನ್ನು ಬಟ್ಟೆಗಳಿಗೆ ಚರ್ಮಕ್ಕೆ ಹಾಗೂ ಇತರೆ ಮರಕ್ಕೆ ಬಣ್ಣ ಹಾಕಲು ಉಪಯೋಗಿಸಲಾಗುತ್ತದೆ. ಮನೆ ಕಟ್ಟುವ ಸಾಮಾನುಗಳಿಗೆ ಈ ಮರ ಉತ್ಕೃಷ್ಟವಾದದ್ದು. ಆದರೆ ಈ ಮರದ ಬೆಲೆಯು ವ್ಯಾಪಾರ ದೃಷ್ಟಿಯಲ್ಲಿ ಬಹಳ ಹೆಚ್ಚು. ನಮ್ಮ ದೇಶದಿಂದ ರಫ್ತಾಗುತ್ತಿರುವ ಮರಗಳಲ್ಲಿ ಇದೂ ಒಂದು.

ಕೆಂಪುಗೇರು (ಜಿಡಿ, ಗೇರುಪೊಪ್ಪು, ಗೇರುಬೀಜ) Anacardium occidentale Linn.

ಮೂಲತಃ ಬ್ರೆಜಿಲ್ ನಿವಾಸಿಯಾಗಿದ್ದ ಈ ಸಣ್ಣ ಮರವನ್ನು ಈಗ ಮೈಸೂರು, ಮದರಾಸು, ಕೇರಳ, ಆಂಧ್ರಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಸಲಾಗುತ್ತಿದೆ. ಪೋರ್ಚುಗೀಸರಿಂದ ಇದು ನಮ್ಮ ದೇಶಕ್ಕೆ ಬಂತೆಂದು ಹೇಳುತ್ತಾರೆ.


ಸಸ್ಯಶಾಸ್ತ್ರ ವಿವರಣೆ : ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=42$ E.K.J). ಇದರ ಎಲೆಗಳು ಒರಟಾಗಿದ್ದು 4 ರಿಂದ 6 ಇಂಚು ಉದ್ದ ಹಾಗೂ 2–3 ಇಂಚು ಅಗಲವಿರುತ್ತವೆ. ಡಿಸೆಂಬರ್ ತಿಂಗಳ ಮಧ್ಯದಿಂದ ಫೆಬ್ರುವರಿ ತಿಂಗಳವರೆಗೂ ಹೂ ಬಿಡುತ್ತಿರುವ ಈ ಮರದಲ್ಲಿ ಮಾರ್ಚಿ, ಏಪ್ರಿಲ್ ತಿಂಗಳುಗಳಲ್ಲಿ ಹಣ್ಣುಗಳಾಸುತ್ತವೆ. ಕಿಂಚಪಾಲದ ಹಕ್ಕಿಗಳು ಈ ಹಣ್ಣುಗಳನ್ನು ಹಾಳು ಮಾಡಲು ಪ್ರಯತ್ನಿಸುತ್ತವೆ. ಇದರ ಹಣ್ಣು ಮೂತ್ರ ಪಿಂಡದಾಕಾರದ ಕಾಯಿ ಅದು ಸೇಬಿನಂತಿರುವ ಪುಷ್ಪಪೀಠದ ಮೇಲೆ ಕುಳಿತಿರುತ್ತದೆ.

ಉಪಯೋಗಗಳು : ಗೇರುಹಣ್ಣು ಹಾಗೂ ಗೇರುಬೀಜಗಳಿಗಾಗಿ ಈ ಮರವನ್ನು ಬೆಳೆಸುತ್ತಾರೆ. ಇದರ ಮರವು ಕೆಂಪಾಗಿದ್ದು ಘನ ಅಡಿಯೊಂದಕ್ಕೆ 38 ಪೌಂಡುಗಳಷ್ಟು ತೂಗುತ್ತದೆ. ಈ ಹಣ್ಣುಗಳಿಂದ ಒಂದು ಬಗೆಯ ಮದ್ಯಸಾರವನ್ನು ತೆಗೆಯುವ ಪ್ರಯತ್ನ ನಡೆದಿದೆ. ಬೀಜದಿಂದ ಬರುವ ಎಣ್ಣೆಯಿಂದ ಅನೇಕ ಉಪಯೋಗಗಳಿವೆ.

ಸೂಚನೆ : ಒಣ ಹವೆಯುಳ್ಳ ಪ್ರದೇಶಗಳಲ್ಲೂ ಈ ಮರವು ಚೆನ್ನಾಗಿ ಬೆಳೆಯುತ್ತದೆ. ಆದ್ದರಿಂದ ಇದನ್ನು ಎಲ್ಲ ಒಣಕಾಡುಗಳಲ್ಲೂ ಬೆಳೆಸಬಹುದು.

ಕೆಂಪು ಖೈರಾದ Acacia chundra (Roxb) Willd. (=Acacia sundra DC., Mimosa chundra (Roxb.)

ಇದನ್ನು ಕಾಚುಮರದ ಒಂದು ವಿಧವಿರಬಹುದೇ ಎಂದು ಕ್ಯಾಮೆರಾನ್ (1894) ಪ್ರಶ್ನಿಸಿದ್ದರು. ಈ ವಿಷಯದಲ್ಲಿ ಪರಿಶೀಲನೆ ನಡೆದು ಇದು ಒಂದು ಸ್ವತಂತ್ರ ಪ್ರಭೇದ ಎಂದು ಗೊತ್ತಾಗಿದೆ. ಇದು ಎಲ್ಲ ವಿಧದಲ್ಲೂ ಕಾಚುಮರವನ್ನೇ ಹೋಲುತ್ತದೆ. ಒಣಹವೆ ಪ್ರದೇಶದ ಮೈಸೂರಿನ ಭಾಗಗಳಿಂದ ಹಿಡಿದು ರಾಜಸ್ಥಾನದವರೆಗೆ ಇದು ಎಲ್ಲೆಡೆಗಳಲ್ಲೂ ಕಂಡುಬರುತ್ತದೆ.



ಕೆಂಪುಖೈರಾದ

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Atchison 1948). ಈ ಮರ ಕಾಚುಮರಕ್ಕಿಂತ ಭಾರವಾಗಿರುತ್ತದೆ. ಮತ್ತು ಹೆಚ್ಚು ಬಾಳಿಕೆ ಬರುತ್ತದೆ ಎಂದು ನಂಬಿಕೆ ಇದೆ. ಸುಮಾರು 20 ರಿಂದ 25 ಅಡಿಗಳಷ್ಟೆತ್ತರಕ್ಕೆ ಬೆಳೆಯುವ ಈ ಮರ ಬಹಳ ಗಟ್ಟಿಯಾಗಿದ್ದು 1 ಘನ ಅಡಿಗೆ 72 ರಿಂದ 82 ಪೌಂಡು ತೂಕ ಬರುತ್ತದೆ.

ಉಪಯೋಗಗಳು : ವ್ಯವಸಾಯದ ಉಪಕರಣಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ತೊಲೆಗಳನ್ನೂ ಕಂಬಗಳನ್ನೂ ಮಾಡಲು, ಉಪಯೋಗಿಸುತ್ತಾರೆ.

ಕೆಂಪುದಲೆ (Sterculia urens Roxb.)

ಕೆಂಪುದಲೆಯು ಮರ ಅಷ್ಟೇನೂ ದೊಡ್ಡಮರವಲ್ಲ. ಮೈಸೂರಿನಲ್ಲಲ್ಲದೆ ಉತ್ತರ ಪ್ರದೇಶ, ಬಿಹಾರ, ರಾಜಾಸ್ಥಾನ ಹಾಗೂ ಮಧ್ಯಪ್ರದೇಶದಲ್ಲೂ ಬೆಳೆಯುತ್ತದೆ. ತುಮಕೂರು ಜಿಲ್ಲೆ, ಸಾವನದುರ್ಗಗಳಲ್ಲೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರ ಸ್ಟರ್ಕೂಲಿಯೇಸಿ (Sterculiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=20 (Nanda 1962). ಕೈಯಾಕಾರದ ಇದರ ಎಲೆಗಳು ರೆಂಬೆಗಳ ತುದಿಗಳಲ್ಲಿರುತ್ತವೆ. ಮೊದಲು ಉದುರಿ ಹೋಗಿದ್ದ ಎಲೆಗಳು ಮಾರ್ಚಿಯಲ್ಲಿ ಮೂಡುತ್ತವೆ. ಇದರ ಹೂಗಳು ಸಣ್ಣವಿದ್ದು ಹಸುರುಮಿಶ್ರಿತ ಹಳದಿಬಣ್ಣ ಹೊಂದಿರುತ್ತವೆ. ಹಣ್ಣಿನ ಮೇಲೆ ಬಿರುಗೂದಲುಗಳಿರುತ್ತವೆ. ಈ ಮರ ನವಂಬರ್ ಡಿಸೆಂಬರ್ ತಿಂಗಳುಗಳಲ್ಲಿ ಫಲ ಪುಷ್ಪಭರಿತವಾಗಿರುತ್ತದೆ. ಹಣ್ಣುಗಳ ಬಣ್ಣ ಕೆಂಪು ಆದರೆ ಬೀಜಗಳು ಕಪ್ಪಗಿರುತ್ತವೆ.


ಉಪಯೋಗಗಳು: ಈ ಮರದ ಬುಡದಿಂದ ಬರುವ ಅಂಟು ದ್ರವವನ್ನು ಸಿಹಿ ತಿಂಡಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಇದರ ತೊಗಟೆಯಿಂದ ತೆಗೆಯುವ ನಾರನ್ನು ಹಗ್ಗ ಹೊಸೆಯಲೂ ಒರಟಾದ ಬಟ್ಟೆಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಇದನ್ನು ಕ್ಯಾಲಿಕೊ ಪ್ರಿಂಟಿಂಗ್‌ನಲ್ಲೂ ಉಪಯೋಗಿಸುತ್ತಾರೆ. ಇದರ ಬೀಜಗಳನ್ನು ಹುರಿದು ತಿನ್ನುತ್ತಾರೆ. ಈ ಬೀಜಗಳಿಂದ ಎಣ್ಣೆಯನ್ನು ತೆಗೆಯಬಹುದು.

ಕೆಂಪುಬೂರುಗ Bombax ceiba L. (Syn. B. malabaricum DC. Salmalia malabaricum (DC) Schott & Endl.

ದೊಡ್ಡದಾಗಿ ಬೆಳೆಯುವ ಈ ಮರನ್ನು ಮೈಸೂರಿನ ಎಲ್ಲಾ ಕಡೆಯೂ ಬೆಳೆಸಲಾಗುತ್ತಿದೆ. ಮಲೆನಾಡಿನ ಘಾಟಿಗಳಲ್ಲಿ ಬೆಳೆದರೆ ಭವ್ಯವಾಗಿ ದಪ್ಪವಾಗಿ ಬೆಳೆಯುತ್ತದೆ. ಪಂಜಾಬು ಮತ್ತು ಉತ್ತರ ಪ್ರದೇಶಗಳಲ್ಲೂ ಇದನ್ನು ಬೆಳೆಸುತ್ತಾರೆ. ಮೈಸೂರಿನ ಕೆಲವು ಉದ್ಯಾನಗಳಲ್ಲಿರುವ ಈ ಮರ ಪ್ರವಾಸಿಗಳ ಆಕರ್ಷಕ ವಸ್ತುಗಳಲ್ಲೊಂದಾಗಿದೆ. ಈ ಮರಕ್ಕೆ ಸಾಲ್ಮಾಲಿಯ ಎಂಬ ಹೆಸರು ಸಂಸ್ಕೃತದ ಶಾಲ್ಮಲಿ ಎಂಬುದರಿಂದ ಬಂದಿದೆ. ಪ್ರಪಂಚವೆಲ್ಲಾ ಸೃಷ್ಟಿಸಿದ ಮೇಲೆ ಬ್ರಹ್ಮನು ಈ ಮರದ ಕೆಳಗೆ ವಿಶ್ರಾಂತಿ ಪಡೆದನೆಂದು ಜನಸಾಮಾನ್ಯರ ನಂಬಿಕೆ.

ಸಸ್ಯಶಾಸ್ತ್ರ ವಿವರಣೆ: ಈ ಮರ ಬಾಂಬಕೇಸಿ (Bombacaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=72 (E.K.J)

25 ಮೀಟರುಗಳ ಎತ್ತರಕ್ಕೆ ಬೆಳೆಯುವ ಈ ಮರದ ಎಲೆಗಳು ಹೊಳಪಾದ ಹಸಿರು ಬಣ್ಣ ಹೊಂದಿರುತ್ತವೆ. ವರ್ಷದ ಎಲ್ಲಾ ಕಾಲದಲ್ಲೂ ಎಲೆಗಳಿದ್ದು ಹೂ ಬಿಡುವು ದಕ್ಕೆ ಮುಂಚೆ, ಜನವರಿಯಲ್ಲಿ ಅವು ಉದುರಿ ಹೋಗುತ್ತವೆ. ಈ ಮರದ ಹೂಗಳು ಸಾಮಾನ್ಯವಾಗಿ ಕೆಂಪಗಿದ್ದರೂ ಒಂದೊಂದು ಸಾರಿ ಹಳದಿ ಇಲ್ಲವೇ ಬಿಳಿ ಬಣ್ಣ ಹೊಂದಿರುತ್ತವೆ. ಹೂ ಬಿಡುವ ಕಾಲದಲ್ಲಿ ಮೊದಲೇ ತಿಳಿಸಿದಂತೆ ಎಲೆಗಳಿರುವುದಿಲ್ಲ ವಾದ್ದರಿಂದ ಇಡೀ ಮರವೇ ಅತ್ಯಾಕರ್ಷಕವಾಗಿ ಕಾಣುತ್ತದೆ. ಪ್ರಪಂಚದ ಕೆಲವೇ



ಕೆಂಪುಬೂರುಗ

ಸುಂದರ ವೃಕ್ಷಗಳಲ್ಲಿ ಇದೂ ಒಂದು ಎಂದರೆ ಅತಿಶಯೋಕ್ತಿಯಲ್ಲ. ಅಂಡಾಕೃತಿ ಇದೆ ಯೆಂದು ಹೇಳಬಹುದಾದ ಕಾಯಿಗಳು 10 ರಿಂದ 15 ಸೆಂಟಿಮೀಟರ್ ಉದ್ದವಾ ಗಿಯೂ 3 ರಿಂದ 5 ಸೆಂಟಿಮೀಟರ್ ದಪ್ಪವಾಗಿಯೂ ಇದ್ದು, 5 ಭಾಗಗಳಿಂದಾಗಿರು ತ್ತದೆ. ಇವು ಕಾಯಿ ಬಲಿತಮೇಲೆ ಒಡೆದುಕೊಂಡು ಒಳಗಿರುವ ಕಂದು ಇಲ್ಲವೇ ಕಪ್ಪು ಬಣ್ಣದ ಬೀಜಗಳನ್ನು ಅವುಗಳ ಹತ್ತಿಯೊಡನೆ ಗಾಳಿಯಲ್ಲಿ ಹಾರಿ ಹೋಗು ವಂತೆ ಮಾಡುತ್ತವೆ. ಈ ಮರವನ್ನು ಬೀಜಗಳಿಂದಲೋ ಅಥವಾ ಸಣ್ಣ ರೆಂಬೆಗಳ ಮೂಲಕವೋ ಬೆಳೆಸಬಹುದು.

ಉಪಯೋಗಗಳು : "ಸಿಲ್ಕ್‌ಕಾಟನ್" ಎಂದು ಕರೆಸಿಕೊಳ್ಳುವ ಇದರ ಹತ್ತಿ ಯನ್ನು ಹಾಸಿಗೆಗಳನ್ನು, ದಿಂಬುಗಳನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಮರ ಮೃದುವಾಗಿರುತ್ತದೆ. ಆದ್ದರಿಂದ ಬೊಂಬಾಯಿ ಮತ್ತಿತರ ಕಡೆಗಳಲ್ಲಿ ಬೆಂಕಿಕಡ್ಡಿ ಗಳನ್ನು ಮಾಡಲು ಅದನ್ನು ಉಪಯೋಗಿಸುತ್ತಾರೆ. ಬೊಂಬಾಯಿ ಒಂದರಲ್ಲೇ ವರ್ಷ ವೊಂದಕ್ಕೆ 1,00,000 ಟನ್ ಮರವನ್ನು ಬೆಂಕಿಕಡ್ಡಿಗಳಿಗಾಗಿ ಉಪಯೋಗಿಸುತ್ತಾರೆ.

ಈ ಮರವೆಂದರೆ ಗೆದ್ದಲು ಹುಳುಗಳಿಗೆ ಬಹಳ ಪ್ರೀತಿ. ಆದರೂ ಟೀ ಪೆಟ್ಟಿಗೆಗಳು ಮುಂತಾದುವನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಇದರ ಪುಷ್ಪ ಪತ್ರಗಳನ್ನು ತರಕಾರಿಯಂತೆ ಬೇಯಿಸಿ ತಿನ್ನುತ್ತಾರೆ. ಇದರಿಂದ ಬರುವ ಅಂಟನ್ನು ಮೊಖರಾಸ್ ಎಂದು ಕರೆಯುತ್ತಾರೆ. ಅದನ್ನು ಗಾಯಗಳಿಗೆ ಲೇಪಿಸುತ್ತಾರೆ.

ಸೂಚನೆ : ಈ ಮರ ಅಷ್ಟು ಗಟ್ಟಿಯಾದುದಲ್ಲ. ಬಲವಾಗಿ ಗಾಳಿ ಬೀಸಿದರೆ ಬಿದ್ದು ಹೋಗುತ್ತದೆ. ಆದ್ದರಿಂದ ಗಾಳಿಯಿಂದ ರಕ್ಷಣೆಯಿರುವ ಪ್ರದೇಶದಲ್ಲಿ ಬೆಳೆಸಿದರೆ ಒಳ್ಳೆಯದು.

ಕೇಸರಿಕೆ ಮರ (ಸರ್ವೆಮರ) Casuarina equisetifolia Forst.

ಆಸ್ಟ್ರೇಲಿಯಾದ ಮೂಲನಿವಾಸಿಯಾಗಿದ್ದ ಈ ಮರ ಮರುಭೂಮಿ ಪ್ರದೇಶಗಳು ಮತ್ತು ಅತಿ ಒಣಹವೆಯಿರುವ ಪ್ರದೇಶಗಳಲ್ಲೂ ಬೆಳೆಯುತ್ತದೆ. ಇದನ್ನು ಸರ್ವೆಮರವೆಂದೂ ಕರೆಯುತ್ತಾರೆ. ಮೈಸೂರು ಸಂಸ್ಥಾನಕ್ಕೆ ಈ ಮರವನ್ನು 150 ವರ್ಷಗಳ ಹಿಂದೆಯೇ ತರಲಾಯಿತು.

ಸಸ್ಯಶಾಸ್ತ್ರ ವಿವರಣೆ : ಈ ಮರ ಕ್ಯಾಷುಯಾರಿನೇಸಿ (casuarinaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=24$ (writzel 1929). ನಿತ್ಯಹರಿದ್ವರ್ಣದ ಈ ವೃಕ್ಷ 50 ರಿಂದ 70 ಅಡಿಗಳ ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು ಮಾರ್ಪಾಟುಹೊಂದಿ ಸೂಕ್ಷ್ಮ ತೆಳು ಪೊರೆಗಳಾಗಿವೆ. (scales). ಇದರ ಹೂಗಳು ಮಂಕಾದ ಕೆಂಪು ಬಣ್ಣ ಹೊಂದಿರುತ್ತವೆ. ಕಾಯಿಗಳು ತೊಟ್ಟು ಹೊಂದಿದ್ದು ಶಂಖಾಕೃತಿಯವಾಗಿರುತ್ತವೆ. ಈ ಮರ ಕಾಯಿ ಬಿಡುವುದು ಮೇ ತಿಂಗಳಿನಲ್ಲಿ ಪ್ರಾರಂಭವಾಗಿ ನವಂಬರ್‌ವರೆಗೂ ಮುಂದುವರಿಯುತ್ತದೆ. ಕ್ಯಾಷುಯಾರಿನ ಬೀಜಗಳೆಂದರೆ ಇಲಿಗಳಿಗೆ, ಗುಬ್ಬಚ್ಚಿಗಳಿಗೆ ತುಂಬ ಪ್ರೀತಿ. ಆದ್ದರಿಂದ ಇದನ್ನು ಬೆಳೆಸುವಾಗ ಸ್ವಲ್ಪ ಆಳವಾಗಿ ನೆಡಬೇಕು. ಸಸಿಗಳು ಬಂದ ಅನಂತರ ಅವು 4 ರಿಂದ 6 ಇಂಚು ಉದ್ದವಾಗಿರುವಾಗ ಅವನ್ನು ಕಿತ್ತು ದೂರ ದೂರಕ್ಕೆ ನೆಡಬೇಕು.

ಉಪಯೋಗಗಳು : ಮರಳು ಕಣಗಳನ್ನು ಬಂಧಿಸಿಡುವ ಅಪೂರ್ವ ಶಕ್ತಿ ಈ ಮರಕ್ಕಿದೆ. ಆದ್ದರಿಂದ ಸಮುದ್ರ ತೀರಗಳಲ್ಲಿ ಈ ಮರಗಳನ್ನು ಬೆಳೆಸುವ ರೂಢಿ ಇದೆ. ಈ ಮರದಿಂದ ಆಗುವ ಇದ್ದಿಲು, ಸೌದೆ ಬಹಳ ಉತ್ಕೃಷ್ಟವಾದವುಗಳು. 1894 ರಲ್ಲಿ ಮೆಲ್ಲಾಯ್ (Melloy) ಎಂಬ ಬ್ರಿಟಿಷ್ ಅಧಿಕಾರಿಯೊಬ್ಬರು ಈ ಮರದ ಸಣ್ಣ ದಿಮ್ಮಿಗಳನ್ನು ಹಾಕಿ ಉರಿಸಿ ಅಂದಿನ ರೈಲನ್ನು ಓಡಿಸಿದ್ದರು.

ಇದರ ಸೌದೆಯನ್ನು ಮನೆಯಲ್ಲಿ ಉಪಯೋಗಿಸಿದರೆ ಅದರಿಂದ ಬರುವ ಅಸಾಧ್ಯ ಕಾವಿನಿಂದ ಅಡಿಗೆ ಪಾತ್ರೆಗಳು ಹಾಳಾಗುವ ಸಂಭವ ಹೆಚ್ಚು. ರಾಜಾಸ್ಥಾನದ ಥಾರ್ ಮರುಭೂಮಿ ಪಕ್ಕದ ಪ್ರದೇಶಗಳಿಗೆಲ್ಲಾ ಹರಡದಂತೆ ತಡೆಯಲು ಈ ಮರವನ್ನೂ, ಬಾಗೆಮರ (Albizzia lebbek), ಖರ್ಜೂರ ಮತ್ತಿತರ ಮರಗಳನ್ನು ಮರುಭೂಮಿ ಪ್ರದೇಶದಲ್ಲೆಲ್ಲಾ ಬೆಳೆಸುತ್ತಿದ್ದಾರೆ.

ಕೊಡತನಿ (ಗಬ್ಬುಚಕ್ಕೆ, ನರಕ ಬೂತಾಳಿ)

Gironniera cuspidata (Bl) Kurz.
(Syn G. reticulata Thw)

ಮಲೆನಾಡಿನಲ್ಲಿ ಬೆಳೆಯುವ ಈ ಮರ ಪಶ್ಚಿಮ ಘಟ್ಟಗಳಲ್ಲೂ ಸಿಕ್ಕಿಂ ಮತ್ತು ಖಾಸಿಯಾಗಳಲ್ಲೂ ಬೆಳೆಯುತ್ತದೆ. ಇಂಡಿಯಾ, ಸಿಲೋನ್ ಮಾರುಕಟ್ಟೆಗಳಲ್ಲಿ ತನ್ನ ಕೆಟ್ಟ ವಾಸನೆಯಿಂದ ಹೆಲ್ಲಿಷ್ ಇನ್ಸೆನ್ಸ್ (hellish incense) ಎಂದು ಹೆಸರು ಪಡೆದಿರುವ ಮರ ಇದೇ ಆಗಿದೆ. ದಕ್ಷಿಣ ಇಂಡಿಯಾದ ಬೆಟ್ಟ ಗುಡ್ಡಗಳಲ್ಲೆಲ್ಲಾ ಸಮುದ್ರ ಮಟ್ಟಕ್ಕೆ 4000 ಅಡಿಗಳೆತ್ತರದಲ್ಲಿ ಈ ಮರ ಕಂಡು ಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಅಲ್ಮೇಸಿ (ulmaceae) ಕುಟುಂಬಕ್ಕೆ ಸೇರಿದೆ. ಈ ಮರದ ಕಾಂಡಕ್ಕೆ ಬಹು ಕೆಟ್ಟ ವಾಸನೆ ಇರುತ್ತದೆ. ಈ ಮರದ ಹುಡಿಯನ್ನು ನೀರಿನಲ್ಲಿ ಸ್ವಲ್ಪ ಹೊತ್ತು ಹಾಕಿ ಅನಂತರ ನೀರನ್ನು ಮನೆಯಲ್ಲಿ ಚುಮುಕಿಸಿದರೆ ಸಾಕು ಸಹಿಸಲಸಾಧ್ಯವಾದ ವಾಸನೆ ಹಬ್ಬುತ್ತದೆ. ಇದೊಂದು ನಿತ್ಯಹರಿದ್ವರ್ಣ ವೃಕ್ಷ. ಸಾಮಾನ್ಯವಾಗಿ ಏಕಲಿಂಗ ಪುಷ್ಪಗಳನ್ನು ಬಿಡುತ್ತಿರುತ್ತದೆ. ಇದರ ಎಲೆಗಳು ಉದ್ದವಿದ್ದು ಸ್ವಲ್ಪ ಮೊನಚಾದ ತುದಿಗಳನ್ನು ಹೊಂದಿರುತ್ತದೆ. ಇದರ ಕಾಯಿಗಳಿಗೆ ಸಣ್ಣ ಮೂತಿ ಇರುತ್ತದೆ. ಇದರ ಮರ ಕೆಂಪು ಮಿಶ್ರಿತ ಕಂದುಬಣ್ಣ ಹೊಂದಿದ್ದು ಗಟ್ಟಿಯಾಗಿದ್ದು ತೂಕವಾಗಿರುತ್ತದೆ. ಒಳ್ಳೆಯ ಎಳೆಗಳನ್ನು ಹೊಂದಿರುತ್ತದೆ.

ಉಪಯೋಗಗಳು: ಚರ್ಮದ ರೋಗವಿದ್ದವರಿಗೆ ರಕ್ತವನ್ನು ಶುದ್ಧಿ ಮಾಡುವುದಕ್ಕೋಸ್ಕರ ಇದರ ಚಕ್ಕೆಯನ್ನು ನಿಂಬೆ ಹುಳಿಯಲ್ಲಿ ನೆನಸಿ ಅನಂತರ ಈ ಹುಳಿಯನ್ನು ಕುಡಿಸುತ್ತಾರೆ. ಇದರ ಹಣ್ಣುಗಳನ್ನು ತಿನ್ನುತ್ತಾರೆ. ಹಲಗೆಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಎಲೆಗಳನ್ನು ದನಗಳು ತಿನ್ನುತ್ತವೆ.

ಕೊಡಸಿಜಿನ (ಬೊಡದರಗ)

Cleistanthus collinus Roxb (Benth) & Hook. F.

ಮೈಸೂರಿನಲ್ಲಿ ಅಪರೂಪವಾಗಿ ಕಂಡುಬರುವ ಈ ಮರ ಕಾಲ ಕಾಲಕ್ಕೆ ಎಲೆಗಳುದುರುವ ಒಂದು ಸಣ್ಣ ವೃಕ್ಷವಾಗಿದೆ. ಗುಡ್ಡಗಳ ಹತ್ತಿರ ಬೆಳೆಯುತ್ತಿರುತ್ತದೆ.

ಮದ್ರಾಸ್, ಬಿಹಾರ್, ಒರಿಸ್ಸಾ, ಆಂಧ್ರಪ್ರದೇಶ ಮತ್ತು ಮಧ್ಯಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಯೂಫೋರ್ಬಿಯೇಸಿ (Euphorbiaece) ಕುಟುಂಬಕ್ಕೆ ಸೇರಿದೆ. ಈ ಮರದ ತೊಗಟೆ ಕಂದು ಮಿಶ್ರಿತ ಕಪ್ಪು ಬಣ್ಣ ಹೊಂದಿದ್ದು ಒರಟಾಗಿರುತ್ತದೆ. ಎಲೆಗಳ ಜೋಡಣೆ ಪರ್ಯಾಯವಾಗಿರುತ್ತದೆ. ದುಂಡಗಿನ ಇಲ್ಲವೇ ಅಂಡಾಕೃತಿಯ ಈ ಎಲೆಗಳು 4 ರಿಂದ 5 ಇಂಚು ಉದ್ದವಿದ್ದು 3 ಇಂಚಿನಷ್ಟು ಅಗಲವಿರುತ್ತವೆ. ಇದರ ಅಂಡಾಶಯ 3 ಭಾಗಗಳನ್ನು ಹೊಂದಿದ್ದು ತುಪ್ಪಳ ರಹಿತವಾಗಿರುತ್ತದೆ. ಇದರ ಕಾಯಿ 0·75 ರಿಂದ 1 ಇಂಚು ಸುತ್ತಳತೆ ಹೊಂದಿದ್ದು ಗಟ್ಟಿಯಾಗಿರುತ್ತದೆ. ಬೀಜಗಳು ದುಂಡಾಗಿರುತ್ತವೆ. ಮರ ಗಟ್ಟಿಯಾದದ್ದಾಗಿದ್ದು ಕೆಂಪುಮಿಶ್ರಿತ ಕಂದು ಬಣ್ಣ ಹೊಂದಿರುತ್ತದೆ.

ಉಪಯೋಗಗಳು : ತೊಗಟೆ, ಎಲೆ ಮತ್ತು ಹಸಿರಾದ ಹಣ್ಣುಗಳನ್ನು ಟ್ಯಾನಿನ್‌ಗಾಗಿ ಬಳಸುತ್ತಾರೆ. ಇದರ ಕಾಯಿ ಅತ್ಯಂತ ವಿಷಪದಾರ್ಥವಾಗಿದೆ.

ಕೊಡಮುರುಕ (ಕೊಡಸೀಗ)

Holarrhena antidysenterica (Linn.) Wall.

ಮೈಸೂರು ಮತ್ತು ನಂದಿದುರ್ಗದ ಹತ್ತಿರ ಕಾಣಬರುವ ಒಂದು ಸಣ್ಣ ವೃಕ್ಷ ಇದಾಗಿದೆ. ಇಂಡಿಯಾ ಮತ್ತು ಬರ್ಮದ ಎಲ್ಲ ಅರಣ್ಯಗಳಲ್ಲೂ ಹೇರಳವಾಗಿ ಬೆಳೆಯುತ್ತದೆ.



ಕೊಡಮುರುಕ (ಕೊಡಸೀಗ)

ಸಸ್ಯಶಾಸ್ತ್ರ ವಿವರಣೆ : ಈ ಮರ ಅಪೋಸಯನೇಸಿ ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=22 (Tapadar & Sen 1960.) 10–12 ಅಡಿಗಳಷ್ಟು ಎತ್ತರಕ್ಕೆ ಬೆಳೆದ ಕೂಡಲೇ ತನ್ನ ಹಸಿರು ಎಲೆಗಳ ಜೊತೆಗೆ ಬಿಳಿಯ ಸಣ್ಣ ಹೂಗಳನ್ನು ಬಿಡಲಾರಂಭಿಸುತ್ತದೆ. ಮಾರ್ಚಿಯಿಂದ ಮೇ ವರೆಗೆ ಪುಷ್ಪಭರಿತವಾಗಿರುವ ಈ ಮರ ಅಲಂಕಾರಕ್ಕಾಗಿ ತೋಟಗಳಲ್ಲಿ ಬೆಳೆಸಲು ಯೋಗ್ಯವಾದದ್ದು. ಈ ಮರದ ಕಾಯಿ 1 ಅಡಿ ಉದ್ದವಿರುತ್ತದೆ. ಬೀಜಗಳು ರೇಶ್ಮೆ ಎಳೆಯಂತಹ ತುಪ್ಪಳ ಹೊಂದಿದ್ದು ಕಹಿಯಾಗಿರುತ್ತವೆ ; ಒಂದು ಬಗೆಯ ದುರ್ವಾಸನೆಯನ್ನು ಹೊಂದಿರುತ್ತವೆ.

ಉಪಯೋಗಗಳು : ಆಮಶಂಕೆಯನ್ನು ಗುಣಪಡಿಸಲು ಈ ಮರದ ತೊಗಟೆಯನ್ನು ಉಪಯೋಗಿಸುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಈ ಮರದ ಸೊಪ್ಪನ್ನು ಗೊಬ್ಬರಕ್ಕಾಗಿಯೂ, ಮರವನ್ನು ಸೌದೆಗಾಗಿಯೂ ಉಪಯೋಗಿಸುತ್ತಾರೆ. ಮೂಲವ್ಯಾಧಿ ಮತ್ತು ಜ್ವರವನ್ನು ಹೋಗಲಾಡಿಸಲು ಇದರ ಬೀಜಗಳನ್ನು ಉಪಯೋಗಿಸುತ್ತಾರೆ.

ಕೋಣನಕೊಂಬು ಮರ (ಫಾನ್‌ಸಿಂಗ್)

(Sterospermum xylocarpum Wight)

ಮಧ್ಯಮ ಎತ್ತರದ ಈ ಮರ ಬೆಟ್ಟ ಗುಡ್ಡಗಳ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=40 (Venkata Subbana 1944). ಇದರ ಎಲೆಗಳು 2 ರಿಂದ 4 ಅಡಿ ಉದ್ದವಿರುತ್ತವೆ. ಹೂಗಳು ಮಾರ್ಚಿಯಲ್ಲಿ ಬರುತ್ತವೆ. ಪುಷ್ಪಗಳು ದೊಡ್ಡವಿದ್ದು ಬೆಳ್ಳಗೆ ಸುವಾಸನಾಭರಿತವಾಗಿರುತ್ತವೆ. ಇದರ ಕಾಯಿ ಕೋಣನ ಕೊಂಬಿನಂತಿರುತ್ತದೆ. ಅದರಿಂದಲೇ ಈ ಮರಕ್ಕೆ ಕೋಣನ ಕೊಂಬಿನ ಮರ ಎಂದು ಹೆಸರು ಬಂದಿದೆ. ಈ ಮರ ವರ್ಷಕ್ಕೊಂದು ಸಾರಿ ಫೆಬ್ರವರಿಯಲ್ಲೋ, ಮಾರ್ಚಿಯಲ್ಲೋ ತನ್ನ ಎಲೆಗಳನ್ನೆಲ್ಲಾ ಕಳೆದುಕೊಂಡಿರುತ್ತದೆ.

ಉಪಯೋಗಗಳು : ಈ ಮರದಿಂದ ಟಾರ್‌ನಂಥ ಒಂದು ದ್ರವವನ್ನು ತಯಾರಿಸುತ್ತಾರೆ. ಚರ್ಮ, ಹುರುಪೇಳುತ್ತಿದ್ದರೆ ಇದನ್ನು ಕೈ ಕಾಲುಗಳಿಗೆ ಬಳಿಯುತ್ತಾರೆ.

ಕೊಂಡವಘೆ (ಬೆಲ್ಲಕೆ) Albizzia procera Roxb.

ಈ ಮರ ಪೂರ್ವ ಮತ್ತು ಪಶ್ಚಿಮ ಘಟ್ಟಗಳಲ್ಲಿ ಸಮುದ್ರಮಟ್ಟಕ್ಕಿಂತಲೂ ಎತ್ತರವಾಗಿರುವ ಪ್ರದೇಶಗಳಲ್ಲಿ ಬೆಳೆಯುತ್ತದೆ. ಅಸ್ಸಾಂ, ಬಂಗಾಳ ಮುಂತಾದ ಕಡೆಗಳಲ್ಲೂ ಬೆಳೆಯುತ್ತದೆ. ಬೇಸಿಗೆಯಲ್ಲಿ ಎಲೆಯುದುರವ ಈ ಮರ 60 ರಿಂದ 80 ಅಡಿ ಉದ್ದ ಬೆಳೆದು 6 ಅಡಿಗಳಷ್ಟು ಸುತ್ತಳತೆಗಳಿಸಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Sampath & R 1949). ಈ ಮರದ ಎಲೆಗಳು ಏಪ್ರಿಲ್-ಜೂನ್ ತಿಂಗಳಲ್ಲಿ ಉದುರಿ ಹೋಗುತ್ತವೆ. ಈ ಮರದ ತೊಗಟೆ ಮೃದುವಾಗಿರುತ್ತದೆ. ಹೂವುಗಳು ಹಳದಿ ಮಿಶ್ರಿತ ಬಿಳಿ ಬಣ್ಣಕ್ಕಿರುತ್ತವೆ. ದೊಡ್ಡ ದೊಡ್ಡ ಗೊಂಚಲುಗಳಲ್ಲಿ ಬರುವ ಈ ಹೂಗಳು ಜೂನ್‌ನಿಂದ ಸೆಪ್ಟೆಂಬರ್‌ವರೆಗೂ ಇರುತ್ತವೆ. ಕಾಯಿಗಳು ಕೆಂಪಗಿರುತ್ತವೆ. ಬೀಜಗಳು ಸಣ್ಣಗಿದ್ದು ಒಂದು ಔನ್ಸ್‌ಗೆ 650 ರಷ್ಟು ಬೀಜಗಳಿರುತ್ತವೆ. ಕೀಟಾಗಳಾವುವೂ ಇಪನ್ನು ತಿನ್ನುವುದಿಲ್ಲ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಈ ಮರದ ಚೇಗು ಕಂದು ಬಣ್ಣಕ್ಕಿದ್ದು ಅದರಲ್ಲಿ ಕಪ್ಪನೆಯ ಇಲ್ಲವೇ ಬಿಳಿಯ ಎಳೆಗಳಿರುತ್ತವೆ. ಇದರ ತೂಕ 1 ಘನ ಅಡಿಗೆ 40 ಪೌಂಡುಗಳು. ಹೊರಮರ ಬೆಳ್ಳಗಿರುತ್ತದೆ. ಇದರ ತೂಕ ಘನ ಅಡಿಗೆ 29 ಪೌಂಡುಗಳು. ಈ ಮರವನ್ನು ಮನೆಯ ಕಂಬಗಳಿಗಾಗಿಯೂ, ಸಾಮಾನುಗಳಿಗಾಗಿಯೂ, ವ್ಯವಸಾಯದ ಸಲಕರಣೆಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಈ ಮರದ ಎಲೆಗಳನ್ನು ಆಡು ಮತ್ತು ಕುರಿಗಳು ತಿನ್ನುತ್ತವೆ. ದುರದೃಷ್ಟವಶಾತ್ ಮೈಸೂರಿನಲ್ಲಿ ಇದನ್ನು ಇದ್ದಲಿಗಾಗಿ ಸುಡುತ್ತಿದ್ದಾರೆ.

ಕಂಚುಪ್ರಾಂತಿ (ಚೆಂತಕಣ್ಣಿ) Macaranga peltata Muell. Arg. (Syn. Macaranga roxburghii wight.)

ಪಶ್ಚಿಮ ಮೈಸೂರು ಮತ್ತು ಕೊಡಗುಗಳಲ್ಲಿ ಈ ಮರ ಹೆಚ್ಚಾಗಿ ಬೆಳೆಯುತ್ತದೆ. ಸಣ್ಣ ಮರವಾದ ಇದನ್ನು ಕಾಫಿ ಗಿಡಗಳಿಗೆ ನೆರಳಿಗೋಸ್ಕರ ಬೆಳೆಸುವುದುಂಟು.

ಸಸ್ಯಶಾಸ್ತ್ರ ವಿವರಣೆ : ಈ ಮರ ಯುಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು ಸುಂದರವಾಗಿರುತ್ತವೆ. ಇದರ ವರ್ಣತಂತುಗಳ ಸಂಖ್ಯೆ 2n=20 (Borgman). ಹೂವುಗಳು ಸಣ್ಣಗಿದ್ದು

ಹಸಿರು ಬಣ್ಣವನ್ನು ಹೊಂದಿರುತ್ತವೆ. ಹಣ್ಣುಗಳು ಬಟಾಣಿ ಕಾಳುಗಳಷ್ಟು ದಪ್ಪ ವಿದ್ದು ಗುಂಡಗಿರುತ್ತವೆ.

ಉಪಯೋಗಗಳು : ಈ ಮರದಿಂದ ಟರ್ಪೆಂಟೈನ್ ವಾಸನೆಯಿರುವಂಥಾ ಒಂದು ಬಗೆಯ ಅಂಟು ದ್ರವ ಸುರಿಯುತ್ತದೆ. ಗುರುತುಗಳನ್ನು ಹಾಗೂ ಅಚ್ಚು-ಪ್ರತಿಗಳನ್ನು ಮಾಡಿಕೊಳ್ಳಲು ಇದನ್ನು ಬಳಸಲಾಗುತ್ತದೆ. ಹಣ್ಣುಗಳು ತಿನ್ನಲು ಯೋಗ್ಯವಾಗಿರುತ್ತವೆ.

ಕಂಚವಾಳ (ಸುರುಲ್) Bauhinia purpurea Linn.

ಬಾಹೀನಿಯ ಪರ್ಪ್ಯೂರಿಯಾ (Bauhinia purpurea) ವನ್ನು ಕಂಚ ವಾಳ ಎಂದು ಕರೆಯುವುದಲ್ಲದೆ ಬಾಹೀನಿಯ ವಾಹ್ಲಿ (Bauhinia vahlii), ಬಾಹೀನಿಯ ಅಕುಮಿನೇಟ (Bauhinia acumiata Linn.) ಬಾಹೀನಿಯ ಹುಕರಿ (Bauhinia hookerii), ಬಾಹೀನಿಯ ಮೊನಾಂಡ್ರ (Bauhinia monandra)ಮುಂತಾದ ಪ್ರಭೇದಗಳಿಗೂ ಕಂಚವಾಳ ಎಂದೇ ಕರೆಯುವುದುಂಟು. ನಮ್ಮ ದೇಶದಲ್ಲಿ ಈ ಜಾತಿಯ 40 ಪ್ರಭೇದಗಳಿವೆ. ಕಂಚವಾಳ (B. purpurea) ಒಂದು ಸಣ್ಣ ಮರ. ನಮ್ಮ ಅರಣ್ಯಗಳಲ್ಲಿ ಹೆಚ್ಚಾಗಿ ಕಂಡುಬಂದರೂ ಇದನ್ನು ಸಾಲು ಮರವಾಗಿ ರಸ್ತೆಗಳಲ್ಲೂ, ಅಲಂಕಾರ ವೃಕ್ಷವಾಗಿ ಉದ್ಯಾನವನಗಳಲ್ಲೂ, ಹಳ್ಳಿಗಳ ಹತ್ತಿರವೂ ಬೆಳೆಸುವುದೇ ಹೆಚ್ಚು. ಚಂದೀಘರ್‌ನಲ್ಲಂತೂ ಇದನ್ನೇ ಸಾಲು ಮರವಾಗಿ ಬೆಳೆಸಿದ್ದಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 28$ (Atichison 1951). ಬೀಜಗಳಿಂದ ಸುಲಭವಾಗಿ ಮರಗಳನ್ನು ಬೆಳೆಸಬಹುದು. ಈ ಮರ ಮಧ್ಯಮ ಎತ್ತರದ ನಿತ್ಯಹರಿದ್ವರ್ಣ ವೃಕ್ಷ. ಗೊರಸಿನಾಕಾರದ ಎಲೆಗಳಿರುತ್ತವೆ. ಗುಲಾಬಿ ಬಣ್ಣದ ಹೂಗಳು ದೊಡ್ಡವಾಗಿ ಆಕರ್ಷಕವಾಗಿರುತ್ತವೆ. ನವಂಬರ್ ತಿಂಗಳಲ್ಲಿ ಸಂಪೂರ್ಣವಾಗಿ ಪುಷ್ಪಭರಿತವಾಗಿರುವ ಈ ಮರ ಬಹಳ ಸುಂದರವಾಗಿ ರುತ್ತದೆ. ಕಾಳಿದಾಸನ ಕಾವ್ಯಗಳಲ್ಲೂ ಈ ಮರದ ವರ್ಣನೆ ಬರುತ್ತದೆ. ಕಾಯಿ ಗಳು ಉದ್ದವಾಗಿ ಹಸಿರು ಬಣ್ಣಕ್ಕಿರುತ್ತವೆ. ಬೀಜಗಳಿಂದ ಸುಲಭವಾಗಿ ಮರ ಗಳನ್ನು ಬೆಳಸಿಕೊಳ್ಳಬಹುದು.

ಉಪಯೋಗಗಳು : ಈ ಮರಗಳನ್ನು ಅಲಂಕಾರ ವೃಕ್ಷವಾಗಿ ರಸ್ತೆಯ ಇಕ್ಕೆಲಗಳಲ್ಲೂ ಹಾಗೂ ಉದ್ಯಾನಗಳಲ್ಲೂ ಬೆಳೆಸುತ್ತಾರೆ. ತೊಗಟೆಯಿಂದ ಬಣ್ಣ ವನ್ನೂ ಟ್ಯಾನಿಕ್ ಆಮ್ಲವನ್ನೂ ಪಡೆಯುತ್ತಾರೆ. ಉತ್ತರ ಇಂಡಿಯಾದಲ್ಲಿ ಇದರ

ಹೂವುಗಳನ್ನು ತರಕಾರಿಯಂತೆ ಉಪಯೋಗಿಸುವ ಇಲ್ಲವೆ ಉಪ್ಪಿನಕಾಯಿಗಾಗಿ ಬಳಸುವ ಅಭ್ಯಾಸವಿದೆ. ಶಿವಮೊಗ್ಗೆಯಲ್ಲಿ ಈ ಮರದ ಎಳೆಯ ಎಲೆಗಳನ್ನೂ, ಹೂವುಗಳನ್ನೂ ತಿನ್ನುತ್ತಾರೆ. ಮರಕೊಯ್ದ ಕೂಡಲೇ ಮೊದಲು ತಿಳಿಗುಲಾಬಿ ವರ್ಣ ಹೊಂದಿದ್ದು ಅನಂತರ ಕಪ್ಪು ಮಿಶ್ರಿತ ಕಂದುಬಣ್ಣ ಪಡೆಯುತ್ತದೆ. ಇದು 1 ಘನ ಅಡಿಗೆ 50 ರಿಂದ 54 ಪೌಂಡುಗಳಷ್ಟು ತೂಗುತ್ತದೆ. ವ್ಯವಸಾಯದ ಉಪಕರಣಗಳಿಗಾಗಿಯೂ, ಮನೆಯ ಮರ ಮುಟ್ಟುಗಳಿಗಾಗಿಯೂ ಇದನ್ನು ಉಪಯೋಗಿಸುತ್ತಾರೆ. ನೆಲದೊಳಗಿರುವ ಬೇರಿನ ತೊಗಟೆ ವಿಷಪೂರಿತವಾಗಿರುತ್ತದೆ.

ಕಂಜ (ಪೊಗಡ, ಪಗಡೆ, ಹಾಲ್ಮಧು, ಬೊಕುಳ) Mimusops elengi L.

ಈ ಸುಂದರ ನಿತ್ಯಹರಿದ್ವರ್ಣ ವೃಕ್ಷ ಪಶ್ಚಿಮ ಮೈಸೂರಿನಲ್ಲೂ, ಕೊಡಗಿನಲ್ಲೂ ಬೆಳೆಯುತ್ತದೆ. ನಂದೀದುರ್ಗ ಹಾಗೂ ಬೆಂಗಳೂರಿನ ಲಾಲ್‌ಬಾಗ್‌ನಲ್ಲೂ ಇದನ್ನು ಬೆಳೆಸಲಾಗಿದೆ. ಇದು 3 ರಿಂದ 150 ಇಂಚು ಮಳೆ ಬೀಳುವ ಎಲ್ಲಾ ಕಡೆಗಳಲ್ಲೂ ಚೆನ್ನಾಗಿ ಬೆಳೆಯಬಲ್ಲದು. ಪಶ್ಚಿಮ ಘಟ್ಟಗಳಲ್ಲೂ ಅಂಡಮಾನ್ ದ್ವೀಪಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಪೋಟೇಸಿ (Sapotaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=24$ (Sobji & Singh 1961). ಈ ಮರದ ಎಲೆಗಳು ಒರಟಾಗಿ ಹೊಳಪುಳ್ಳವಾಗಿರುತ್ತವೆ. ತೊಗಟೆ ಬೂದು ಬಣ್ಣಕ್ಕಿರುತ್ತದೆ. ನಕ್ಷತ್ರದಾಕಾರದ ಬೆಳ್ಳನೆಯ ಹೂಗಳು ಫೆಬ್ರವರಿ ತಿಂಗಳಲ್ಲಿ ಬಹಳ ಸುವಾಸನೆಯಿಂದ ಕೂಡಿರುತ್ತವೆ. ಇದರ ಹಣ್ಣು ಅಂಡಾಕೃತಿಯನ್ನು ಹೊಂದಿದ್ದು ಕಿತ್ತಳೆ ಹಳದಿ ಬಣ್ಣವನ್ನು ಹೊಂದಿರುತ್ತವೆ. ಒಳ್ಳೆಯ ವಾತಾವರಣವಿದ್ದಲ್ಲಿ ಮರ ಹೆಚ್ಚು ದಪ್ಪನಾಗಬಲ್ಲದು. ಬೀಜಗಳಿಂದ ಸಸಿಗಳನ್ನು ಪಡೆಯಬಹುದಾದರೂ ಬೀಜಗಳನ್ನು ಬಹಳ ದಿನ ಇಟ್ಟರೆ ಅವು ತಮ್ಮ ಮೊಳೆಯುವ ಶಕ್ತಿಯನ್ನು ಕಳೆದುಕೊಳ್ಳುತ್ತವೆ.


ಉಪಯೋಗಗಳು : ಇದರ ಸುವಾಸನಾಭರಿತ ಹೂಗಳಿಗಾಗಿ ಇದನ್ನು ಅಲಂಕಾರಿಕ ವೃಕ್ಷವಾಗಿ ಉದ್ಯಾನವನಗಳಲ್ಲಿ ಬೆಳೆಸುತ್ತಾರೆ. ಈ ಹೂವುಗಳನ್ನು ಹಾರ ಕಟ್ಟಲು ಉಪಯೋಗಿಸುತ್ತಾರೆ. ಈ ಹೂಗಳಿಂದ ಸುಗಂಧಭರಿತ ತೈಲವೊಂದನ್ನು ತಯಾರಿಸುತ್ತಾರೆ. ಇದನ್ನು ಉತ್ತರ ಇಂಡಿಯಾದಲ್ಲಿ ಮೂಲ್ಸ್ಯಾಂ ಅತ್ತರ್ ಎಂದು ಕರೆಯುತ್ತಾರೆ. ಹಣ್ಣುಗಳನ್ನು ತಿನ್ನುತ್ತಾರೆ.

ಮರ ಕೆಂಪು ಮಿಶ್ರಿತ ಕಂದುಬಣ್ಣ ಹೊಂದಿದ್ದು ಒಳ್ಳೆ ಪಾಲಿಷ್ ತೆಗೆದುಕೊಳ್ಳುವ ಗುಣ ಹೊಂದಿದೆ. ಇದು 1 ಘನ ಅಡಿಗೆ 60 ಪೌಂಡು ತೂಗಬಲ್ಲದು.

ಮನೆ ಸಾಮಾನುಗಳಿಗಾಗಿ ಇದನ್ನು ಬಳಸಬಹುದು. ಬೀಜಗಳಿಂದ ಒಂದು ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ. ಈ ಎಣ್ಣೆಯನ್ನು ಅಡಿಗೆಗಾಗಿಯೂ, ದೀಪಗಳಿಗಾಗಿಯೂ ಹಿಂದೆ ಬಳಸುತ್ತಿದ್ದರು.

ಕಂಡಗರಿಗೆ (ಗಂದಗರಿಗೆ, ನೊಗ್ಗ, ಬೇಲಂದಿ, ನೊಗೆ.) Toona cilita Roem (=Cedrela toona Roxb.)

ಇದನ್ನು ಮಲೆನಾಡಿನಲ್ಲೂ, ವಿಶೇಷವಾಗಿ ಕೊಡಗಿನ ಅರಣ್ಯಗಳಲ್ಲೂ, ಕಾಫಿ ತೋಟಗಳಲ್ಲೂ ಬೆಳೆಸಿಕೊಳ್ಳಲಾಗಿದೆ. ಈ ಮರವನ್ನೇ ಪಂಜಾಬು, ಅಸ್ಸಾಂ, ಬಿಹಾರ್, ಮಹಾರಾಷ್ಟ್ರ ಹಾಗೂ ನೀಲಗಿರಿಗಳಲ್ಲೂ ಬೆಳಸಲಾಗಿದೆ. ಹಿಮಾಲಯದ ಅರಣ್ಯಗಳಲ್ಲಿ ಸಮುದ್ರಮಟ್ಟಕ್ಕೆ 4000 ಅಡಿಗಳ ಎತ್ತರದಲ್ಲೂ ಈ ಮರ ಬೆಳೆದಿದೆ.



ಕಂಡಗರಿಗೆ (ಗಂಧಗರಿಗೆ)

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=56$ (Singh–1951). ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಎಲೆಗಳೆಲ್ಲಾ ಉದುರಿ ಹೋಗಿರುತ್ತವೆ. ಫೆಬ್ರವರಿ–ಏಪ್ರಿಲ್ ತಿಂಗಳುಗಳಲ್ಲಿ ಸಣ್ಣ ಬಿಳಿಯ ಹೂಗಳು ಬರುತ್ತವೆ. ಹಣ್ಣುಗಳು ಮೇ-ಜೂನ್ ತಿಂಗಳುಗಳಲ್ಲಿ ಮಾಗುತ್ತವೆ. ಬೀಜಗಳು ಬಹಳ ಸಣ್ಣಗಿರುತ್ತವೆ. ಸುಮಾರು 15,300 ಬೀಜಗಳು ಕೇವಲ ಒಂದು ಔನ್ಸ್‌ನಷ್ಟು ಆಗುತ್ತವೆ. ಹೊಸದಾಗಿ ಸಂಗ್ರಹಿಸಿದ ಬೀಜ

ಗಳನ್ನು ನೆಟ್ಟರೆ ಸುಮಾರು ಶೇಕಡ 70 ರಷ್ಟು ಮೊಳೆತು ಸಸಿಗಳಾಗುತ್ತವೆ. ಆದರೆ ಹಳೆಯವು ಚೆನ್ನಾಗಿ ಮೊಳೆಯಲಾರವು.

ಉಪಯೋಗಗಳು : ವನಮಹೋತ್ಸವದ ಕೆಲಸಗಳಿಗೂ, ದಾರಿಗಳ ಸಾಲು ಮರಗಳಿಗಾಗಿಯೂ ಈ ಮರವನ್ನು ಬಳಸಬಹುದು. 1 ಘನ ಅಡಿಗೆ 30 ರಿಂದ 36 ಪೌಂಡುಗಳಷ್ಟು ತೂಕವಿರುವ ಈ ಮರವನ್ನು ಗೆದ್ದಲು ಹುಳುಗಳು ಹಾಳು ಮಾಡುವುದಿಲ್ಲ ಸುವಾಸನಾಭರಿತವಾದ ಈ ಮರವನ್ನು ಗಾಡಿಯ ನೊಗಗಳಿಗಾಗಿ ಕೊಡಗಿನಲ್ಲಿ ಬಳಸುವುದರಿಂದ ನೊಗ್ಗ ಎಂಬ ಹೆಸರು ಬಂದಿದೆ. ಕಾಫಿ ಗಿಡಗಳಿಗೆ ನೆರಳಿಗೋಸ್ಕರವೂ ಇದನ್ನು ಬೆಳೆಸಬಹುದು. ಟೀ ಪೆಟ್ಟಿಗೆಗಳನ್ನು, ಮನೆ ಸಾಮಾನುಗಳನ್ನು ಮಾಡಲು ಈ ಮರವನ್ನು ಬಳಸುತ್ತಾರೆ. ಮರದ ಎಲೆಗಳನ್ನು ದನಕರುಗಳು ತಿನ್ನುತ್ತವೆ.

ಕಂಬಳಿಗಿಡ (ರೇಷ್ಮೆಗಿಡ) Morus india Linn.

ರೇಷ್ಮೆ ಹುಳುಗಳಿಗೆ ಈ ಗಿಡದ ಎಲೆಗಳೇ ಆಹಾರ. ವ್ಯವಸಾಯ ಭೂಮಿಗಳಲ್ಲಿ ಒಂದು ಪೊದೆಯಂತಿದ್ದರೂ ಬಹಳ ವರ್ಷ ಬಿಟ್ಟರೆ ಒಂದು ಮರವಾಗಬಲ್ಲ ಶಕ್ತಿ ಈ ಗಿಡಕ್ಕಿದೆ. ಮೈಸೂರು, ಚನ್ನಪಟ್ಟಣ, ರಾಮನಗರಂ ಮುಂತಾದ ಸ್ಥಳಗಳಲ್ಲಿ ಈ ಗಿಡವನ್ನು ಹೆಚ್ಚಾಗಿ ಬೆಳೆಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=28 (Tahara 1910). ಈ ಗಿಡದ ಜೊತೆಗೆ ಹಿಪ್ಪನೇರಳೆ (Moras alba) ಎಂಬ ಇನ್ನೊಂದು ಪ್ರಭೇದವನ್ನು ರೇಷ್ಮೆ ಹುಳುಗಳಿಗಾಗಿಯೇ ಬೆಳೆಸಲಾಗುತ್ತದೆ. ಸಣ್ಣ ಸಣ್ಣ ಕಡ್ಡಿಗಳನ್ನು ಕಿತ್ತು ಕೊಂಡು ನೆಡುವ ಮೂಲಕ ಈ ಸಸ್ಯಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತದೆ.

ಉಪಯೋಗಗಳು : ರೇಷ್ಮೆ ಹುಳುಗಳಿಗಾಗಿ ಈ ಸಸ್ಯವನ್ನು ಬೆಳೆಸಿಕೊಂಡರೂ ಮೋರಸ್ ಹಣ್ಣುಗಳನ್ನು ತಿನ್ನಲೂ ಉಪಯೋಗಿಸಬಹುದು.

ಖರ್ಗಾಸ್ (ಗರಗತ್ತಿ, ಗೆರೆಗುಟ್ಟಿ) Ficus asperrima Roxb.

ಶಿವಮೊಗ್ಗ ಮತ್ತಿತರ ಕಡೆಗಳಲ್ಲಿ ಕಂಡುಬರುವ ಅಷ್ಟೇನೂ ಎತ್ತರವಲ್ಲದ ನಿತ್ಯಹರಿದ್ವರ್ಣದ ಈ ಮರವು ಒರಟಾದ ಎಲೆಗಳನ್ನು ಹೊಂದಿರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Condit).

ಹಣ್ಣುಗಳು ದುಂಡಗಿದ್ದು ಕೆಂಪು ಮಿಶ್ರಿತ ಹಳದಿ ಬಣ್ಣವನ್ನು ಹೊಂದಿರುತ್ತವೆ. ಮರವು ಮೃದುವಾಗಿರುವುದರಿಂದ ಉಪಯೋಗವಿಲ್ಲದ್ದಾಗಿರುತ್ತದೆ.

ಉಪಯೋಗಗಳು : ಗಂಧದ ಮರದಿಂದ ಕೊರೆದು ಮಾಡಿದ ಸಾಮಾನುಗಳನ್ನು ಉಜ್ಜಲು ಶಿವಮೊಗ್ಗದಲ್ಲಿ ಉಪ್ಪು ಕಾಗದದ ಬದಲಿಗೆ ಇದರ ಒರಟಾದ ಎಲೆಗಳನ್ನು ಉಪಯೋಗಿಸುತ್ತಾರೆ. ಪಿತ್ತಕೋಶ, ಪ್ಲೀಹಗಳ ಖಾಯಿಲೆಗಳಿದ್ದರೆ ಅವಕ್ಕೆ ಇದರ ತೊಗಟೆಯ ಕಷಾಯವನ್ನು ಉಪಯೋಗಿಸುತ್ತಾರೆ.

ಖರ್ಜೂರ (Phoenix dactylifera Linn.)

ಖರ್ಜೂರ ಮರಕ್ಕೆ ತವರು ಇಂಡಿಯಾ ಅಥವಾ ಅರೇಬಿಯಾಗಳೆರಡರಲ್ಲೊಂದು. ನಮ್ಮ ದೇಶದಲ್ಲಿ ಈ ಮರವನ್ನು ರಾಜಾಸ್ಥಾನ ಮತ್ತು ಪಂಜಾಬುಗಳಲ್ಲಿ ಹೆಚ್ಚಾಗಿ ಬೆಳೆಸುತ್ತಾರೆ. ಮೈಸೂರು ಸಂಸ್ಥಾನದಲ್ಲಿ 1885 ರಲ್ಲಿ ಪರ್ಶಿಯಾದಿಂದ ಖರ್ಜೂರದ ಬೀಜಗಳನ್ನು ತರಿಸಿ ನೆಡಲಾಯಿತು. ಇವುಗಳನ್ನು ಬೆಂಗಳೂರಿನ ಲಾಲ್‌ಬಾಗ್ ಮತ್ತಿತರ ಕಡೆಗಳಲ್ಲಿ ಬೆಳೆಸಲಾಯಿತು. ಆದರೆ ಮೈಸೂರಿನ ಹವೆಯಲ್ಲಿ ಈ ಮರವು ಅಷ್ಟು ಚೆನ್ನಾಗಿ ಬೆಳೆಯುವುದಿಲ್ಲ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಮೇ (palmae) ಅರೆಕೇಸಿ ಈಗಿನ (Arecaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=36 (Beal 1937). ಮರುಭೂಮಿ ಪ್ರದೇಶಗಳಲ್ಲಿ ಓಯಸಿಸ್ ಹತ್ತಿರವಿದ್ದರೆ 100 ಅಡಿಗಳಷ್ಟೆತ್ತರಕ್ಕೂ ಈ ಮರ ಬೆಳೆಯಬಲ್ಲದು.

ಉಪಯೋಗಗಳು : ಈ ಮರವನ್ನು ಖರ್ಜೂರ ಹಾಗೂ ಉತ್ತುತ್ತೆ ಕಾಯಿಗಳಿಗಾಗಿಯೂ, ಎಲೆಗಳಿಂದ ನಾರು ತೆಗೆದು ಹಗ್ಗ, ಬುಟ್ಟಿಗಳು, ಇವುಗಳನ್ನು ಮಾಡಲೂ ಬೆಳೆಸುತ್ತಾರೆ.

ಗಜನಿಂಬೆ Citrus limettioides Tanaka (=C medica var limetta Wight & Arn.)

ಉತ್ತರ ಇಂಡಿಯದಲ್ಲೆಲ್ಲಾ ಬೆಳೆಯುವ ಈ ಸಣ್ಣ ಮರವನ್ನು ಮೈಸೂರಿನಲ್ಲಿ ತೋಟಗಳಲ್ಲಿ ಬೆಳೆಸಲಾಗುತ್ತಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=18 (Longley 1925). ಇದರ ಹೂವುಗಳು ಬೆಳ್ಳಗೆ ಇರುತ್ತವೆ. ಗಜನಿಂಬೆ ಹಣ್ಣು ದುಂಡಗೆ ಕಿತ್ತಳೆ ಹಣ್ಣಿಗಿಂತ ಸ್ವಲ್ಪ ದಪ್ಪಗಿರುತ್ತದೆ. ಅದರ ಸಿಪ್ಪೆಯು ತೆಳುವಾಗಿರುತ್ತದೆ.

ಉಪಯೋಗಗಳು : ಕಾಯಿಗಳನ್ನು ಉಪ್ಪಿನಕಾಯಿಗಳಿಗಾಗಿ ಬಳಸುತ್ತಾರೆ. ಎಲೆಗಳಿಂದ "ಪೆಟೀಟ್‌ಗ್ರೇನ್" ಎಂಬ ಎಣ್ಣೆಯನ್ನು ತೆಗೆದು, ಸೌಂದರ್ಯ ಸಾಧಕಗಳಿಗಾಗಿ ಬಳುಸುತ್ತಾರೆ. ಸಿಹಿತಿಂಡಿ ಕಾರ್ಖಾನೆಗಳಲ್ಲಿ ವಾಸನೆಗೋಸ್ಕರ ಇದನ್ನು ಬಳುಸುತ್ತಾರೆ. ಅರಸಿನ ಕಾಮಾಲೆ (ಜಾಂಡಿಸ್) ಕಾಯಿಲೆಗೆ ಔಷಧಿ ತಯಾರಿಸಲು ಇದರ ಹಣ್ಣಿನ ರಸವನ್ನು ಉಪಯೋಗಿಸುತ್ತಾರೆ.

ಗಿನ್ನುನು Fagraea obovata Wall.

ಕೆಲವು ಪುಸ್ತಕಗಳಲ್ಲಿ ಇದನ್ನು ನಿತ್ಯಹರಿದ್ವರ್ಣದ ಮರವೆಂದು ಹೇಳಲಾಗಿದೆಯಾದರೂ ಈ ಮರವು ಪೊದೆಯಂತಿರುವುದೇ ಹೆಚ್ಚು. 1900 ರಲ್ಲೇ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಇದನ್ನು ಹಾಕಲಾಗಿತ್ತು. ಇದು ಮಲೆನಾಡಿನಲ್ಲಿ ಕಂಡು ಬರುತ್ತದೆ. ಸಮುದ್ರಮಟ್ಟಕ್ಕೆ 5000 ಅಡಿಗಳ ಎತ್ತರದವರೆಗೂ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಸಸ್ಯವು ಲೊಗಾನಿಯೇಸಿ (Loganiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=66. ಇದರ ಹೂವುಗಳು ಉದ್ದವಾಗಿ ಗಂಟೆಯಂತಿದ್ದು ಆಕರ್ಷಕವಾಗಿರುತ್ತವೆ. ಪುಷ್ಪದಳದಿಂದಾದ ಕೊಳವೆಯು 2 ಇಂಚುಗಳಿಗಿಂತ ಕಡಿಮೆ ಉದ್ದವಿದ್ದು ಮೇಲೆ ಆಲಿಕೆಯ ಆಕಾರವನ್ನು ಹೊಂದಿರುತ್ತದೆ ಈ ಮರವು ಸುಮಾರು 30 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಕಾಯಿ ಮಾಗಿದ ಮೇಲೆ ಸ್ವಲ್ಪ ದುಂಡಾಗಿ ಮೆತ್ತಗಿರುತ್ತದೆ. ಇದರ ಮರವು ಘನ ಅಡಿಯೊಂದಕ್ಕೆ 56 ಪೌಂಡು ತೂಕ ಬರುತ್ತದೆ. ಕೊಂಬೆಗಳ ಮೂಲಕ ಇದನ್ನು ಬೆಳೆಸಲಾಗುತ್ತದೆ.

ಉಪಯೋಗಗಳು : ಇದೊಂದು ಅಲಂಕಾರ ವೃಕ್ಷ.

ಗಿಲಿಕೆಮರ (Ficus indica Linn.)

ರಸ್ತೆಗಳ ಪಕ್ಕದಲ್ಲಿ ಸಾಲು ಮರವಾಗಿ ಬೆಳೆಸಲಾಗುವ ಈ ಮರವು 35 ರಿಂದ 40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Condit 1933). ಕೆಳಗಿನ ರೆಂಬೆಗಳಿಂದ ಬಿಳಿಲುಗಳು ಬಂದಿರುತ್ತವೆ. ಇದು ಆಲದ ಮರದಂತೆ ಕಂಡರೂ ಇದಕ್ಕೆ ಚಿಕ್ಕ ಎಲೆ, ಹಣ್ಣುಗಳು ಇರುತ್ತವೆ. ಎಲೆಗಳು ಎಳೆಯ

ವಾಗಿದ್ದಾಗ ತಾಮ್ರವರ್ಣದವಾಗಿರುತ್ತವೆ. ಹಣ್ಣುಗಳು ಹಳದಿ ಮಿಶ್ರಿತವಾದ ಕೆಂಪು ಬಣ್ಣಕ್ಕಿರುತ್ತವೆ.

ಉಪಯೋಗಗಳು : ಇದನ್ನು ರಸ್ತೆ ಮರವಾಗಿ ಬೆಳೆಸುತ್ತಾರೆ. ಆದರೆ ಇದು ಅಷ್ಟೇನೂ ನೆರಳು ಕೊಡುವಂತಹ ಮರವಲ್ಲ.

ಗೊಡ್ಡಮಿತ್ಲಿ ಮರ (Ficus gibbosa Blume var parasitica (koen.) king. (=Ficus parasitica koen ex willd.)

ಬಂಡೆಗಳ ಪ್ರದೇಶದಲ್ಲಿ ಕಲ್ಲು ಮಿಶ್ರಿತ ಗುಡ್ಡಗಳಲ್ಲಿ ಕಂಡುಬರುವ ಈ ನಿತ್ಯ ಹರಿದ್ವರ್ಣದ ವೃಕ್ಷ ಅಷ್ಟೇನೂ ದೊಡ್ಡದಲ್ಲ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೋರೇಸಿ (Moraceae) ಕುಟುಂಬಕ್ಕೆ ಸೇರಿದೆ. ತನ್ನ ಎಳೆತನದಲ್ಲಿ ಬೇರೊಂದು ಸಸ್ಯದ ಆಧಾರದ ಮೇಲೆ ತನ್ನ ಜೀವನವನ್ನು ಪ್ರಾರಂಭಿಸುವ ಈ ಮರವು ಚೆನ್ನಾಗಿ ಬೆಳೆದ ಮೇಲೆ ತನ್ನ ಆಶ್ರಯ ದಾತನನ್ನು ಸುತ್ತುವರಿದು ದೈತ್ಯನಂತೆ ಬೆಳೆದು ಅದನ್ನು ಕೊಲ್ಲುತ್ತದೆ. ಇದರ ತೊಗಟೆಯು ಬೂದು ಬಣ್ಣ ಇಲ್ಲವೇ ಹಳದಿ ಮಿಶ್ರಿತ ಹಸಿರು ಬಣ್ಣವನ್ನು ಹೊಂದಿರುತ್ತದೆ. ಒಳಭಾಗದ ಮರವು ಕಂದುಮಿಶ್ರಿತ ಬೂದು ಬಣ್ಣವನ್ನು ಹೊಂದಿದ್ದು ಮೃದುವಾಗಿರುತ್ತದೆ. ಅಷ್ಟೇನೂ ಉಪಯೋಗಕ್ಕೆ ಬರುವುದಿಲ್ಲ. ಇದರ ಎಲೆಗಳು ಒರಟಾಗಿದ್ದು ಹಣ್ಣುಗಳು ಬಟಾಣಿ ಕಾಳುಗಳಿಗಿಂತ ಸ್ವಲ್ಪ ದಪ್ಪವಾಗಿರುತ್ತವೆ.

ಉಪಯೋಗಗಳು : ಈ ಮರದ ತೊಗಟೆಯನ್ನು ಔಷಧಿಗಾಗಿಯೂ ಉಪಯೋಗಿಸುತ್ತಾರೆ.

ಗೊಡ್ಡು ಈಚಲು (Cycas circinalis Linn.)

ಆಫ್ರಿಕದ ನಿವಾಸಿಯಾಗಿದ್ದ ಈ ಸಣ್ಣ ಮರವನ್ನು ನಮ್ಮ ದೇಶದಲ್ಲಿ ಎಲ್ಲಾ ಕಡೆಗಳಲ್ಲೂ ಬೆಳೆಸುತ್ತಿದ್ದಾರೆ.

ಸಸ್ಯಶಾಸ್ತ್ರ ವಿವರಣೆ : ಅನಾವೃತಬೀಜ ಸಸ್ಯಗಳ (Gymnosperms) ಗುಂಪಿಗೆ ಸೇರಿದ ಈ ಮರವು ಸೈಕಾಡೇಸಿ (Cycadaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=22$ (Sax & B.1934). ಇದರ ಆಕಾರವನ್ನು ನೋಡಿದರೆ ಸಾಮಾನ್ಯ ಜನಗಳು ಇದನ್ನು ತೆಂಗಿನ ಇಲ್ಲವೇ ಈಚಲ ಜಾತಿಗೆ ಸೇರಿದ ಮರ ಎಂದು ತಿಳಿದುಕೊಳ್ಳಬಹುದು. ಹಾಗೆಯೇ ಇದಕ್ಕೆ ಗೊಡ್ಡು ಈಚಲು ಎಂಬ ಹೆಸರು ಬಂದಿರುವುದು. ಈ ಮರದಲ್ಲಿ ಗಂಡು ಮತ್ತು ಹೆಣ್ಣು ಮರ

ಗಳು ಬೇರೆ ಬೇರೆಯಾಗಿಯೇ ಇರುತ್ತವೆ. ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆಯ ಬಹುದು. ಆದರೆ ಈ ಗಿಡ ಬೆಳೆಯುವುದು ಬಹಳ ನಿಧಾನ. ಅಂತೆಯೇ ದೀರ್ಘ ಜೀವಿಕೂಡ.

ಉಪಯೋಗಗಳು : ಉದ್ಯಾನವನಗಳಲ್ಲಿ ಇದನ್ನು ಅಲಂಕಾರ ವೃಕ್ಷವಾಗಿ ಬೆಳೆಸಿಕೊಳ್ಳುತ್ತಾರೆ. ಈ ಮರದ ಹಣ್ಣುಗಳನ್ನು ಕೆಲವುಕಡೆ ರುಚಿ ನೋಡುವರಾದರೂ ಅವನ್ನು ತಿಂದರೆ ಕ್ಯಾನ್ಸರ್ ರೋಗ ಬರಬಹುದೆಂಬ ಪ್ರತೀತಿ ಇದೆ.

ಗೊಜೆಮರ (ಗುರಿಗೆ, ಗೌರಿಗೆ) (Bridelia retusa Spreng.)

ಮಲೆನಾಡಿನ ಈ ಮರವು ರಾಜಾಸ್ಥಾನ, ಮಧ್ಯಪ್ರದೇಶ, ಬಿಹಾರಗಳಲ್ಲೂ ಬೆಳೆಯುತ್ತದೆ. 30 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರವು 6 ರಿಂದ 7 ಅಡಿಗಳಷ್ಟು ಸುತ್ತಳತೆಯನ್ನು ಗಳಿಸುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯುಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=28$ (Perry 1943). ಅಷ್ಟೇನೂ ಎತ್ತರಕ್ಕೆ ಬೆಳೆಯದ ಈ ಮರದ ಎಳೆಯ ಭಾಗಗಳಲ್ಲಿ ಮುಳ್ಳುಗಳಿರುತ್ತವೆ. ಎಲೆಗಳು ಒರಟಾಗಿದ್ದು ಹೂಗಳು ಸಣ್ಣಗೆ ಹಳದಿ ಬಣ್ಣಕ್ಕಿರುತ್ತವೆ. ಈ ಮರದಲ್ಲಿ ಚೇಗು ಸಣ್ಣಗಿದ್ದರೂ ಹತ್ತಿರದ ಎಳೆಗಳನ್ನು ಹೊಂದಿದ್ದು ಗಟ್ಟಿಯಾಗಿರುತ್ತದೆ. ಘನ ಅಡಿಯೊಂದಕ್ಕೆ 56 ರಿಂದ 64 ಪೌಂಡುಗಳಷ್ಟು ತೂಕ ಬರುತ್ತದೆ. ಇದೇ ಮರದ ಬೇರೆ ಪ್ರಭೇದಗಳಾದ B.montana willd. B. stipularis Blume ಗಳೂ ಮಲೆನಾಡಿನಲ್ಲಿ ಬೆಳೆಯುತ್ತವೆ.

ಉಪಯೋಗಗಳು : ಈ ಮರದ ತೊಗಟೆಯಿಂದ ಗಟ್ಟಿಯಾದ ಹೊಳಪುಳ್ಳ ನಾರನ್ನು ತೆಗೆಯುತ್ತಾರೆ. ಬರೆಯುವ ಕಾಗದವನ್ನು ತಯಾರಿಸಲೂ ಇದನ್ನು ಉಪಯೋಗಿಸಬಹುದು. ಮರದ ತಿರುಳಿನಿಂದ ವೃತ್ತ ಪತ್ರಿಕಾ ಮುದ್ರಣ ಕಾಗದ (News print) ವನ್ನು ತಯಾರಿಸುತ್ತಾರೆ. ಈ ಮರವು ನೀರಿನಲ್ಲಿ ಬಹಳ ಕಾಲ ಬಾಳುತ್ತದೆ. ಆದ್ದರಿಂದ ಬಾವಿಯಿಂದ ಬಿಂದಿಗೆಗಳನ್ನು ಹೊರ ತೆಗೆಯಲು ಮಾಡುವ ಪಾತಾಳ ಗರಡಿಗಳನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ಚರ್ಮ ಹದ ಮಾಡಲು ಈ ಮರದ ತೊಗಟೆಯ ರಸವನ್ನು ಬಳಸಲಾಗುತ್ತಿತ್ತು. ಈ ಮರಕ್ಕೆ ಗಾಯ ಮಾಡಿದರೆ ಕೆಂಪನೆಯ ಹಾಲು ಬರುತ್ತದೆ. ಈ ಮರದ ಹಾಲು ಕೈಗಳಿಗೆ ಅಂಟಿದರೆ ಅದು ಹೋಗಬೇಕಾದರೆ ಕಷ್ಟ. ಇದರ ಹಣ್ಣು ಮತ್ತು ಎಲೆಗಳನ್ನು ದನಗಳುತಿನ್ನುತ್ತವೆ.

ಗೊಬ್ರನೇರಳೆ (ಗೊವರ್‌ನೆಲ್ಲು) (Bischofia javanica Blume.)

ಈ ಮರದ ಎಲೆಗಳನ್ನು ಗೊಬ್ಬರಕ್ಕಾಗಿ ಬಳಸುವುದರಿಂದ ಇದಕ್ಕೆ ಗೊಬ್ರ ನೇರಳೆ ಎಂಬ ಹೆಸರು ಬಂದಿದೆ. ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳ ಅರಣ್ಯಗಳಲ್ಲಿ ಈ ಮರ ಹೇರಳವಾಗಿ ಬೆಳೆಯುತ್ತದೆ. ದುಂಡು ತಲೆಯ ಈ ಮರವು 30-40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಆದರೆ ಉತ್ತರ ಹಿಮಾಲಯದ ಅರಣ್ಯಗಳಲ್ಲಿ ಬೆಳೆಯುವ ಮರಗಳು 70 ಅಡಿ ಎತ್ತರವುಳ್ಳದ್ದಾಗಿ 7 ಅಡಿ ದಪ್ಪನಾಗುತ್ತವೆ. ಈ ಮರವು ಪೂರ್ವಘಟ್ಟಗಳ ಅರಣ್ಯಗಳಲ್ಲೂ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಯೂಫೊರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಹಿಮಾಲಯದ ಹತ್ತಿರದ ಅರಣ್ಯಗಳಲ್ಲಿನ ಮರಗಳ ಎಲೆಗಳು ಫೆಬ್ರವರಿ–ಮಾರ್ಚಿ ತಿಂಗಳುಗಳಲ್ಲಿ ಉದುರಿ ಹೋಗುತ್ತವೆ. ಹಣ್ಣುಗಳು ಏಪ್ರಿಲ್‌ನಲ್ಲಿ ಬರುತ್ತವೆ. ಹಸಿರಾಗಿರುವ ಎಲೆಗಳು ಉದುರುವುದಕ್ಕೆ ಮುಂಚೆ ಕೆಂಪಾಗುತ್ತವೆ. ಇದರ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ತ್ರಿಪತ್ರಿ (Trifoliate) ಗಳಾಗಿರುತ್ತವೆ. ಹಣ್ಣುಗಳು ದೊಡ್ಡ ಬಟಾಣಿ ಕಾಳಿನಷ್ಟಿದ್ದು ನೀಲಿ ಮಿಶ್ರಿತ ಕಪ್ಪು ಬಣ್ಣ ಹೊಂದಿರುತ್ತವೆ. ಮರವು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಬಹಳ ಕಾಲ ಬಾಳಿಕೆ ಬರುವ ಗುಣ ಹೊಂದಿದೆ. ಮರವು ಕೆಂಪಾಗಿರುತ್ತದಾದ್ದರಿಂದ ಇದನ್ನು ಕೆಂಪು ದೇವದಾರು ಎಂದೂ ಕರೆಯುತ್ತಾರೆ. ಮರವು ಒಣಗಿದ ಮೇಲೆ ಘನ ಅಡಿಯೊಂದಕ್ಕೆ 47 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು: ಒಮ್ಮೊಮ್ಮೆ ಕಾಫಿ ಗಿಡಗಳ ಮಧ್ಯೆ ಬೆಳೆಸುತ್ತಾರೆ. ಎಲೆಗಳಿಂದ ಗೊಬ್ಬರವಾಗುತ್ತದೆ. ವ್ಯವಸಾಯದ ಉಪಕರಣ ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಇದರ ಮರದಿಂದ ಮನೆ ಸಾಮಾನುಗಳು, ಸೇತುವೆಗಳು, ರೈಲ್ವೆ ಸ್ಲೀಪರುಗಳು, ಹಲಗೆಗಳು ಮುಂತಾದುವನ್ನು ಮಾಡುತ್ತಾರೆ. ಇದರ ರೆಂಬೆಗಳ ತೊಗಟೆಯುಲ್ಲಿ 16% ಟ್ಯಾನಿನ್ ಇರುತ್ತದೆ.

ಗೊರಕಲು (ಗೊರ್ಕಲ್‌ಮರ, ಬೆಂಡುಮರ) Trema orientalis Linn.

ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬೆಳೆಯುವ ಈ ಮರವು ದಟ್ಟವಾದ ಅರಣ್ಯಗಳಲ್ಲೂ, ಬಾಬಾಬುಡನ್ ಬೆಟ್ಟಗಳಲ್ಲೂ, ಬಂಗಾಳ, ಬಿಹಾರ, ಮಧ್ಯಪ್ರದೇಶ, ಅಸ್ಸಾಂ ರಾಜ್ಯಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಅಲ್ಮೇಸಿ (Ulmaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=18 (Arora 1960). ಈ

ಮರವು 30-40 ವರ್ಷಗಳ ಮೇಲೆ ಬದುಕುವುದಿಲ್ಲ ಎಂದು ಹೇಳುತ್ತಾರೆ. ಇದರ ದ್ವಿಲಿಂಗ ಪುಷ್ಪಗಳು ಸಣ್ಣಗಿರುತ್ತವೆ. ಹಣ್ಣುಗಳು ಸಣ್ಣಗೆ ಲಾಂಟಾನಾ ಹಣ್ಣಿನಂತಿರುತ್ತವೆ. ಮರ ಮೃದುವಾಗಿರುತ್ತದೆ. ಎಲೆಗಳ ಕೆಳಭಾಗವು ಬೆಳ್ಳಗಿರುತ್ತದೆ.

ಉಪಯೋಗಗಳು : ಈ ಮರವನ್ನು ನೊಗಗಳನ್ನು ಮಾಡಲೂ, ಇದ್ದಿಲು ಮಾಡಲೂ ಮೈಸೂರಿನಲ್ಲಿ ಉಪಯೋಗಿಸುತ್ತಾರೆ. ಮರದ ತಿರುಳನ್ನು ಕಾಗದ ತಯಾರಿಸಲು ಉಪಯೋಗಿಸಬಹುದು. ತೊಗಟೆಯಿಂದ ನಾರು ತೆಗೆದು ಹಗ್ಗಗಳನ್ನೂ, ಒರಟಾದ ಬಟ್ಟೆಗಳನ್ನು ಮಾಡುತ್ತಾರೆ.

ಗೊರವಿ (ಹೆಣ್ಣುಗೊರವಿ, ಗೊರಬಿಕಟ್ಟಿಗೆ) Ixora arborea Roxb. ex Sm. (Syn. Ixora parviflora vahl)

ಮಲೆನಾಡು, ಕೊಡಗುಗಳಲ್ಲಿ ಇದನ್ನು ಟಾರ್ಚ್‌ಮರ ಎಂದು ಕರೆಯುತ್ತಾರೆ. ಇದರ ಹಸಿರು ಮರವು ಬಹಳ ಚೆನ್ನಾಗಿ ಉರಿಯುವ ಗುಣವನ್ನು ಹೊಂದಿದೆ. ಆದ್ದರಿಂದಲೇ ಮರಕ್ಕೆ ಟಾರ್ಚ್ ಮರ ಎಂದು ಹೆಸರು ಬಂದಿದೆ. ರಾತ್ರಿಯ ಹೊತ್ತು ತಿರುಗುವ ಹಳ್ಳಿಯ ಪ್ರಯಾಣಿಕರು ಇದನ್ನು ಹೊತ್ತಿಸಿಕೊಂಡು ಮನೆಯಿಂದ ಹೊರಡುತ್ತಾರೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 22$ (Sharma & Chaterjee 1960). ಇದರ ಎಲೆಗಳು ಅಭಿಮುಖ ಜೋಡಣೆಯನ್ನು ಹೊಂದಿದ್ದು 3 ರಿಂದ 6 ಇಂಚು ಉದ್ದವಿರುತ್ತವೆ. ಮಾರ್ಚ್ ಏಪ್ರಿಲ್‌ಗಳಲ್ಲಿ ಜೇನು ತುಪ್ಪದ ವಾಸನೆಯಿರುವ, ಕೆಂಪಾದ ಇಲ್ಲದೆ ಬಿಳುಪಾದ ಹೂಗಳು ಹೇರಳವಾಗಿ ಮೂಡುತ್ತವೆ. ಮರವು ಸಣ್ಣಗಿದ್ದರೂ ಗಟ್ಟಿಯಾಗಿರುತ್ತದೆ. ಘನ ಅಡಿಯೊಂದಕ್ಕೆ 57 ರಿಂದ 66 ಪೌಂಡು ತೂಗುತ್ತದೆ.

ಉಪಯೋಗಗಳು : ಇದೊಂದು ಸುಂದರ ಅಲಂಕಾರ ವೃಕ್ಷ. ಎಸ್ಟೇಟ್‌ಗಳಲ್ಲೆಲ್ಲಾ ಬೆಳೆಸುತ್ತಾರೆ. ಇದರ ಹಣ್ಣಿನ ರಸವನ್ನು ಹಾಲಿನ ಜೊತೆ ಸೇರಿಸಿ ಕೊಟ್ಟರೆ ನಾಯಿಕೆಮ್ಮು ಹುಷಾರಾಗುತ್ತದೆಂಬ ಪ್ರತೀತಿ ಇದೆ. ಇದರ ಹಣ್ಣುಗಳನ್ನು ಸಂತಾಲರು ತಿನ್ನುತ್ತಾರೆ. ಮರವನ್ನು ಮನೆಯ ಸಾಮಾನುಗಳನ್ನು ಮಾಡಲೂ, ಸೌದೆಗಾಗಿಯೂ ಉಪಯೋಗಿಸುತ್ತಾರೆ. ಇದರ ತೊಗಟೆಯ ಕಷಾಯವನ್ನು ರಕ್ತವಿಲ್ಲದಿರುವವರಿಗೆ ಹಾಗೂ ದುರ್ಬಲರಿಗೆ ಔಷಧಿಯಾಗಿ ಕೊಡುತ್ತಾರೆ.

ಗೊಗುಲ್‌ಧೂಪ (ಮಂದಧೂಪ, ಬಾಗಧೂಪ) Ailanthus triphysa (Dennst) Alston. (Syn. A. malabarica)

ಉತ್ತರ ಕರ್ನಾಟಕ ಹಾಗೂ ಮಲೆನಾಡಿನ ತಂಪಾದ ಹವೆಯ ಗುಡ್ಡ ಪ್ರದೇಶದ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಬೆಳೆಯುವ ಈ ಉನ್ನತ ವೃಕ್ಷವು 30 ಮೀಟರುಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಬರ್ಮ, ಸಿಲೋನ್‌ಗಳಲ್ಲೂ ಈ ಮರ ಇದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಸಿಮಾರುಬೇಸಿ (Simaroubaceae) ಕುಟುಂಬಕ್ಕೆ ಸೇರಿದೆ. ಈ ಮರವು ಎಲೆಗಳಿದ್ದಾಗ ಸುಂದರವಾಗಿರುತ್ತದೆ. ಅಕ್ಟೋಬರ್‌ನಲ್ಲಿ ಹೂ ಬಿಟ್ಟು ಛಳಿಗಾಲದಲ್ಲಿ ಕಾಯಿಗಳನ್ನು ಬಿಡುತ್ತದೆ. ಮರ ಅಷ್ಟೇನೂ ಉಪಯೋಗಕರವಾದುದಲ್ಲ. ಒಂದು ಘನ ಅಡಿಗೆ 23 ಪೌಂಡುಗಳಷ್ಟು ಮಾತ್ರ ತೂಗಬಲ್ಲದು.

ಉಪಯೋಗಗಳು: ಈ ಮರದ ತೊಗಟೆಗೆ ಗಾಯ ಮಾಡಿದಾಗ ಬರುವ ಸುವಾಸನೆಯುಳ್ಳ ಅಂಟಾದ ರೆಸಿನ್ನನ್ನು ಅಗರಬತ್ತಿ ಮಾಡಲೂ, ಔಷಧಿಯನ್ನು ತಯಾರಿಸಲೂ (ಆಮಶಂಕೆಗೆ) ಉಪಯೋಗಿಸುತ್ತಾರೆ. ಮರವು ಬಹಳ ಮೃದುವಾದ್ದರಿಂದ ಬೆಂಕಿ ಕಡ್ಡಿ ತಯಾರಿಸಲು ಯೋಗ್ಯವಾದದ್ದು. ಇದರ ಎಲೆಗಳಿಂದ ತೆಗೆದ ಬಣ್ಣವನ್ನು ಸ್ಯಾಟಿನ್ ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ.

ಗೋಜಲ್ (ಉಡಿ, ಶಿಂತಿ, ಕುರಟಿಗೆ, ಪುನಾಲ್)

Lannea coromandelica (Houtt) Merr.

(Syn. odina wodier Roxb.)

ಮೈದಾನದಲ್ಲಿ ಚೆನ್ನಾಗಿ ಬೆಳೆಯುವ ಈ ಮರಗಳನ್ನು ರಸ್ತೆಗಳಲ್ಲಿ ಅಲ್ಲಲ್ಲಿ ಸಾಲು ಮರಗಳನ್ನಾಗಿ ಬೆಳೆಸಿರುವುದನ್ನು ನಾವು ಕಾಣಬಹುದು. ಹಿಮಾಲಯದಲ್ಲಿ ಸಮುದ್ರ ಮಟ್ಟಕ್ಕೆ 1500 ಮೀಟರ್‌ವರೆಗಿನ ಎತ್ತರದ ಪ್ರದೇಶದಲ್ಲಿಯೂ, ಅಂಡಮಾನ್ ದ್ವೀಪಗಳಲ್ಲಿಯೂ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ವರ್ಷಕ್ಕೊಂದು ಸಾರಿ ಎಲೆಗಳು ಉದುರಿ ಹೋಗುತ್ತವೆ. ಸುಮಾರು 24 ಮೀಟರುಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರದ ತೊಗಟೆಯು ಬೂದು ಇಲ್ಲವೇ ಬಿಳಿಯ ಬಣ್ಣಕ್ಕಿರುತ್ತದೆ. ಇದರ ಸಂಯುಕ್ತ ಪತ್ರಗಳು 12 ರಿಂದ 22 ಇಂಚು ಉದ್ದವಿದ್ದು ರೆಂಬೆಗಳ ತುದಿಗಳಲ್ಲಿ ಗುಂಪು ಕೂಡಿಕೊಂಡಿರುತ್ತವೆ. ಹೂಗಳು ಸಣ್ಣದಾಗಿದ್ದು ಹಳದಿ ಇಲ್ಲವೇ ಸ್ವಲ್ಪ ಕೆಂಪು ಬಣ್ಣಕ್ಕೆ ಇರುತ್ತವೆ. ಹೂಗಳು ಏಕಲಿಂಗ ಪುಷ್ಪಗಳಾಗಿರುತ್ತವೆ. ಹಣ್ಣುಗಳು ಕೆಂಪಗಿರುತ್ತವೆ. ಒಂದೇ ಬೀಜ

ವನ್ನು ಹೊಂದಿರುತ್ತದೆ. ಇದರ ಹೊರಭಾಗದ ಮರ ಸ್ವಲ್ಪ ಬಿಳುಪಾಗಿ ಇಲ್ಲವೇ ಹಳದಿ ಮಿಶ್ರಿತ ಬಿಳುಪಾಗಿರುತ್ತದೆ. ಚೇಗು ಕೆಂಪಗಿದ್ದು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಗಟ್ಟಿಯಾದ ಮರವಾದರೂ ತೂಕ ಅಷ್ಟೇನೂ ಜಾಸ್ತಿಯಾಗಿರುವುದಿಲ್ಲ. ಘನ ಅಡಿಯೊಂದಕ್ಕೆ ಕೇವಲ 36 ರಿಂದ 40 ಪೌಂಡುಗಳಷ್ಟು ತೂಗುತ್ತದೆ. ಇದರ ಮರವು ಅಷ್ಟೇನೂ ಉಪಯೋಗವಾದದ್ದಲ್ಲ. ಕೀಟಗಳು ಇದನ್ನು ಸುಲಭವಾಗಿ ಕೊರೆದು ಪುಡಿ ಉದುರಿಸುತ್ತಿರುತ್ತವೆ. ಸಣ್ಣಸಣ್ಣ ರೆಂಬೆಗಳನ್ನು ಕತ್ತರಿಸಿ ನೆಡುವುದರಿಂದಾಗಲೀ ಅಥವಾ ಬೀಜಗಳಿಂದಾಗಲೀ ಇವುಗಳನ್ನು ಬೆಳೆಸಬಹುದು.

ಉಪಯೋಗಗಳು : ಈ ಮರದ ತಿರುಳನ್ನು ಕಾಗದದ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಇದರ ಎಲೆಯನ್ನು ಆನೆಗಳು, ದನಕರುಗಳು ತಿನ್ನುತ್ತವೆ. ಇದರ ತೊಗಟೆಯಿಂದ ಬಂದ ಗೋಂದನ್ನು ಶಾಯಿ ತಯಾರಿಕೆಯಲ್ಲೂ, ಸಿಹಿ ತಿಂಡಿಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಮರವನ್ನು ದೋಣಿಗಳು, ಮನೆ, ವ್ಯವಸಾಯದ ಸಾಮಾನುಗಳು ಹಾಗೂ ಮರದ ಪಾತ್ರೆಗಳು, ಬಾಚಣಿಗೆಗಳು ಇವುಗಳನ್ನು ಮಾಡಲು ಉಪಯೋಗಿಸುತ್ತಾರೆ

ಗೋಣಿಮರ (Ficus mysorensis Heyne)

ಇಂಡಿಯಾ, ಸಿಲೋನ್ ಮತ್ತು ಬರ್ಮಾ ದೇಶಗಳಲ್ಲಿ ಇದು 'ಮೈಸೂರು ಫಿಗ್' ಎಂದು ಪ್ರಸಿದ್ಧವಾಗಿದೆ. ಒಳ್ಳೆಯ ವಾತಾವರಣದಲ್ಲಿ ಬೆಳೆಯುತ್ತಿದ್ದರೆ ಬುಡವು 30 ಅಡಿಗಳಷ್ಟು ದಪ್ಪವಿದ್ದು ಎತ್ತರವು 70 – 100 ಅಡಿಗಳಷ್ಟು ಇರುತ್ತದೆ. ತಲೆ 150 ಅಡಿಗಳಷ್ಟು ಸುತ್ತಳತೆಗೂ ಜಾಸ್ತಿ ಇರಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 26$ (condit 1928). ಮಾರ್ಚಿ ಅಥವಾ ಏಪ್ರಿಲ್‌ಗಳಲ್ಲಿ ಎಲೆಗಳುದುರುತ್ತವೆ. ಸಣ್ಣಗಜ್ಜುಗದಷ್ಟು ದಪ್ಪ ಇರುವ ಹಣ್ಣುಗಳನ್ನು ಹಕ್ಕಿಗಳು ತಿನ್ನುತ್ತವೆ. ಈ ಹಣ್ಣುಗಳು ಕಿತ್ತಲೆ ಬಣ್ಣಕ್ಕಿರುತ್ತವೆ. ಈ ಮರವು ಹಾಸನ ಜಿಲ್ಲೆಯಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಕಾಫಿ ಗಿಡಗಳಿಗೆ ಒಳ್ಳೆಯ ನೆರಳು ಕೊಡಬಹುದಾದರೂ ಬಹಳ ದೊಡ್ಡದಾಗಿ ಬೆಳೆಯುವುದರಿಂದ ಅಷ್ಟು ಒಳ್ಳೆಯದಲ್ಲ.

ಉಪಯೋಗಗಳು: ಮರವು ಬಹಳ ಮೃದುವಾಗಿದ್ದು ಘನ ಅಡಿಯೊಂದಕ್ಕೆ 35 ಪೌಂಡುಗಳಷ್ಟು ತೂಗುತ್ತದೆ. ಇದನ್ನು ಸೌದೆಗಾಗಿ ಬಳಸುತ್ತಾರೆ. ಇದರ ಹಾಲನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ.

ಗಂಧದಮರ (ಶ್ರೀಗಂಧ) Santalum album Linn.

ಶ್ರೀಗಂಡದ ಮರಕ್ಕೆ ಮೈಸೂರೇ ತವರು. ಸಮುದ್ರ ಮಟ್ಟಕ್ಕೆ 2000 ಅಡಿಗಳಿಂದ 4500 ಅಡಿಗಳವರೆಗೂ ಇರುವ ಪ್ರದೇಶಗಳಲ್ಲೆಲ್ಲಾ ಈ ಮರವು ಬೆಳೆಯಬಲ್ಲದು. ಮೈಸೂರಿನ ಅರಣ್ಯಗಳಲ್ಲಿ ಅತಿ ಬೆಲೆ ಬಾಳುವ ಮರವೆಂದರೆ ಗಂಧದ ಮರವೇ ಆಗಿದೆ. ಗಂಧದ ಮರವು ಚಿತ್ರದುರ್ಗ, ಕೋಲಾರ, ಮತ್ತು ತುಮಕೂರು ಜಿಲ್ಲೆಗಳಲ್ಲಿ ಬೆಳೆದರೂ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಬೆಳೆದಷ್ಟು ಚೆನ್ನಾಗಿ ಅಲ್ಲಿ ಬೆಳೆಯುವುದಿಲ್ಲ. ಮೈಸೂರಿನ ಅರಣ್ಯ ಇಲಾಖೆಯವರು ಎಲ್ಲ ಜಿಲ್ಲೆಗಳಲ್ಲೂ ಒಂದೊಂದು ಗಂಧದ ಕೋಠಿಗಳನ್ನಿಟ್ಟಿದ್ದಾರೆ. 1894ರಲ್ಲೇ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಗಂಧದ ಕೋಠಿಗಳು ಇದ್ದುವಲ್ಲದೆ ಶಿವಮೊಗ್ಗದಲ್ಲಿ 3, ಮೈಸೂರಿನಲ್ಲಿ 2 ಕೋಠಿಗಳಿದ್ದವು. ಮರಕ್ಕೆ 30 ವರ್ಷಗಳಾದ ಮೇಲೆ, ಇಲ್ಲವೇ ಮರವು ಒಣಗಿದ ಮೇಲೆ ಅದನ್ನು ಸಂಗ್ರಹಿಸಿ ಕೋಠಿಗಳಿಗೆ ತಂದು ಅವನ್ನು ವರ್ಗೀಕರಿಸಲಾಗುತ್ತದೆ. ಈ ಕೋಠಿಯವರ ಪ್ರಕಾರ ಗಂಧದ ಮರದಲ್ಲಿ ನಾಲ್ಕು ವಿಧದ ಮರಗಳಿವೆ : ಬಿಳಿ, ಕೆಂಪು, ನವಿಲು ಮತ್ತು ನಾಗ. 70 ವರ್ಷಗಳ ಹಿಂದೆಯೇ 2000 ಟನ್‌ಗಳಷ್ಟು ಗಂಧದ ಮರವನ್ನು ಚೈನಾ, ಫ್ರಾನ್ಸ್, ಮತ್ತು ಜರ್ಮನಿಗಳಿಗೆ ರಫ್ತು ಮಾಡಲಾಗುತ್ತಿತ್ತು. ಈಗ ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಯೂರೋಪ್, ಜಪಾನ್, ಅರೇಬಿಯಾ ದೇಶಗಳಿಗೆ ಕಳಿಸಲಾಗುತ್ತಿದೆ. ಗಂಧದ ಮರಕ್ಕೆ ಟನ್ ಒಂದಕ್ಕೆ 3000/- ರೂ. ಗಳಷ್ಟು ಬೆಲೆಯಿದ್ದರೂ ರಫ್ತು ಮಾಡುವ ಗುಣವುಳ್ಳ ಬಿಲ್ಲೆಟ್‌ಗಳಿಗೆ 1000/- ರೂಗಳಷ್ಟಾಗುತ್ತದೆ. ಗಂಧದ ಎಣ್ಣೆಯ ಬೆಲೆ 1 ಕೆ.ಜಿ ಗೆ ಸುಮಾರು 240/- ರೂಪಾಯಿಗಳು. ನಮ್ಮ ಸಂಸ್ಥಾನದಲ್ಲಿ ಇಂದು ವರ್ಷವೊಂದಕ್ಕೆ ಸುಮಾರು 3000 ಟನ್‌ಗಳಷ್ಟು ಗಂಧದಮರವು ಸಿಕ್ಕುತ್ತದೆ. ಇದರಲ್ಲಿ 2500 ಟನ್‌ಗಳಷ್ಟು ಮರವು ನಮ್ಮ ದೇಶದ ಶಿವಮೊಗ್ಗ ಹಾಗೂ ಮೈಸೂರುಗಳಲ್ಲಿರುವ ಗಂಧದ ಎಣ್ಣೆಯ ಕಾರ್ಖಾನೆಗಳಿಗೇ ಬೇಕಾಗುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸ್ಯಾಂಟಾಲೇಸಿ (Santalaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=20 (G.S. Iyengar 1929). ನಿತ್ಯಹರಿದ್ವರ್ಣದ ಈ ಮರವು 25 ರಿಂದ 35 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಅಷ್ಟೇನೂ ದಪ್ಪವಿಲ್ಲದ ಈ ಮರವು 1 ರಿಂದ 1½ ಅಡಿ ದಪ್ಪವಿರುತ್ತದೆ. ಎಲೆಗಳು ಅಭಿಮುಖಪತ್ರ ಸಂಯೋಗ ಹೊಂದಿದ್ದು ತುಪ್ಪಳ ರಹಿತವಾಗಿ ತೊಟ್ಟುಗಳನ್ನು ಹೊಂದಿರುತ್ತವೆ. ಹೂಗಳು ಕಂದು ಬಣ್ಣದಿಂದ ಕೂಡಿ ಕೆಂಪಗಿರುತ್ತವೆ. ಕಾಯಿಗಳು ದುಂಡಗೆ ಹೊಳೆಯುತ್ತಿರುತ್ತವೆಯಲ್ಲದೆ ಒಂದೇ ಬೀಜವನ್ನು ಹೊಂದಿರುತ್ತವೆ. ಮರದ ತೂಕವು ಘನ ಅಡಿಯೊಂದಕ್ಕೆ 56 ರಿಂದ 60

ಪೌಂಡುಗಳಷ್ಟು ಇರುತ್ತದೆ. ಕೆಂಪು ಗಂಧದ ಮರವನ್ನು ಗೆಜ್ಜಲು ಹುಳುಗಳು ತಿನ್ನುವುದಿಲ್ಲ. ಹೆಚ್ಚು ಸಾಪೇಕ್ಷ ಸಾಂದ್ರತೆಯುಳ್ಳ ಸುಗಂಧಭರಿತವಾದ ಎಣ್ಣೆಯು ಈ ಮರದಲ್ಲಿರುತ್ತದೆ.

ಗಂಧದ ಮರವನ್ನು ಸುಲಭವಾಗಿ ಬೆಳೆಸುವುದು ಕಷ್ಟ. ಬೀಜಗಳಿಂದ ಸಸಿಗಳು ಬಂದರೂ ಅವಕ್ಕೆ ರಕ್ಷಣೆಯಿಲ್ಲದಿದ್ದರೆ ಕಾಡಿನಲ್ಲಿ ಮೊಲಗಳೋ, ಜಿಂಕೆಗಳೋ ತಿಂದು ಬಿಡುತ್ತವೆ. ಆದ್ದರಿಂದ ಲಾಂಟಾನಾ ಇಲ್ಲವೆ ಇತರ ಮುಳ್ಳು ಗಿಡಗಳಿರುವ ಕಡೆ ಹಾಕಿದರೆ ಇದು ಚೆನ್ನಾಗಿ ಬೆಳೆಯಬಲ್ಲದು.

ಗಂಧದ ಮರಕ್ಕೆ ಬಂದಿರುವ "ಸ್ಪೈಕ್" ಕಾಯಿಲೆಯಿಂದ ನಮ್ಮ ದೇಶಕ್ಕೆ ಬಹಳ ನಷ್ಟವಾಗುತ್ತಿದೆ. ಬೆಂಗಳೂರು ಅರಣ್ಯ ಸಂಶೋಧನಾ ಪ್ರಯೋಗಾಲಯದಲ್ಲಿ 1938 ರಿಂದಲೂ ಈ ಕಾಯಿಲೆಯ ಬಗ್ಗೆ ಸಂಶೋಧನೆಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ಎಫ್.ಎ.ಓ. (F.A.O.) ಮೂಲಕ ಕೂಪನ್ ಹೇಗನ್‌ನ ಡಾ|| ರೊಂಡೆ ಕ್ರಿಸ್ಟನ್‌ರವರು ಬೆಂಗಳೂರಿಗೆ ಬಂದು ಅಲ್ಲಿ ನಾಲ್ಕು ತಿಂಗಳು ಕಾಲ ಇದ್ದು (1959) ಈ ಕಾಯಿಲೆಯ ಸಂಶೋಧನಾರೀತಿಗಳ ಬಗ್ಗೆ ಅನೇಕ ಸೂಚನೆಗಳನ್ನು ಕೊಟ್ಟು ಹೋಗಿದ್ದಾರೆ.

ಉಪಯೋಗಗಳು : ನಮ್ಮ ದೇಶಕ್ಕೆ ಹೆಚ್ಚು ವಿದೇಶೀ ವಿನಿಮಯ ಬರುತ್ತಿರುವುದಕ್ಕೆ ಗಂಧದ ಮರವೂ ಕಾರಣವಾಗಿದೆ. ಇದರ ಎಣ್ಣೆಯನ್ನು ಅನೇಕ ಸುಗಂಧ ಪದಾರ್ಥಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಸೌಂದರ್ಯ ಸಾಧನಗಳನ್ನು ತಯಾರಿಸಲು ಗಂಧದ ಪುಡಿಯನ್ನು ಉಪಯೋಗಿಸುತ್ತಾರೆ. ಗಂಧದ ಮರದಿಂದ ಸುಂದರ ವಿಗ್ರಹ, ಮೂರ್ತಿಗಳು ಇವನ್ನು ಮಾಡುವುದು ಮೈಸೂರಿನ ಹಳೆಯ ಕಲೆ.

ಚಕ್ಕೋತ (ಸಕೋತ, ಸಕೋತ್ರ.)

Citrus maxima (Brum) Merril. (=Citrus decumana Linn.)

ಈ ಮರವು ಮಲಯದ ದ್ವೀಪ ಸಮುದಾಯಗಳಿಂದ ಬೇರೆಲ್ಲ ಕಡೆಗಳಿಗೂ ಹರಡಿತೆಂಬ ನಂಬಿಕೆ ಇದೆ. ನಮ್ಮ ದೇಶಕ್ಕೆ ಇದನ್ನು ಜಾವಾದಿಂದ ತರಲಾಗಿದೆ. ಚಕ್ಕೋತದ ಹಣ್ಣುಗಳು, ನಿಂಬೆಹಣ್ಣುಗಳಂತೆಯೇ ಇದ್ದರೂ ಇವು ತೆಂಗಿನ ಕಾಯಿಯಷ್ಟು ಗಾತ್ರವಾಗಿರುತ್ತವೆ. ಈ ಮರವು 15 ಅಡಿಗಳಷ್ಟು ಎತ್ತರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಸಣ್ಣ, ನಿತ್ಯಹರಿದ್ವರ್ಣದ, ದುಂಡಾದ ಈ ಮರವನ್ನು ಹಣ್ಣಿನ ತೋಟಗಳಲ್ಲೆಲ್ಲಾ ಬೆಳೆಸಲಾಗುತ್ತದೆ. ಇದು ರುಟೇಸಿ

(Rutaceae) ಕುಟುಂಬಕ್ಕೆ ಸೇರಿದೆ. ಕಿತ್ತಳೆಯಂತೆ ಇದೂ ಸಹ ವರ್ಷಕ್ಕೆ ಮೂರು ಬಾರಿ ಹಣ್ಣು ಬಿಡುತ್ತದೆ. ಹೂಗಳು ಸುವಾಸನೆಯಿಂದ ಕೂಡಿದ್ದು ಬೆಳ್ಳಗಿರುತ್ತವೆ. ಕಿತ್ತಳೆ ಮರವನ್ನು ಬೆಳೆಸಲಾಗದ ಪ್ರದೇಶಗಳಲ್ಲೆಲ್ಲಾ ಈ ಮರಗಳನ್ನು ಬೆಳೆಸಬಹುದು. ಇದರ ಹಣ್ಣಿನ ಸಿಪ್ಪೆಯು ದಪ್ಪನಾಗಿ ಹೊರಗಡೆ ಹಳದಿ ಬಣ್ಣವನ್ನು ಹೊಂದಿರುತ್ತದೆ. ಇದರ ಹಣ್ಣುಗಳು 6 ರಿಂದ 8 ಇಂಚು ಸುತ್ತಳತೆ ಹೊಂದಿದ್ದು ಹಳದಿ ಬಣ್ಣಕ್ಕೆ ಇರುತ್ತವೆ. ಒಳಗಿನ ತೊಳೆಗಳು ಕೆಂಪು ಇಲ್ಲವೇ ಬಿಳಿ ತಿರುಳನ್ನು ಹೊಂದಿರುತ್ತವೆ.



ಚಕ್ಕೋತ

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನಲೂ, ಔಷಧಿಗಾಗಿಯೂ, ಉಪಯೋಗಿಸುತ್ತಾರೆ. ಇತ್ತೀಚೆಗೆ ಇದರಿಂದ ಫಲಪಾಕವನ್ನು (Jam) ತಯಾರಿಸಲಾಗುತ್ತಿದೆ.

ಚುಜ್ಜಲುಮರ (ಸುಜ್ಜಲು, ಕಾಡಸೀಗೆ) Albbizzia amara Boiv.

ಮೈಸೂರಿನ ಎಲ್ಲಾ ಕಡೆಗಳಲ್ಲಿಯೂ ಬೆಳೆಯುವ ಈ ಮರವು ಹೆಚ್ಚಾಗಿ ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ ಬೆಳೆಯುತ್ತದೆ. ಕೇರಳದಲ್ಲಿಯೂ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಬೀಜಗಳಿಂದ ಸುಲಭವಾಗಿ ಮರವನ್ನು ಬೆಳೆಸಬಹುದು. ಈ ಮರವು ಬಹಳ ಗಟ್ಟಿಯಾದುದ್ದು, ಬಹಳ ಕಾಲ ಬಾಳಿಕೆ ಬರುತ್ತದೆ. ಘನ ಅಡಿಯೊಂದಕ್ಕೆ 62 ರಿಂದ 70 ಪೌಂಡುಗಳಷ್ಟು ತೂಕ ಬರುತ್ತದೆ.

ಉಪಯೋಗಗಳು : ನೇಗಿಲುಗಳು ಮತ್ತಿತರ ವ್ಯವಸಾಯೋಪಕರಣಗಳನ್ನು ಮಾಡಲು ಈ ಮರವನ್ನು ಉಪಯೋಸುಗಿತ್ತಾರೆ. ಇದರ ಎಲೆಗಳನ್ನು ಗೊಬ್ಬರಕ್ಕಾಗಿ ಉಪಯೋಗಿಸುತ್ತಾರೆ

ಚಿಟ್ಟಿತಂಡ್ರಿ ಮರ (ಚಿಟ್ಟಂಡಿ, ಗುಲ್ಮಾವು)
Machilus macrantha Nees.

ಮಲೆನಾಡಿನಲ್ಲಿ ಈ ದೊಡ್ಡ ನಿತ್ಯಹರಿದ್ವರ್ಣ ವೃಕ್ಷವು ಬೆಳೆಯುತ್ತದೆ. ಬಿಹಾರ್‌ನಲ್ಲೂ ಈ ಮರ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲಾರೇಸಿ (Lauraceae) ಕುಟುಂಬಕ್ಕೆ ಸೇರಿದೆ. ಸುಮಾರು 60 ಅಡಿಗಳಿಂದ 80 ಅಡಿಗಳಿಗೂ ಹೆಚ್ಚು ಎತ್ತರ ಬೆಳೆಯುವ ಈ ಮರವು 10 ಅಡಿಗೂ ಹೆಚ್ಚು ಸುತ್ತಳತೆಯನ್ನು ಗಳಿಸಬಲ್ಲದು. ಇದರ ತೊಗಟೆಯು ಕಂದು ಮಿಶ್ರಿತ ಕೆಂಪುಬಣ್ಣ ಹೊಂದಿದ್ದು ಅಲ್ಲಲ್ಲೆ ಕಪ್ಪು ಮಚ್ಚೆಗಳನ್ನು ಹೊಂದಿರುತ್ತದೆ. ಇದರ ಹೂವುಗಳು ಹಳದಿಯ ಬಣ್ಣದವಾಗಿರುತ್ತವೆ. ಇದು ಗೊಂಚಲುಗಳಲ್ಲಿ ಹೂ ಬಿಡುತ್ತದೆ. ಕಾಯಿಗಳು ಹಸುರಾಗಿದ್ದರೂ ಅಲ್ಲಲ್ಲಿ ಬಿಳಿಯ ಚುಕ್ಕಿಗಳನ್ನು ಹೊಂದಿರುತ್ತವೆ.

ಉಪಯೋಗಗಳು : ಮನೆ ಕಟ್ಟುವಾಗ ಉಪಯೋಗಿಸುವ ಹಲಗೆಗಳನ್ನೂ, ಇತರ ಸಾಮಾನುಗಳನ್ನು ಮಾಡಲೂ ಈ ಮರವನ್ನು ಉಪಯೋಗಿಸುತ್ತಾರೆ. ದೋಣಿ ಕಟ್ಟಲೂ, ಸ್ಲೇಟಿನ ಚೌಕಟ್ಟನ್ನು ತಯಾರಿಸಲೂ, ಬೆಂಕಿಕಡ್ಡಿಗಳನ್ನೂ ತಯಾರಿಸಲೂ ಇದನ್ನು ಉಪಯೋಗಿಸುತ್ತಾರೆ.

ಚಡ್ಲೆ (ದೊಡ್ಡಚಳ್ಳು) Cordia dichotoma Forst.f.(=Cordia obliqua Willd.)

ಈ ಸಣ್ಣ ಮರವು ಮೈಸೂರಿನಲ್ಲಲ್ಲದೆ ರಾಜಾಸ್ಥಾನ, ಮಧ್ಯಪ್ರದೇಶ, ಪಂಜಾಬು ಖಾಸಿ ಯಾಗಳಲ್ಲೂ ಬೆಳೆಯುತ್ತದೆ. ಇದರ ಬುಡವು 3 ರಿಂದ 4 ಅಡಿಗಳಷ್ಟು ದಪ್ಪನಾಗಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಬೊರಾಜಿನೇಸಿ (Boraginaceae) ಕುಟುಂಬಕ್ಕೆ ಸೇರಿದೆ. ಇದರ ಹೂಗಳು ದೊಡ್ಡವಾಗಿರುತ್ತವೆ. ಈ ಮರವು ತನ್ನ ಆಕಾರ ಮತ್ತಿತರ ಗುಣಗಳಲ್ಲಿ ಕೆಂಡಾಲ (Cordia myxa) ಮರವನ್ನೇ ಹೋಲುತ್ತದೆ. ಎಲ್ಲಾ ಎಳೆಯ ಭಾಗಗಳೂ ತುಪ್ಪಳವನ್ನು ಹೊಂದಿರುತ್ತವೆ. ಹಣ್ಣುಗಳು 0.5 ರಿಂದ 1 ಇಂಚು ಉದ್ದವಿದ್ದು ಹಳದಿ ಮಿಶ್ರಿತ ಕಂದುಬಣ್ಣ ಇಲ್ಲವೇ ಮಾಗಿದ ಮೇಲೆ ಕೆಂಪು ಮಿಶ್ರಿತ ಕಪ್ಪು ಬಣ್ಣವನ್ನು ಹೊಂದುತ್ತವೆ. ಹಣ್ಣಿನೊಳಗೆ ಲೋಳೆಯಂತಹ ರಸವಿರುತ್ತದೆ.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನಲಾಗುತ್ತದೆ. ಮೂತ್ರಪಿಂಡದ ಖಾಯಿಲೆ, ಎದೆನೋವು, ಜಂತುಹುಳುಗಳ ನಿವಾರಣೆ ಇವುಗಳಿಗೆ ಇದರ ಹಣ್ಣುಗಳನ್ನು ಔಷಧಿಯಾಗಿ ಉಪಯೋಗಿಸುತ್ತಾರೆ. ಜ್ವರ ನಿಲ್ಲಲು ಇದರ ತೊಗಟೆಯ ಕಷಾಯವನ್ನು ಕೊಡುತ್ತಾರೆ. ಇದರ ಮರವು ಕೊಯ್ದಾಗ ಹಳದಿ ಬಣ್ಣಕ್ಕಿದ್ದು ಅನಂತರ ನೀಲಿ ಮಿಶ್ರಿತ ಬೂದು ಬಣ್ಣಕ್ಕೆ ತಿರುಗಿ ಕೊನೆಗೆ ಕಂದು ಮಿಶ್ರಿತ ಬೂದು ಬಣ್ಣಕ್ಕೆ ಬರುತ್ತದೆ. ಮೃದುವಾದ ಈ ಮರವು ಗಟ್ಟಿಯಾಗಿದ್ದು ಘನ ಅಡಿಗೆ 34 ಪೌಂಡುಗಳಷ್ಟು ತೂಗುತ್ತದೆ. ದೋಣಿ ಸಾಮಾನುಗಳನ್ನು. ಪಾತಾಳ ಗರಡಿಯನ್ನು, ವ್ಯವಸಾಯದ ಉಪಕರಣಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಇದರ ತೊಗಟೆಯಲ್ಲಿ ಶೇ. 2 ಭಾಗ ಟ್ಯಾನಿನ್ ಇರುತ್ತದೆ.

ಚನಿಂಗೆ (ಚನ್ನಂಗಿ) Lagerstroemia parviflora Roxb.

ಪಶ್ಚಿಮ ಹಿಮಾಲಯದಲ್ಲಿ 60 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರವು ಮೈಸೂರಿನಲ್ಲಿ ಅಷ್ಟೇನೂ ಎತ್ತರಕ್ಕೆ ಬೆಳೆಯುವುದಿಲ್ಲ. ಪೂರ್ವಘಟ್ಟಗಳ ಅರಣ್ಯಗಳಲ್ಲೆಲ್ಲಾ ಚೆನ್ನಾಗಿ ಬೆಳೆಯುತ್ತದೆ. ಹಿಮಾಲಯದಲ್ಲಿ ಸಮುದ್ರಮಟ್ಟಕ್ಕೆ 3000 ಅಡಿಗಳಷ್ಟು ಎತ್ತರದಲ್ಲಿರುವ ಪ್ರದೇಶಗಳಲ್ಲೆಲ್ಲಾ ಈ ಮರವನ್ನು ಕಾಣಬಹುದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲಿಥ್ರೇಸಿ (Lythraceae) ಕುಟುಂಬಕ್ಕೆ ಸೇರಿದೆ. ಈ ಮರವು 50 ರಿಂದ 60 ಅಡಿಗಳಷ್ಟು ಎತ್ತರ ಬೆಳೆಯಬಲ್ಲದು. ಸುತ್ತಳತೆಯು ಮರವು ಚೆನ್ನಾಗಿ ಬೆಳೆದಲ್ಲಿ $1\frac{1}{2}$ ಯಿಂದ 1.8 ಮೀಟರುಗಳಷ್ಟಿರುತ್ತದೆ. ಇದರ ತೊಗಟೆಯು ಸ್ವಲ್ಪ ಬೂದು ಬಣ್ಣದಿಂದ ಕೂಡಿದ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಎಲೆಗಳು ಅಂಡಾಕೃತಿಯನ್ನು ಹೊಂದಿದ್ದು $2\frac{1}{2}$ ಯಿಂದ 5 ಇಂಚು ಉದ್ದವೂ $1\frac{1}{4}$ ರಿಂದ $1\frac{3}{4}$ ಇಂಚಿನಷ್ಟು ಅಗಲವೂ ಇರುತ್ತವೆ. ಎಲೆಗಳ ಮೇಲ್ಭಾಗವು ತುಪ್ಪಳ ರಹಿತವಾಗಿ ಹೊಳೆಯುತ್ತಿದ್ದು ಕೆಳಭಾಗವು ಬೂದು ಬಣ್ಣಕ್ಕಿರುತ್ತದೆಯಲ್ಲದೆ ತುಪ್ಪಳನನ್ನೂ ಹೊಂದಿರುತ್ತದೆ. ಹೂವುಗಳು ಬಿಳಿ ಬಣ್ಣವನ್ನು

ಹೊಂದಿರುತ್ತವೆ. ಗೊಂಚಲು ಗೊಂಚಲಾಗಿ ಹೂ ಬಿಡುತ್ತದೆ. ಕಾಯಿಗಳು ಸ್ವಲ್ಪ ದುಂಡಾಗಿರುತ್ತವೆ. ಬೀಜಗಳಿಗೆ ರೆಕ್ಕೆಗಳಿರುತ್ತವೆ. ಈ ಮರವು ಬಹಳ ಹಗುರ ವಾಗಿದ್ದು ಘನ ಅಡಿಯೊಂದಕ್ಕೆ 40 ರಿಂದ 60 ಪೌಂಡುಗಳಷ್ಟು ತೂಕ ಬರುತ್ತದೆ. ಒಳಭಾಗದ ಮರದ ಬಣ್ಣವು ಕಪ್ಪು ಮಿಶ್ರಿತ ಕೆಂಪು ಬಣ್ಣವಾದರೂ ಹೊರಗಡೆ ಬೂದು ಬಣ್ಣಕ್ಕಿರುತ್ತದೆ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು: ಮನೆ ಸಾಮಾನುಗಳನ್ನು ಮಾಡಲೂ, ದೋಣಿ ಕಟ್ಟಲೂ, ವ್ಯವಸಾಯೋಪಕರಣಗಳನ್ನು ತಯಾರಿಸಿಕೊಳ್ಳಲೂ ಈ ಮರವನ್ನು ಉಪಯೋಗಿಸುತ್ತಾರೆ. ತೊಗಟೆಯಿಂದ ನಾರು ತೆಗೆಯಬಹುದು. ತೊಗಟೆಯಿಂದ ಹಿಂದೆ ಬಣ್ಣವನ್ನು ಮಾಡುತ್ತಿದ್ದರು. ತೊಗಟೆಯಿಂದ ಬರುವ ಅಂಟನ್ನು ತಿನ್ನ ಬಹುದು. ಈ ಮರದಿಂದ ರೈಲ್ವೆ ಸ್ಲೀಪರುಗಳನ್ನೂ ಮಾಡಬಹುದು.

ಚಿಲ್ಲು (ಚಿಲ್ಲ) Strychnos potatorum willd.

ಮೈಸೂರಿನಲ್ಲಿಯೇ ಅಲ್ಲದೆ ಈ ಮರವು ಬಂಗಾಳ, ಒರಿಸ್ಸಾ ಮತ್ತು ಮದರಾಸು ಗಳಲ್ಲಿಯೂ ಬೆಳೆಯುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ 'ಕಟಕ' ಎಂದು ಪ್ರಸಿದ್ಧವಾಗಿ ರುವ ಈ ಮರವು ನಿತ್ಯಹರಿದ್ವರ್ಣದ ಮಧ್ಯಮ ಎತ್ತರದ ಮರವಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲೊಗಾನಿಯೇಸಿ (Logania-ceae) ಕುಟುಂಬಕ್ಕೆ ಸೇರಿದೆ. ಮಧ್ಯಮ ಎತ್ತರದ ಈ ಮರವು ಸುಮಾರು 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ತೊಗಟೆಯು ಕಪ್ಪುಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತದೆ. ಎಲೆಗಳು 6 ಇಂಚಿನಷ್ಟು ಉದ್ದವಿದ್ದು 2.5 ಇಂಚು ಅಗಲವಿರುತ್ತವೆ. ಪುಷ್ಪದಳಗಳಿಂದಾದ ಕೊಳವೆ ಸ್ವಲ್ಪ ತುಪ್ಪಳವನ್ನು ಹೊಂದಿರು ತ್ತದೆ. ಇದರ ಬಲಿತ ಕಾಯಿಗಳು 5 ರಿಂದ 7 ಇಂಚು ದಪ್ಪವಿದ್ದು 1 ರಿಂದ 2 ಬೀಜ ಗಳನ್ನು ಹೊಂದಿರುತ್ತವೆ. ಇದರ ಮರವು ಕೊಯ್ದಾಗ ಬಿಳುಪಾಗಿದ್ದು ಅನಂತರ ಹಳದಿ ಮಿಶ್ರಿತ ಬೂದು ಬಣ್ಣಕ್ಕೆ ತಿರುಗುತ್ತದೆ. ಇದಲ್ಲದೆ ಮೈಸೂರಿನಲ್ಲಿ ಇದೇ ಜಾತಿಗೆ ಸೇರಿದ S.colubrina Linn; S.dalzelli clarke. ಮುಂತಾದುವೂ ಇವೆ ಎಂದು ಹೇಳಲಾಗಿದೆ.

ಉಪಯೋಗಗಳು : ಈ ಬೀಜದ ಪುಡಿಯನ್ನು ನೀರಿನಲ್ಲಿ ಕಲಸಿ ಜರಿ (centipede) ಕಡಿದ ಜಾಗಕ್ಕೆ ಹಚ್ಚಿದರೆ ಉರಿ ಕಡಿಮೆಯಾಗುತ್ತದೆ. ಈ ಮರದ ಬೀಜಗಳನ್ನು ರಾಡಿ ಇರುವ ನೀರಿಗೆ ಹಾಕಿದರೆ ಅದರಲ್ಲಿರುವ ಮಣ್ಣಿನ ಅಂಶ ವೆಲ್ಲಾ ಕೆಳಗೆ ಹೋಗಿ ನೀರು ನಿರ್ಮಲವಾಗುತ್ತದೆ.

ಚಾಲುಮುಗ್ರ (Gynocardia odorata R. Br.)

ಇದೊಂದು ನಿತ್ಯಹರಿದ್ವರ್ಣದ ಉತ್ತರ ಭಾರತದ ವೃಕ್ಷ. ಇದನ್ನು 1890ರಲ್ಲೇ ಬೆಂಗಳೂರಿನಲ್ಲಿ ಬೆಳೆಸುವ ಪ್ರಯತ್ನಗಳು ನಡೆದಿದ್ದುವು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಫ್ಲಕೊರ್ಷಿಯೇಸಿ (Flacourtiaceae) ಕುಟುಂಬಕ್ಕೆ ಸೇರಿದೆ. ಇದರ ಅಂಡಾಕೃತಿಯ ತೊಟ್ಟುಗಳು ಚಿಕ್ಕವಿರುತ್ತವೆ. ತುದಿಯು ಸ್ವಲ್ಪ ಚೂಪಾಗಿರುತ್ತದೆ. ಹೂವುಗಳು ಗುಂಪು ಗುಂಪಾಗಿ ಮೂಡುತ್ತವೆ. ಹಳದಿ ಬಣ್ಣದ ಈ ಹೂವುಗಳು ಸುವಾಸನಾಭರಿತವಾಗಿರುತ್ತವೆ ಹಣ್ಣುಗಳು ಸ್ವಲ್ಪ ಗುಂಡಗಿರುತ್ತವೆ. ಇದರ ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಘನ ಅಡಿಯೊಂದಕ್ಕೆ 47 ಪೌಂಡುಗಳಷ್ಟು ತೂಗಬಲ್ಲದು. ಮಲೆನಾಡಿನ ತಂಪು ಹವೆಯ ಎತ್ತರ ಪ್ರದೇಶಗಳಲ್ಲಿ, ಝರಿಗಳ ಹತ್ತಿರ ಬೆಳೆಸಿದಲ್ಲಿ ಈ ಮರವು ಚೆನ್ನಾಗಿ ಬೆಳೆಯಬಲ್ಲದು.

ಉಪಯೋಗಗಳು : ಈ ಮರದ ಬೀಜಗಳಿಂದ ಔಷಧಿಗೆ ಉಪಯುಕ್ತವಾದ ಒಂದು ಬಗೆಯ ಎಣ್ಣೆಯನ್ನು ತೆಗೆಯಲಾಗುತ್ತದೆ. ಈ ಎಣ್ಣೆಯನ್ನು ಕುಷ್ಠ ರೋಗಕ್ಕೂ, ಕೆಲವು ಚರ್ಮರೋಗ ನಿವಾರಣೆಗೂ ಉಪಯೋಗಿಸುತ್ತಾರೆ.

ಚಲ್ಲ (ಚಲ್ಲು ಮರ) Lagerstroemia speciosa (L) pers.
(Syn. Lagerstroemia flos-reginae Retz.)

ಮೈಸೂರಿನ ಘಾಟ್ ಪ್ರದೇಶದ ಅರಣ್ಯಗಳಲ್ಲಿ ಬೆಳೆಯುವ ಈ ಮರವನ್ನು ಆಂಗ್ಲಭಾಷೆಯಲ್ಲಿ 'ಭಾರತದ ಹೆಮ್ಮೆಯ ಮರ', 'ರಾಣಿಯ ಹೂವು' ಎಂದೆಲ್ಲ ಪ್ರಶಂಸಿಸಿರುವುದುಂಟು. ಕೇರಳ, ಮದರಾಸು, ಬಂಗಾಳ, ಒರಿಸ್ಸಾ, ಅಸ್ಸಾಂಗಳಲ್ಲೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲಿಥ್ರೇಸಿ (Lythraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=44$ (Tijo 1948), $n=24$ (Nanda 1962). ವರ್ಷದ ಮೊದಲಲ್ಲಿ ಎಲೆಗಳು ಉದುರುವ ಈ ಮರವು 60 ಅಡಿಗಳಷ್ಟು ಎತ್ತರಕ್ಕೆ ಬೆಳೆಯುಬಲ್ಲದು. ಇದರ ಎಲೆಗಳು 4 ರಿಂದ 8 ಇಂಚುಗಳು ಉದ್ದವಾಗಿದ್ದು $1\frac{1}{2}$ ಯಿಂದ 3 ಇಂಚು ಅಗಲವಿರುತ್ತವೆ. ತುದಿ ಮೊನಚಾಗಿರುತ್ತದೆ. ಇದರ ಹೂಗಳು ದೊಡ್ಡವಿದ್ದು ಸ್ವಲ್ಪ ಬಿಳುಪು ಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತವೆ. ಮೇ, ಜೂನ್‌ಗಳಲ್ಲಿ ಪುಷ್ಪಭರಿತವಾಗಿರುವಾಗ ಈ ಮರವು ನೋಡಲು ಬಹುಸುಂದರ, ರಮ್ಯ ಮನೋಹರವಾಗಿರುತ್ತದೆಯಾದ್ದರಿಂದಲೇ

ಇದನ್ನು ಆಂಗ್ಲರು 'Pride of India', ಎಂದು ಕರೆದರು. ಇದರ ಕಾಯಿಗಳು ಸ್ವಲ್ಪ ಗುಂಡಗಿರುತ್ತವೆ. ಇವುಗಳ ಮೇಲೆ ಶಲಾಕಾಗ್ರ ಹಾಗೆಯೇ ಇರುತ್ತದೆ. ಬೀಜಗಳು ಹಗುರವಾಗಿದ್ದು ರೆಕ್ಕೆಗಳನ್ನು ಹೊಂದಿರುತ್ತವೆ. ಮರವು ಗಟ್ಟಿಯಾಗಿದ್ದು ಬಹಳ ಕಾಲ ಬಾಳುವ ಗುಣವನ್ನು ಹೊಂದಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 40 ರಿಂದ 45 ಪೌಂಡುಗಳಾಗಿರುತ್ತದೆ.

ಉಪಯೋಗಗಳು : ದೋಣಿಗಳನ್ನು ಮಾಡಲೂ, ಯುದ್ಧ ಸಾಮಗ್ರಿಗಳನ್ನಿಡುವ ಪೆಟ್ಟಿಗೆಗಳನ್ನು ಮಾಡಲೂ ಇದನ್ನು ಉಪಯೋಗಿಸುತ್ತಾರೆ. ಅಷ್ಟೇ ಅಲ್ಲ ಗಾಡಿಗಳನ್ನು ಮತ್ತು ಮನೆಯ ಮರಮುಟ್ಟುಗಳನ್ನು ಮಾಡಲೂ ಇದನ್ನು ಉಪಯೋಗಿಸುತ್ತಾರೆ. ಈ ಮರದ ಎಲ್ಲಾ ಭಾಗಗಳೂ ಒಂದಲ್ಲೊಂದು ಖಾಯಿಲೆಗಳಿಗಾಗಿ ಉಪಯೋಗಿಸಲ್ಪಡುತ್ತವೆ. ಇದರ ಬೀಜಗಳಿಗೆ ಮತ್ತು ಬರಿಸುವ ಶಕ್ತಿ ಇರುತ್ತದೆ. ತೊಗಟೆ ಮತ್ತು ಎಲೆಗಳನ್ನು ಭೇದಿಮಾಡಿಸಲು ಕೊಡುತ್ತಾರೆ. ಬಾಯಿ ಹುಣ್ಣಾದಾಗ ಅಂಡಮಾನ್‌ನಲ್ಲಿ ಇದರ ಕಾಯಿಯನ್ನು ಉಪಯೋಗಿಸುತ್ತಾರೆ.

ಚೆಂಡಾಲ (ಚಕೋತ, ಸಗದೆ.)

Schleichera Oleosa (Lour.)Oken. (=S.trijuga willd.)

ಈ ಸುಂದರ ವೃಕ್ಷವು ಮೈಸೂರಿನಲ್ಲಿಯೇ ಅಲ್ಲದೆ ಒಳಹಿಮಾಲಯ ಪ್ರದೇಶದಲ್ಲೂ ಪಂಜಾಬ್, ಬಿಹಾರ, ಮಧ್ಯಪ್ರದೇಶ, ಸಿಲೋನ್‌ಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಪಿಂಡೇಸಿ (Sapindaceae) ಕುಟುಂಬಕ್ಕೆ ಸೇರಿದೆ. ಈ ಮರವು 10 ರಿಂದ 15 ಮೀಟರುಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಡಿಸೆಂಬರ್‌ನಲ್ಲಿ ತನ್ನ ಎಲೆಗಳನ್ನೆಲ್ಲಾ ಕಳೆದುಕೊಳ್ಳುತ್ತದೆ. ಸಂಯುಕ್ತ ಪತ್ರಗಳನ್ನು ಹೊಂದಿದ್ದು ಹಳದಿ ಬಣ್ಣದ ಹೂಗೊಂಚಲುಗಳನ್ನು ಹೊಂದಿರುತ್ತದೆ ಹಣ್ಣುಗಳು ಉದ್ದವಿದ್ದು 1-2 ಬೀಜಗಳನ್ನು ಹೊಂದಿರುತ್ತವೆ.

ಉಪಯೋಗಗಳು : ಇದು ಇಂಡಿಯಾದ ಅತ್ಯುತ್ತಮ ಅರಗಿನಮರ. ಈ ಮರದ ಮೇಲೆ ಉತ್ಪತ್ತಿಯಾಗುವ ಅರಗು ಅತ್ಯಂತ ಬೆಲೆಬಾಳುವಂತಹುದಾಗಿರುತ್ತದೆ ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಘನ ಅಡಿಯೊಂದಕ್ಕೆ 66 ರಿಂದ 70 ಪೌಂಡುಗಳಷ್ಟು ತೂಗುತ್ತದೆ. ಉತ್ತರ ಇಂಡಿಯದಲ್ಲೂ ಅರಗಿನ ಕೀಟವನ್ನು ಇದರಲ್ಲೇ ಸಾಕುತ್ತಾರೆ. ಈ ಮರದ ಬೀಜಗಳಿಂದ ತೆಗೆದ ಎಣ್ಣೆಯನ್ನು ಸೋಪು ತಯಾರಿಕೆಯಲ್ಲೂ, ಸುಗಂಧದ್ರವ್ಯಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಾರೆ. ಈ ಮರವು ಫೆಬ್ರುವರಿ, ಮಾರ್ಚಿ ತಿಂಗಳುಗಳಲ್ಲಿ ಬಹಳ ಸುಂದರವಾಗಿರುತ್ತದೆ. ಇದನ್ನು ರಸ್ತೆಯ ಸಾಲು ಮರವಾಗಿ ಬೆಳೆಸಿಕೊಳ್ಳಬಹುದು.

ಜಗಳಗಂಟಿ ಮರ (ಬಾಲಕುಣಿಕ, ಕಳ್ನಂದಿ)

Diospyros montana Roxb.

ಮೈಸೂರಿನ ಮೈದಾನ ಪ್ರದೇಶಗಳಲ್ಲೆಲ್ಲಾ ಈ ಮರವು ಬೆಳೆಯುತ್ತದೆ. ಹಳ್ಳಿಗಳಲ್ಲಿ ಈ ಮರದ ಕಾಯಿಗಳನ್ನು ಮನೆಗೆ ತಂದರೆ ತುಂಬಿದ ಸಂಸಾರಗಳಲ್ಲಿ ಜಗಳವಾಗುತ್ತದೆಂಬ ಮೂಢನಂಬಿಕೆಯಿದೆ. ಈ ಮರದ ಸಾಮಾನುಗಳನ್ನೇನೂ ಮನೆಯಲ್ಲಿ ಇಟ್ಟುಕೊಳ್ಳುವುದಿಲ್ಲ. ಆದ್ದರಿಂದಲೇ ಈ ಮರಕ್ಕೆ "ಜಗಳಗಂಟಿ" ಎಂಬ ಹೆಸರು ಬಂದಿದೆ. ಸಾವನದುರ್ಗ, ಬನ್ನೇರುಘಟ್ಟ, ಹಾಸನ ಮುಂತಾದ ಕಡೆಗಳಲ್ಲೆಲ್ಲಾ ಈ ಮರ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಎಬಿನೇಸಿ (Ebenaceae) ಕುಟುಂಬಕ್ಕೆ ಸೇರಿದೆ. ಮೈದಾನಗಳಲ್ಲಲ್ಲದೆ ಬೆಟ್ಟಗುಡ್ಡಗಳ ಕಡೆಯಲ್ಲಿ ಬೆಳೆದರೆ ಈ ಮರವು ದೊಡ್ಡದಾಗಿ ಬೆಳೆಯಬಲ್ಲದು. ಈ ಮರದ ತೊಗಟೆಯು ಒರಟಾಗಿದ್ದು ಬೂದು ಬಣ್ಣವನ್ನು ಹೊಂದಿರುತ್ತದೆ. ಎಲೆಗಳು ಪರ್ಯಾಯ ಜೋಡಣೆ ಹೊಂದಿರುತ್ತವೆ. ಇವುಗಳ ಉದ್ದಗಲಗಳು $3 \times 1\frac{1}{2}$ ಇಂಚಿನಷ್ಟು ಇರುತ್ತವೆ. ಹೂವುಗಳು ಹಸಿರು ಬಣ್ಣಕ್ಕಿದ್ದು ಏಕಲಿಂಗ ಪುಷ್ಪಗಳಾಗಿರುತ್ತವೆ. ಪುಷ್ಪದಳಗಳು ಹಸಿರು ಮಿಶ್ರಿತ ಬಿಳಿ ಬಣ್ಣವನ್ನು ಹೊಂದಿರುತ್ತವೆ. ಕೇಸರಗಳು 16 ಇರುತ್ತವೆ. ಫೆಬ್ರುವರಿಯಲ್ಲಿ ಹೂಬಿಡುವ ಈ ಮರವು ಅಕ್ಟೋಬರ್, ನವೆಂಬರ್‌ವರೆಗೂ ಫಲಭರಿತವಾಗಿರುತ್ತದೆ. ಇದರ ಕಾಯಿಗಳು ಗಜ್ಜುಗಕ್ಕಿಂತ ಸ್ವಲ್ಪ ದಪ್ಪನಾಗಿರುತ್ತವೆ. ಇದರ ಮರವು ಒಳ್ಳೆಯ ಎಳೆಗಳನ್ನು ಹೊಂದಿದ್ದು ಸ್ವಲ್ಪ ಹಳದಿ ಬಣ್ಣಕ್ಕಿರುತ್ತದೆ ಹಕ್ಕಿಗಳಿಂದ ಬೀಜಪ್ರಸಾರವಾಗುತ್ತದೆ.

ಉಪಯೋಗಗಳು : ಸೌದೆಗಾಗಿ ಈ ಮರವನ್ನು ಉಪಯೋಗಿಸುತ್ತಿದ್ದಾರೆ. ಆದರೆ ಈ ಮರದಿಂದ ಮನೆಗೆ ಬೇಕಾದ ಒಳ್ಳೆಯ ಸಾಮಾನುಗಳನ್ನು ಮಾಡಿಕೊಳ್ಳಬಹುದು. ಇದರ ಹಣ್ಣಿನ ರಸವು ಮೀನುಗಳಿಗೆ ವಿಷ. ಆಯುರ್ವೇದೀಯ ವೈದ್ಯದಲ್ಲಿ ಪಂಡಿತರುಗಳು ಮರದ ತೊಗಟೆಯನ್ನೂ ಒಳಮರವನ್ನೂ ಉಪಯೋಗಿಸುತ್ತಾರೆ.

ಜಾಪತ್ರೆ (ಜಾಯಿಕಾಯಿಮರ) Myristica fragrans Hoult.

ಮಾಲುಕ್ಕಾಸ್ (Moluccas) ದ್ವೀಪಗಳೇ ಜಾಯಿಕಾಯಿ ಮರದ ತವರು ಎಂಬ ನಂಬಿಕೆ ಇದೆ. ನಮ್ಮ ದೇಶದಲ್ಲಿ ಮೈಸೂರಿನಲ್ಲಲ್ಲದೆ ನೀಲಗಿರಿ, ಕೇರಳ ಮತ್ತು ಪಶ್ಚಿಮ ಬಂಗಾಳ ಪ್ರಾಂತ್ಯಗಳಲ್ಲೂ ಇದನ್ನು ಬೆಳೆಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಿಸ್ಟಿಕೇಸಿ (Myristicaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=42 (Simmonds 1954.) ಜಾಯಿಕಾಯಿ, ಜಾಪತ್ರೆಗಳೆರಡೂ ಇದರಿಂದಲೇ ಬರುತ್ತವೆ. ಈ ನಿತ್ಯ ಹರಿದ್ವರ್ಣದ ವೃಕ್ಷವು 30 ರಿಂದ 40 ಅಡಿಗಳಷ್ಟು ಎತ್ತರಕ್ಕೆ ಬೆಳೆದರೂ ಒಮ್ಮೊಮ್ಮೆ 60–65 ಅಡಿಗಳಷ್ಟು ಎತ್ತರ ಬೆಳೆದಿರುವುದಕ್ಕೆ ಆಧಾರಗಳಿವೆ. ಇದರ ತೊಗಟೆಯು ಬೂದಿಮಿಶ್ರಿತ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಹೂವುಗಳು ಹಳದಿ ಬಣ್ಣಕ್ಕಿದ್ದು ವಾಸನೆಯಿಂದ ಕೂಡಿರುತ್ತವೆ. ಕಾಯಿಗಳು ಹಳದಿ ಬಣ್ಣಕ್ಕಿದ್ದು ಅತ್ತಿಕಾಯಿಯ ಆಕಾರವನ್ನು ಹೊಂದಿರುತ್ತವೆ. ಬೀಜಗಳು ದುಂಡಗಿದ್ದು ಭ್ರೂಣಾಕಾರ ಹೊಂದಿರುತ್ತವೆ. ಬೀಜದ ಏರಿಲ್ (Aril) ಕೆಂಪಗಿರುತ್ತದೆ. ಇದೇ ಜಾಪತ್ರೆ, ಜಾಯಿಕಾಯಿ ಮರದಲ್ಲಿ ಗಂಡು ಮತ್ತು ಹೆಣ್ಣು ಮರಗಳು ಬೇರೆ ಬೇರೆಯೇ ಇದ್ದರೂ ಕೆಲವು ಗಂಡು ಮರಗಳು ಬಹಳ ವರ್ಷಗಳ ಅನಂತರ ಹೆಣ್ಣು ಹೂವುಗಳನ್ನು



ಜಾಪತ್ರೆ (ಜಾಯಿಕಾಯಿ ಮರ)

ಬಿಡುವುದೂ ಉಂಟು. ಬೀಜಗಳನ್ನು ನೆಟ್ಟು ಸಸಿಗಳನ್ನೆಬ್ಬಿಸಿದಲ್ಲಿ ಗಂಡು ಗಿಡಗಳೇ ಹುಟ್ಟುವುದು ಹೆಚ್ಚು. ಈ ಸಸಿಗಳು ಗಂಡೊ, ಹೆಣ್ಣೊ ಎಂಬುದನ್ನು ಗಿಡಗಳಿಗೆ 6–7 ವರ್ಷಗಳಾದ ಅನಂತರ ಹೂಬಿಟ್ಟ ಮೇಲೆ ಮಾತ್ರ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಸುಮಾರು ಏಳನೆಯ ವರ್ಷದಿಂದಲೇ ಫಲ ಕೊಡಲು ಪ್ರಾರಂಭಿಸುವ ಈ ಮರಗಳು 15 ನೆಯ ವರ್ಷದ ಹೊತ್ತಿಗೆ ತುದಿ ಮುಟ್ಟಿ 60–80 ವರ್ಷಗಳವರೆಗೂ ಹೆಚ್ಚು ಫಲಭರಿತವಾಗಿಯೇ ಇರುತ್ತವೆ. ಬೇರೆ ದೇಶಗಳಲ್ಲಿ ಮರವೊಂದರಲ್ಲಿ

20.000 ಕಾಯಿಗಳನ್ನು ಸಂಗ್ರಹಿಸಿದ ಆಧಾರಗಳಿದ್ದರೂ, ನಮ್ಮಲ್ಲಿ ಮರವೊಂದರಲ್ಲಿ 1250 ರಿಂದ 4000 ಕಾಯಿಗಳನ್ನು ಪಡೆಯುವುದೇ ಕಷ್ಟ.

ಉಪಯೋಗಗಳು : ಸಂಬಾರ ಪದಾರ್ಥಗಳಾಗಿ ಇದನ್ನು ಉಪಯೋಗಿಸುತ್ತಾರೆ. ಜಾಯಿಕಾಯಿಯನ್ನು ತಾಂಬೂಲದೊಂದಿಗೆ ಸೇರಿಸಿಕೊಂಡು ಮೆಲ್ಲುತ್ತಾರೆ. ಜಾಯಿಕಾಯಿ ಎಣ್ಣೆಯನ್ನು ಸೋಪು ಮತ್ತು ಸುಗಂಧ ದ್ರವ್ಯಗಳ ಕಾರ್ಖಾನೆಗಳಲ್ಲಿಯೂ, ಹಾಗೂ ಸಂಧಿವಾತವಿದ್ದಲ್ಲಿ ವೈಗೆ ಬಳಿಯಲೂ ಉಪಯೋಗಿಸುತ್ತಾರೆ. ಈ ಮರದ ಎಲೆಗಳಿಂದ ಬಂದ ಎಣ್ಣೆಯು ಕಳೆಗೆ (Weeds) ಮಾರಕ. ಇದನ್ನು ಚೂಯಿಂಗ್ ಗಮ್, ಸೌಂದರ್ಯ ಸಾಧನಗಳು ಮುಂತಾದುವುಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಜಾನೆರಳೆ Syzygium cumini (L) Skeels. (Syn. Eugenia Jambolana Lamk.)

ನೇರಳೆ ಹಣ್ಣುಗಳಿಗಾಗಿ ಭಾರತದ ಎಲ್ಲ ಸಂಸ್ಥಾನಗಳಲ್ಲೂ ಈ ಮರವನ್ನು ಬೆಳೆಸುತ್ತಿದ್ದಾರೆ.

ಸಸ ಶಾಸ್ತ್ರ ವಿವರಣೆ : ಈ ಮರ ಮಿರಟೇಸಿ (Myrataceae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=55 (Roy & Jha 1962) ಕ್ಯಾಮೆರಾನ್‌ರವರ (1894) ಹೇಳಿಕೆಯ ಪ್ರಕಾರ ಈ ಪ್ರಭೇಧದಲ್ಲಿ ಎರಡು ಪ್ರಕಾರಗಳಿವೆ : 1) ನಾಯಿನೇರಳೆ (Caryophillifolia) 2) ಜಂನೇರಳೆ (Obtusifolia).

ಈ ಮರ 80 ಅಡಿಗಳಷ್ಟೆತ್ತರ ಬೆಳೆಯಬಲ್ಲದು. ಇದರ ನಿತ್ಯಹರಿದ್ವರ್ಣ ಎಲೆಗಳು ಒರಟಾಗಿದ್ದು 2½ ಯಿಂದ 7 ಇಂಚು ಉದ್ದ 1 ರಿಂದ 1½ ಇಂಚು ಅಗಲ ಇರುತ್ತವೆ. ಹೂಗಳು ಸಣ್ಣಗಿದ್ದು ಶ್ವೇತವರ್ಣಕ್ಕಿರುತ್ತವೆ. ಕಾಯಿಗಳು ಮೊದಲು ಹಸುರಾಗಿದ್ದು ಮಾಗಿದ ಮೇಲೆ ಕಪ್ಪು ಮಿಶ್ರಿತ ಕೆಂಪು ಬಣ್ಣಕ್ಕೆ ಬರುತ್ತವೆ. ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಬೆಳೆಸಬಹುದು.

ಉಪಯೋಗಗಳು : ನೇರಳೆ ಹಣ್ಣುಗಳನ್ನು 'ವೈನ್' ಮತ್ತು 'ವಿನೆಗಾರ್' ಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಬೀಜಗಳ ಕಷಾಯವನ್ನು ಸಿಹಿಮೂತ್ರ ರೋಗಕ್ಕಾಗಿ ಉಪಯೋಗಿಸುತ್ತಾರೆ. ಮರವನ್ನು ಒಳ್ಳೆಯ ಹಲಗೆಗಳಿಗಾಗಿಯೂ, ವ್ಯವಸಾಯದ ಲಘು ಉಪಕರಣಗಳಿಗಾಗಿಯೂ ಬಳಸಲಾಗುತ್ತದೆ.

ಜಯ-ಕಾಂತಲ (ಪೀನಾರಿ, ಭಟಲ) Sterculia foetida Linn.

ಈ ಮರವು ಮೈಸೂರಿನಲ್ಲೇ ಅಲ್ಲದೆ ಬರ್ಮಾ, ಆಫ್ರಿಕ, ಉತ್ತರ ಆಸ್ಟ್ರೇಲಿಯಾ ಮತ್ತು ಸಿಲೋನ್ ದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸ್ಟರ್ಕುಲಿಯೇಸಿ (Sterculiaceae) ಕುಟುಂಬಕ್ಕೆ ಸೇರಿದೆ. ಈ ದೊಡ್ಡಮರದ ರೆಂಬೆಗಳು ಸುತ್ತಲೂ ಹರಡಿಕೊಂಡು ಅಡ್ಡಡ್ಡವಾಗಿ ಬೆಳೆಯುತ್ತವೆ. ಸಂಯುಕ್ತ ಪತ್ರಗಳಿದ್ದು ಪ್ರತಿ ಎಲೆಯೂ 4 ರಿಂದ 7 ಇಂಚು ಉದ್ದವಿದ್ದು $1\frac{1}{2}$ ಯಿಂದ 2 ಇಂಚು ಅಗಲವಾಗಿರುತ್ತದೆ. ಈ ಮರದಲ್ಲಿ ಹೂ ಬಿಡುವ ಕಾಲದಲ್ಲಿ ಸುತ್ತಲೂ ಬಹಳ ದುರ್ವಾಸನೆ ಹರಡಿಕೊಂಡಿರುತ್ತದೆ. ಕಾಯಿಗಳು ದೋಣಿಯ ಆಕಾರವನ್ನು ಹೊಂದಿದ್ದು, ತುದಿಯು ಕೊಕ್ಕಿನ ಆಕಾರವನ್ನು ಹೊಂದಿರುತ್ತದೆ. ಈ ಕಾಯಿಗಳು ಮೊದಲು ಹಸುರಾಗಿದ್ದು ಅನಂತರ ರಕ್ತವರ್ಣವನ್ನು ತಾಳುತ್ತವೆ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು.



ಜಯಕಾಂತಲ

ಉಪಯೋಗಗಳು : ಕ್ಷಾಮಕಾಲದಲ್ಲಿ ಇದರ ಬೀಜಗಳನ್ನು ಹುರಿದುಕೊಂಡು ತಿನ್ನುತ್ತಾರೆ. ಬೀಜಗಳಿಂದ ಎಣ್ಣೆಯನ್ನೂ ತೆಗೆಯುತ್ತಾರೆ. ಎಲೆಗಳನ್ನೂ, ತೊಗಟೆಯನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ.

ಜಾಲರಿಮರ (ಜಾಲದ) Shorea talura Roxb.

ಇದನ್ನು ಮೈಸೂರಿನ ಅರಗಿನಮರ ಎಂದು ಕರೆಯುತ್ತಾರೆ. ಆನೆಕಲ್, ನಂದೀದುರ್ಗ, ಕ್ಲೋಸ್‌ಪೇಟೆ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಈ ಎಲ್ಲ ಕಡೆಗಳಲ್ಲೂ ಮೊದಲು ಅರಗಿನ ಕೀಟ ಹಾಗೂ ಈ ಮರಗಳನ್ನು ಬೆಳೆಸಲಾಗುತ್ತಿತ್ತು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಡಿಪ್ಟಿರೊಕಾರ್ಪೇಸಿ (Dipterocarpaceae) ಕುಟುಂಬಕ್ಕೆ ಸೇರಿದೆ. ಚಳಿಗಾಲದ ಕೊನೆಯಲ್ಲಿ ಈ ಮರದ ಎಲೆಗಳು ಉದುರಿಹೋಗುತ್ತವೆ. ಈ ಮರದ ಶುಭ್ರ ಶ್ವೇತಪುಷ್ಪಗಳು ಎಲೆಗಳು ಹುಟ್ಟುವುದಕ್ಕೆ ಮುಂಚೆಯೇ ಮೂಡಿ ಸುತ್ತಲಿನ ಗಾಳಿಯನ್ನೆಲ್ಲಾ ಸುಗಂಧ ಪೂರ್ಣವಾಗಿಸುತ್ತವೆ. ಲಕ್ಷಾಂತರ ದುಂಬಿಗಳು ಸುತ್ತಲೂ ಬರುತ್ತವೆ. ಮರವು ಬಹಳ ಭಾರವಿದ್ದು ತುಂಬಾ ಬಾಳಿಕೆ ಬರುವ ಗುಣವನ್ನು ಹೊಂದಿದೆ. ತೂಕವು ಘನ ಅಡಿಯೊಂದಕ್ಕೆ 54 ಪೌಂಡುಗಳಷ್ಟು ಬರುತ್ತದೆ. ಬೀಜಗಳಿಂದ ಸಸಿಗಳನ್ನು ಬೆಳೆಸಬಹುದು.

ಉಪಯೋಗಗಳು : ಅರಗು ಕೀಟಕ್ಕೆ ಆಶ್ರಯದಾಯಕ ವೃಕ್ಷವಾಗಿ ಇದನ್ನು ಬೆಳೆಸುತ್ತಾರೆ. ಮನೆಯ ಮರಮುಟ್ಟುಗಳಿಗಾಗಿಯೂ ಉಪಯೋಗಿಸುತ್ತಾರೆ.

ಜಿಮ್ಮಿಮರ Fagara budrunga Roxb (Syn. Zanthoxylum rhetsa DC.)

ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಈ ಮರವು ಪಶ್ಚಿಮ ಬಂಗಾಳದಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ. ಪೂರ್ವ ಘಟ್ಟಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ ಮರದ ಮೇಲೆಲ್ಲಾ ಸಣ್ಣ ಸಣ್ಣ ಮುಳ್ಳುಗಳಿರುತ್ತವೆ ಇವುಗಳು ಶಂಖಾಕೃತಿಯನ್ನು ಹೊಂದಿರುತ್ತವೆ. ಈ ಮರದ ತೊಗಟೆಯ ಬಣ್ಣವು ಹಳದಿ ಮಿಶ್ರಿತ ಬಿಳಿಯ ಬಣ್ಣವಾಗಿದ್ದು ಒಳಮರವನ್ನು ಕೊಯ್ದಾಗ ಹಳದಿ ಮಿಶ್ರಿತ ಬೂದು ಬಣ್ಣವನ್ನು ಹೊಂದಿರುತ್ತದೆ. ಇದರ ಬಿಡಿ ಎಲೆಗಳ ಮಧ್ಯನಾಳದ ಎರಡೂ ಕಡೆ ಇರುವ ಭಾಗಗಳು ಒಂದೇ ಸಮನಿರುವುದಿಲ್ಲ. ಇದರ ಹಣ್ಣುಗಳು ವಾಸನೆಯಿಂದ ಕೂಡಿದ್ದು ಸ್ವಲ್ಪ ಖಾರವಾಗಿರುತ್ತವೆ. ಮೆಣಸಿನ ರುಚಿ ಇರುತ್ತದೆ.

ಉಪಯೋಗಗಳು : ಸಂಬಾರ ಪದಾರ್ಥದಂತೆ ಇದರ ಕಾಯಿಗಳನ್ನು ಬಳಸುತ್ತಾರೆ ಇದರ ಬೀಜಗಳಿಂದ ವಾಸನೆಯಿಂದ ಕೂಡಿದ ಒಂದು ಬಗೆಯ ಎಣ್ಣೆಯನ್ನು ತೆಗೆಯುತ್ತಾರೆ ಬಟ್ಟೆಗಿರಣಿಗಳಲ್ಲಿ ಉಪಯೋಗಿಸುವ ಲಾಳಿಗಳು (Stuttles) ಮತ್ತು ಎತ್ತಿಕೊಳ್ಳುವ ಕೋಲುಗಳನ್ನು (Picking Sticks) ಮಾಡಲು ಈ ಮರವನ್ನು ಬಳಸುತ್ತಾರೆ.

ಜಿನಂಗಿ Sesbania sesban (Linn.) Merr. (=Sesbania aegyptiaea Pers.)

ಈ ಸಣ್ಣ ಮರವು ಪೊದೆಯಂತಿರುತ್ತದೆ. ಅಲ್ಪಾಯು. 10 ವರ್ಷಕ್ಕಿಂತ

ಜಾಸ್ತಿ ಬದುಕಿದ ಬಗ್ಗೆ ಮಾಹಿತಿಯಿಲ್ಲ. ತೇವವಿರುವ ಪ್ರದೇಶಗಳಲ್ಲೆಲ್ಲಾ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=12 (Rao 1946). ಈ ಮರವನ್ನು ಅಲ್ಲಲ್ಲಿ ಬೆಳೆಸುವರಾದರೂ ಅರಣ್ಯ ಪ್ರದೇಶಗಳಲ್ಲೂ ಇದು ಕಂಡು ಬರುತ್ತದೆ. ಇದರ ಹೂವುಗಳು 5 ರಿಂದ 6 ಇಂಚಿನಷ್ಟು ಉದ್ದವಿದ್ದು ಹಳದಿ ಬಣ್ಣಕ್ಕಿರುತ್ತವೆ. ಒಂದು ಪುಷ್ಪದಳ ಮಾತ್ರ ಇದ್ದು ಕೆಂಪು ಇಲ್ಲವೇ ಕೆಂಪು ಚುಕ್ಕಿಗಳನ್ನು ಹೊಂದಿರುತ್ತದೆ.

ಉಪಯೋಗಗಳು : ಔಷಧಿಗಾಗಿ ಇದರ ಎಲೆಗಳು ಮತ್ತು ಬೀಜಗಳನ್ನು ಉಪಯೋಗಿಸುತ್ತಾರೆ. ಇದರ ಮರದಿಂದ ಬಂದೂಕದ ಇದ್ದಿಲು ಪುಡಿಯನ್ನು ಮಾಡುತ್ತಿದ್ದರು. ಮೀನುಗಾರರು ಈ ಮರದ ತಿರುಳಿನಿಂದ ತೇಲುವ ಬೆಂಡುಗಳನ್ನು ಮಾಡಿಕೊಳ್ಳುತ್ತಾರೆ.

ಜೀವಿ (ಪಿಲಲ, ಪಿಸ್ಸಲ, ಯೆರ್ರಜವಿ) Ficus retusa Linn.

ಈ ದೊಡ್ಡ ನಿತ್ಯಹರಿದ್ವರ್ಣದ ವೃಕ್ಷವು ಮಲೆನಾಡಿನ ಹಾಗೂ ಕೊಡಗಿನ ಅರಣ್ಯಗಳ ಸುತ್ತಿನಲ್ಲಿ ಕಂಡು ಬರುತ್ತವೆ. ಡೆಲ್ಲಿಯಲ್ಲಿಯೂ ಈ ಮರವನ್ನು ಬೆಳೆಸಿದ್ದಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Condit 1926). ಬಿಳಿಲುಗಳು ಹೆಚ್ಚಾಗಿರುವುದಿಲ್ಲ. ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿದ್ದು 3×4 ಇಂಚು ಉದ್ದ-ಅಗಲಗಳನ್ನು ಹೊಂದಿರುತ್ತವೆ. ಫೆಬ್ರುವರಿ-ಏಪ್ರಿಲ್ ತಿಂಗಳುಗಳಲ್ಲಿ ಹೂ ಬಿಡುತ್ತದೆ. ಹಣ್ಣುಗಳು ಮಾಗಿದಾಗ ಹಳದಿ ಬಣ್ಣಕ್ಕಿರುತ್ತವೆ. ಇದರ ಮರವು ಹತ್ತಿರದ ಎಳೆಗಳನ್ನು ಹೊಂದಿದ್ದು ಘನ ಅಡಿಯೊಂದಕ್ಕೆ 40 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಮರದಿಂದ ಹಲಗೆಗಳನ್ನುಮಾಡುತ್ತಾರೆ. ಎಳೆಯ ಎಲೆಗಳು ಹಾಗೂ ತೊಗಟೆಗಳನ್ನು ಸಂಧಿವಾತ ರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ಪಿತ್ತಕೋಶದ ವ್ಯತ್ಯಾಸಗಳನ್ನು ಸರಿಪಡಿಸಲು ಇದರ ಹಾಲನ್ನು ಉಪಯೋಗಿಸುತ್ತಾರೆ. ನಿತ್ಯಹರಿದ್ವರ್ಣದ, ನೆರಳು ಕೊಡುವ ಈ ಮರವನ್ನು ಸಾಲು ಮರಗಳನ್ನಾಗಿ ರಸ್ತೆಗಳ ಪಕ್ಕದಲ್ಲಿ ಬೆಳೆಸಬಹುದು.

ಜಂಬೆಮರ. (ಶಿಲ್ವೆ) Xylia xylocarpa (Roxb.) Trub. (Syn. X. dolabriformis Benth.)

ಕೊಡಗು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈ ಮರವು ಬೆಳೆಯುತ್ತದೆ ಮೈಸೂರಲ್ಲದೆ ಒರಿಸ್ಸಾ, ಆಂಧ್ರಪ್ರದೇಶ ಹಾಗೂ ಮಧ್ಯಪ್ರದೇಶಗಳಲ್ಲಿಯೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಚಳಿಗಾಲದಲ್ಲಿ ಇದರ ಎಲೆಗಳು ಉದುರಿ ಹೋಗುತ್ತವೆ. ಚೇಗು ಕಂದುಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತದೆ. ಘನ ಅಡಿಯೊಂದಕ್ಕೆ 65 ಪೌಂಡುಗಳಷ್ಟು ತೂಕ ಬರುವ ಈ ಮರವು ಚೆನ್ನಾಗಿ ಬಾಳಿಕೆ ಬರುವ ಗುಣವನ್ನು ಹೊಂದಿದೆ. ಇದರ ಹಣ್ಣುಗಳು ಜನವರಿಯಲ್ಲಿ ಮಾಗುತ್ತವೆ.

ಉಪಯೋಗಗಳು : ಹಡಗು ಕಟ್ಟುವುದಕ್ಕೂ ರೈಲ್ವೆ ಸ್ಲೀಪರುಗಳನ್ನು ಮಾಡಲೂ, ಮನೆ ಕಟ್ಟಲೂ ಈ ಮರವನ್ನು ಉಪಯೋಗಿಸುತ್ತಾರೆ ಗೆಜ್ಜಲು ಹುಳು ಗಳು ಈ ಮರವನ್ನು ಹಾಳು ಮಾಡುವುದಿಲ್ಲ. ಆದ್ದರಿಂದ ಮೈಸೂರಿನಲ್ಲಿ ಈ ಮರ ವನ್ನು ಮನೆಗೆ ಹಾಗೂ ವ್ಯವಸಾಯದ ಉಪಕರಣಗಳಿಗಾಗಿ ಉಪಯೋಗಿಸುತ್ತಾರೆ.

ಜಂತಲ (ಜಂಥಲ್ಲ, ಮದ್ದಳೆ.) Alstonia Scholaris (L) R Br.

ಎಡಿನ್ ಬರ್ಗ್‌ನ ಸಸ್ಯಶಾಸ್ತ್ರಜ್ಞರಾಗಿದ್ದ ಆಲ್ಸ್ಟನ್‌ರವರ ಹೆಸರಿನಿಂದ ಈ ಮರಕ್ಕೆ ಆಲ್ಸ್ಟೋನಿಯಾ ಎಂಬ ಹೆಸರು ಬಂದಿದೆ. ಮೈಸೂರು ಹಾಗೂ ಕೊಡಗಿನ ಅರಣ್ಯಗಳಲ್ಲಿ ಈ ಮರವು ಬೆಳೆಯುತ್ತದೆ. ಪೂರ್ವ ಮತ್ತು ಪಶ್ಚಿಮ ಘಟ್ಟಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಜಾವಾ, ಆಸ್ಟ್ರೇಲಿಯಾಗಳಲ್ಲಿಯೂ ಈ ಮರವಿರುವ ಬಗ್ಗೆ ಮಾಹಿತಿ ಇದೆ ಇದೊಂದು ನಿತ್ಯಹರಿದ್ವರ್ಣದ ವೃಕ್ಷ. ಸುಮಾರು 40 ಅಡಿಗಳಿ ಗಿಂತ ಹೆಚ್ಚು ಎತ್ತರ ಬೆಳೆದು 8 ಅಡಿ ಸುತ್ತಳತೆಯನ್ನು ಗಳಿಸಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅಪೋಸೈನೇಸಿ (Apocynaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=44 (Tapadar & Sen 1960). ಎತ್ತರವಾದ, ಅಂದವಾದ ಈ ಮರಕ್ಕೆ ಬೂದು ಬಣ್ಣದ ಒರ ಟಾದ ತೊಗಟೆಯಿರುತ್ತದೆ. ರೆಂಬೆಗಳು ಛತ್ರಿಯ ಕಡ್ಡಿಗಳಂತೆ ಸುತ್ತಲೂ ಹರಡಿ ಕೊಂಡಿರುತ್ತವೆ. ಎಲೆಗಳು ಒರಟಾಗಿ ಮಾವಿನ ಎಲೆಗಳಂತಿರುತ್ತವೆ. ಹೂವುಗಳು ಹಸಿರು ಮಿಶ್ರವಾದ ಬಿಳುಪು ಬಣ್ಣವನ್ನು ಹೊಂದಿದ್ದು ಗುಂಪು ಗುಂಪಾಗಿ ಮೂಡು ತ್ತವೆ. ಹೂಗಳು ಸುವಾಸನೆಯಿಂದ ಕೂಡಿರುತ್ತವೆ. ಕಾಯಿ 15-20 ಇಂಚಿ

ನಷ್ಟು ಉದ್ದವಿರುತ್ತವೆ. ಕೆಲವು ಕವಿಗಳು ಫಲಭರಿತವಾದ ಈ ವೃಕ್ಷವನ್ನು ನೋಡಿ ತಲೆ ಕೆದರಿ ಕೊಂಡು ನಿಂತಿರುವ ಹೆಂಗಸಿನಂತೆ ಕಾಣುತ್ತದೆ ಎಂದು ಹಾಡಿದ್ದಾರೆ.



ಜಂತಲ

ಉಪಯೋಗಗಳು : ಈ ಮರವು ಬಹಳ ಮೃದುವಾಗಿರುತ್ತದೆ. ಘನ ಅಡಿಯೊಂದಕ್ಕೆ ಸುಮಾರು 28 ರಿಂದ 30 ಪೌಂಡುಗಳಷ್ಟು ತೂಗುತ್ತದೆ. ಪಾಠ ಶಾಲೆಗಳಲ್ಲಿ ಉಪಯೋಗಿಸುವ ಕಪ್ಪು ಹಲಗೆಗಳನ್ನು ಮಾಡಲೂ, ಟೀ ಪೆಟ್ಟಿಗೆಗಳನ್ನು ಮಾಡಲೂ ಉಪಯೋಗಿಸುತ್ತಾರೆ ಇದರ ತೊಗಟೆಯನ್ನು ಆಮಶಂಕೆ ಮತ್ತು ಜ್ವರ ನಿವಾರಣೆಗಳಿಗಾಗಿ ಉಪಯೋಗಿಸುತ್ತಾರೆ.

ಪಶ್ಚಿಮ ಘಟ್ಟಗಳ ಗುಡ್ಡಗಾಡಿನ ಜನರು ಈ ಮರದ ಹತ್ತಿರಕ್ಕೆ ಸುಳಿಯಲೂ ಹೆದರಿಕೊಳ್ಳುತ್ತಾರೆ. ಈ ಮರದ ಕೆಳಗೆ ನಿದ್ರಿಸಿದರೆ ಮರವನ್ನು ಕಾಯುತ್ತಿರುವ ಭೂತಗಳಿಂದ ಸಾವು ಬರುತ್ತದೆಂಬ ಮೂಢನಂಬಿಕೆ ಅವರಿಗಿದೆ. ಈ ಮರವು ಭೂತ ಗಳ ನಿವಾಸವೆಂದು ಅವರು ತಿಳಿದಿದ್ದಾರೆ. ಬಹುಶಃ ಶೈತಾನ್ ಎಂಬ ಹಿಂದೀ ಮರಾಠಿಗಳ ಶಬ್ದಗಳು ಈ ಕಾರಣದಿಂದಲೇ ಬಂದಿರಬಹುದು ಎಂದು ಹೇಳಿದ್ದಾರೆ.

ತದಸಲ (ತಡಸಲ) Grewia tiliaefolia Vahl.

ಇದೊಂದು ಪೊದೆಯಂತಿರುವ ಸಣ್ಣಮರ. ಎತ್ತರ ಸುಮಾರು 10–12 ಅಡಿ ಗಳಷ್ಟಿರುತ್ತದೆ. ತದಸಲ (**Grewia**) ಜಾತಿಯ ಸುಮಾರು 15–16 ಪ್ರಭೇದ

ಗಳು ಮೈಸೂರು ಸಂಸ್ಥಾನದಲ್ಲಿವೆ. ಈ ತದಸಲು ಮರವು ಮದರಾಸ್ ಬಿಹಾರ್, ಮಧ್ಯಪ್ರದೇಶ, ಒರಿಸ್ಸಾ ರಾಜ್ಯಗಳಲ್ಲೂ ಬೆಳೆಯುತ್ತದೆ ಈ ಮರ ಮೈಸೂರು, ಉತ್ತರ ಕೊಡಗು, ಮತ್ತು ಮಲೆನಾಡಿನ ಒಣ ಹವೆಯುಳ್ಳ ಪ್ರದೇಶಗಳಲ್ಲಿಯೂ ಬೆಳೆಯುತ್ತದೆ. ಬೆಂಗಳೂರು, ಸಾವನದುರ್ಗದಲ್ಲಿಯೂ ಇದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಟಿಲಿಯೇಸಿ (Tiliaceae) ಕುಟುಂಬಕ್ಕೆ ಸೇರಿದೆ. ಬೀಜ ಹಾಗೂ ರೆಂಬೆಗಳ ಮೂಲಕ ವಂಶಾಭಿವೃದ್ಧಿಯನ್ನು ಮಾಡಬಹುದು. ಇದರ ಎಲೆಗಳು ದೊಡ್ಡ ತೊಟ್ಟುಗಳನ್ನು ಹೊಂದಿದ್ದು ಪರ್ಯಾಯ ಜೋಡಣೆಯನ್ನು ಹೊಂದಿರುತ್ತದೆ. ಹೂಗಳು ಹಳದಿ ಬಣ್ಣಕ್ಕಿದ್ದು ಏಪ್ರಿಲ್–ಆಗಸ್ಟ್ ತಿಂಗಳುಗಳಲ್ಲಿ ಮೂಡುತ್ತವೆ. ಇದರ ಹಣ್ಣುಗಳು ಸ್ವಲ್ಪ ಕಪ್ಪಗಿದ್ದು ಮೇಲೆಲ್ಲಾ ತುಪ್ಪಳವನ್ನು ಹೊಂದಿರುತ್ತವೆ.

ಉಪಯೋಗಗಳು : ಈ ಮರದ ಹಣ್ಣನ್ನು ತಿನ್ನುತ್ತಾರೆ. ಮರವು ಹತ್ತಿರದ ಎಳೆಯನ್ನು ಹೊಂದಿದ್ದು ಬಾಳಿಕೆ ಬರುವಂತಹುದಾಗಿದೆ. ಘನ ಅಡಿಯೊಂದಕ್ಕೆ 35 ಪೌಂಡುಗಳಷ್ಟು ತೂಗುತ್ತದೆ. ತೊಗಟೆಯಿಂದ ನಾರನ್ನು ತೆಗೆಯುತ್ತಾರೆ. ಈ ನಾರಿನಿಂದ ಹಗ್ಗವನ್ನು ಮಾಡಬಹುದು. ಕ್ರಿಕೆಟ್ ಮತ್ತು ಮೇಜು ಗೋಲಿ (Billiard) ಆಟದ ಸಾಮಾಗ್ರಿಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ತಾರೆ (ತಾರಿ, ಶಾಂತಿಮರ) Terminalia bellcrica Roxb.

ಶಿವಮೊಗ್ಗ ಜಿಲ್ಲೆಯಲ್ಲಿ ಈ ಮರವನ್ನು ಪೂಜಿಸುತ್ತಾರೆ. ಶನೀಶ್ವರನಿಗೆ ಈ ಮರ ಪ್ರೀತಿಯ ವೃಕ್ಷವೆಂಬುದೇ ಇದಕ್ಕೆ ಕಾರಣ. ಆದ್ದರಿಂದ ಈ ಮರವನ್ನು ಮನೆಯ ಸಾಮಾನುಗಳಿಗಾಗಿ ಬಳಸಬಾರದೆಂಬ ಪ್ರತೀತಿ ಹಬ್ಬಿದೆ. ಉತ್ತರ ಭಾರತದಲ್ಲಿಯೂ ಈ ಮರವು ರಾಕ್ಷಸರ ಆವಾಸಸ್ಥಾನವೆಂಬ ಮೂಢನಂಬಿಕೆ ಇರುವುದರಿಂದ ಅವರೂ ಕೂಡ ಈ ಮರವನ್ನು ಬಳಸಲು ಹೆದರುತ್ತಾರೆ. ಈ ಮರವು ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಸಾವನದುರ್ಗ, ಬೆಂಗಳೂರು ಮತ್ತು ರಾಮನಗರಗಳಲ್ಲಿಯೂ ಈ ಮರವಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಕೋಂಬ್ರಿಟೇಸಿ (Combretaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 24. 48 (Janakiammal 1962). ಸುಮಾರು 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಶಕ್ತಿಯುಳ್ಳ ಈ ಮರವು ಒಳ್ಳೆಯ ನೆರಳು ಕೊಡಬಲ್ಲದು. ಎಲೆಗಳ ಕೆಳಭಾಗದಲ್ಲಿ ಒಂದು ಜೊತೆ ಗ್ರಂಥಿಗಳಿರುತ್ತವೆ. ಫೆಬ್ರುವರಿಯಿಂದಲೇ ಹೂ ಬಿಡಲು ಪ್ರಾರಂಭಿಸುವ ಇದರ ಹೂಗಳು ಕೆಂಪು, ಹಳದಿ ಮಿಶ್ರಿತವಾದ ಒಂದು ಬಗೆಯ ಬಿಳಿಯ ಬಣ್ಣಕ್ಕಿರುತ್ತವೆ.

ಹೂ ಬಿಡುವ ಕಾಲ ಮಾರ್ಚಿಯಿಂದ ಜೂನ್‌ವರೆಗೆ. ಇದರ ಕಾಯಿಗಳಿಗೆ ರೆಕ್ಕೆಗಳಿರುತ್ತವೆ. ಇದರ ಮರವು ಹಳದಿ ಬಣ್ಣಕ್ಕಿದ್ದು ಮೃದುವಾಗಿರುತ್ತದೆ. ಘನ ಅಡಿಯೊಂದಕ್ಕೆ 40 ರಿಂದ 43 ಪೌಂಡುಗಳಷ್ಟು ತೂಗುತ್ತದೆ. ಇದರ ಬುಡವು ದಪ್ಪವಾಗಿರುವುದರಿಂದ ಒಳ್ಳೆಯ ಹಲಗೆಗಳನ್ನು ಪಡೆಯಬಹುದು. ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಪಡೆಯಬಹುದು.



ತಾರೆಮರ

ಉಪಯೋಗಗಳು : ದೋಣಿಗಳನ್ನು ಕಟ್ಟಲೂ, ಗಾಡಿಗಳನ್ನು ಮಾಡಲೂ, ವ್ಯವಸಾಯೋಪಕರಣಗಳನ್ನು ಮಾಡಲೂ ಈ ಮರವನ್ನುಉಪಯೋಗಿಸುತ್ತಾರೆ. ಇದರ ಕಾಯಿಗಳನ್ನು ಹಿಂದೆ ಯೂರೋಪಿಗೆ ರಫ್ತು ಮಾಡುತ್ತಿದ್ದರು. ಅವನ್ನು ಬಟ್ಟೆಗಳಿಗೆ ಹಾಗೂ ಚರ್ಮಕ್ಕೆ ಮತ್ತು ಬಣ್ಣ ಹಾಕಲು ಉಪಯೋಗಿಸುತ್ತಾರೆ. ಶಾಯಿ ತಯಾರಿಸಲೂ ಉಪಯೋಗಿಸಬಹುದು. ಇದರ ಹಣ್ಣುಗಳನ್ನು ಜಿಂಕೆಗಳು, ದನಗಳು, ಆಡು ಕುರಿಗಳು ತಿನ್ನುತ್ತವೆ. ಈ ಕಾಯಿಯು ತಿರುಳಿಗೆ ಮತ್ತು ಬರಿಸುವ ಗುಣವಿದೆಯೆಂದು ಹೇಳುತ್ತಾರೆ. ಈ ಮರದಿಂದ ಬರುವ ಅಂಟನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ.

ತಾಳೆಮರ (Borassus flabellifer Linn.)

ತಾಳೆಮರವು ಭಾರತ, ಬರ್ಮ, ಸಿಲೋನ್ ದೇಶಗಳಲ್ಲಿ ಬೆಳೆಯುತ್ತದೆ. ಬೊರ್‍ಯಾಸಸ್ ಎಂಬ ಹೆಸರು ಗ್ರೀಕ್ ಭಾಷೆಯದಾಗಿದ್ದು ಇದರ ಕಾಯಿಯ ಸುತ್ತ ಇರುವ ಒರಟಾದ ಚರ್ಮದಂತಹ ಹೊದಿಕೆಯನ್ನು ಸೂಚಿಸುತ್ತದೆ. ಫ್ಲಾಬೆಲ್ಲಿಫರ್ ಎಂಬುದು ಬೀಸಣಿಗೆಯಂತಹ ಎಲೆಗಳನ್ನು ಹೊಂದಿದೆ ಎಂಬುದನ್ನು ಸೂಚಿಸುತ್ತದೆ. ಈ ಮರವು ಉಷ್ಣವಲಯದ ಆಫ್ರಿಕಾ ಖಂಡದಿಂದ ಬಂದುದಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪಾಮೇ (Palmae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=36 (Venkata Subban 1945). ಸಾಮಾನ್ಯವಾಗಿ 60–70 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವುದಾದರೂ ಒಮ್ಮೊಮ್ಮೆ 2 ಅಡಿ ದಪ್ಪವಾಗಿ 100 ಅಡಿಗಳಷ್ಟು ಎತ್ತರಕ್ಕೆ ಬೆಳೆಯದಿರುವುದಕ್ಕೆ ಆಧಾರಗಳಿವೆ. ಎಲೆಗಳು ಉದ್ದವಾಗಿ ಬೀಸಣಿಗೆಯ ಆಕಾರವನ್ನು ಹೊಂದಿರುತ್ತವೆ. ತುದಿಯಲ್ಲಿ ಕಿರೀಟದ ಆಕಾರವನ್ನು ಹೊಂದಿರುತ್ತವೆ. ಗಂಡು ಮತ್ತು ಹೆಣ್ಣು ಪುಷ್ಪಗಳು ಬೇರೆ ಬೇರೆ ಮರಗಳಲ್ಲಿ ಬಿಡಲ್ಪಡುತ್ತವೆ. ಗಂಡು ಹೂಗಳು ಸ್ವಲ್ಪ ಸಣ್ಣಗಿರುತ್ತವೆ. ಕಾಯಿಗಳು ಗುಂಪು ಗುಂಪಾಗಿರುತ್ತವೆ, ಹಸಿರಾಗಿರುತ್ತವೆ, ಒಳಗೆ ತಿರುಳನ್ನು ಹೊಂದಿರುತ್ತವೆ.



ತಾಳೆಮರ

ಉಪಯೋಗಗಳು : ಈ ಮರದ ಉಪಯೋಗಗಳು ಅಸಂಖ್ಯವಾದುವು ಮರವನ್ನು ಕಡಿದು ಕಂಬಗಳಿಗಾಗಿ, ಉಪಯೋಗಿಸುತ್ತಾರೆ. ಆದರ ತಿರುಳನ್ನು ತೆಗೆದು ನೀರು ಹೋಗಲು ಕಾಲುವೆಯಂತೆ ಮಾಡಲು ಉಪಯೋಗಿಸುತ್ತಾರೆ. ಎಲೆಗಳಿಂದ ಬೀಸಣಿಗೆಗಳು, ಚಾಪೆಗಳು, ಕುಕ್ಕೆಗಳು, ಟೋಪಿಗಳು, ಛತ್ರಿಗಳು, ಹೂಬುಟ್ಟಿಗಳು ಇವುಗಳನ್ನು ಮಾಡಲಾಗುತ್ತದೆ. ಮನೆ ಸೋರದಂತೆ ಗುಡಿಸಲುಗಳ ಮೇಲೆ ಹೊದಿಸಲು ಇವನ್ನು ಉಪಯೋಗಿಸುತ್ತಾರೆ. ಇದರ ಎಲೆಗಳು ಬಹಳ ಚೆನ್ನಾಗಿರುತ್ತವೆ. ಕಾಯಿಯೊಳಗಿನ ತಿರುಳು ತಿನ್ನಲು ಚೆನ್ನಾಗಿರುತ್ತದೆ. ಕಾಯಿಗಳನ್ನು ನೆಲದಲ್ಲಿ ಹೂತು ಮೊಳೆತಮೇಲೆ ಈಚಿಗೆ ತೆಗೆದು ಅದರೊಳಗಿನ ಸಿಹಿಯಾದ ತಿರುಳನ್ನು ತರಕಾರಿಯಂತೆ ಬಳಸುತ್ತಾರೆ. ಎಲೆಗಳನ್ನೆಲ್ಲಾ ಕಿತ್ತುಹಾಕಿ ಉಳಿಯುವ ಕೋಲಿನಂತಹ ಭಾಗದಿಂದ ನಾರನ್ನು ತೆಗೆಯುತ್ತಾರೆ.

ಈ ಮರದಿಂದಲೂ ಮದ್ಯವನ್ನು ತೆಗೆಯುತ್ತಾರೆ. ಹುಳಿಯಾಗುವುದಕ್ಕೆ ಮೊದಲು ಸೂರ್ಯೋದಯಕ್ಕೆ ಮೊದಲೇ ಕುಡಿದರೆ ಸಕ್ಕರೆಯ ನೀರಿನಂತೆ ಸಿಹಿಯಾಗಿರುತ್ತದೆ. ಆರೋಗ್ಯಕರವಾದ ಈ ರಸವನ್ನು "ನೀರಾ" ಎಂದು ಕರೆಯುತ್ತಾರೆ. ಹೆಣ್ಣು ಮರಗಳಲ್ಲಿ ಗಂಡುಮರಕ್ಕಿಂತ $1\frac{1}{2}$ ಯಷ್ಟು ಜಾಸ್ತಿ ಮದ್ಯ ಬರುತ್ತದೆ. ಇದರಿಂದಲೂ ಬೆಲ್ಲವನ್ನು ಮಾಡುತ್ತಾರೆ.

ತಿಗಡುಮರ (ತೇಟ, ಸೋನೆಪಟ್ಟ)

Oroxylum indicum (Linn.) vent.

ಈ ಮರವು ಅಂಡಮಾನ್, ಬರ್ಮ, ಸಿಲೋನ್ ದೇಶಗಳಲ್ಲಿಯೇ ಅಲ್ಲದೆ ನಮ್ಮ ಸಂಸ್ಥಾನದ ಅರಣ್ಯಗಳಲ್ಲಿಯೂ ಇದೆ. ಒಳ ಹಿಮಾಚಲ ಪ್ರದೇಶಗಳಲ್ಲಿ ಸಮುದ್ರ ಮಟ್ಟಕ್ಕೆ 3500 ಅಡಿ ಎತ್ತರದವರೆಗೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: 30–40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರವು ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=30$ (Venkatasubban 1944). ಇದರ ಅಭಿಮುಖ ಪತ್ರಗಳು 3 ರಿಂದ ನಾಲ್ಕು ಅಡಿಗಳಷ್ಟು ಉದ್ದ ಇರುತ್ತವೆ. ಈ ಮರವು ಮಳೆಗಾಲದಲ್ಲಿ ಹೂ ಬಿಡುತ್ತದೆ. ಇದರ ಹೂಗಳು ಅರಳಿದಾಗ ಸ್ವಲ್ಪ ಹಸಿರು ಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತವೆ. ಬಹಳ ವಾಸನೆಯಿಂದ ಕೂಡಿದ್ದು ಕೊನೆಗೆ ಕಂದು ಬಣ್ಣಕ್ಕೆ ಬಂದು ಬಿದ್ದುಹೋಗುತ್ತವೆ. ಇದರ ಕಾಯಿಗಳು ಕತ್ತಿಯಂತೆ ಉದ್ದವಾಗಿದ್ದು 12 ರಿಂದ 15 ಇಂಚು ಉದ್ದವಾಗಿರುತ್ತವೆ. ಮರ ಮೃದುವಾಗಿದ್ದು ಘನ ಅಡಿಯೊಂದಕ್ಕೆ 30 ಪೌಂಡುಗಳಷ್ಟು ತೂಗುತ್ತದೆ. ಬೀಜಗಳು ಬಹಳ. ಅವು ತೆಳ್ಳನೆಯ ರೆಕ್ಕೆಯನ್ನು ಹೊಂದಿದ್ದು 2 ರಿಂದ $2\frac{1}{2}$ ಇಂಚು ಉದ್ದವಾಗಿರುತ್ತವೆ. ಈ ಮರದ ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಈ ಮರದ ಚಕ್ಕೆಗಳನ್ನೂ, ಬೇರಿನ ತೊಗಟೆಯನ್ನೂ ಬಿಸಿನೀರಿನಲ್ಲಿ ಹಾಕಿದ್ದು ಆ ನೀರಿನಲ್ಲಿ ಸ್ನಾನ ಮಾಡಿದರೆ ಸಂಧಿವಾತ ನಿವಾರಣೆಯಾಗುತ್ತದೆ. ಬೀಜಗಳನ್ನು ತಿನ್ನುತ್ತಾರೆ. ತೊಗಟೆ ಹಾಗೂ ಹಣ್ಣುಗಳನ್ನು ಬಣ್ಣ ಹಾಕುವಾಗ ಉಪಯೋಗಿಸುತ್ತಾರೆ.

ತೂಪ್ರ (ಮಲ್ಲೈ, ಅಬನಾಸಿ) Dispyros melanoxylon Roxb (=D tupru Buchman).


ಈ ಮರವು ಮೈಸೂರು, ಮಹಾರಾಷ್ಟ್ರ, ಮಧ್ಯಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ. ಬೆಂಗಳೂರು ಜಿಲ್ಲೆಯಲ್ಲಿಯೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಎಬಿನೇಸಿ (Ebenaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು ನೇರಿಳೆ ಮರದ ಎಲೆಗಳಂತಿರುತ್ತವೆ. ಬಹಳ ವರ್ಷಗಳು ಪೊದೆಯಂತಿದ್ದರೂ ಈ ಮರವು ಗುಡ್ಡಪ್ರದೇಶಗಳಲ್ಲಿ 30–35 ಅಡಿಗಳ ಸಣ್ಣ ಮರವಾಗುತ್ತದೆ. ಇದರ ಹಣ್ಣುಗಳು ಹಳದಿ ಬಣ್ಣಕ್ಕಿರುತ್ತವೆ. ಇದರ ಹೊರ ಮರವು ಸ್ವಲ್ಪ ಗುಲಾಬಿ ಮಿಶ್ರಿತವಾದ ಬಿಳೀ ಬಣ್ಣಕ್ಕಿದ್ದು ಚೇಗು ಕಪ್ಪಗಿರುತ್ತದೆ. ಅಲ್ಲಲ್ಲೆ ಕಂದು ಮತ್ತು ಕೆಂಪು ಎಳೆಗಳಿರುತ್ತವೆ. ನೇರವಾದ ಇಲ್ಲವೆ ಗುಂಗುರು ಗುಂಗುರಾದ ಈ ಎಳೆಗಳು ಮರವನ್ನು ಸುಂದರಗೊಳಿಸುತ್ತವೆ. ತೂಕವು ಘನ ಅಡಿಯೊಂದಕ್ಕೆ 51–56 ಪೌಂಡುಗಳು. ತೂಕದಲ್ಲಿಯೂ ಮತ್ತು ಘಟ್ಟಿಯಾಗಿರುವುದರಲ್ಲಿಯೂ ತೂಪ್ರದ ಮರವು ತೇಗದ ಮರವನ್ನು ಮೀರಿಸುತ್ತದೆ. ಆದರೆ ಈ ಮರವನ್ನು ಕೆಲವು ಕೀಟಗಳು ಕೊರೆದು ಹಾಳು ಮಾಡಬಲ್ಲವು.



ತೂಪ್ರ

ಉಪಯೋಗಗಳು : ಇದರ ಹಣ್ಣುಗಳನ್ನು ದನಕರುಗಳು ತಿನ್ನುತ್ತವೆ. ಇದರ ಎಲೆಗಳನ್ನು ಬೀಡಿ ಕಟ್ಟಲು ಉಪಯೋಗಿಸುತ್ತಾರೆ. ಚೇಗನ್ನು ವಾಕಿಂಗ್ ಸ್ಟಿಕ್, ಬಾಚಣಿಗೆಗಳು, ನಶ್ಯದ ಡಬ್ಬಿಗಳು ಹಾಗೂ ಆಟದ ಸಾಮಾನುಗಳನ್ನು ಮಾಡಲು ಉಪಯೋಗಿಸುತ್ತಾರೆ. ದಡಾರವೆದ್ದಾಗ ಈ ಮರದ ಚಕ್ಕೆಯ ಗಂಧವನ್ನು ಸವರುತ್ತಾರೆ. ಹೊರಮರವನ್ನು ಗಾಡಿಗಳನ್ನು ಮಾಡಲೂ, ಕಂಬಗಳನ್ನು ಮಾಡಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಉಪಯೋಗಿಸುತ್ತಾರೆ.



ತೂಪ್ರ ಮರದ ಅಡ್ಡಸೀಳಿನ ಒಂದು ಭಾಗ.

ತೆಲ್ಲಿಕಾಕಮುಷ್ಟಿ (Celtis wightii planch.)

ಪಶ್ಚಿಮ ಘಟ್ಟಗಳಲ್ಲಿ ಈ ಮರವು ಹೆಚ್ಚಾಗಿ ಬೆಳೆಯುತ್ತದೆ. ಅಲ್ಲಿನ ನಿವಾಸಿಗಳಾದ ಗುಡ್ಡಗಾಡಿನ ತೆಲಗು ಜನರು ಇದನ್ನು ತೆಲ್ಲಿಕಾಕಮುಷ್ಟಿ ಮರವೆಂದು ಕರೆಯುತ್ತೇವೆಂದು ಹೇಳಿದ್ದಾರೆ. ಅಲ್ಲಿನ ಷೋಲಾ ಅರಣ್ಯಗಳಲ್ಲಿಯೂ, ತಗ್ಗಾದ ಪ್ರದೇಶಗಳಲ್ಲೂ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅಲ್ಮೇಸಿ (ulmaceae) ಕುಟುಂಬಕ್ಕೆ ಸೇರಿದೆ. ಎಲೆಗಳು ಒರಟಾಗಿ ಅಂಡಾಕೃತಿಯನ್ನು ಹೊಂದಿರುತ್ತವೆ ಎಲೆಗಳು ಕೆಳಗಿನಿಂದ ಮೇಲಕ್ಕೆ ಮೂರು ನಾರುಗಳನ್ನು ಹೊಂದಿರುತ್ತವೆ. ಹೂಗಳು ಕೇಪುಮಿಶ್ರಿತ ನೀಲಿಬಣ್ಣವನ್ನು ಹೊಂದಿರುತ್ತವೆ. ಅದರ ಕಾಯಿಗಳು ½ ಇಂಚಿನಷ್ಟು ಉದ್ದವಿರುತ್ತವೆ. ಪಾಗಿದ ಮೇಲೆ ಸ್ವಲ್ಪ ಕಪ್ಪಾಗುತ್ತವೆ. ಈ ಮರಕ್ಕೆ ಹತ್ತಿರದ ಎಳೆಗಳಿರುತ್ತವೆ. ತೂಕವು ಘನ ಅಡಿಯೊಂದಕ್ಕೆ 53 ಪೌಂಡುಗಳು.

ಉಪಯೋಗಗಳು : ಸ್ಥಳೀಯ ನಿವಾಸಿಗಳು ಇದನ್ನು ಸೌದೆಗಾಗಿ ಬಳಸುತ್ತಾರೆ.

ತೇಗ (ತ್ಯಾಗ, ತೇಗ, ತೇಗು) Tectona grandis Linn.f.

ಪ್ರಪಂಚದ ಅತ್ಯುತ್ತಮ ಮರಗಳಲ್ಲಿ ಒಂದಾದ ಈ ಮರವು ನಮ್ಮ ದೇಶದ ಒರಿಸ್ಸಾ, ಮಧ್ಯಪ್ರದೇಶ, ಬಿಹಾರ್ ರಾಜ್ಯಗಳಲ್ಲಿ ಸ್ವಲ್ಪ ಬೆಳೆದರೂ ಮೈಸೂರು ಸಂಸ್ಥಾನ

ದಲ್ಲಿ ಹೇರಳವಾಗಿ ಬೆಳೆಯುತ್ತದೆ. ಮೈಸೂರು, ಶಿವಮೊಗ್ಗ, ಹಾಸನ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ತೇಗದ ತೋಟಗಳು ಬಹಳವಾಗಿವೆ. 1895ರಲ್ಲೇ ನಮ್ಮ ಸಂಸ್ಥಾನದಲ್ಲಿ 4000 ಎಕರೆಗಳಲ್ಲಿ ತೇಗದ ಮರವನ್ನು ಬೆಳೆಸಲಾಗುತ್ತಿತ್ತು. ಸಮುದ್ರ ಮಟ್ಟಕ್ಕೆ 2000 ದಿಂದ 3000 ಅಡಿಗಳಷ್ಟೆತ್ತರಕ್ಕೆ ಇರುವ ಪಶ್ಚಿಮ ಘಟ್ಟಗಳಲ್ಲೆಲ್ಲಾ ಈ ಮರವು ಚೆನ್ನಾಗಿ ಬೆಳೆಯುತ್ತದೆ. ಇದು ಸುಮಾರು 150 ಅಡಿಗಳಷ್ಟು ಎತ್ತರ ಬೆಳೆಯಬಲ್ಲುದಾದರೂ ಅಷ್ಟು ಎತ್ತರ ಬೆಳೆಯುವುದು ಅಪರೂಪ. ಬೆಡ್ಡೋಮ್‌ರವರು (1890) ನೋಡಿದ ದೊಡ್ಡ ತೇಗದ ಮರವೆಂದರೆ ಅಣ್ಣಾಮಲೈ ಬೆಟ್ಟದಲ್ಲಿ ಬೆಳೆಯುತ್ತಿದ್ದುದು. ಈ ಮರವು 22 ಅಡಿ ಸುತ್ತಳತೆ ಹೊಂದಿದ್ದು 90 ಅಡಿ ಉದ್ದವಿತ್ತು. ಹೆಗ್ಗಡದೇವನಕೋಟೆ, ಕಾಕನಕೋಟೆ, ಹುಣಸೂರು ಮುಂತಾದ ಸ್ಥಳಗಳ ಅರಣ್ಯ ಪ್ರದೇಶಗಳಲ್ಲಿ ಇಂದಿಗೂ 4 ಅಡಿ ಸುತ್ತಳತೆಯುಳ್ಳ ತೇಗದ ಮರಗಳು ಹೆಚ್ಚು ಇವೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ವರ್ಬಿನೇಸಿ (Verbenaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=24$ (Nanda 1964). ಈ ದೊಡ್ಡ ಮರದ ಎಳೆಯ ರೆಂಬೆಗಳು ನಾಲ್ಕು ಮೂಲೆಗಳನ್ನು ಹೊಂದಿರುತ್ತವೆ. ಎಲೆಗಳು 12 ರಿಂದ 24 ಇಂಚು ಉದ್ದವೂ, 6 ರಿಂದ 12 ಇಂಚು ಅಗಲವೂ ಇರುತ್ತವೆ. ಈ ಎಲೆಗಳ ಮೇಲ್ಭಾಗ ಮೃದುವಾಗಿರುತ್ತದೆ. ಹೂಗಳು ಸ್ವಲ್ಪ ಬೆಳ್ಳಗಿದ್ದು ಸಣ್ಣಗಿರುತ್ತವೆ. ಕಾಯಿಗಳು ಮೃದುವಾಗಿ ½ ಇಂಚಿನಷ್ಟು ಇರುತ್ತವೆ. ನವೆಂಬರ್‌ನಿಂದ ಜನವರಿ ತಿಂಗಳುಗಳಲ್ಲಿ ಈ ಮರದ ಎಲೆಗಳು ಉದುರುತ್ತವೆ. ಹೂಗಳೂ, ಎಲೆಗಳೂ ಇರುವಾಗ ಮರವು ಭವ್ಯಮನೋಹರವಾಗಿರುತ್ತದೆ. ಬೀಜಗಳಿಂದ ಸುಲಭವಾಗಿ ಒಳ್ಳೆಯ ನೆಲದಲ್ಲಿ ಸಸಿಗಳನ್ನು ಬೆಳೆಸಿಕೊಂಡು ಅನಂತರ ಈ ಸಸಿಗಳನ್ನು ಬೇಕಾದ ಕಡೆ ಹಾಕಿ ಮರಗಳನ್ನು ಪಡೆಯಬಹುದು.

ಉಪಯೋಗಗಳು : ಭಾರತದಲ್ಲೇ ಅತ್ಯಂತ ಪ್ರಾಮುಖ್ಯವುಳ್ಳ ಒಳ್ಳೆಯ ಮರವನ್ನು ಕೊಡುವ ವೃಕ್ಷವೆಂದರೆ ತೇಗ. ಹಡಗು ಕಟ್ಟುವುದಕ್ಕೂ, ಮನೆ ಕಟ್ಟುವುದಕ್ಕೂ, ಮನೆಸಾಮಾನುಗಳನ್ನು ಮಾಡಲೂ, ರೈಲ್ವೆ ಗಾಡಿಗಳನ್ನು ಮಾಡಲೂ ಇದನ್ನು ಉಪಯೋಗಿಸುತ್ತಾರೆ. ತೇಗದ ಮರವು ಬಾಳಿಕೆಗೆ ಹೆಸರಾದುದಾಗಿದೆ. ಒಂದೇ ಒಂದು ದೃಷ್ಟಾಂತ ಕೊಡುವುದಾದರೆ ಮಹಾರಾಷ್ಟ್ರದ ಪ್ರಸಿದ್ಧ ಕಾರ್ಲಾಗುಹೆಗಳಲ್ಲಿ ಬಳಸಿರುವ ತೇಗದ ಮರದ ತೀರುಗಳು ಸುಮಾರು 2000 ವರ್ಷಗಳಾದರೂ ಇನ್ನೂ ಚೆನ್ನಾಗಿಯೇ ಇವೆ. ಈ ಮರ ನೀರಿನಲ್ಲಿಯೂ ಬಹು ಕಾಲ ಬಾಳಿಕೆ ಬರುವ ಗುಟ್ಟೆಂದರೆ ಇದರ ಎಲ್ಲಾ ಸೂಕ್ಷ್ಮ ರಂಧ್ರಗಳೂ ಮರದ ರೆಸಿನ್‌ಗಳಿಂದ ತುಂಬಿರುವುದು. ಈ ಮರವನ್ನು ಗೆಜ್ಜಲು ಹುಳುಗಳಾಗಲೀ ಅಥವಾ ಇನ್ನಾವ ಕೀಟಗಳೇ ಆಗಲಿ ಹಾಳು ಮಾಡಲಾರವು. ಇದರ ತೊಗಟೆಯಿಂದ ಒಂದು ಬಗೆಯ ಹಳದಿ ಬಣ್ಣವನ್ನು ತೆಗೆಯುತ್ತಾರೆ. ಅದನ್ನು ಬಟ್ಟೆಗಳಿಗೆ ಬಣ್ಣ ಹಾಕಲು ಉಪಯೋಗಿಸುತ್ತಾರೆ.

ತೇಗಲವ.ುಗು (Helicia robosta Wall.)

ಈ ಮರವು ಹಾಸನ ಜಿಲ್ಲೆಯಲ್ಲಿ ತೊರೆಗಳ ಹತ್ತಿರ ಬೆಳೆಯುತ್ತದೆ ಎಂಬುದಕ್ಕೆ ಆಧಾರವಿದೆ. ಅಸ್ಸಾಂನಲ್ಲಿ ಸಮುದ್ರಮಟ್ಟಕ್ಕೆ 3000 ಅಡಿಗಳವರೆಗೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪ್ರೊಟಿಯೇಸಿ (Proteaceae) ಕುಟುಂಬಕ್ಕೆ ಸೇರಿದೆ. ಇದರ ತೊಗಟೆಯು ಕಂದು ಬಣ್ಣಕ್ಕಿದ್ದು ಹೂಗೊಂಚಲುಗಳು ೯ ರಿಂದ 12 ಇಂಚು ಉದ್ದವಿರುತ್ತವೆ.

ಉಪಯೋಗಗಳು : ಇದರ ಹಣ್ಣು ವಿಷಮಯ. ಮರವನ್ನು ಮನೆ ಕಟ್ಟಲು ಉಪಯೋಗಿಸುತ್ತಾರೆ.

ತೊಟ್ಟಲಕಾಯಿ (ತೊಟ್ಟಲ) Aglaia roxburghiana Miq.

ರಾಜಾಸ್ಥಾನ ಮುಂತಾದ ಕಡೆಗಳಲ್ಲೆಲ್ಲಾ ಬೆಳೆಯುತ್ತಿರುವ ಈ ಮರವು ಬಾಬಾ ಬುಡನ್ ಬೆಟ್ಟಗಳಲ್ಲಿ ಬೆಳೆಯುತ್ತದೆಂದು ಹೇಳಲಾಗಿದೆ. ಪಶ್ಚಿಮ ಘಟ್ಟಗಳು, ದಕ್ಷಿಣ ಕನ್ನಡಜಿಲ್ಲೆ ಇಲ್ಲೆಲ್ಲಾ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಇದೊಂದು ದೊಡ್ಡಮರ. ಈ ಮರದ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ಸಂಯುಕ್ತ ಪತ್ರಗಳಾಗಿರುತ್ತವೆ. ಬಿಡಿ ಎಲೆಗಳು 3 ರಿಂದ 7 ಇಂಚು ಉದ್ದ ಇರುತ್ತವೆ. ಹೂಗಳು ಹಳದಿ ಬಣ್ಣಕ್ಕಿರುತ್ತವೆ. ಹಣ್ಣುಗಳು ಕಂದು ಬಣ್ಣಕ್ಕಿದ್ದು ದುಂಡಾಗಿರುತ್ತವೆ. ಮರವು ಗಟ್ಟಿಯಾಗಿದ್ದು ಕೆಂಪಗಿರುತ್ತದೆ. ಒಂದು ಘನ ಅಡಿ ಮರವು 58 ರಿಂದ 61 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಹಣ್ಣುಗಳನ್ನು ತಿನ್ನುತ್ತಾರೆ. ಸುವಾಸನಾಭರಿತವಾದ ಹೂವುಗಳನ್ನು ಸುಗಂಧ ದ್ರವ್ಯಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ತೆಂಗಿನ ಮರ : (ತೆಂಗು) Coco nucifera Linn.

ಕೊಕಾಸ್ ದ್ವೀಪಗಳಿಂದ ಬಂದಿತೆಂದು ಹೇಳಲಾಗುವ ತೆಂಗಿನ ಮರವನ್ನು ನಮ್ಮ ದೇಶದ ಎಲ್ಲ ಕಡೆಗಳಲ್ಲೂ ಹೆಚ್ಚಾಗಿ ಬೆಳೆಸುವ ಪ್ರಯತ್ನ ನಡೆದಿದ್ದರೂ ಇದು ಮೈಸೂರು, ಕೇರಳ ಮದ್ರಾಸ್ ರಾಜ್ಯಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ. ಸಂಸ್ಕೃತ ಸಾಹಿತ್ಯದಲ್ಲೆಲ್ಲಾ "ನಾರಿಕೇಳ" ಎಂದು ಪ್ರಸಿದ್ಧವಾಗಿರುವ ಈ ಮರ ಭಾರತೀಯರ ಜೀವನ ದೃಷ್ಟಿಯಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಶುಭಕಾರ್ಯಗಳಲ್ಲಿ ಭಾಗವಹಿಸಲು ಬಂದ ಅತಿಥಿಗಳಿಗೆ ಫಲತಾಂಬೂಲಗಳನ್ನು ಕೊಟ್ಟು ಆಶೀರ್ವಾದ ಪಡೆಯುವುದು ಸನಾತನ

ಕಾಲದಿಂದಲೂ ನಡೆದು ಬಂದಿರುವ ಸಂಪ್ರದಾಯವಾಗಿದೆ. ಕೊಕಾಸ್ ಎಂಬುದ ಪೋರ್ಚುಗೀಸ್ ಭಾಷೆಯದಾಗಿದೆ. ಅವರ ಭಾಷೆಯಲ್ಲಿ ಕೊಕಾಸ್ ಎಂದರೆ 'ಕೋತಿಯ ತಲೆ' ಎಂದಾಗುತ್ತದೆ. 'ನ್ಯೂಸಿಫೆರ' ಎಂದರೆ ಕಾಯಿ ಬಿಟ್ಟಿರುವುದು. ಮೈಸೂರಿನಲ್ಲಿ ಚಿಕ್ಕನಾಯಕನಹಳ್ಳಿ, ಅರಸೀಕೆರೆ, ತಿಪಟೂರು ತೆಂಗಿನಕಾಯಿಗೆ ಪ್ರಸಿದ್ಧವಾಗಿವೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಪಾಮೀ (Areceeae Palmae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=32 (Abraham etal. 1961). ಎತ್ತರಕ್ಕೆ ಬೆಳೆಯುವ ಈ ಮರವು ತುದಿಯಲ್ಲಿ ಎಲೆಗಳ ಸುಂದರವಾದ ಕಿರೀಟವನ್ನು ಹೊಂದಿರುತ್ತದೆ. ಎತ್ತರಕ್ಕೆ ಬೆಳೆದ ಮರದ ಮೇಲೆಲ್ಲಾ ಬಿದ್ದುಹೋದ ಹೆಡೆಮಟ್ಟೆಗಳ ಗುರುತು ಮೂಡಿರುತ್ತದೆ. ಪ್ರತಿ ಹೆಡೆಮೊಟ್ಟೆಯ ಉದ್ದವು 12 ರಿಂದ 18 ಅಡಿ ಉದ್ದವಿರುತ್ತದೆ. ಬಿಡಿ ಎಲೆ (leaf lets) ಗಳ ಉದ್ದ ಎರಡರಿಂದ ಮೂರು ಅಡಿಗಳಷ್ಟಿರುತ್ತದೆ. ಗಂಡು ಮತ್ತು ಹೆಣ್ಣು ಹೂಗಳು ಒಂದೇ ಮರದ ಮೇಲೆ ಮೂಡುತ್ತವೆ. ಗುಂಪು ಗುಂಪಾಗಿ ಇವು ಸ್ಪೇಡಿಕ್ಸ್‌ಗಳಲ್ಲಿ (ಕುರುಂಬಾಳೆಗಳು) ಮೂಡುತ್ತವೆ. ಗಂಡು ಹೂಗಳು ಸ್ವಲ್ಪ ಸಣ್ಣಗಿರುತ್ತವೆ. ನೆಟ್ಟ 8ನೆಯ ವರ್ಷದ ಹೊತ್ತಿಗೆ ಫಲಕ್ಕೆ ಬರುವ ಈ ಮರಗಳು ವರ್ಷಂಪ್ರತಿ ಮರವೊಂದಕ್ಕೆ 100 ಕಾಯಿಗಳನ್ನು ಕೊಡಬಲ್ಲವು. ಸಮುದ್ರ ಮಟ್ಟಕ್ಕೆ ಸುಮಾರು 3000 ಅಡಿ ಎತ್ತರ ಮತ್ತು ಅದರೊಳಗಿರುವ ಎಲ್ಲಾ ಪ್ರದೇಶಗಳಲ್ಲೂ ಈ ಮರ ಚೆನ್ನಾಗಿ ಬೆಳೆಯುತ್ತದೆ. ಹಳೆಯ ತೆಂಗಿನ ಮರದ ಚೆನ್ನಾಗಿ ಬಲಿತ ಕಾಯಿಗಳನ್ನು ಸಂಗ್ರಹಿಸಿ ಒಂದು ಕಡೆ ಇಟ್ಟದ್ದು ಅನಂತರ ಭೂಮಿಯಲ್ಲಿ ಸಾಲಾಗಿ ನೆಟ್ಟು ಸಸಿಗಳನ್ನು ಪಡೆಯುತ್ತಾರೆ. 1 ವರ್ಷದಿಂದ ಮೇಲ್ಪಟ್ಟು 4 ವರ್ಷದೊಳಗೆ ಸಸಿಗಳನ್ನು ಪುನಃ ಕಿತ್ತು 20 ಅಡಿಗಳ ಅಂತರದಲ್ಲಿ ನೆಡಲಾಗುತ್ತದೆ. ಆದರೆ 30 ಅಡಿಗಳ ಅಂತರ ಕೊಡುವುದು ಒಳ್ಳೆಯದು.

ಮೈಸೂರಿನ ತೆಂಗಿನ ಬಗ್ಗೆ ಬರೆದಿರುವ ಕ್ಯಾಮೆರಾನ್‌ರವರು ಈ ತೆಂಗಿನಲ್ಲಿ 4 ವಿಧಗಳಿವೆಯೆಂದು ಅಭಿಪ್ರಾಯ ಪಟ್ಟಿದ್ದಾರೆ. (1) ಕೆಂದೆಂಗು (2) ಕೆಂಪು ಹಸಿರು ಮಿಶ್ರ (3) ತಿಳಿಹಸಿರು (4) ತುಂಬ ಹಸುರಾದದ್ದು.

ಉಪಯೋಗಗಳು: ಕಲಿಯುಗದ ಕಲ್ಪವೃಕ್ಷವೆಂದು ಕರೆಸಿಕೊಳ್ಳುತ್ತಿರುವ ಈ ಮರದ ಎಲ್ಲಾ ಭಾಗಗಳೂ ಒಂದಿಲ್ಲೊಂದು ಉಪಯೋಗಕ್ಕೆ ಬರುತ್ತವೆ. ಕಾಯಿಗಳನ್ನು ಎಳನೀರು, ಕೊಪ್ಪರಿಎಣ್ಣೆ, ಕೊಪ್ಪರಿಗಳಿಗಾಗಿ ಬಳಸುತ್ತಾರೆ. ಇದೆಲ್ಲಾ ಬರೀ ಭ್ರೂಣಾಹಾರ (Endosperm) ಆಗಿರುತ್ತದೆ. ತೆಂಗಿನ ನಾರಿನ (ಕಾಯರ್) ಉದ್ದಿಮೆಯ ಬಗ್ಗೆಯಂತೂ ಹೇಳಬೇಕಾದ್ದಿಲ್ಲ. ಮನ ಸೂರೆಗೊಳ್ಳುವ ಅನೇಕ ಪದಾರ್ಥಗಳನ್ನು ತೆಂಗಿನ ನಾರಿನಿಂದ ಮಾಡುತ್ತಿದ್ದಾರೆ. ಈ ಮರಕ್ಕೆ ಮಾನವ ಪೀಳಿಗೆ ಮಾಡುತ್ತಿರುವ ಅನ್ಯಾಯವೆಂದರೆ ಅದಕ್ಕೆ ಗಡಿಗೆ ಕಟ್ಟುವುದು. ಇದೊಂದನ್ನು ಬಿಟ್ಟರೆ ಅದು ನಮ್ಮ ಒಳ್ಳೆಯದಕ್ಕೆ ಉಪಯೋಗವಾಗುತ್ತಿದೆ.

ದಾಲ್ಮರ (Chickrassia talbularis A. Juss.)

ಬರ್ಮ, ಮದರಾಸು ಮತ್ತು ಬಂಗಾಳಗಳಲ್ಲಿ "ಚಿತ್ತಗಾಂಗ್" ಮರವೆಂದು ಪ್ರಸಿದ್ಧಿ ಪಡೆದಿರುವ ಮರವೇ ಇದು. ಈ ಸುಂದರ ವೃಕ್ಷ ನಿತ್ಯಹರಿದ್ವರ್ಣದ ಎಲೆಗಳನ್ನು ಹೊಂದಿದ್ದು ಮಲೆನಾಡು ಹಾಗೂ ಕೊಡಗುಗಳಲ್ಲಿ ಬೆಳೆಯುತ್ತದೆ. ಪಶ್ಚಿಮ ಘಟ್ಟಗಳು, ಅಂಡಮಾನ್ ಮತ್ತು ಆಂಧ್ರ ಪ್ರದೇಶಗಳಲ್ಲೂ ಇದು ಚೆನ್ನಾಗಿ ಬೆಳೆಯುತ್ತದ.



ದಾಲ್ಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. 60 ರಿಂದ 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರ 14-18 ಅಡಿಗಳಷ್ಟು ಸುತ್ತಳತೆ ಗಳಿಸಬಲ್ಲದು.

ಉಪಯೋಗಗಳು : ಇದರಿಂದ ಬರುವ ಅಂಟನ್ನು ಗೋಂದಾಗಿ ಉಪಯೋಗಿಸುತ್ತಾರೆ. ಹೂಗಳಿಂದ ಹಳದಿ ಮಿಶ್ರಿತ ಕೆಂಪಾದ ಒಂದು ಬಗೆಯ ಬಣ್ಣ ಬರುತ್ತದೆ. ಮರ ಸುವಾಸನೆಯಿಂದ ಕೂಡಿದ್ದು 1 ಘನ ಅಡಿಗೆ 40 ರಿಂದ 50 ಪೌಂಡುಗಳು ತೂಗುತ್ತದೆ. ಈ ಮರಕ್ಕೆ ಒಳ್ಳೇ ಹೊಳಪು ಬರುವಂತೆ ಮೆರಗು ಹಾಕಬಹುದು. ಟೀ ಪೆಟ್ಟಿಗೆ, ಮನೆ ಸಾಮಾನುಗಳು, ಅಲಂಕಾರ ಸಾಮಗ್ರಿಗಳು, ವೈಮಾನಿಕ ಪ್ರೊಪೆಲ್ಲ

ರುಗಳು ಮುಂತಾದುವುಗಳಿಗೋಸ್ಕರ ಈ ಮರವನ್ನು ಉಪಯೋಗಿಸುತ್ತಾರೆ. ಇದರ ಎಳೆ ಎಲೆಗಳು ಮತ್ತು ತೊಗಟೆಗಳಲ್ಲಿ ಕ್ರಮಶಃ 22% ಮತ್ತು 15% ಟ್ಯಾನಿನ್ ಇರುತ್ತದೆ.

ದಾಲ್ಚಿನ್ನಿಮರ (ಲವಂಗಪಟ್ಟೆಮರ, ನಿಸಾನೆ.)

Cinnamomum zeylamicum Breyn.

ಮೂಲತಃ ಸಿಲೋನ್ ನಿವಾಸಿಯಾಗಿದ್ದ ದಾಲ್ಚಿನ್ನಿ ಮರವನ್ನು ನಮ್ಮ ದೇಶದ ನೀಲಗಿರಿ, ಅಸ್ಸಾಂ, ಮಲಬಾರ್ ಹಾಗೂ ದಕ್ಷಿಣ ಕನ್ನಡ ಪ್ರದೇಶಗಳ ತಂಪು ಹವೆಯ ಪ್ರದೇಶಗಳಲ್ಲಿ ಬೆಳೆಸುತ್ತಾರೆ. ಈ ನಿತ್ಯಹರಿದ್ವರ್ಣ ವೃಕ್ಷ 20 ರಿಂದ 60 ಅಡಿಗಳ ಎತ್ತರಕ್ಕೆ ಬೆಳೆಯಬಲ್ಲದು. ಸಿಲೋನ್‌ನಲ್ಲಿ 1948ರಲ್ಲೇ ಸುಮಾರು 3,3077 ಎಕರೆಗಳಲ್ಲಿ ಈ ಮರಗಳನ್ನು ಬೆಳೆಸಲಾಗುತ್ತಿತ್ತು.



ದಾಲ್ಚಿನ್ನಿ

ಸಸ್ಯಶಾಸ್ತ್ರ ವಿವರಣೆ : ಈ ಮರ ಲಾರೇಸಿ (Lauraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=24 (E.K.J) ಇದೊಂದು ನಿತ್ಯಹರಿದ್ವರ್ಣ ವೃಕ್ಷ. ಇದರ ಎಳೆಯ ಕುಡಿಗಳೂ ಎಲೆಗಳೂ ಕೆಂಪಾಗಿ ಸುಂದರವಾಗಿರುತ್ತವೆ. ಇದರ ಎಲೆಗಳು 4 ರಿಂದ 7 ಇಂಚು ಉದ್ದವಿದ್ದು ಒರಟಾಗಿ

ಹೊಳಪುಳ್ಳ ಹಸಿರು ಬಣ್ಣ ಹೊಂದಿರುತ್ತವೆ. ಎಲೆಗಳಿಗೂ ವಾಸನೆ ಇರುತ್ತದೆ. ಇದರ ಕಾಯಿ ½–1 ಇಂಚು ಉದ್ದವಿದ್ದು ಮಾಗಿದ ಮೇಲೆ ಕಪ್ಪು ಮಿಶ್ರ ಕೆಂಪು ಬಣ್ಣ ಹೊಂದುತ್ತದೆ. ಒಂದು ಹಣ್ಣಿಗೆ ಒಂದೇ ಬೀಜವಿರುತ್ತದೆ. ಈ ಮರ ಜನವರಿಯಲ್ಲಿ ಪುಷ್ಪಭರಿತವಾಗಿರುತ್ತದೆ. ಈ ಮರದ ಬಣ್ಣ ಬೂದು ಮಿಶ್ರಿತ ಕಂದು ಬಣ್ಣವಾಗಿದ್ದು ವಾಸನೆಯಿಂದ ಕೂಡಿರುತ್ತದೆ. ತೂಕ 1 ಘನ ಅಡಿಗೆ 32 ರಿಂದ 39 ಪೌಂಡುಗಳು ಸಾಮಾನ್ಯವಾಗಿ ನೇರ ಎಳೆಗಳುಳ್ಳ ಈ ಮರವನ್ನು ಒಣಗಿಸಿದರೆ ಆದಾಗಿಯೇ ಸೀಳಲ್ಪಡುತ್ತದೆ. ಈ ಮರದ ಕಾಂಡದಿಂದ ಬರುವ ತೊಗಟೆಯೇ ದಾಲ್ಚಿನ್ನಿ. ತಂಪು ಹವೆಯ ಅರಣ್ಯ ಪ್ರದೇಶದಲ್ಲಿ ಇವುಗಳ ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಸಿನ್ನಮಂ ಎಸೆನ್ಸ್ 12 ನಿಮಿಷಗಳಲ್ಲಿ ಟೈಫಾಯಿಡ್ ಬ್ಯಾಕ್ಟೀರಿಯಾಗಳನ್ನು ಕೊಲ್ಲುತ್ತದೆ ಎಂದು ಹೇಳಲಾಗಿದೆ. ದಾಲ್ಚಿನ್ನಿಯನ್ನು ಸಂಬಾರ ಪದಾರ್ಥವಾಗಿ ಆಹಾರ ಪದಾರ್ಥಗಳಿಗೆ ಒಳ್ಳೆಯ ವಾಸನೆ ಕೊಡಲು ಉಪಯೋಗಿಸುತ್ತಾರೆ. ಇದರ ಎಲೆಗಳಿಂದ, ಬೇರುಗಳಿಂದ, ತೊಗಟೆಯಿಂದ ಎಣ್ಣೆ ತೆಗೆಯುತ್ತಾರೆ. ಅದನ್ನು ಪೂತಿನಾಶಕವಾಗಿಯೂ, ವಾಯುಹರವಾಗಿಯೂ ಉಪಯೋಗಿಸುತ್ತಾರೆ. ತೊಗಟೆಯಲ್ಲಿ ಶೇಕಡ 0.5 ರಿಂದ 1 ಭಾಗದಷ್ಟು ಎಣ್ಣೆಯಿರುತ್ತದೆ.

ದಾಳಿಂಬೆ (ದಾಳಿಂಬರೆ) Punica grantun Linn.

ಇದು ಇರಾನ್ ದೇಶದಿಂದ ಬಂದದ್ದೆಂದು ಹೇಳಲಾಗಿದೆ. ಆದರೆ ಸನಾತನ ಕಾಲದಿಂದಲೂ ನಮ್ಮ ದೇಶದಲ್ಲಿ ಇದು ಬೆಳೆಯುತ್ತಿದೆ. ಮುಸ್ಲಿಮರಿಗೆ ಇದು ಅತ್ಯಂತ ಪ್ರೀತಿಯ ಹಣ್ಣಿನ ಗಿಡ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪ್ಯೂನಿಕೇಸಿ (Puuicacaec) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 16 (Miege 1960). ಪೊದೆಯಂತೆ ಬೆಳೆಯುವ ಈ ಸಣ್ಣಮರ ಪುಷ್ಪಭರಿತವಾಗಿರುವಾಗ ಬಹಳ ಸುಂದರವಾಗಿರುತ್ತದೆ. ಸೇಬಿಗಿಂತ ಸ್ವಲ್ಪ ದೊಡ್ಡದಾದ ಹಣ್ಣಿನಲ್ಲಿ ತುಂಬಾ ಬೀಜಗಳಿರುತ್ತವೆ ಈ ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ದಾಳಿಂಬೆ ಹಣ್ಣಿಗಾಗಿ ಈ ಮರವನ್ನು ಬೆಳೆಸುತ್ತಾರೆ. ಸಣ್ಣಗಿದ್ದರೂ ಗಟ್ಟಿಯಾಗಿರುವುದರಿಂದ ವಾಯುವಿಹಾರದ ಕೋಲುಗಳನ್ನು (ವಾಕಿಂಗ್‌ಸ್ಟಿಕ್ಸ್); ಹತಾರಗಳ ಹಿಡಿಗಳು ಮುಂತಾದುವುಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ದಿಂಡಿಗ (ದಿಂಡ್ಲು, ದಿಂಡಲ್, ಬೇಜಲು)

Anogeissus latifolia Wall.

ಸಾಮಾನ್ಯವಾಗಿ ಮೈಸೂರಿನ ಅರಣ್ಯಗಳಲ್ಲೆಲ್ಲಾ ಈ ಮರ ಬೆಳೆಯುತ್ತದೆ ಬೆಟ್ಟಗಳ ತಪ್ಪಲಿನ ಅರಣ್ಯದ ಅಂಚುಗಳಲ್ಲಿ ಹೆಮ್ಮರದಂತೆ ಬೆಳೆದರೂ ಮೈದಾನಗಳ ಒಣ ಹವೆಯ ಪ್ರದೇಶಗಳಲ್ಲಿ ಸಣ್ಣ ಮರದಂತಿರುತ್ತದೆ. ಈ ಮರ 60 ಅಡಿಗಳಷ್ಟು ಎತ್ತರಕ್ಕೆ ಬೆಳೆದು 6 ಅಡಿಗಳಷ್ಟು ಸುತ್ತಳತೆಯನ್ನು ಗಳಿಸುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಕೊಂಬ್ರಿಟೇಸಿ (combretaceae) ಕುಟುಂಬಕ್ಕೆ ಸೇರಿದೆ. ಬೇಸಿಗೆಯಲ್ಲಿ ಎಲೆಯುದುರುವ ಮೈದಾನದ ಕಾಡುಗಳಲ್ಲಿ ಈ ಮರ ಹೆಚ್ಚಾಗಿ ಕಂಡು ಬರುತ್ತದೆ. ಈ ದೊಡ್ಡ ಮರದ ತೊಗಟೆ ಬೂದು ಬಣ್ಣಕ್ಕಿರುತ್ತದೆ. ಎಲೆಗಳು ಉದುರುವುದಕ್ಕೆ ಮುಂಚೆ ಕೆಂಪಾಗಿರುತ್ತವೆ. ಈ ಎಲೆಗಳ ಉದ್ದ ಸುಮಾರು 3 ಇಂಚಿನಷ್ಟಿದ್ದು ಅಗಲ 2 ರಿಂದ 2·5 ಇಂಚಿನಷ್ಟಿರುತ್ತದೆ. ಹೂಗಳು ಹೂಗೊಂಚಲಲ್ಲಿರುತ್ತವೆ. ಈ ಮರ ಸೆಪ್ಟೆಂಬರ್-ಜನವರಿಗಳಲ್ಲಿ ಹೂ ಬಿಡುತ್ತದೆ. ಪುಷ್ಪಪಾತ್ರೆಯಿಂದಾದ ಕೊಳವೆ 1 ಇಂಚಿನಷ್ಟಿದ್ದು ಇವರ ಹಣ್ಣುಗಳು ರೆಕ್ಕೆಗಳನ್ನು ಹೊಂದಿರುತ್ತವೆ. ಇದರ ಹೊರಮರ ಹಳದಿ ಬಣ್ಣಕ್ಕಿದ್ದು ಒಳಮರ ಚಿಕ್ಕದಿದ್ದು ಕಂದು ಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತದೆ. ತೂಕ 1 ಘನ ಅಡಿಗೆ ಒಣಗಿಸಿದ ಮೇಲೆ 57 ರಿಂದ 62 ಪೌಂಡುಗಳಷ್ಟು. ಮರದ ಈ ಪ್ರಭೇದದಲ್ಲಿ 3 ಉಪಜಾತಿಗಳಿವೆ ಎಂದು "ಫ್ಲೋರಾ ಆಫ್ ಬ್ರಿಟಿಷ್ ಇಂಡಿಯಾ"ದಲ್ಲಿ ಹೇಳಲಾಗಿದೆ.

ಉಪಯೋಗಗಳು : ಈ ಮರದಿಂದ ಬರುವ ಅಂಟನ್ನು ಕ್ಯಾಲಿಕೊ ಪ್ರಿಂಟಿಂಗ್‌ನಲ್ಲಿ ಬಳಸುತ್ತಾರೆ. ಎಲೆಗಳಲ್ಲಿ ಬಹಳ ಟ್ಯಾನಿನ್ ಇರುತ್ತದೆ. (ಸುಮಾರು 32%) ಆದ್ದರಿಂದ ಚರ್ಮ ಹದಮಾಡಲು ಬಳಸುತ್ತಾರೆ. ಮರದ ಅಂಟನ್ನು ಔಷಧಿಯಲ್ಲಿ ಜಾಲಿಗೋಂದಿಗೆ ಬದಲಾಗಿಯೂ ಬಳಸುತ್ತಾರೆ. ಮರವನ್ನು ಇದ್ದಿಲಿಗಾಗಿಯೂ, ಸೌದೆಗಾಗಿಯೂ ಹಾಗೂ ವ್ಯವಸಾಯದ ಉಪಕರಣಗಳಿಗಾಗಿಯೂ ಉಪಯೋಗಿಸುತ್ತಾರೆ.

ಧೂಪ (ದೂಪ, ಮಡ್ಡಿ ಧೂಪ) Vateria indica, Linn

ದಕ್ಷಿಣ ಇಂಡಿಯಾದ ಭವ್ಯ ಸುಂದರ ವೃಕ್ಷಗಳಲ್ಲಿ ಧೂಪದ ಮರವೂ ಒಂದಾಗಿದೆ ಪಶ್ಚಿಮ ಘಟ್ಟಗಳಲ್ಲೆಲ್ಲಾ ಬಹಳ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಡಿಪ್ಟಿರೊ ಕಾರ್ಪೇಸಿ (Diptero Carpaceae) ಕುಟುಂಬಕ್ಕೆ ಸೇರಿದೆ. ಒಮ್ಮೊಮ್ಮೆ ಕಾಫಿ ತೋಟಗಳಲ್ಲಿ ಈ ಮರವನ್ನು ಬೆಳೆಸುತ್ತಾರೆ. ಚಿಕ್ಕದಿದ್ದಾಗ ಇದು ಒಳ್ಳೆಯ ನೆರಳು ಕೊಡುವುದಾದರೂ ಇದು ಅಗಾಧವಾಗಿ ಬೆಳೆಯುವ ದೊಡ್ಡ ಮರವಾದ್ದರಿಂದ ಕಾಫಿ ಇದರ ಸನಿಹದಲ್ಲಿ

ಬೆಳೆಯುವುದಿಲ್ಲ. ಇದರ ಕಾಯಿನ ಹೊರತೊಗಟೆಯು ಚರ್ಮದಂತೆ ಒರಟಾಗಿದ್ದು ಕಪ್ಪು ಮಿಶ್ರಿತ ನೀಲಿ ಬಣ್ಣಕ್ಕಿರುತ್ತದೆ. ಇದರ ಮರಕ್ಕೆ ಅಡ್ಡ ಎಳೆಗಳಿರುತ್ತವೆ. ಬಾಳಿಕೆ ಬರುವಂತಹುದಲ್ಲ. ತೇವದಲ್ಲಿದ್ದರೆ ಕೊಳೆಯುತ್ತದೆ. ಇದರ ಬಿಳಿಯ ಹೂಗಳು ಒಂದು ಇಂಚಿನಷ್ಟು ದಪ್ಪವಿದ್ದು ಸುವಾಸನಾಭರಿತವಾಗಿರುತ್ತವೆ.

ಉಪಯೋಗಗಳು : ಈ ಮರದಿಂದ ಬರುವ ಗುಗ್ಗಳದಂತಹ ಅಂಟನ್ನು ಧೂಪವೆಂದು ಕರೆಯುತ್ತಾರೆ. ಇದನ್ನು ಹಾಲುಮಡ್ಡಿಯಂತೆ ದೇವಸ್ಥಾನಗಳಲ್ಲಿ ಒಳ್ಳೆಯ ವಾಸನೆ ಬರಲು ಉಪಯೋಗಿಸುತ್ತಾರೆ. ಇತ್ತೀಚೆಗೆ ಬಣ್ಣಗಳಿಗೂ, ಮೆರುಗೆಣ್ಣೆಗಳಿಗೂ (Varnish) ಈ ಅಂಟನ್ನು ಬೆರೆಸುತ್ತಾರೆ. ಇದರ ಬೀಜದಿಂದ ಬರುವ ಎಣ್ಣೆಯನ್ನು "ಧೂಪದ ಬತ್ತಿ" ಎನ್ನುವ ಮೇಣದ ಬತ್ತಿಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಇವು ನಿಧಾನವಾಗಿ ಪ್ರಕಾಶಮಾನವಾಗಿ ಉರಿಯುತ್ತವೆ. ದೀಪಗಳಿಗೂ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ. ಔಷಧಿಯಲ್ಲೂ ಈ ಅಂಟನ್ನೂ, ಎಣ್ಣೆಯನ್ನೂ ಉಪಯೋಗಿಸುತ್ತಾರೆ.

ದೊಣ್ಣೆಮುಳ್ಳಿನ ಜಾಲಿಮರ (Acacia lantorum Willd.)

ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ಈ ಮರ ಬೆಳೆಯುತ್ತದೆಂದು ಹೇಳಲ್ಪಟ್ಟಿದೆ. ಇದೊಂದು ಸಣ್ಣ ಪೊದೆಯಂತಿರುತ್ತದೆ. ಆದರೆ ಒಮ್ಮೊಮ್ಮೆ ಇದರ ಬುಡವು 6 ಅಡಿಗಳಿಗಿಂತಲೂ ಹೆಚ್ಚು ದಪ್ಪನಾಗಿರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಮಣ್ಣಿನ ಸವೆತವನ್ನು ತಡೆಯಲು ಈ ಮರವನ್ನು ಬೆಟ್ಟದ ಇಳಿಜಾರು ಪ್ರದೇಶಗಳಲ್ಲಿ ಬೆಳೆಸಲಾಗುತ್ತದೆ.

ಉಪಯೋಗಗಳು : ಗುಡಾರಗಳ ಗೂಟಗಳಿಗಾಗಿಯೂ, ಹತಾರಗಳ ಹಿಡಿಗಳಿಗಾಗಿಯೂ ಈ ಮರವನ್ನು ಉಪಯೋಗಿಸಲಾಗುತ್ತದೆ. ಈ ಮರದ ಎಲೆಗಳನ್ನು ಆಡುಗಳು ತಿನ್ನುತ್ತವೆ.

ದೊಡ್ಡಮರ (Ailanthus excelsa Roxb.)

ಸುಪ್ರಸಿದ್ಧ ಸಸ್ಯಶಾಸ್ತ್ರಜ್ಞರಾದ ವಿಲಿಯಂ ರಾಕ್ಸ್ ಬರ್ಗ್ ಅವರು 1795 ರಲ್ಲಿ ಮೊಟ್ಟ ಮೊದಲಬಾರಿಗೆ ಈ ಮರದ ಬಗ್ಗೆ ಮಾಹಿತಿ ನೀಡಿದರು. ಗುಜರಾತ್ ಹಾಗೂ ಬಿಹಾರಗಳಲ್ಲಿ ಬೆಳೆಯುವ ಈ ಮರವು ರಾಮನಗರದ ಹತ್ತಿರವೂ ದೊರೆಯುತ್ತದೆ. ಸುಮಾರು 60–80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರವು 6 ರಿಂದ 8 ಅಡಿಗಳಷ್ಟು ಸುತ್ತಳತೆಯನ್ನು ಗಳಿಸಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಿಮಾರುಬೇಸಿ (Simaroubaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=62 (Patak et al. 1949). ಈ ಮರದ ತೊಗಟೆಯು ಒರಟಾಗಿದ್ದು ಬೂದು ಬಣ್ಣಕ್ಕಿರುತ್ತದೆ. ಬಹಳ ಬೇಗ ಬೆಳೆಯುವ, ಜನವರಿ ಫೆಬ್ರುವರಿ ತಿಂಗಳುಗಳಲ್ಲಿ ಎಲೆಗಳು ಉದುರುವ ಈ ಮರದ ಎಲೆಗಳು 2 ರಿಂದ 3 ಅಡಿ ಉದ್ದವಾಗಿರುತ್ತವೆ. ಹೂಗಳು ಸ್ವಲ್ಪ ಹಳದಿ ಬಣ್ಣಕ್ಕಿರುತ್ತವೆ. ಇದರ ಕಾಯಿಗಳು ತೆಳುವಾಗಿದ್ದು 2-2½ ಇಂಚುಗಳಷ್ಟು ಉದ್ದವಾಗಿರುತ್ತವೆ ಎರಡು ಕಡೆಯ ತುದಿಗಳೂ ಮೊನಚಾಗಿರುತ್ತವೆ ಕಾಯಿಗಳಲ್ಲಿ ಒಂದೊಂದು ಬೀಜಗಳು ಇರುತ್ತವೆ. ಇದರ ಮರ ಬೆಳ್ಳಗಿದ್ದು ಬಹು ಹಗುರವಾಗಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 28 ಪೌಂಡುಗಳು.



ದೊಡ್ಡಮರ

ಉಪಯೋಗಗಳು : ಆಟದ ಸಾಮಾನುಗಳನ್ನು ಮಾಡಲೂ, ಮೀನಿನ ಬಲೆಯ ಮರದ ಪೆಟ್ಟಿಗೆಗಳನ್ನು ಮಾಡಲೂ, ತಮಟೆಗಳ ಮರದ ಭಾಗ ಮಾಡಲೂ ಉಪಯೋಗಿಸುತ್ತಾರೆ. ಹಿಂದೆ ಈ ಮರವನ್ನು ಕತ್ತಿಗಳ ಹಿಡಿಗಳನ್ನು ಮಾಡಲು ಉಪಯೋಗಿಸುತ್ತಿದ್ದರು. ಈ ಮರದ ತೊಗಟೆಯನ್ನೂ, ಎಲೆಗಳನ್ನೂ ಜ್ವರನಿವಾರಕವಾಗಿ ಉಪಯೋಗಿಸುತ್ತಾರೆ.

ದೊಡ್ಡಸೊಲ್ತಿ (Asteriastigma macrocarpa Bedd.)

ಈ ಮರವು ಮೈಸೂರಿನಲ್ಲಿದೆ ಎಂದು ಕೆಲವರು ಹೇಳಿದ್ದಾಗ್ಯೂ ನಮ್ಮ ಸಂಸ್ಥಾನದಲ್ಲಿ ಈ ಮರವಿರುವ ವಿಷಯದಲ್ಲಿ ನಂಬಲರ್ಹವಾದ ಮಾಹಿತಿಗಳು ದೊರೆತಿಲ್ಲ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಬಿಕ್ಸೇಸಿ (Bixaceae) ಕುಟುಂಬಕ್ಕೆ ಸೇರಿದೆ. ಇದು ದೊಡ್ಡ ಕೆಂಪು ಹಣ್ಣುಗಳನ್ನು ಬಿಡುವ ಸುಂದರವೃಕ್ಷ.

ಉಪಯೋಗಗಳು : ಮಾಹಿತಿಯಿಲ್ಲ .

ದೇವಗರಿಗೆ (ದಿವಗರಿಗೆ) Garcinia xanthochymus. Hook.f.

ಈ ಮರವು ಸಮುದ್ರಮಟ್ಟಕ್ಕೆ 3000 ದಿಂದ 5000 ಅಡಿಗಳಷ್ಟು ಎತ್ತರದ ಮಲೆನಾಡಿನ ಪ್ರದೇಶಗಳಲ್ಲೆಲ್ಲಾ ಚೆನ್ನಾಗಿ ಬೆಳೆಯುತ್ತದೆ. ಮೈಸೂರಲ್ಲದೆ ಮಹಾರಾಷ್ಟ್ರ ಒರಿಸ್ಸಾ, ನೀಲಗಿರಿ, ಬಂಗಾಳ ಮತ್ತು ಅಂಡಮಾನ್ ದ್ವೀಪಗಳಲ್ಲೂ ಈ ಮರ ಬೆಳೆಯುತ್ತದೆ.



ದೇವಗರಿಗೆ

ಸಸ್ಯಶಾಸ್ತ್ರ ವಿವರಣೆ: ಈ ಮರವು ಗಟ್ಟಿಫೆರಿ (Guttiferae) ಕುಟುಂಬಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=80 (Krishnaswamy etal. 1954). ಮಧ್ಯಮ ಎತ್ತರದ ಈ ನಿತ್ಯಹರಿದ್ವರ್ಣದ ಈ ವೃಕ್ಷವು ದೊಡ್ಡದಾಗಿ, ಒರಟಾಗಿ ಹೊಳಪುಳ್ಳ ಎಲೆಗಳನ್ನು ಹೊಂದಿರುತ್ತದೆ. ಎಲೆಗಳು 10 ರಿಂದ 15 ಇಂಚಿನಷ್ಟು ಉದ್ದವಿದ್ದು 1.5 ರಿಂದ 4 ಇಂಚು ಅಗಲವಿರುತ್ತವೆ. ಇದರ ಹಣ್ಣುಗಳು ಮಾಗಿದ ಮೇಲೆ ಹಳದಿ ಬಣ್ಣಕ್ಕಿದ್ದು ಮೃದುವಾಗಿರುತ್ತವೆಯಲ್ಲದೆ 2 ರಿಂದ 3.5 ಇಂಚು ಸುತ್ತಳತೆಯನ್ನು ಹೊಂದಿರುತ್ತದೆ. ಒಂದು ಕಡೆ ಮಾವಿನಕಾಯಿಯ ಮೂತಿಯಂತೆ ಮೂತಿಯಿರುತ್ತದೆ. ಬೀಜಗಳ ಸಂಖ್ಯೆ 1 ರಿಂದ 4 ಆಗಿರುತ್ತದೆ. ಈ

ವೃಕ್ಷವು ಮೊದಲಿಗೆ ಭಾರತ ಮತ್ತು ಬರ್ಮಾಗಳಲ್ಲಿ ಇದ್ದಿತೆಂದು ಭಾವಿಸಲಾಗಿದೆ ಇದರ ಬೀಜಗಳು ಸುಲಭವಾಗಿ ಮೊಳೆಯುತ್ತವೆ. ಸಸಿಗಳನ್ನು ಪಡೆಯಬಹುದು

ಉಪಯೋಗಗಳು : ಇದರ ಹಣ್ಣಿನ ತಿರುಳನ್ನು ಹುಣಿಸೆಹಣ್ಣಿನಂತೆ ಸಾರು ಮಾಡಲೂ, ವಿನೆಗಾರ್ (Vinegar) ತಯಾರಿಕೆಯಲ್ಲೂ ಬಳಸಬಹುದು.

ನಟಕ್ರೋಡು (Aleurites moluccana Willd.)

ಇದು ಮೊದಲು ಮಲಯ ಮತ್ತು ಪ್ರಶಾಂತ ಸಾಗರದ ದ್ವೀಪಗಳಲ್ಲಿ ಕಾಣ ಬರುತ್ತಿತ್ತು. ಈಗ ದಕ್ಷಿಣ ಭಾರತ ಮತ್ತು ಅಸ್ಸಾಪ್ರಾಂತ್ಯಗಳಲ್ಲೆಲ್ಲಾ ಬೆಳೆಯುತ್ತದೆ ಇದನ್ನು ಬೆಳಗಾಂ ಅಕ್ರೋಟ ಎಂದೂ ಕರೆಯುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಯುಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=44 (Stocker 1946). ಈ ನಿತ್ಯಹರಿದ್ವರ್ಣದ ವೃಕ್ಷವು 40 ರಿಂದ 60 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಎಲೆಗಳು ತ್ರಿಕೋಣಾಕೃತಿ ಇಲ್ಲವೇ ಚತುರ್ಭುಜಾಕೃತಿ ಹೊಂದಿದ್ದು 3 ರಿಂದ 5 ದಂಡೆಗಳನ್ನು ಹೊಂದಿರುತ್ತವೆ. ಚಿಕ್ಕವಿದ್ದಾಗ ಬಿಳಿ ತುಪ್ಪಳವನ್ನು ಹೊಂದಿರುತ್ತವೆ. ಹೂಗಳು ಮಂಕಾದ ಬಿಳಿ ಬಣ್ಣವನ್ನು ಹೊಂದಿರುತ್ತವೆ. ಹಣ್ಣುಗಳು ದೊಡ್ಡವಿದ್ದು ಎರಡು ಬೀಜಗಳನ್ನು ಹೊಂದಿರುತ್ತವೆ. ಇವರ ಬೀಜಗಳನ್ನು ನೆಟ್ಟರೆ 4 ರಿಂದ 6 ವಾರಗಳಲ್ಲಿ ಮೊಳೆಯುತ್ತವೆ. ಸಸಿಗಳನ್ನು ಫಲವತ್ತಾದ ಭೂಮಿಯಲ್ಲಿ 25, 30 ಅಡಿಗಳಷ್ಟು ಅಂತರದಲ್ಲಿ ಹಾಕಬೇಕು.

ಉಪಯೋಗಗಳು : ಈ ಬೀಜಗಳಿಂದ ತೆಗೆದ ಎಣ್ಣೆಯನ್ನು ಬಣ್ಣಗಳಿಗೆ ಮತ್ತು ವಾರ್ನಿಷ್‌ಗಳಿಗೆ ಬೆರೆಸುತ್ತಾರೆ. ಸ್ಯಾಂಡ್‌ವಿಚ್ ದ್ವೀಪನಿವಾಸಿಗಳು ಇದರ ಬೀಜಗಳನ್ನು ಬಿದಿರುಕೊಳವೆಗಳಲ್ಲಿ ಸಾಲಾಗಿ ಜೋಡಿಸಿಕೊಂಡು ಮೇಣದ ಬತ್ತಿಗಳಂತೆ ಮನೆಯಲ್ಲಿ ಉರಿಸಿಕೊಳ್ಳುತ್ತಾರೆ. ಜಾವಾದಲ್ಲಿ ಈ ಬೀಜಗಳನ್ನು ಹುರಿದು ತಿನ್ನುತ್ತಾರೆ. ಇದರ ಎಣ್ಣೆಯು ವಿರೇಚನ ಗುಣವನ್ನು ಹೊಂದಿದೆ. ಸೋಪು ಮಾಡಲೂ ಇದನ್ನು ಬಳಸಬಹುದು. ಈ ಮರ ಹಗುರವಾಗಿದ್ದು ಬೆಂಕಿ ಕಡ್ಡಿಗಳಿಗೆ ಅತ್ಯಂತ ಸೂಕ್ತವಾಗಿದೆ.

ನಾಜಿನಕೊರಡು (ಹೆಮುಷ್ಟಿ, ಕಸರ್ಕ) Strychnos nux-vamica L.


ಮೈಸೂರಿನ ಕೆಲವೆಡೆಗಳಲ್ಲೂ, ಕೊಡಗು ಜಿಲ್ಲೆಯಲ್ಲೂ ಬೆಳೆಸಲಾಗಿರುವ ಈ ಮರವು ಆಂಧ್ರಪದೇಶ, ಬಿಹಾರ್, ಮದರಾಸು ಮತ್ತು ಒರಿಸ್ಸಾಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲೊಗಾನಿಯೇಸಿ (Loganiaceae) ಕುಟುಂಬಕ್ಕೆ ಸೇರಿದೆ. ಇದೊಂದು ಮಧ್ಯಮ ಎತ್ತರದ ನಿತ್ಯಹರಿದ್ವರ್ಣ ವೃಕ್ಷ. ಆಕಾರ, ಗಾತ್ರಗಳಲ್ಲಿ ಇದರ ಹಣ್ಣುಗಳು ಸಣ್ಣ ಸೇಬಿನಂತಿರುತ್ತವೆ. ಹಕ್ಕಿಗಳು ಇದರ ತಿರುಳನ್ನೂ, ಕುದುರೆಗಳು ಇದರ ಎಲೆಗಳನ್ನೂ ತಿಂದರೆ ಸಾಯುತ್ತವೆಂದು ಹೇಳುತ್ತಾರೆ. ಇದರ ಮರ ಗಟ್ಟಿಯಾಗಿದ್ದು ಕಂದುಮಿಶ್ರ ಬೂದು ಬಣ್ಣಕ್ಕಿರುತ್ತದೆ.

ಉಪಯೋಗಗಳು : ಇದರ ಬೀಜಗಳಿಂದ ಬರುವ ಔಷಧಿಯಾದ "ನಕ್ಸ್ ವೊಮಿರ್" ಅನ್ನು ಪಾರ್ಶ್ವವಾಯು ತಗುಲಿದಾಗ ಹಾಗೂ ನರಗಳ ದೌರ್ಬಲ್ಯತೆಗಾಗಿ ಉಪಯೋಗಿಸುತ್ತಾರೆ. ಮಾದಕ ದ್ರವ್ಯಗಳು ವಿಷವಾಗದಂತೆ ತಡೆಯಲು ಕೆಲವು ಕಡೆ ಇದರ ಬೀಜಗಳನ್ನು ಹಾಕುತ್ತಾರೆ. ಇದರ ಬೇರಿನ ಗಂಧದಿಂದ ಬಳಲಿಕೆ ತೊಡೆಯಬಹುದೆಂಬ ನಂಬಿಕೆ ಇದೆ.

ನಂದಿ ಮರ (Lagerstroemia lanceolata Wall.)


ಉತ್ತರ ಇಂಡಿಯಾದಲ್ಲಿ "ಬೆಂಟೀಕ್" ಎಂದು ಕರೆಸಿಕೊಳ್ಳುವ ಕರ್ನಾಟಕದ ನಂದಿಮರವೇ ಇದು. ಮಲೆನಾಡು, ಕೊಡಗುಗಳಲ್ಲಿ ವಿಶೇಷವಾಗಿ ಬೆಳೆಯುವ ಈ ಮರವು ಮದರಾಸು, ಮಹಾರಾಷ್ಟ್ರಗಳಲ್ಲೂ ಸ್ವಲ್ಪ ಬೆಳೆಯುತ್ತದೆ.



ನಂದಿ ಮರ

ಸಸ್ಯಶಾಸ್ತ್ರ ವಿವರಣೆ : ಈ ಮರವು ಲಿಥ್ರೇಸಿ (Lythraceae) ಕುಟುಂಬಕ್ಕೆ ಸೇರಿದೆ. ದೊಡ್ಡದಾಗಿ ಬೆಳೆಯುವ ಈ ಮರದ ತೊಗಟೆಯು ಬೆಳ್ಳಗಿದ್ದು ನ್ಮೃದುವಾಗಿ

ಇರುತ್ತದೆ. ಆಗಾಗ್ಗೆ ಸಣ್ಣ ಸಣ್ಣ ಚೂರುಗಳಾಗಿ ಉದುರಿ ಹೋಗುತ್ತದೆ. ಮೃದುವಾಗಿರುವ ಈ ಮರದ ಎಲೆಗಳ ಕೆಳಭಾಗವು ಬೆಳ್ಳಗೆ ಇರುತ್ತದೆ. ಎಳೆಯ ಎಲೆಗಳು ಕೆಂಪಗಿರುತ್ತವೆ. ಸಂಸ್ಥಾನದ ಅರಣ್ಯದ ಕಾದಿರಿಸಿದ ಮರಗಳಲ್ಲಿ ಇದೂ ಒಂದು. ಒಳಮರವು ಕಂಪು ಮಿಶ್ರಿತ ಹಳದಿ ಬಣ್ಣವನ್ನು ಹೊಂದಿರುತ್ತದೆ. ಆದರೆ ಮಧ್ಯಭಾಗ ಸ್ವಲ್ಪ ಕೆಂಪಗಿರುತ್ತದೆ. ಎಳೆಗಳು ಚೆನ್ನಾಗಿ ಹೆಚ್ಚು ಶಕ್ತಿಯುಳ್ಳದ್ದಾಗಿರುತ್ತವೆ. ತೂಕವು ಘನ ಅಡಿಯೊಂದಕ್ಕೆ 41 ರಿಂದ 48 ಪೌಂಡುಗಳು. ಕಡಿದ ಮರಗಳನ್ನು ಅರಣ್ಯ ಪ್ರದೇಶದಲ್ಲೇ ಬಹಳ ಕಾಲ ಬಿಟ್ಟಲ್ಲಿ ತೇವಸಂಪರ್ಕದಿಂದ ಬೆಂಡಾಗುವ ಹಾಗೂ ಕೊಳೆಯುವ ಸಂಭವವುಂಟು. 75 ರಿಂದ 100 ಇಂಚು ಮಳೆ ಬೀಳುವ ಬೆಟ್ಟಗುಡ್ಡಗಳ ಕಣಿವೆ ಪ್ರದೇಶಗಳಲ್ಲಿ ಬೀಜಗಳನ್ನು ನೆಟ್ಟು ನಂದಿಮರಗಳನ್ನು ಬೆಳೆಸಬಹುದು.



ನಂದಿಮರದ ಅಡ್ಡಸೀಳಿನ ಒಂದು ಭಾಗ.

ಉಪಯೋಗಗಳು : ನಂದಿಮರವು ಬಹಳ ಕಾಲ ಬಾಳಿಕೆ ಬರುವಂತಹುದಾಗಿದೆ. ಮಡಿಕೇರಿಯ ಅರಮನೆ ಭಾವಣೆಯಲ್ಲಿರುವ ದೊಡ್ಡ ಮರದ ತೀರುಗಳು ನಂದಿಮರದಿಂದಲೇ ಮಾಡಿದುವುಗಳಾಗಿವೆ. ಕೊಡಗು, ಹಾಸನ ಮುಂತಾದ ಕಡೆಗಳಲ್ಲೆಲ್ಲಾ ಮನೆಕಟ್ಟಲು ಈ ಮರವನ್ನೇ ಬಳಸಲು ಇಷ್ಟಪಡುವುದರಿಂದ ಈಗ ಈ ಮರದ ಬೆಲೆಯು ಬಹಳ ಜಾಸ್ತಿಯಾಗಿದೆ. ದೋಣಿಗಳು ಮತ್ತು ಹಡಗುಗಳನ್ನು ಕಟ್ಟಲೂ ಈ ಮರವನ್ನು ಉಪಯೋಗಿಸುತ್ತಾರೆ.



ನಾಗಲಿಂಗ

ನಾಗಲಿಂಗ (Couroupita guianensis Aubl.)

ಸೈಂಟ್ ವಿನ್ಸೆಂಟ್ ಬೆಂಗಳೂರಿನ ಲಾಲ್‌ಬಾಗ್‌ಗೆ ಈ ಮರವನ್ನು ತಂದನು. ಈಗ ಈ ಮರವು ನಮ್ಮ ಸಂಸ್ಥಾನದ ಎಲ್ಲಾ ಉದ್ಯಾನಗಳಲ್ಲೂ ಕಂಡುಬರುತ್ತದೆ. ಮೈಸೂರಿನ ಮೃಗಾಲಯ, ಮಾನಸಗಂಗೋತ್ರಿಯ ಸಸ್ಯಶಾಸ್ತ್ರ ವಿಭಾಗದ ಕೈತೋಟ ಮುಂತಾದ ,ಕಡೆಗಳಲ್ಲೆಲ್ಲಾ ಈ ಸುಂದರ ವೃಕ್ಷವನ್ನು ನಾವು ನೋಡಬಹುದು. ಈ ಜಾತಿಯ ಸುಮಾರು 15 ಪ್ರಭೇದಗಳು ದಕ್ಷಿಣ ಅಮೆರಿಕ ಮತ್ತು ವೆಸ್ಟ್ ಇಂಡೀಸ್‌ಗಳಲ್ಲೂ ಕಂಡುಬಂದಿವೆ. ಈ ಮರವು ಉಷ್ಣವಲಯದ ಅಮೆರಿಕದ ಮೂಲ ನಿವಾಸಿ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಲೆಸಿಥಿಡೇಸಿ (Lecythidaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=36$ (Banerji 1950 a). ಕಾಂಡದ ಮೇಲ್ಭಾಗದಲ್ಲೂ, ಮುಖ್ಯ ರೆಂಬೆಗಳ ಮೇಲೂ ಗುಂಪು ಗುಂಪಾಗಿ ಹೂಗಳನ್ನು ಬಿಡುವ ಈ ಮರವು ಪುಷ್ಪಭರಿತವಾಗಿದ್ದಾಗ ಬಹಳ ಸುಂದರವಾಗಿರುತ್ತದೆ. ಹೂಗಳಿಗೆ ಗುಲಾಬಿ ಮಿಶ್ರಿತ ಬಿಳಿ ಹಳದಿಬಣ್ಣ ಇರುತ್ತದೆ. ಇದರ ಕೇಸರಗಳೆಲ್ಲಾ ಒಂದುಗೂಡಿ ಸಂಯೋಗ ಹೊಂದಿ ಒಂದು ಹೆಡೆಯ ಆಕೃತಿಯನ್ನು ಹೊಂದಿ ಶಲಾಕೆಯ ಮೇಲೆ ಬಗ್ಗಿರುತ್ತವೆ. ಇದರ ಹಣ್ಣುಗಳು ಕಂದು ಮಿಶ್ರಿತ ಕಪ್ಪು ಬಣ್ಣವನ್ನು ಹೊಂದಿದ್ದು ಹೆರಳೆಕಾಯಿಗಿಂತ ಸ್ವಲ್ಪ ದಪ್ಪವಾಗಿರುತ್ತವೆ. ಈ ಹಣ್ಣಿಗೆ ದಪ್ಪವಾಗಿರುವ ಹೊರಹೊದಿಕೆ ಇದ್ದು ಒಳಗೆ ಸ್ವಲ್ಪ ಹುಳಿವಾಸನೆ ಹೊಂದಿರುವ ತಿರುಳು ಇರುತ್ತದೆ. ಇದರಲ್ಲಿ ಅನೇಕ ಬೀಜಗಳಿರುತ್ತವೆ. ಈ ಹಣ್ಣುಗಳು ಮಾಗಬೇಕಾದರೆ 8 ರಿಂದ 9 ತಿಂಗಳುಗಳಷ್ಟು ಕಾಲ ಬೇಕು. ಈ ಮರವನ್ನು ಬೀಜಗಳಿಂದ ಬೆಳೆಸಿಕೊಳ್ಳಬಹುದು.


ಉಪಯೋಗಗಳು : ಇದರ ಹೂಗಳನ್ನು ಅಲಂಕಾರಕ್ಕಾಗಿ ಮುಡಿದುಕೊಳ್ಳುತ್ತಾರೆ. ಈ ಮರವನ್ನು ನಮ್ಮ ದೇಶದ ಉದ್ಯಾನವನಗಳಲ್ಲಿ ಅಲಂಕಾರ ವೃಕ್ಷವಾಗಿ ಬೆಳೆಸುತ್ತಾರೆ. ನೀಗ್ರೋಗಳು ಇದರ ಹಣ್ಣಿನ ತಿರುಳನ್ನು ತಿನ್ನುತ್ತಾರೆ.

ನಾಗಸಂಪಿಗೆ (ನಾಗಚಂಪ, ಕಸರ) Mesua ferrea Linn.

ಈ ಮರವು ಪೂರ್ವ ಹಿಮಾಲಯದಲ್ಲೂ, ಅಸ್ಸಾಂ, ಬಂಗಾಳ, ತಿರುವಾಂಕೂರು ಹಾಗೂ ಅಂಡಮಾನ್‌ಗಳಲ್ಲೂ ಹೇರಳವಾಗಿ ಬೆಳೆಯುತ್ತದೆ. ಮೈಸೂರಿನ ಪಶ್ಚಿಮ ಘಟ್ಟಗಳಲ್ಲಿ ಮತ್ತು ಮಲೆನಾಡಿನ ಇತರ ಪ್ರದೇಶಗಳಲ್ಲಿಯೂ ಇದು ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ಈ ಮರದ ಎಲೆಗಳು ಅಭಿಮುಖವಾಗಿದ್ದು ಅಗಲವಾಗಿರುವುದ


ಕ್ಕಿಂತಲೂ ಹೆಚ್ಚು ಉದ್ದವಾಗಿರುತ್ತವೆ. ಹೂಗಳು ಶುಭ್ರ ಶ್ವೇತ ವರ್ಣವನ್ನು ಹೊಂದಿದ್ದು ಒಳ್ಳೆಯ ವಾಸನೆಯನ್ನು ಹೊಂದಿರುತ್ತವೆ. 2 ರಿಂದ 3 ಇಂಚು ದಪ್ಪವಿರುತ್ತವೆ. ಇದರ ವರ್ಣತಂತುಗಳ ಸಂಖ್ಯೆ 2n=32 (Tixier 1953).



ನಾಗಸಂಪಿಗೆ

ಉಪಯೋಗಗಳು : ಈ ಮರವನ್ನು ಆಂಗ್ಲರು ಕಬ್ಬಿಣದ ಮರ ಎಂದು ಕರೆಯುತ್ತಿದ್ದರು. ಇದಕ್ಕೆ ಮುಖ್ಯ ಕಾರಣವೆಂದರೆ ಈ ಮರದ ಅಸಾಧಾರಣ ತೂಕ. ಘನ ಅಡಿಯೊಂದಕ್ಕೆ 70 ಪೌಂಡುಗಳಷ್ಟು ತೂಗುವ ಈ ಮರದ ಸಣ್ಣ ಚೂರನ್ನು ನೀರಿಗೆ ಹಾಕಿದರೂ ಅದು ಮುಳುಗಿ ಹೋಗುತ್ತದೆ. ಒಳಮರ ಸ್ವಲ್ಪ ಕೆಂಪಗಿರುತ್ತದೆ. ಈ ಮರವನ್ನು ರೈಲ್ವೆ ಸ್ಲೀಪರುಗಳನ್ನು ಮಾಡಲೂ, ಕಂಬಗಳನ್ನು ಮತ್ತು ಸೇತುವೆಗಳನ್ನೂ ಮಾಡಲೂ ಉಪಯೋಗಿಸುತ್ತಾರೆ. ಬೀಜಗಳಿಂದ ತೆಗೆದ ಎಣ್ಣೆಯನ್ನು ಗಾಯಗಳು ಮಾಯುವುದಕ್ಕೂ, ಸಂಧಿವಾತಗಳ ನಿವಾರಣೆಗೂ ಉಪಯೋಗಿಸುತ್ತಾರೆ.

ಮನೆಕಟ್ಟಲು ಈ ಮರವು ಬಹಳ ಒಳ್ಳೆಯದು. ಆದರೆ ಮಲೆನಾಡಿನ ಹಳ್ಳಿಗಳಲ್ಲಿ ಈ ಮರದ ಸಾಮಾನುಗಳನ್ನು ಮನೆಗೆ ಬಳಸಿದರೆ ಅದರ ವಾಸನೆಯಿಂದಾಗಿ ಹಾವುಗಳು ಮನೆಗೆ ಬರುತ್ತವೆಂಬ ಮೂಢನಂಬಿಕೆ ಇದೆ. ಆದ್ದರಿಂದ ಈ ಮರವನ್ನು ಬಳಸಲು ಹೆದರುತ್ತಾರೆ. ಹಣ್ಣನ್ನು ಕೆಲವರು ತಿನ್ನುತ್ತಾರೆ ಹೂಗಳನ್ನೂ, ಮೊಗ್ಗುಗಳನ್ನೂ ಸೌಂದರ್ಯ ಸಾಧನಗಳನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಕೇಸರಗಳನ್ನು (stamens) ಒಳ್ಳೆಯ ವಾಸನೆ ಪಡೆಯಲು ಹತ್ತಿಯೊಡನೆ ಬೆರಸಿ ದಿಂಬುಗಳಿಗೆ ಹಾಕುತ್ತಾರೆ. ಇತ್ತೀಚೆಗೆ ಈ ಮರದ ಬೀಜಗಳ ಎಣ್ಣೆಯನ್ನು ಸುಂಗಧಭರಿತ ಮೈಸಾಬೂನುಗಳ ತಯಾರಿಕೆಯಲ್ಲೂ ಉಪಯೋಗಿಸುತ್ತಿದ್ದಾರೆ.



ನಾಗಸಂಪಿಗೆ ಮರದ ಅಡ್ಡಸೀಳಿನ ಒಂದು ಭಾಗ.

ನಾಯಿಬೇಲ (Limonia acidissima L.)

ಮೈಸೂರಿನ ಒಣಹವೆಯ ಅರಣ್ಯಗಳಲ್ಲೂ, ನಂದೀದುರ್ಗದಲ್ಲೂ ಈ ಸಣ್ಣ ಮರ ಬೆಳೆಯುತ್ತದೆ. ಬಹಳ ಕಾಲದವರೆಗೂ ಪೊದೆಯಂತೆಯೇ ಬೆಳೆಯುತ್ತದೆ.


ಸಸ್ಯಶಾಸ್ತ್ರ ವಿವರಣೆ : ಈ ಮರವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ. ಮೈಯೆಲ್ಲಾ ಮುಳ್ಳುಗಳುಳ್ಳ ಈ ಮರದ ಎಲೆಗಳ ತೊಟ್ಟು ರೆಕ್ಕೆಯಂತೆ ಅಗಲವಾಗಿರುತ್ತದೆ. ಈ ಮರದ ಹಣ್ಣು ಬಹಳ ಹುಳಿಯಾಗಿರುತ್ತದೆ. ಮರ ಗಟ್ಟಿಯಾಗಿದ್ದು ಘನ ಅಡಿಯೊಂದಕ್ಕೆ 59 ಪೌಂಡ್ ತೂಗುತ್ತದೆ.

ಉಪಯೋಗಗಳು : ಈ ಮರವು ಹಳದಿ ಬಣ್ಣಕ್ಕಿದ್ದು ವಿಷನಿವಾರಕ ಗುಣವನ್ನು ಹೊಂದಿದೆಯೆಂದು ಹೇಳುತ್ತಾರೆ. ಸೌದೆಗಾಗಿ ಈ ಮರವನ್ನು ಉಪಯೋಗಿಸುತ್ತಾರೆ. ಹಣ್ಣನ್ನು ಔಷಧಿಗಾಗಿ ಉಪಯೋಗಿಸುತ್ತಾರೆ.

ನಿರಡಿವಿಟ್ಟೆಲುಮರ (Hydnocarpus laurifolia) (Dennst.) Sleumer (Syn. Hydnocarpus Wightiana Blume.)

ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಈ ಮರವು ಮಲಬಾರ್ ಮತ್ತು ತಿರುವಾಂಕೂರು ಪ್ರದೇಶಗಳಲ್ಲಿಯೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಫ್ಲಕೋರ್ಷಿಯೇಸಿ (Flacourtiaceae) ಕುಟುಂಬಕ್ಕೆ ಸೇರಿದೆ. ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿವೆ. ಅಂಡಾಕೃತಿಯಿಂದ ಹಿಡಿದು ಈಟಿಯ ಆಕೃತಿಯವರೆಗೆ ಅನೇಕ ರೂಪಗಳನ್ನು ಹೊಂದಿರುತ್ತವೆ. ಎಲೆಗಳ ಸರಾಸರಿ ಉದ್ದ ಅಗಲಗಳು 8 × 3 ಇಂಚುಗಳು. ಹೂಗಳ ಬಣ್ಣ ಗಿಳುಪಾಗಿರುತ್ತದೆ. ಹಣ್ಣುಗಳು ದುಂಡಾಗಿದ್ದು ಸೇಬಿನ ಹಣ್ಣಿನ ಗಾತ್ರಕ್ಕಿರುತ್ತವೆ.



ನಿರಡಿವಿಟ್ಟೆಲುಮರದ ಅಡ್ಡ ಸೀಳಿನ ಒಂದು ಭಾಗ.

ಉಪಯೋಗಗಳು : ಬೀಜಗಳಿಂದ ತೆಗೆದ ಎಣ್ಣೆಯನ್ನು ಕುಷ್ಠರೋಗ ಹಾಗೂ ಇತರ ಚರ್ಮರೋಗಗಳಿಗೂ, ಹುಣ್ಣುಗಳಿಗೂ ಔಷಧಿ ರೂಪದಲ್ಲಿ ಉಪಯೋಗಿಸುತ್ತಾರೆ. ಬಹಳ ದಪ್ಪವಾಗಿ ಬೆಳೆದರೂ ಈ ಮರದ ಗುಣ, ಉಪಯೋಗಗಳ ಬಗ್ಗೆ ಮಾಹಿತಿ ದೊರಕಿಲ್ಲ. ಈ ಮರದ ಅಡ್ಡ ಸೀಳುವಿಕೆ ಚಿತ್ರದಲ್ಲಿ ತೋರಿಸಿರುವಂತೆ ಇರುತ್ತದೆ.

ನಿರುವುಲಿ (ನಾರ್ವಿಲ್ಲಿ, ಸರಿವುಲಿ ಮರ.) Cordia gharaf (Forsk.) Ehrenb. & Asch. (Syn. Cordia rothii Roem. & Schm.)

ಮೈಸೂರಿನ ಒಣಹವೆಯುಳ್ಳ ಪ್ರದೇಶಗಳಲ್ಲಿ ಹಾಗೂ ಸಾವನದುರ್ಗ ಮತ್ತು ಬನ್ನೇರು ಘಟ್ಟಗಳಲ್ಲಿ ಇದು ಬೆಳೆಯುತ್ತದೆ. ರಾಜಾಸ್ಥಾನ, ಪಂಜಾಬು, ಆಂಧ್ರ ಪ್ರದೇಶ ಮತ್ತು ಗುಜರಾತ್ ಪ್ರದೇಶಗಳಲ್ಲೆಲ್ಲಾ ಇದು ಬೆಳೆಯುತ್ತದೆ

ಸಸ್ಯಶಾಸ್ತ್ರ ವಿವರಣೆ : ಈ ಮರವು ಎರ್ಹಿಷಿಯೇಸಿ (Ehretiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=72 (Britton 1951). ವರ್ಷಕ್ಕೊಂದು ಬಾರಿ ಈ ಮರದ ಎಲೆಗಳೆಲ್ಲಾ ಉದುರಿಹೋಗುತ್ತವೆ. ಈ ಮರವು ಸುಮಾರು 30 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಈ ಮರದ ತೊಗಟೆಯು ಕಪ್ಪು ಮಿಶ್ರಿತ ಬೂದುಬಣ್ಣವನ್ನು ಹೊಂದಿರುತ್ತದೆ. ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿದ್ದು ಉದ್ದನೆಯ ತೊಟ್ಟುಗಳನ್ನು ಹೊಂದಿರುತ್ತವೆ. ಎಲೆಗಳ ಉದ್ದ ಅಗಲಗಳು $4\frac{3}{4} \times 2\frac{3}{4}$ ಇಂಚಿನಷ್ಟಿರುತ್ತದೆ. ಹೂಗಳು ಬೆಳ್ಳಗಿರುತ್ತವೆ. ಕಾಯಿಗಳು ದುಂಡಗಿದ್ದು ತುಂಬಾ ತಿರುಳನ್ನು ಹೊಂದಿರುತ್ತವೆ. ಇದೇ ಜಾತಿಗೆ ಸೇರಿದ ಕಾರ್ಡಿಯಾ ಸಬ್‌ಕಾರ್ಡೇಟಾ (Cordia subcordata Lamk.) ಎಂಬ ಮರದ ಸಸಿಗಳನ್ನು ಮೈಸೂರಿಗೆ 1890ರ ಸುಮಾರಿನಲ್ಲೆ ಅಂಡಮಾನ್‌ನಿಂದ ತರಿಸಿ ಹಾಕಲಾಯಿತು. ಇದರ ಕಿತ್ತಳೆ ಬಣ್ಣದ ಹೂಗಳು ಆಕರ್ಷಕವಾಗಿರುತ್ತವೆ.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನುತ್ತಾರೆ. ಇದರ ತೊಗಟೆಯಿಂದ ಒರಟಾದ ನಾರು ದೊರಕುತ್ತದೆ.

ನಿರಂಜಿ (ನಿರಂಜಿಮರ) Salix tetrasperama Linn.

ಹರಿಯುವ ನೀರು ಭೂಮಿಯನ್ನು ಕೊರೆದು ಹಾಕುವುದನ್ನು ತಡೆಯಲು ನದಿಯ ದಂಡೆಗಳಲ್ಲೂ, ಹೊಳೆಯ ದಂಡೆಗಳಲ್ಲೂ, ಹಳ್ಳ ಮತ್ತು ನಾಲೆಗಳ ಅಕ್ಕಪಕ್ಕಗಳಲ್ಲೂ ಈ ಮರವನ್ನು ಬೆಳೆಸುವ ಅಭ್ಯಾಸವು ಮೈಸೂರಿನಲ್ಲಿ ಸುಮಾರು ನೂರು ವರ್ಷಗಳಿಂದಲೂ ನಡೆದು ಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸ್ಯಾಲಿಕೇಸಿ (Salicaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=19 (Sobji & Singh 1961). ಇದೊಂದು ಸಣ್ಣ ಮರ. 20 ರಿಂದ 40 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಎಲೆಗಳು ವರ್ಷಕ್ಕೊಂದು ಸಾರಿ ಉದುರಿ ಹೋಗುತ್ತವೆ. ಎಲೆಗಳು ಚೂಪಾದ ತುದಿಯನ್ನು ಹೊಂದಿರುತ್ತವೆ. ಅವುಗಳ ಉದ್ದ ಅಗಲಗಳು ಸರಾಸರಿ 5×1 ಇಂಚು ಇರುತ್ತದೆ. ಒಂದೊಂದು ಸಾರಿ ಎಲೆಗಳು ಮೂಡುವ ಮೊದಲೇ ಸ್ವಲ್ಪ ಬೆಳ್ಳಗಿರುವ ಹೂ ಗೊಂಚಲುಗಳು ಮೂಡುತ್ತವೆ. ತೇವವಿರುವ ಪ್ರದೇಶಗಳಲ್ಲಿ ಬೆಳೆಸಿದರೆ ಈ ಮರಗಳು ಚೆನ್ನಾಗಿ ಬೆಳೆಯುತ್ತವೆ.

ಉಪಯೋಗಗಳು : ಈ ಮರದಲ್ಲಿ ಕಂದು ಮಿಶ್ರಿತ ಕಪ್ಪು ಬಣ್ಣದ ಒಳಮರಕ್ಕಿಂತ ಬೆಳ್ಳಗಿನ ಹೊರಮರವೇ ಜಾಸ್ತಿ ಇರುತ್ತದೆ. ತೂಕವು ಘನ ಅಡಿ

ಯೊಂದಕ್ಕೆ 35 ರಿಂದ 40 ಪೌಂಡುಗಳಷ್ಟು ಇರುತ್ತದೆ. ಒಳಮರವನ್ನು ಪೆಟ್ಟಿಗೆಗಳನ್ನು ಮಾಡಲು ಉಪಯೋಗಿಸುತ್ತಾರೆ. ಈ ಮರವನ್ನು ಸೌದೆಗಾಗಿಯೂ ಇದ್ದಿಲಿಗಾಗಿಯೂ ಹೆಚ್ಚಾಗಿ ಉಪಯೋಗಿಸುತ್ತಾರೆ. ಎಳೆಯ ಭಾಗಗಳನ್ನು ಬುಟ್ಟಿ ಹೆಣೆಯಲೂ ಉಪಯೋಗಿಸುತ್ತಾರೆ.

ನಿಂಬೆಹಣ್ಣಿನಮರ (Citurs aurantifolia (Christm.) swing.)
(Syn. Citrus medica var acida Roxb.)

ದೊಡ್ಡ ಮನುಷ್ಯರನ್ನು ನೋಡಲು ಹೋದಾಗ ಒಂದು ನಿಂಬೆಹಣ್ಣನ್ನು ತೆಗೆದುಕೊಂಡು ಹೋಗಿ ಅರ್ಪಿಸಿದರೆ ಅವರಿಗೆ ಗೌರವವನ್ನು ಸೂಚಿಸಿದಂತಾಗುತ್ತದೆ, ಅವರ ಬಗ್ಗೆ ಆತ್ಮೀಯ ಸ್ನೇಹವನ್ನು ತೋರಿಸಿದಂತಾಗುತ್ತದೆ ಎಂಬ ಭಾವನೆ ಪ್ರಚಲಿತವಾಗಿದೆ.

ಮೈಸೂರು, ಆಂಧ್ರಪ್ರದೇಶ, ಮಹಾರಾಷ್ಟ್ರ, ಮದರಾಸು, ಅಸ್ಸಾಂ, ಪಂಜಾಬ್, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ರಾಜಾಸ್ಥಾನ ಇಲ್ಲೆಲ್ಲಾ ನಿಂಬೆಹಣ್ಣಿನಮರವನ್ನು ಬೆಳೆಸುತ್ತಾರೆ. ತುಂಬ ಕವಲೊಡೆದು ಪೊದೆಯಂತೆ ಬೆಳೆಯುವ ಈ ಮರವನ್ನು ಮದರಾಸು ಸಂಸ್ಥಾನದಲ್ಲಿ ಸುಮಾರು 170,00 ಎಕರೆಗಳಲ್ಲಿ ಬೆಳೆಸಲಾಗುತ್ತಿದೆ.

ಸಸ್ಯಶಾಸ್ತ್ರ ವಿವರಣೆ : ಈ ದೊಡ್ಡ ಪೊದೆ ಇಲ್ಲವೆ ಸಣ್ಣ ಮರವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ. ಚೆನ್ನಾಗಿ ಬೆಳೆದರೆ ಸಣ್ಣ ಸೇಬಿನ ಹಣ್ಣಿನಷ್ಟು ಗಾತ್ರಕ್ಕೆ ಇರುವ ಹಣ್ಣುಗಳನ್ನು ಬಿಡುತ್ತದೆ. ಇದರ ಹೂಗಳು ದೊಡ್ಡವಿದ್ದು ಬೆಳ್ಳಗಿರುತ್ತವೆ. ಇದರ ಹಣ್ಣುಗಳ ಸಿಪ್ಪೆಯು ವಾಸನೆಯಿಂದ ಕೂಡಿದ್ದರೂ ಕಹಿಯಾಗಿರುತ್ತದೆ. ಹಣ್ಣುಗಳು ಹುಳಿಯಾಗಿರುತ್ತವೆ.

ಉಪಯೋಗಗಳು : ನಿಂಬೆಹಣ್ಣನ್ನು ಬೇಸಿಗೆ ಕಾಲದಲ್ಲಿ ಪಾನಕ ಮಾಡಲು ಉಪಯೋಗಿಸುತ್ತಾರೆ. ಉಪ್ಪಿನಕಾಯಿ ಮಾಡಲೂ ಉಪಯೋಗಿಸುತ್ತಾರೆ. ಅಜೀರ್ಣ ಸಂಬಂಧವಾದ ಎಲ್ಲ ಕಾಯಿಲೆಗಳಿಗೂ ಸಕ್ಕರೆ ಶುಂಠಿಗಳನ್ನು ಸೇರಿಸಿ ನಿಂಬೆರಸವನ್ನು ಕೊಡುತ್ತಾರೆ. ಇದರ ಸಿಪ್ಪೆಯಿಂದ ತೆಗೆದ ಎಣ್ಣೆಯನ್ನು ಸೌಂದರ್ಯಸಾಧನಗಳು, ಔಷಧಿಗಳು, ಸಿಹಿತಿಂಡಿಗಳು ಇವನ್ನು ತಯಾರಿಸುವ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ. ಹಿಂದೆ ನಿಂಬೆಹಣ್ಣುಗಳನ್ನು ಒಣಗಿಸಿ ಈಜಿಪ್ಟ್ ಹಾಗೂ ಅರೇಬಿಯಗಳಿಗೆ ರಫ್ತು ಮಾಡುತ್ತಿದ್ದರು. ಇದರ ಎಲೆಗಳಿಂದ, ಹೂಗಳಿಂದ ತೆಗೆದ ಎಣ್ಣೆಯನ್ನು ಸುಗಂಧ ದ್ರವ್ಯಗಳ ತಯಾರಿಸುವ ಕಾರ್ಖಾನೆಗಳಲ್ಲಿ ಉಪಯೋಗಿಸುತ್ತಾರೆ.

ನುಗ್ಗೆಮರ (ನುಗ್ಗೆಕಾಯಿಮರ) Moringa oleifera Lamk. (Syn. Moringa pterigosperma Gaertn.)

ಮೂಲತಃ ಇದು ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇರುವ ಗಿಡವೇ ಆಗಿದೆ "ಮೊರಿಂಗ" ಎಂಬ ಇದರ ಸಸ್ಯಶಾಸ್ತ್ರದ ಹೆಸರು ತಮಿಳು ಪದವಾಗಿದೆ. ಆಲಿಫೆರ ಎಂಬುದು ಲ್ಯಾಟಿನ್ ಪದವಾಗಿದ್ದು ಎಣ್ಣೆ ಇರುವುದನ್ನು ಸೂಚಿಸುತ್ತದೆ.



ನುಗ್ಗೆಮರ

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೋರಿಂಗೇಸಿ (Moringaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=28$ (Patel & n 1937). ಅಷ್ಟೇನೂ ಎತ್ತರವಾಗಿ ಬೆಳೆಯದ ಈ ಮರದ ಎಲೆಗಳು ಕಾಲಕಾಲಕ್ಕೆ ಉದುರಿ ಹೋಗುತ್ತಿರುತ್ತವೆ. ಫೆಬ್ರುವರಿ–ಏಪ್ರಿಲ್ ತಿಂಗಳುಗಳಲ್ಲಿ ಅದು ಹೂಬಿಡುವುದಕ್ಕೆ ಮುಂಚೆ ಎಲೆಗಳೆಲ್ಲಾ ಉದುರಿ ಹೋಗಿರುತ್ತವೆ. ಸ್ವಲ್ಪ ಬೆಳ್ಳಗಿರುವ, ಜೇನಿನ ವಾಸನೆ ಪಡೆದಿರುವ ಹೂಗಳು ಗುಂಪು ಗುಂಪಾಗಿ ಮೂಡುತ್ತವೆ. ಕಾಯಿ ಉದ್ದವಾಗಿದ್ದು ಅನೇಕ ಬೀಜಗಳನ್ನು ಹೊಂದಿರುತ್ತದೆ. ಬೀಜಗಳಿಂದ ಹಾಗೂ ಸಣ್ಣ ರೆಂಬೆಗಳಿಂದ ಈ ಮರಗಳನ್ನು ಬೆಳೆಸಬಹುದು.

ಉಪಯೋಗಗಳು : ನುಗ್ಗೆಕಾಯಿಯನ್ನು ತರಕಾರಿಯಂತೆ ಬಳಸುತ್ತಾರೆ. ಹೂಗಳನ್ನು ಸಾರಿಗೆ ಹಾಕುವ ಅಭ್ಯಾಸವುಂಟು. ಬೀಜಗಳಿಂದ ಪಡೆದ ಎಣ್ಣೆಯನ್ನು ಸಂಧಿವಾತ ನಿವಾರಣೆಗಾಗಿ ಉಪಯೋಗಿಸುತ್ತಾರೆ. ಈ ಎಣ್ಣೆಯನ್ನು "ಬೆನ್‌ಆಯಿಲ್"

ಎಂದು ಕರೆಯುತ್ತಾರೆ. ಗಡಿಯಾರ ರಿಪೇರಿ ಮಾಡುವವರು ಈ ಎಣ್ಣೆಯನ್ನು ಉಪಯೋಗಿಸುತ್ತಾರೆ

ನೆಲ್ಲಿಕಾಯಿಮರ Emblica officinalis Gaertn (Syn Phyllanthus emblica L·)

ನೆಲ್ಲಿಯಕಾಯಿ ಮರವು ಭಾರತ ಮತ್ತು ಬರ್ಮಾ ದೇಶಗಳಲ್ಲಿ ಪ್ರಸಿದ್ಧವಾಗಿವೆ ಕಾಡುಗಳಲ್ಲಿ ಬೆಳೆದರೂ ಮೈಸೂರಿನಲ್ಲಿ ಈ ಮರಗಳನ್ನು ತೋಟಗಳಲ್ಲೇ ಬೆಳೆಸಿಕೊಳ್ಳುತ್ತಾರೆ. ಸುಂದರವಾದ ಈ ಮರವು 35 ರಿಂದ 40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಎಲೆಗಳು ಉದುರುವಾಗ ಎಲೆಗಳ ಜೊತೆಯಲ್ಲಿ ಅದರ ಟೊಂಗೆಗಳೂ ಬಿದ್ದು ಹೋಗುತ್ತವೆ. ಈ ಮರದ ಹೂಗಳು ಹಸಿರಾಗಿದ್ದು ಗುಂಪು ಗುಂಪಾಗಿ ಎಲೆಗಳ ಕೆಳಗೆ ಟೊಂಗೆಗಳ ಮೇಲೆಲ್ಲಾ ಮೂಡುತ್ತವೆ



ನೆಲ್ಲಿಕಾಯಿಮರ

ನವೆಂಬರ್‌ನಿಂದ ಫೆಬ್ರುವರಿ ತಿಂಗಳವರೆವಿಗೂ ಇದರ ಕಾಯಿಗಳು ಸಿಕ್ಕುತ್ತಲೇ ಇರುತ್ತವೆ ಇವು ಹಳದಿ ಮಿಶ್ರಿತ ಹಸಿರು ಬಣ್ಣ ಹೊಂದಿರುತ್ತವೆ. ಹೆಚ್ಚು ರಸ ಪೂರಿತವಾದ ಈ ಕಾಯಿಗಳಲ್ಲಿ " ;" ಜೀವಸತ್ವವು ಜಾಸ್ತಿ ಇರುತ್ತದೆ. ಕಾಯಿಗಳಲ್ಲಿ ಆರು ಬೀಜಗಳಿರುತ್ತವೆ. ಇದರ ವರ್ಣತಂತುಗಳ ಸಂಖ್ಯೆ 2n=28 (Perry 1943).

ಉಪಯೋಗಗಳು : ಔಷಧಿಗಾಗಿಯೂ, ಉಪ್ಪಿನಕಾಯಿಗಳಿಗಾಗಿಯೂ ನೆಲ್ಲಿಯಕಾಯಿಗಳನ್ನು ಬಳಸುತ್ತಾರೆ. ಕಾಯಿ, ಎಲೆ ತೊಗಟೆಗಳಿಂದ ಬಣ್ಣ ತೆಗೆಯಬಹುದು. ಮರ ಬಹಳ ಗಟ್ಟಿಯಾಗಿರುತ್ತದೆ. ಬಿಸಿಲಿಗೆ ಬಿಟ್ಟಲ್ಲಿ ಒಡೆದು ಹೋಗುತ್ತದೆ. ತೂಕವು ಘನ ಅಡಿಯೊಂದಕ್ಕೆ 43 ರಿಂದ 50 ಪೌಂಡುಗಳಷ್ಟಿರುತ್ತದೆ.

ಆಶ್ಚರ್ಯಕರ ವಿಷಯವೆಂದರೆ ಚನ್ನರಾಯಪಟ್ಟಣದ ತಾಲ್ಲೂಕಿನ ಕೆಲವು ಕಡೆಗಳಲ್ಲಿ ಈ ಮರದ ಚಕ್ಕೆಗಳನ್ನು ಬಾವಿಗೆ ಹಾಕುತ್ತಾರೆ. ಈ ಚಕ್ಕೆಗಳು ಕುಡಿಯುವ ನೀರಿನ ಬಾವಿಯಲ್ಲಿದ್ದರೆ ಅದರಲ್ಲಿರುವ ಕಲ್ಮಶಗಳೆಲ್ಲಾ ಹೋಗುತ್ತವೆಂದು ನಂಬಿಕೆ.

ನೆರ್ವಲ (ನಿರಂಜಿನಿ) Crataeva nurvala Buch-Ham.
(=Crataeva religiosa Forst.)

ನದಿ ಮತ್ತು ಹೊಳೆ ದಂಡೆಗಳಲ್ಲಿ ಬೆಳೆಯುವ ಸಣ್ಣ ಮರವೇ ನೆರ್ವಲ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಕಪ್ಪರಿಡೇಸಿ (Capparidaceae) ಕುಟುಂಬಕ್ಕೆ ಸೇರಿದೆ. ಕಾಲಕಾಲಕ್ಕೆ ಎಲೆಗಳುದುರುವ ಈ ಮರದ ಹೂಗಳು 3 ಇಂಚಿನಷ್ಟು ದೊಡ್ಡವಿರುತ್ತವೆ. ಮೊದಲು ಹಳದಿ ಬಣ್ಣಕ್ಕಿದ್ದು ಅನಂತರ ಕೆಂಪಗಾಗುತ್ತವೆ. ಹಣ್ಣು ಸ್ವಲ್ಪ ದುಂಡಾಗಿದ್ದು ಬೇಲದ ಹಣ್ಣಿನಷ್ಟು ದಪ್ಪವಿರುತ್ತದೆ. ಮರ ಬಹಳ ಮೃದು. ಹಳದಿ ಮಿಶ್ರ ಬಿಳುಪು ಬಣ್ಣವನ್ನು ಹೊಂದಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 33–37 ಪೌಂಡುಗಳು. ಕೀಟಗಳು ಈ ಮರವನ್ನು ಕೊರೆದು ಹಾಳು ಮಾಡುತ್ತವೆ.

ಉಪಯೋಗಗಳು : ಬಾಚಣಿಗೆ, ಆಟದ ಸಾಮಾನುಗಳು ಇವನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲವು ಬುಡಕಟ್ಟಿನ ಜನರು ಈ ಮರವನ್ನು ಸಮಾಧಿಗಳ ಮೇಲೆ ಬೆಳೆಸುತ್ತಾರೆ. ಈ ಮರವು ಪುಷ್ಪಭರಿತವಾಗಿರುವಾಗ ಸುಂದರವಾಗಿ ಕಾಣುವುದೇ ಇದಕ್ಕೆ ಕಾರಣ ಎಲೆಗಳನ್ನು ಮತ್ತು ತೊಗಟೆಯನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ. ಇದರ ಮರವನ್ನು ಬೆಂಕಿಕಡ್ಡಿ ತಯಾರಿಕೆಯಲ್ಲೂ ಉಪಯೋಗಿಸಬಹುದು.

ನೇಪಾಳ : (ಜಾಪಾಳ) Croton tiglium L.

ಈ ಮರವು ದಕ್ಷಿಣ ಪೂರ್ವ ಏಷ್ಯಾದಲ್ಲಿ ಕಾಣಬರುತ್ತಿತ್ತು ಈಗ ಇದನ್ನು ಬಂಗಾಳ, ದಕ್ಷಿಣ ಭಾರತದ ಕೆಲವು ಪ್ರದೇಶಗಳಲ್ಲೆಲ್ಲಾ ಬೆಳೆಸುತ್ತಿದ್ದಾರೆ. ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ 1895 ರಲ್ಲೇ ಇದನ್ನು ಬೆಳೆಸಿದ್ದರು. ಚೀನಾದೇಶದಲ್ಲಿ ಇದು ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದೊಂದು ಪೊದೆಯಂತೆ ಬೆಳೆಯುವ ಸಣ್ಣ ಮರ. ಈ ಮರವು 15 ರಿಂದ 20 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಕಾಯಿಗಳು ಮೂರು ಏಣುಗಳನ್ನು ಹೊಂದಿದ್ದು ಹರಳಿನಂತಿರುವ ಬೀಜಗಳನ್ನು ಹೊಂದಿರುತ್ತವೆ.



ನೇಪಾಳ

ಉಪಯೋಗಗಳು : ಇದರ ಬೀಜಗಳಿಂದ ಬರುವ ಕ್ರೋಟಾನ್ ಎಣ್ಣೆ ಅತಿ ಅಪಾಯಕಾರಿಯಾದ ವಿರೇಚಕ ಗುಣವನ್ನು ಹೊಂದಿದೆ. ಜಾಪಾಳ ಮಾತ್ರೆಯ ಮಹಾತ್ಮೆ ಯಾರಿಗೆ ತಾನೆ ಗೊತ್ತಿಲ್ಲ ? ಈ ಎಣ್ಣೆಯನ್ನು ಚರ್ಮದ ಮೇಲೆ ಹಾಕಿದರೆ ಗುಳ್ಳೆಗಳಾಗುತ್ತವೆ. ಈ ಎಣ್ಣೆ ಬೀಜಗಳಲ್ಲಿರುವ ಭ್ರೂಣಾಹಾರದಲ್ಲಿ ಸಂಗ್ರಹವಾಗಿರುತ್ತದೆ. ಈ ಎಣ್ಣೆಯ ಬಣ್ಣವು ಕೆಂಪು ಮಿಶ್ರಿತ ಹಳದಿ. ಛೆರುಬಲೆಸ್ (Cherbuliez) ರವರ ಹೇಳಿಕೆಯ ಪ್ರಕಾರ ಈ ಎಣ್ಣೆಯನ್ನು ಚರ್ಮಕ್ಕೆ ಸವರಿಕೊಂಡರೂ ವಿಪರೀತವಾಗಿ ಭೇದಿಯಾಗುತ್ತದೆ. ಎಲ್ಲ ವಿರೇಚಕಕಾರಿಗಳಿಗಿಂತಲೂ ಈ ಎಣ್ಣೆಯು ಬಹು ಅಪಾಯಕಾರಿಯಾದದ್ದು.

ನೌಲಾದಿ (ನವಲಾದಿ ಮರ) Vitex altissima L. f.

ವರ್ಷಕ್ಕೊಂದು ಬಾರಿ ಎಲೆಗಳುದುರುವ ಈ ಮರವು ಒಳ್ಳೆಯ ವಾತಾವರಣ ದಲ್ಲಿ ಬೆಳೆದರೆ ದೊಡ್ಡ ಮರವಾಗಿ ಬೆಳೆಯುತ್ತದೆ. ಮೈದಾನ ಪ್ರದೇಶಗಳಲ್ಲಿದ್ದರೆ ಸಣ್ಣಗಿರುತ್ತದೆ. ಬೆಂಗಳೂರು, ಬನ್ನೇರುಘಟ್ಟ, ಸಾವನದುರ್ಗ, ಆನೇಕಲ್‌ಗಳಲ್ಲಿ ಈ ಮರ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ವರ್ಬಿನೇಸಿ (Verbenaceae) ಕುಟುಂಬಕ್ಕೆ ಸೇರಿದೆ. ಸುಮಾರು 30 ಅಡಿ ಎತ್ತರಕ್ಕೆ ಬೆಳೆಯುವ ಈ ಮರವು ಒರಟಾದ ಕಪ್ಪು ತೊಗಟೆಯನ್ನು ಹೊಂದಿರುತ್ತದೆ. ಇದರ ಒರಟಾದ ಎಲೆಗಳು ಅಭಿಮುಖವಾಗಿದ್ದು ಎಲೆಯ ತೊಟ್ಟು ರೆಕ್ಕೆಯಂತೆ ಅಗಲವಾಗಿರುತ್ತದೆ. ಬಿಡಿ ಎಲೆಗಳು 3 ಅಥವಾ 5 ಇರುತ್ತವೆ. ಇದರ ಹೂಗಳು ನೀಲಿ ಮಿಶ್ರಿತ ಕೆಂಪು ಬಣ್ಣವನ್ನು ಹೊಂದಿರುತ್ತವೆ. ಹಣ್ಣುಗಳು ಕೆಂಪಗಿದ್ದು ಅವುಗಳ ಮೇಲೆ ಅಲ್ಲಲ್ಲೇ ಬಿಳಿಯ ಚುಕ್ಕಿಗಳು ಬಂದಿರುತ್ತವೆ. ಈ ಮರವು ಒಳಗೆ ಕಂದು ಮಿಶ್ರಿತ ಬೂದು ಬಣ್ಣವನ್ನು ಹೊಂದಿರುತ್ತದೆ ಮರವು ಘಟ್ಟಿಯಾಗಿದ್ದು ಘನ ಅಡಿಯೊಂದಕ್ಕೆ 63 ಪೌಂಡುಗಳಷ್ಟು ತೂಗುತ್ತದೆ. ಬೇಲೂರಿನಲ್ಲಿ ಈ ಮರವನ್ನು ರಕ್ಕಸಪಟ್ಟಿ ಎಂದೂ ಕರೆಯುತ್ತಾರೆ. ಇದರ ಶಕ್ತಿ ಮತ್ತು ಅಸಾಧಾರಣ ತೂಕಗಳೇ ಇದಕ್ಕೆ ಕಾರಣವಿರಬಹುದು.

ಉಪಯೋಗಗಳು : ಮನೆ ಕಟ್ಟಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಇದನ್ನು ಉಪಯೋಗಿಸುತ್ತಾರೆ.

ಪಜಾಲೆ (ಪಜಾಲಿ, ಪಥೇರಿ) Dalbergia paniculata Roxb.

ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ ಎತ್ತರಕ್ಕೆ ಬೆಳೆಯುವ ಈ ಮರ ನಂದೀದುರ್ಗದಲ್ಲಿ ಬಹಳ ಚಿಕ್ಕ ಮರವಾಗಿ ಬೆಳೆದಿರುವುದು ಕಾಣಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೋಸಿ (Papilionaeeae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=26 (Atchison–1951). ಇದರ ಮರ ಸ್ವಲ್ಪ ಬೆಳ್ಳಗಿದ್ದು ಬೂದು ಬಣ್ಣಕ್ಕಿರುತ್ತದೆ. ಹುಳುಗಳು ಸುಲಭವಾಗಿ ಕೊರೆಯಬಲ್ಲವು. ಒಂದು ಘನ ಅಡಿಗೆ 30 ರಿಂದ 40 ಪೌಂಡುಗಳಷ್ಟು ತೂಗುತ್ತದೆ. ಸೌದೆಗೆ ಇದು ಅಷ್ಟೇನೂ ಒಳ್ಳೆಯ ಮರವಲ್ಲ. ಬೇಸಿಗೆಯಲ್ಲಿ ಎಳೆ ಎಲೆಗಳು ಮತ್ತು ಹೂಗಳನ್ನು ಪಡೆಯುವ ಈ ಮರ ಜುಲೈ ಆಗಸ್ಟ್ ತಿಂಗಳುಗಳಲ್ಲಿ ಕಾಯಿಗಳನ್ನು ಬಿಡುತ್ತದೆ. ಬೀಜಗಳು ಶೇಕಡ 50 ರಷ್ಟು ಮೊಳೆಯುತ್ತವೆ.

ಉಪಯೋಗಗಳು : ತಂಬೂರಿ, ವೀಣೆ ಮುಂತಾದ ಸಂಗೀತದ ಉಪಕರಣಗಳನ್ನು ಮಾಡಲು ಮರವನ್ನು ಉಪಯೋಗಿಸುತ್ತಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಇದನ್ನು ಸೌದೆಗಾಗಿ ಉಪಯೋಗಿಸುತ್ತಾರೆ.

ಪಟ್ಟಂಗ (ಸಪಂಗ) Caesalpinia sappan Linn.

ಮಲಯ ಮತ್ತು ಭಾರತ ದೇಶಗಳಲ್ಲಿ ಕಾಣಬರುವ ಈ ಮರ ಅಡರು ಸಸ್ಯದಂತೆ ಬೆಳೆಯುವ ಮರವಾಗಿದೆ. ಬಂಗಾಳ ಮತ್ತು ದಕ್ಷಿಣ ಭಾರತದಲ್ಲೆಲ್ಲ ಇದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 24$ (Ghose 1942). ಇದರ ಮರ ಕಡಿದಾಗ ಬೆಳ್ಳಗಿರುತ್ತದೆ. ಸ್ವಲ್ಪ ಹೊತ್ತಿನ ಅನಂತರ ಕೆಂಪಾಗುತ್ತದೆ. ಹತ್ತಿರದ ಎಲೆಗಳುಳ್ಳ ಈ ಮರ ಚೆನ್ನಾಗಿ ಮೆರಗು ತೆಗೆದುಕೊಳ್ಳುವ ಗುಣವನ್ನು ಹೊಂದಿದೆ. ತೂಕ 1 ಘನ ಅಡಿಗೆ 52 ರಿಂದ 60 ಪೌಂಡುಗಳು. ಇದರ ಹೂವುಗಳು ಹಳದಿ ಬಣ್ಣಕ್ಕಿರುತ್ತವೆ.

ಉಪಯೋಗಗಳು : ಬಹಳ ಹಿಂದಿನ ಕಾಲದಿಂದಲೂ ಇದರ ಕೆಂಪು ಚೇಗಿನಿಂದ ಗುಲಾಲ್ ಎಂಬ ರಂಗನ್ನು ತಯಾರಿಸಲಾಗುತ್ತಿದೆ. ಇದನ್ನು ಹತ್ತಿ ಮತ್ತು ಉಣ್ಣೆ ಬಟ್ಟೆಗಳಿಗೆ ಬಣ್ಣ ಹಾಕಲೂ ಕೆಂಪುಶಾಯಿ ತಯಾರಿಸಲೂ ಉಪಯೋಗಿಸುತ್ತಾರೆ. ಈ ಬಣ್ಣದ ಮೂಲ ಬ್ರೆಸಿಲಿನ್ (Brazilin) ಎಂಬ ರಸಾಯನಿಕ ಪದಾರ್ಥವಾಗಿರುತ್ತವೆ. ($C_{16}H_{14}O_5$). ಇದು ನೀರಿನಲ್ಲಿ ಕರಗುತ್ತದೆ. ಇದರ ತೊಗಟೆ ಮತ್ತು ಕಾಯಿಗಳ ಸಿಪ್ಪೆಯಲ್ಲಿ ಟ್ಯಾನಿನ್ ಇರುತ್ತದೆ. ಕಾಯಿಗಳ ಸಿಪ್ಪೆಯಲ್ಲಿಯೂ 40% ಟ್ಯಾನಿನ್ ಇರುತ್ತದೆ. ಎಲೆಗಳು 0.16 ರಿಂದ 0.25% ಇರುವ ಎಣ್ಣೆಯೊಂದನ್ನು ಹೊಂದಿರುತ್ತವೆ. ಇದಕ್ಕೆ ಒಳ್ಳೆ ಸುವಾಸನೆ ಇರುತ್ತದೆ. ಇದರ ಮರವನ್ನು ವಾಯುಸಂಚಾರ ಹೊರಟಾಗ ಹಿಡಿದುಕೊಳ್ಳುವ ಕೋಲುಗಳನ್ನು ಮಾಡಲು ಉಪಯೋಗಿಸುತ್ತಾರೆ. ಈ ಮರದ ಕಷಾಯವನ್ನು ಆಮಶಂಕೆಯನ್ನು ನಿಲ್ಲಿಸಲು ಉಪಯೋಗಿಸುತ್ತಾರೆ.

ಪನ್ನೇರಳೆ (ಮಲ್ಲಿ ನೇರಳೆ) Syzigium jambos (L.) Alston. (Syn. Eugenia jambos L.)

ಪನ್ನೇರಳೆ ಹಣ್ಣುಗಳಿಗಾಗಿ ಈ ಮರವನ್ನು ಮೈಸೂರು, ಆಂಧ್ರಪ್ರದೇಶ, ಮದರಾಸು, ಅಸ್ಸಾಂ, ಮಹಾರಾಷ್ಟ್ರ ಮತ್ತು ಬಂಗಾಳ ದೇಶಗಳಲ್ಲಿ ಬೆಳೆಸಲಾಗುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿರಟೇಸಿ (Myrtaceae) ಕುಟುಂಬಕ್ಕೆ ಸೇರಿದೆ. ಗುಲಾಬಿ ಸೇಬಿನ ಮರ ಎಂದು ಕರೆಸಿಕೊಳ್ಳುವ ಈ ನಿತ್ಯ ಹರಿದ್ವರ್ಣದ ವೃಕ್ಷ ಅಷ್ಟೇನೂ ದೊಡ್ಡ ಮರವಲ್ಲ. ಹೂವುಗಳಿದ್ದಾಗ ಈ ಮರ ಬಹಳ ಸುಂದರವಾಗಿ ಕಾಣುತ್ತದೆ. ವರ್ಷಕ್ಕೆರಡು ಬಾರಿ ಫಲಭರಿತವಾಗುತ್ತದೆ. ಸುಮಾರು

20-25 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ತೊಗಟೆ ಸ್ವಲ್ಪ ಕಪ್ಪಗಿರುತ್ತದೆ. ಇದರ ಎಲೆಗಳು ಸ್ವಲ್ಪ ಅಭಿಮುಖವಾಗಿದ್ದು ಚೂಪಾದ ತುದಿಗಳನ್ನು ಹೊಂದಿರುತ್ತವೆ. ಹೂವುಗಳ ಬಣ್ಣ ಸ್ವಲ್ಪ ಮಾಸಲು ಬಿಳುಪು. 5 ಪುಷ್ಪ ದಳಗಳಿರುತ್ತವೆ. ಹೂವುಗಳು ಸುವಾಸನಾಭರಿತವಾಗಿರುತ್ತವೆ. ಇದರ ಮಾಗಿದ ಕಾಯಿಗಳು ಹಸಿರು ಮಿಶ್ರ ಹಳದಿ ಬಣ್ಣವನ್ನು ಹೊಂದಿದ್ದು 2 ರಿಂದ 3 ಬೀಜಗಳನ್ನು ಹೊದಿಂರುತ್ತವೆ. ಬೀಜಗಳು ಮಂಕಾದ ಕಂದು ಬಣ್ಣವನ್ನು ಹೊಂದಿರುತ್ತವೆ.

ಉಪಯೋಗಗಳು : ಹಣ್ಣುಗಳಿಗಾಗಿ ಈ ಮರವನ್ನು ಬೆಳೆಸುತ್ತಾರೆ. ಈ ಮರದಿಂದ ಉಪಯೋಗ ಅಷ್ಟೇನೂ ಇಲ್ಲ.

ಪಪಾತಿ Tarenna asiatica (Linn.) Sant. & Merchant.
(=Chomelia asiatica Linn.)

ಇದು ಸಾಮಾನ್ಯ ಪೊದೆಯಂತಿದ್ದು ಒಮ್ಮೊಮ್ಮೆ ಸಣ್ಣ ಮರದ ರೂಪ ತಾಳುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. 8 ಅಡಿಗಳಿಗಿಂತ ಹೆಚ್ಚು ಎತ್ತರ ಬೆಳೆಯುವುದು ಅಪರೂಪ.

ಉಪಯೋಗಗಳು : ಇದರ ಮರ ಪ್ರಕಾಶಮಾನವಾಗಿ ಉರಿಯುತ್ತದೆ. ಆದ್ದರಿಂದ ಇದನ್ನು ಸೌದೆಗಾಗಿ ಬಳಸುತ್ತಾರೆ.

ಪೆಂಡ್ರಿಮರ (ಕಾರೆ) (Randia uliginosa DC.)

ಭಾರತ ಮತ್ತು ಸಿಲೋನ್‌ಗಳಲ್ಲೆಲ್ಲಾ ಹಬ್ಬಿರುವ ಈ ಮರ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಏಪ್ರಿಲ್‌ನಿಂದ ಜುಲೈ ತಿಂಗಳವರೆಗೂ ಹೂ ಬಿಡುತ್ತಿರುತ್ತದೆ. 20 ರಿಂದ 30 ಅಡಿಗಳಷ್ಟೆತ್ತರಕ್ಕೆ ಬೆಳೆಯುವ ಈ ಸಣ್ಣ ಮರ ತುದಿಗಳಲ್ಲಿ $\frac{1}{4}$ ಇಂಚಿನಷ್ಟು ದೊಡ್ಡದಾದ ಮುಳ್ಳುಗಳನ್ನು ಹೊಂದಿರುತ್ತದೆ. ಎಲೆಗಳು $2\frac{1}{2}$ ಇಂಚಿನಿಂದ 5 ಇಂಚು ಉದ್ದವಾಗಿದ್ದು, $1\frac{1}{2}$ ಯಿಂದ 2 ಇಂಚು ಅಗಲವಾಗಿರುತ್ತವೆ. ತುದಿ ಗುಂಡಾಗಿರುತ್ತದೆ. ಹೂಗಳು ಸುವಾಸನಾಭರಿತವಾಗಿದ್ದು $1\frac{1}{2}$–2 ಇಂಚಿನಷ್ಟು ದಪ್ಪವಿರುತ್ತವೆ. ಪುಷ್ಪದಳಗಳು 5 ಅಥವಾ 6 ಇರುತ್ತವೆ. ಕಾಯಿ ಅಂಡಾಕೃತಿಯನ್ನು ಹೊಂದಿದ್ದು 2 ರಿಂದ $2\frac{1}{2}$ ಇಂಚು ಉದ್ದವಾಗಿರುತ್ತವೆ. ಒಳಗಿನ ತಿರುಳಿನಲ್ಲಿ ಅನೇಕ ಬೀಜಗಳಿರುತ್ತವೆ.

ಉಪಯೋಗಗಳು: ಇದರ ಕಾಯಿಯನ್ನು ತರಕಾರಿಯಂತೆ ಬಳಸುತ್ತಾರೆ. ಇದನ್ನು ಹುರಿದು ಬೇಯಿಸಿ ತಿನ್ನುತ್ತಾರೆ. ಆಮಶಂಕೆಯನ್ನು ನಿಲ್ಲಿಸಲು ಔಷಧಿಯಾಗಿ ಈ ಮರದ ಹಣ್ಣುಗಳನ್ನು ಉಪಯೋಗಿಸುತ್ತಾರೆ. ದನಗಳಿಗೆ ಕಾಯಿಗಳನ್ನು ತಿನ್ನಿಸುತ್ತಾರೆ.

ಪಾದ್ರಿ (ಕಲ್ಪಾಡಿ) Stereospermum chelonioides DC.

ಈ ಉನ್ನತ ಮರ ಮಲೆನಾಡಿನ ಹಾಗೂ ಸುತ್ತಮುತ್ತಲಿನ ತಂಪಾದ ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತುಗಳ ಸಂಖ್ಯೆ 2n=40 (Venkatasubban 1944). ಸಾಮಾನ್ಯವಾಗಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳುಗಳಲ್ಲಿ ಎಲೆಗಳು ಉದುರಿ ಹೋಗುತ್ತವೆ. ಇದರ ಹೂಗಳು ಇದೇ ಜಾತಿಯ ಪಾದ್ರಿ ಹೂವುಗಳಿಗಿಂತ(Sterospermum suaveolens) ಚಿಕ್ಕದಾಗಿರುತ್ತವೆ. ಅಷ್ಟು ಆಕರ್ಷಕವಾಗಿರುವುದಿಲ್ಲ ಮತ್ತು ಸುವಾಸನೆಯುಳ್ಳವಾಗಿರುವುದಿಲ್ಲ. ಇದರ ಕಾಯಿ 15 ರಿಂದ 20 ಇಂಚು ಉದ್ದವಿದ್ದು 4 ಮೂಲೆಗಳನ್ನು ಹೊಂದಿರುತ್ತದೆ. ಇದರ ಹೂವುಗಳು ಹೊರಗಡೆ ಕಂದು ಬಣ್ಣವನ್ನು ಹೊಂದಿದ್ದು ಒಳಗಡೆ ಹಳದಿ ಬಣ್ಣವನ್ನು ಹೊಂದಿರುತ್ತವೆ.

ಈ ಮರದ ಬೇರುಗಳ ಶಕ್ತಿ ನಿಜಕ್ಕೂ ಅದ್ಭುತವಾದುದ್ದು. ಮರದಿಂದ ಆಚೆಗೆ ಸುಮಾರು 50 ಗಜಗಳಿಗೂ ಹೆಚ್ಚು ದೂರ ಬೆಳೆಯಬಲ್ಲವು.

ಇದರ ಮರ ಬಹಳ ಗಟ್ಟಿಯಾಗಿದ್ದು ಗರಗಸವೇ ಮುರಿಯುವುದೆಂದು ಹೇಳುತ್ತಾರೆ. ಮರ ಕೊಯ್ಯುವವರು ಈ ಮರವನ್ನು ಕೊಯ್ಯಲು ಇಷ್ಟಪಡುವುದಿಲ್ಲ. ಇದನ್ನು ಕಡಿಯಬೇಕಾದರೆ ಅನೇಕ ಕೊಡಲಿಗಳು ಹಾಳಾಗುತ್ತವೆ.

ಉಪಯೋಗಗಳು : ಮನೆಯ ಕಂಬಗಳಿಗಾಗಿಯೂ, ತೊಲೆಗಳಿಗಾಗಿಯೂ ಈ ಮರವನ್ನು ಉಪಯೋಗಿಸುತ್ತಾರೆ. ಎಲೆಗಳು, ತೊಗಟೆ ಹಾಗೂ ಕಾಯಿಗಳನ್ನು ಸ್ಥಳೀಯ ವೈದ್ಯರು ಔಷಧಿಗಾಗಿ ಬಳಸುತ್ತಾರೆ.

ಪಾದ್ರಿಮರ (ಪಾದರಿ) Stereospermum suaveolens DC.

ತಂಪಾದ ಹವೆಯಿರುವ ಪ್ರದೇಶಗಳಲ್ಲಿ ಸಮುದ್ರಮಟ್ಟಕ್ಕೆ 3500 ಅಡಿಗಳಷ್ಟು ಎತ್ತರದವರೆಗೆ ಈ ಮರ ಬೆಳೆಯುತ್ತದೆ. ಇದರ ಬುಡ 30–40 ಅಡಿಗಳಷ್ಟು ದಪ್ಪವಾಗಬಲ್ಲದು. 80 ಅಡಿಗಳಷ್ಟು ಎತ್ತರವಾಗಿ ಬೆಳೆಯಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=40 (V.S. 1944) ಜನವರಿಯಲ್ಲಿ ತನ್ನ ಎಲೆಗಳನ್ನು ಕಳೆದುಕೊಳ್ಳುವುದಕ್ಕೆ ಪ್ರಾರಂಭಿಸಿ ಫೆಬ್ರವರಿ–ಮಾರ್ಚಿ ತಿಂಗಳುಗಳಲ್ಲಿ ಬೋಳಾಗಿ ನಿಂತಿದ್ದು ಎಳೆ ಎಲೆಗಳು ಬರುವುದಕ್ಕೆ ಸ್ವಲ್ಪ ಮೊದಲೇ ಪುಷ್ಪಭರಿತವಾಗುತ್ತದೆ. ತಿಳಿ ಗುಲಾಬಿ ವರ್ಣದ ಸುವಾಸನಾಭರಿತವಾದ ಹೂಗಳು ಒಣಗಿದರೂ ಒಂದೆರಡು ದಿನಗಳ ತನಕ ತಮ್ಮ ವಾಸನೆ ಇಟ್ಟುಕೊಂಡಿರುತ್ತವೆ. ಇದರ ಕಾಯಿ 12 ರಿಂದ 15 ಇಂಚು ಉದ್ದವಾಗಿರುತ್ತದೆ.

ಉಪಯೋಗಗಳು : ಹಾರಗಳನ್ನು ಕಟ್ಟಲು ಈ ಹೂವುಗಳನ್ನು ಉಪಯೋಗಿಸುತ್ತಾರೆ. ಮರ ಕಿತ್ತಳೆ ಹಳದಿವರ್ಣ ಹೊಂದಿರುತ್ತದೆ. ಒಳಮರ ಕಂದು ಮಿಶ್ರಿತ ಕೆಂಪಾಗಿರುತ್ತದೆ. ಟೀ ಪೆಟ್ಟಿಗೆಗಳನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ.

ಪಾರಿಜಾತ (ಹರಸಿಂಗಾರ್, ಶೇಫಾಲಿಕಾ) Nycthanthes arbor-tristis L.

ಇದು ದೊಡ್ಡ ಪೊದೆಯಾಗಿ ಇಲ್ಲವೇ ಸಣ್ಣ ಮರವಾಗಿ ಬೆಳೆಯುತ್ತದೆ. ಪಾರಿಜಾತದ ಬಗ್ಗೆ ನಮ್ಮ ಪುರಾಣ ಕಾವ್ಯಗಳಲ್ಲಿ ಅನೇಕ ಸ್ವಾರಸ್ಯ ಪೂರ್ಣ ಪ್ರಸಂಗಗಳಿವೆ.



10 **ಪಾರಿಜಾತ**

ಸಸ್ಯಶಾಸ್ತ್ರ ವಿವರಣೆ : ಇದು ಓಲಿಯೇಸಿ (Oleaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=44)Sharma & Muk.)963 b). ರಾತ್ರಿಯಲ್ಲಿ ಅರಳುವ ಈ ಹೂಗಳು ಸುತ್ತಲಿನ ಗಾಳಿಯನ್ನೆಲ್ಲಾ ಸುವಾಸನಾ ಭರಿತವಾಗಿ ಮಾಡುತ್ತವೆ. ಇರುವ 7 ಪುಷ್ಪ ದಳಗಳು ಬೆಳ್ಳಗೆ ಸುಂದರವಾಗಿರುತ್ತವೆ. ಕಾಯಿಗಳು ದುಂಡಗೆ ಚಪ್ಪಟೆಯಾಗಿರುತ್ತವೆ. ಮೊದಲು ಹಸುರಾಗಿದ್ದು ಅನಂತರ ಕಂದು ಬಣ್ಣಕ್ಕೆ ಬರುತ್ತವೆ. ಬೀಜಗಳು ಎರಡಿರುತ್ತವೆ.

ಉಪಯೋಗಗಳು : ಪಾರಿಜಾತ ಪುಷ್ಪಗಳನ್ನು ದೇವರಿಗರ್ಪಿಸಲೂ, ಹಾರಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ. ಈ ಹೂಗಳಿಂದ ಸುವಾಸನಾಭರಿತ ತೈಲವನ್ನು ತಯಾರಿಸುತ್ತಾರೆ. ಈ ಹೂಗಳಿಂದ ಕಿತ್ತಳೆ ಬಣ್ಣವಿರುವ ಬಣ್ಣವನ್ನು ತಯಾರಿಸುತ್ತಿದ್ದರು. ಅದರಿಂದ ರೇಶ್ಮೆ ಮತ್ತು ಹತ್ತಿ ಬಟ್ಟೆಗಳಿಗೆ ಬಣ್ಣ ಹಾಕಲಾಗುತ್ತಿತ್ತು. ಇದರ ತೊಗಟೆ, ಹೂ ಹಾಗೂ ಎಲೆಗಳನ್ನು ಔಷಧಿಗಾಗಿ ಉಪಯೋಗಿಸುತ್ತಾರೆ.

ಪಾವಟೆ (ಪಪ್ಪಾಡಿ) Pavfetta indica Linn.

ಇದು ದೊಡ್ಡ ಪೊದೆಯಂತೆ ಬಹಳ ಕಾಲವಿದ್ದು ಅನಂತರ ಸಣ್ಣ ವೃಕ್ಷವಾಗಿ ಬೆಳೆಯುತ್ತದೆ. ಗುಡ್ಡ ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=22 (Fagerlind 1937).

ಉಪಯೋಗಗಳು : ಇದನ್ನು ಸೌದೆಗಾಗಿ ಉಪಯೋಗಿಸುತ್ತಾರೆ. ಬೇರು ಮತ್ತು ಎಲೆಗಳನ್ನು ಔಷಧಿಗಾಗಿ ಉಪಯೋಗಿಸುತ್ತಾರೆ.

ಪಾವ್ರೊಂಟ (ಪಾಲ) Dichopsis elliptica Benth.

ಬಾಬಾಬುಡನ್ ಬೆಟ್ಟಗಳು, ಕೊಡಗು ಮತ್ತು ಇತರ ಪಶ್ಚಿಮಘಟ್ಟಗಳಲ್ಲೆಲ್ಲಾ ಈ ಮರ ಬೆಳೆಯುತ್ತದೆ. ತಂಪಾದ ಹವೆಯುಳ್ಳ, ಸಮುದ್ರ ಮಟ್ಟಕ್ಕೆ 3500 ರಿಂದ 4000 ಅಡಿಗಳಷ್ಟು ಎತ್ತರದಲ್ಲಿ ಇದು 100 ಅಡಿಗಿಂತಲೂ ಹೆಚ್ಚು ಎತ್ತರವಾಗಿ ಬೆಳೆಯಬಲ್ಲದು ಹಾಗೂ 1? ಅಡಿಗಿಂತಲೂ ಹೆಚ್ಚು ಸುತ್ತಳತೆ ಗಳಿಸಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಇದು ಸಪೋಟೇಸಿ (Sapotaceae) ಕುಟುಂಬಕ್ಕೆ ಸೇರಿದೆ. ಇದರ ಬುಡದಿಂದ ಹರಿಯುವ ಹಾಲನ್ನು ಇಂಡಿಯಾದ ಗಟಪರ್ಚ

ಎನ್ನುತ್ತಾರೆ. ಸ್ಥಳೀಯರು ಇದನ್ನು ಪಾಲ ಎಂದು ಕರೆಯುತ್ತಾರೆ. ಈ ಮರದ ಹೂಗಳು ಹಣ್ಣುಗಳು, ಎಲೆಗಳು ಹಿಪ್ಪೆಮರವನ್ನೇ (Madhuca indica) ಸ್ವಲ್ಪ ಮಟ್ಟಿಗೆ ಹೋಲುತ್ತವೆ.

ಉಪಯೋಗಗಳು : ಮನೆ ಕಟ್ಟಲು ಹಾಗೂ ಮನೆಯ ಸಾಮಾನುಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ಪಿಂಡೆಕಾಯಿಮರ (Myristica laurifolia Hook. f.)

ನಿತ್ಯಹರಿದ್ವರ್ಣದ ವೃಕ್ಷ ಜಾಯಿಕಾಯಿ ಮರದಂತೆಯೇ ಕಂಡುಬಂದರೂ ಇದರ ಕಾಯಿ ಮತ್ತು ಎಲೆಗಳನ್ನು ಅದರಂತೆ ಬಳಸುವುದಿಲ್ಲ. ಇದು ಮಲೆನಾಡಿನ ಅರಣ್ಯಗಳಲ್ಲಿ ಬೆಳೆಯುತ್ತದೆ. ಪಶ್ಚಿಮಘಟ್ಟಗಳ ನಿತ್ಯಹರಿದ್ವರ್ಣ ಅರಣ್ಯಗಳಲ್ಲಿಯೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿರಿಸ್ಟಿಕೇಸಿ (Myristicaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು ಹೊಳಪಾಗಿ ತುಪ್ಪಳರಹಿತವಾಗಿರುತ್ತವೆ. ಎಲೆಗಳ ಉದ್ದ 5 ರಿಂದ 10 ಇಂಚಿನಷ್ಟಿದ್ದು ಅಗಲ 2.5 ರಿಂದ 4 ಇಂಚಿನಷ್ಟಿರುತ್ತದೆ. ಸುಮಾರು 90 ಅಡಿ ಎತ್ತರಕ್ಕೆ ಬೆಳೆಯುವ ಈ ಮರ $2\frac{1}{2}$ ಅಡಿಗಿಂತ ಹೆಚ್ಚು ಸುತ್ತಳತೆಯನ್ನು ಗಳಿಸಬಲ್ಲದು. ಇದರ ತೊಗಟೆ ಕಪ್ಪು ಮಿಶ್ರಿತ ಹಸಿರು ಬಣ್ಣಕ್ಕಿರುತ್ತದೆ. ಇದು ಕೊಯ್ದಾಗ ಹಳದಿ ಮಿಶ್ರಿತ ಕಂದು ಬಣ್ಣಕ್ಕಿರುತ್ತದೆ. ಇದರ ಕಾಯಿ $2–2\frac{1}{2}$ ಇಂಚು ದಪ್ಪವಿರುತ್ತದೆ. ಹೂವುಗಳು ಸಣ್ಣಗಿದ್ದು ಟೊಂಗೆ, ರೆಂಬೆಗಳ ಮೇಲೆಲ್ಲಾ ಇರುತ್ತವೆ. ಕಾಯಿ ಸೇಬಿನ ಹಣ್ಣಿನ ಗಾತ್ರಕ್ಕೆ ಇರುತ್ತದೆ.

ಉಪಯೋಗಗಳು : ಈ ಮರದ ಉಪಯೋಗಗಳ ಬಗ್ಗೆ ಹೆಚ್ಚು ಮಾಹಿತಿ ದೊರಕಿಲ್ಲ.

ಪುತ್ರಂಜೀವ (Putranjiva roxburghii Wall.)

ಈ ಮರಕ್ಕೆ ಪುತ್ರಂಜೀವ ಎಂಬ ಹೆಸರು ಸಂಸ್ಕೃತದಿಂದ ಬಂದಿದೆ. ಕಲ್ಕತ್ತಾದ ಸಸ್ಯ ತೋಟದಲ್ಲಿ ಸೂಪರಿಂಟೆಂಡೆಂಟ್ ಆಗಿದ್ದ ಪ್ರಖ್ಯಾತ ಸಸ್ಯ ಶಾಸ್ತ್ರಜ್ಞ ವಿಲಿಯಂ ರಾಕ್ಸ್‌ಬರ್ಗ್‌ರವರ ಗೌರವಾರ್ಥವಾಗಿ ಇದಕ್ಕೆ ರಾಕ್ಸ್‌ಬರ್ಘಿ ಎಂದು ಹೆಸರಿಡಲಾಗಿದೆ. ಇದರ ಕಾಯಿಗಳನ್ನು ತಮ್ಮ ಮಕ್ಕಳ ಕುತ್ತಿಗೆಗೆ ಕಟ್ಟಿದರೆ ಮಕ್ಕಳು ಯಾವಾಗಲೂ ಆರೋಗ್ಯವಾಗಿರುತ್ತಾರೆಂಬ ನಂಬಿಕೆ ಮದರಾಸ್ ಪ್ರಾಂತ್ಯದಲ್ಲಿ ಕಾಣಬರುತ್ತದೆ. ಹಾಗೆ ಮಾಡಿರುವುದನ್ನು ನಾನು ನೋಡಿದ್ದೇನೆ ಎಂದು ಡಾ. ಬೆರಿ ಹೇಳಿದ್ದಾರೆ. ಈ ಮರ

ಭಾರತ ಮತ್ತು ಸಿಲೋನ್ ದೇಶಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಬೆಳೆಯುತ್ತದೆ. ಪಶ್ಚಿಮಘಟ್ಟಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : 60–70 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರ ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=14 (Perry 1943) ನೇರವಾದ ಬುಡವುಳ್ಳ ಈ ಮರ ಚೆನ್ನಾಗಿ ಕವಲೊಡೆದು ಹರಡಿಕೊಂಡು ಒಳ್ಳೆ ನೆರಳನ್ನು ಕೊಡಬಲ್ಲದು. ಎಳೆ ಎಲೆಗಳು ತಿಳಿ ಹಸಿರಾಗಿದ್ದರೂ ಬಲಿತ ಎಲೆಗಳು ಒರಟಾಗಿ ಹೊಳೆಯುತ್ತಿರುತ್ತವೆ. ಏಕಲಿಂಗ ಪುಷ್ಪಗಳು ಬೇರೆ ಬೇರೆ ಮರಗಳ ಮೇಲೇ ಬಿಡುತ್ತವೆ. ಇದರ ಹಣ್ಣು ಬಹಳ ಚಿಕ್ಕದಿದ್ದು ಅಂಡಾಕೃತಿಯನ್ನು ಹೊಂದಿರುತ್ತದೆ.

ಉಪಯೋಗಗಳು : ಇದನ್ನು ರಸ್ತೆಯ ಸಾಲು ಮರವನ್ನಾಗಿ ಬೆಳೆಸುತ್ತಾರೆ. ನೆಗಡಿಗೆ ಇದರ ಎಲೆಗಳನ್ನು ಉಪಯೋಗಿಸುತ್ತಾರೆ. ಇದರ ಕಾಯಿಗಳಿಂದ ಮಾಡಿದ ಹಾರಗಳನ್ನು ಫಕೀರರು ಧರಿಸಿರುತ್ತಾರೆ. ಈ ಹಾರದಿಂದ ಕೆಟ್ಟ ವಿಷಯುಗಳೆಲ್ಲದರಿಂದ ರಕ್ಷಣೆ ಸಿಕ್ಕುವುದೆಂಬುದೇ ಅವರ ನಂಬಿಕೆ. ಬೀಜಗಳಿಂದ ತೆಗೆದ ಎಣ್ಣೆಯನ್ನು ದೀಪ ಉರಿಸಲು ಉಪಯೋಗಿಸುತ್ತಾರೆ.

ಪುತ್ರಜೀವಿ (ಮದರಾಸ್ ಅಶೋಕ) Polyalthia longifolia (Sorm.) Thw.

ಸಿಲೋನ್ ಮತ್ತು ದಕ್ಷಿಣ ಭಾರತಗಳನ್ನು ತನ್ನ ತವರಾಗಿ ಪಡೆದಿರುವ ಈ ಮರವನ್ನು ಕೆಲವು ವೇಳೆ ಅಶೋಕ ವೃಕ್ಷವೆಂದು ತಿಳಿದುಕೊಳ್ಳುವುದುಂಟು. ಆದರೆ ಈ ಮೊದಲೇ ತಿಳಿಸಿರುವಂತೆ ನಿಜವಾದ ಅಶೋಕ ಸರಕಾ ಇಂಡಿಕಾ (Saraca indica) ಆಗಿದೆ. ಈ ಮರದ ಹಳೆಯ ಹೆಸರಾದ ಜೊನೀಸಿಯಾ ಅಶೋಕ (Jonesia asoka) ಎಂಬುದರಿಂದ ಈ ಮರಕ್ಕೆ ಅಶೋಕ ಎಂಬ ಹೆಸರು ಬಂದಿರಬಹುದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಅನೋನೇಸಿ (Annonaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=18 (Asana & A. 1945) ಈ ಸುಂದರ ನಿತ್ಯಹರಿದ್ವರ್ಣದ ವೃಕ್ಷ 40–50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಶಕ್ತಿಯನ್ನು ಹೊಂದಿದೆ. ಇದರ ಎಲೆಗಳು 3 ರಿಂದ 9 ಇಂಚು ಉದ್ದವಿದ್ದು $\frac{3}{4}$ ಇಂಚಿನಿಂದ $1\frac{1}{2}$ ಇಂಚು ಅಗಲವಾಗಿರುತ್ತವೆ. ಹೂವುಗಳು ಹಸಿರು ಬಣ್ಣಕ್ಕಿರುತ್ತವೆ. ಹಣ್ಣುಗಳು ಮೊದಲು ಹಸಿರಾಗಿದ್ದು ಅಂಡಾಕೃತಿಯನ್ನು ಹೊಂದಿರುತ್ತವೆ. ಬಲಿತಮೇಲೆ ಕೆಂಪಾಗುತ್ತವೆ. ಈ ಮರ ಫೆಬ್ರವರಿ ತಿಂಗಳಲ್ಲಿ ಹೂ ಬಿಟ್ಟು ಆಗಸ್ಟ್, ಸೆಪ್ಟೆಂಬರ್ ತಿಂಗಳ ತನಕ ಫಲಭರಿತವಾಗುತ್ತದೆ. ಬೀಜಗಳಿಂದ

ಸುಲಭವಾಗಿ ಸಸಿಗಳನ್ನು ಪಡೆಯಬಹುದು. ಈ ವರ್ಗದ ಒಂದು ವೃಕ್ಷ ತನ್ನ ರೆಂಬೆಗಳನ್ನು ಸುತ್ತಲೂ ಹರಡಿಕೊಳ್ಳದೆ, ಶಂಖಾಕೃತಿಯಲ್ಲಿ ಬೆಳೆಯುತ್ತದೆ.

ಉಪಯೋಗಗಳು : ರಸ್ತೆಗಳಲ್ಲಿ ಸೌಂದರ್ಯಯುತ ಸಾಲು ಮರಗಳಾಗಿ ಇದನ್ನು ಬೆಳೆಸುತ್ತಾರೆ. ಉದ್ಯಾನಗಳಲ್ಲೂ, ಕೈ ತೋಟಗಳಲ್ಲೂ ಅಲಂಕಾರ ವೃಕ್ಷಗಳಾಗಿ ಬೆಳೆಸುತ್ತಾರೆ. ಇದರ ಮರ ಬಹು ಮೃದುವಾಗಿರುತ್ತದೆ. 1 ಘನ ಅಡಿಗೆ ಕೇವಲ 37 ಪೌಂಡುಗಳಷ್ಟು ತೂಗಬಲ್ಲದು. ಸೀಸದ ಕಡ್ಡಿಗಳು ಪೆಟ್ಟಿಗೆಗಳು, ಹಾಗೂ ವಾದ್ಯಗಳ ಮರದ ಭಾಗಗಳನ್ನು ಮಾಡಲು ಇದನ್ನು ಉಪಯೋಗಿಸುತ್ತಾರೆ. ಚೀನಾದಲ್ಲಿ ಇದನ್ನು ಬೆಂಕಿಕಡ್ಡಿ ಮಾಡಲು ಉಪಯೋಗಿಸುತ್ತಾರೆ. ಮರದ ತೊಗಟೆಯಿಂದ ನಾರು ತೆಗೆಯುತ್ತಾರೆ.

ಪೆರುಂಬೆ ಉಣ್ಣೆ (Prosopis spicigera L.)

ಇದು ಮುಳ್ಳುಗಳಿಂದ ಕೂಡಿದ ಸಣ್ಣ ಮರ. ಚಳಿಗಾಲದಲ್ಲಿ ಎಲೆಗಳು ಉದುರಿ ಹೋಗುತ್ತವೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ಕಾಯಿ 6 ಇಂಚಿನಷ್ಟು ದೊಡ್ಡದಿದ್ದು ಬೂದು ಬಣ್ಣವನ್ನು ಹೊಂದಿರುತ್ತವೆ. ಇದರ ಒಳ ಮರ ಗಟ್ಟಿಯಾಗಿದ್ದರೂ ಬಾಳಿಕೆ ಬರುವಂಥಾದ್ದಲ್ಲ.

ಉಪಯೋಗಗಳು : ಸೌದೆಗಾಗಿ ಈ ಮರವನ್ನು ಉಪಯೋಗಿಸುತ್ತಾರೆ. ಬೇಲಿಗಾಗಿಯೂ ಬೆಳೆಸುತ್ತಾರೆ.

ಪೆರಿಂಕಾರ ಮರ (Elaeocarpus serratus L.)

ಉತ್ತರ ಕರ್ನಾಟಕದಲ್ಲೆಲ್ಲಾ ಕಂಡುಬರುವ ಈ ಮರ ತಿರುವಾಂಕೂರಿನಲ್ಲಿಯೂ ಕಾಣಬರುತ್ತದೆ. ಪೂರ್ವ ಹಿಮಾಲಯಗಳಲ್ಲಿ ಸಮುದ್ರಮಟ್ಟಕ್ಕೆ 3000 ಅಡಿಗಳ ಎತ್ತರದವರೆಗೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಎಲಿಯೋಕಾರ್ಪೆಸಿ (Elaeocarpaceae) ಕುಟುಂಬಕ್ಕೆ ಸೇರಿದೆ. ಮಧ್ಯಮ ಎತ್ತರದ ಈ ಮರದ ಎಲೆಗಳು ಸ್ವಲ್ಪ ಒರಟಾಗಿ ಚೂಪಾದ ತುದಿಗಳನ್ನು ಹೊಂದಿರುತ್ತವೆ. ಹೂಗಳು ಬೆಳ್ಳಗಿದ್ದು ಗೊಂಚಲುಗಳಾಗಿರುತ್ತದೆ. ಹಣ್ಣು 1 ರಿಂದ $1\frac{1}{2}$ ಇಂಚು ಉದ್ದವಿದ್ದು ಹಸಿರಾಗಿರುತ್ತದೆ. ಒಂದು ಹಣ್ಣಿಗೆ ಒಂದೇ ಬೀಜ ಇರುತ್ತದೆ.

ಉಪಯೋಗಗಳು : ಇದರ ಹಣ್ಣನ್ನು ತಿನ್ನುತ್ತಾರೆ ಇದರ ಎಲೆಗಳನ್ನು ವಿಷಾಪಹಾರಿಗಳಾಗಿ ಉಪಯೋಗಿಸುತ್ತಾರೆ. ಇದರಲ್ಲಿ "ಸಿ" ಜೀವಸತ್ವ ಇರುತ್ತದೆ. ಇದರ ಮರ ಬೂದು ಮಿಶ್ರಿತ ಬಿಳೀ ಬಣ್ಣಕ್ಕಿರುತ್ತದೆ ತೂಕ ಒಂದು ಘನ ಅಡಿಗೆ 30 ರಿಂದ 33 ಪೌಂಡುಗಳಷ್ಟಿರುತ್ತದೆ. ಬೆಂಕಿ ಪೆಟ್ಟಿಗೆಗಳನ್ನು ಮಾಡಲೂ, ಸುತ್ತು ಕಟ್ಟುವ ಪೆಟ್ಟಿಗೆಗಳನ್ನು (ಪ್ಯಾಕಿಂಗ್ ಕೇಸ್) ಮಾಡಲೂ ಉಪಯೋಗಿಸುತ್ತಾರೆ.

ಬಗನಿ ಮರ (ಬೈರಿ ಮರ) Caryota urens L.

ಭಾರತ, ಬರ್ಮಾ, ಸಿಲೋನ್, ಮಲಯಾ ದೇಶಗಳಲ್ಲೆಲ್ಲಾ ಬೆಳೆಯುವ ಈ ಬಗನಿ ಮರವು ಮೈಸೂರಿನ ಎಲ್ಲೆಡೆಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ. ಒಂದು ಬಗನಿ ಮರವಂತೂ ನಮ್ಮ ಮೈಸೂರು ಮಾನಸಗಂಗೋತ್ರಿಯ ಜೀವಶಾಸ್ತ್ರ ವಿಭಾಗದ ಹಿಂಭಾಗದಲ್ಲೇ ಇದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಮೆ (Palmae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=32 (Sato 1946). ಇದರ ಎಲೆಯನ್ನು ನೋಡಿಯೇ ಸಾಮಾನ್ಯ ಮನುಷ್ಯ ಆಶ್ಚರ್ಯಪಡಬಲ್ಲ. ಗೊಂಚಲು ಗೊಂಚಲುಗಳಾಗಿ ಒಂದು ಮೀಟರ್‌ಗಿಂತಲೂ ಉದ್ದವಾಗಿ ಇಳಿ ಬಿದ್ದಿರುವ ಈ ಮರದ ಹೂಗೊಂಚಲುಗಳನ್ನು ನೋಡಿದರಂತೂ ಇದೊಂದು ವಿಚಿತ್ರ ವೃಕ್ಷವೆಂದೇ ಭಾವಿಸುತ್ತಾರೆ. ಮೈಸೂರಿನ ಜನರು ಇವುಗಳನ್ನು ನೋಡಿ ಇವುಗಳು ತುದಿ ಕತ್ತರಿಸಿದ ಕುದುರೆಯ ಬಾಲದಂತೆ ಇವೆಯೆಂದು ಹೇಳುತ್ತಾರೆ. ಇದರ ಕಾಯಿಗಳು ಜಾಯಿಕಾಯಿಗಿಂತಲೂ ಸ್ವಲ್ಪ ಸಣ್ಣಗಿದ್ದು ಒಂದು ಅಥವಾ ಎರಡು ಬೀಜಗಳನ್ನು ಹೊಂದಿರುತ್ತವೆ.

ಉಪಯೋಗಗಳು : ಈ ಮರಕ್ಕೆ 15 ಅಥವಾ 20 ವರ್ಷಗಳಾದಾಗ ಮರಕ್ಕೆ ಗಾಯಮಾಡಿ ಗಡಿಗೆ ಕಟ್ಟುತ್ತಾರೆ. ವರ್ಷಕ್ಕೆ ಸುಮಾರು 180 ಗ್ಯಾಲನ್‌ಗಳಷ್ಟು ಮದ್ಯ ತೆಗೆದ ಆಧಾರಗಳಿವೆ. ಇದರ ಬೀಜಗಳನ್ನು ಮುಸ್ಲಿಮರು ಮಣಿಗಳಂತೆ ಉಪಯೋಗಿಸುತ್ತಾರೆ. ಈ ಮರದ ಭಾಗಗಳಿಂದ ತೆಗೆದ ನಾರಿನಿಂದ ಹಗ್ಗಗಳನ್ನು ತಯಾರಿಸುತ್ತಾರೆ. ಎಲೆಗಳಿಂದ ಬುಟ್ಟಿಗಳನ್ನು ಹೆಣೆಯುತ್ತಾರೆ. ಮಲೆನಾಡಿನ ಕೆಲವೆಡೆಗಳಲ್ಲಿ ಇದರ ಸಿಹಿ ರಸದಿಂದ ಬೆಲ್ಲ ಮಾಡುತ್ತಾರೆ.

ಬನ್ನಿ ಮರ (Acacia ferruginea DC.

ಹಿಂದೂ ಹಬ್ಬಗಳಲ್ಲಿ ಒಂದಾದ "ನವರಾತ್ರಿ"ಯ ದಶಮಿಯಂದು ಮೈಸೂರಿನ ಶ್ರೀಮನ್ಮಹಾರಾಜರವರು ಬನ್ನಿಮಂಟಪಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುವ ವೃಕ್ಷವೇ

ಇದು. ಪಶ್ಚಿಮ ಘಟ್ಟಗಳಲ್ಲಿ, ಶಿವಮೊಗ್ಗ ಜಿಲ್ಲೆಯಲ್ಲಿ ಈ ಮರವು ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಕಂದುಬಣ್ಣದ ತೊಗಟೆಯುಳ್ಳ ಈ ಮರವು ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ಒಳ ಮರವು ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿದ್ದು ಬಹುಕಾಲ ಬಾಳಿಕೆ ಬರುವ ಗುಣವನ್ನು ಹೊಂದಿದೆ. ತೂಕವು ಘನ ಅಡಿಯೊಂದಕ್ಕೆ 70 ಪೌಂಡುಗಳಷ್ಟಿರುತ್ತದೆ. ಏಪ್ರಿಲ್ ತಿಂಗಳಿನಲ್ಲಿ ಪುಷ್ಪಭರಿತವಾಗಿರುವ ಈ ಮರದ ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಪಡೆಯಬಹುದು. ಇದರ ಬಿಡಿ ಎಲೆಗಳು 10 ರಿಂದ 20 ಜೊತೆ ಇದ್ದು ಬಹಳ ಚಿಕ್ಕವಿರುತ್ತವೆ. ಪುಷ್ಪಗಳ ಬಣ್ಣವು ಕೆಂಪು ಮಿಶ್ರಿತ ಹಳದಿಯಾಗಿರುತ್ತದೆ. ಪುಷ್ಪಪಾತ್ರೆಗಿಂತ ಪುಷ್ಪದಳಗಳು ಎರಡರಷ್ಟು ದೊಡ್ಡವಿರುತ್ತವೆ. ಇದರ ಕಾಯಿಗಳು 3 ರಿಂದ 5 ಇಂಚು ಉದ್ದವಿದ್ದು $\frac{3}{4}$ ರಿಂದ 1 ಇಂಚು ಅಗಲವಿರುತ್ತವೆ. ಪ್ರತಿಕಾಯಿಯಲ್ಲಿ 4 ರಿಂದ 7 ಬೀಜಗಳಿರುತ್ತವೆ.

ಉಪಯೋಗಗಳು : ಹಿಂದೂ ರಾಜರುಗಳಿಗೆಲ್ಲ ಪವಿತ್ರವಾದ ಈ ಮರ ಕಾಡಿನಲ್ಲಿ ಹೇರಳವಾಗಿದ್ದರೂ ಸಾಮಾನ್ಯವಾಗಿ ಯಾರೂ ಕಡಿಯುವುದಿಲ್ಲ. ಮನೆಯ ಸಾಮಾನುಗಳಿಗೂ ಹಾಗೂ ವ್ಯವಸಾಯದ ಉಪಕರಣಗಳಿಗೂ ಇದು ಒಳ್ಳೆಯ ಮರವಾಗಿದೆ.

ಬಲ್ಲಗಿ (ಒಲ್ಲಂಗಿ ಮರ) Poeciloneuron indicum Bedd.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣದ ಷೋಲಾ ಅರಣ್ಯಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ಈ ಮರದ ಹಳದಿ ಮಿಶ್ರಿತ ಬಿಳಿ ಬಣ್ಣದ ಹೂಗಳು ಸುವಾಸನಾಭರಿತವಾಗಿರುತ್ತವೆ. ಇದರ ಮರವು ಬಹಳ ಗಟ್ಟಿಯಾಗಿರುತ್ತದೆ. ಇದರ ಹಣ್ಣು ಒಂದೇ ಒಂದು ಬೀಜವನ್ನು ಹೊಂದಿರುತ್ತದೆ.

ಉಪಯೋಗಗಳು : ರೈಲ್ವೆ ಸ್ಲೀಪರುಗಳು, ಕಂಬಗಳು, ಒನಕೆಗಳು ಇವನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ.

ಸೂಚನೆ : ಇದೇ ಜಾತಿಗೆ ಸೇರಿದ ಇನ್ನೊಂದು ಪ್ರಭೇದವನ್ನು ಬಲ್ಲಗಿ ಎಂದೇ ಕರೆಯುತ್ತಾರೆ. (Poeciloneuron Panciflorum Bedd). ಆದರೆ ಇದು ಮೇಲಿನ ಮರಕ್ಕಿಂತ ಚಿಕ್ಕದಿದ್ದು 4 ಪುಷ್ಪ ಪತ್ರಗಳು, ಮತ್ತು 6 ಪುಷ್ಪದಳ

ಗಳನ್ನು ಹೊಂದಿರುತ್ತದೆ. (ಹಿಂದಿನದರಲ್ಲಿ 5 ಪುಷ್ಪಪತ್ರಗಳು ಮತ್ತು 5 ಪುಷ್ಪ ದಳಗಳು) ಆದರಂತೆಯೇ ಈ ಮರವೂ ಗಟ್ಟಿಯಾಗಿದ್ದರೂ ಇದನ್ನು ವಾಯು ವಿಹಾರದ ಕೋಲುಗಳನ್ನೂ (walking sticks) ಮಾಡಲೂ, ಸೌದೆಗಾಗಿಯೂ ಉಪಯೋಗಿ ಸುತ್ತಾರೆ.

ಬಾಗೆಮರ (ಬಾಗಿ, ಹೊಂಬಾಗೆ, ತಿರುಚಲ್) Albizzia lebbeck (L.) Benth.

ಮೈಸೂರಿನ ಎಲ್ಲಾ ಜಿಲ್ಲೆಗಳಲ್ಲೂ ಸಾಮಾನ್ಯವಾಗಿ ಬೆಳೆಯುವ ಈ ಮರವನ್ನು ಹಿಂದೆ ಸಾಲು ಮರವಾಗಿ ಬೆಳಸುತ್ತಿದ್ದರು. ಇಟಲಿಯ ಜೀವಶಾಸ್ತ್ರಜ್ಞ ಅಲ್ಬಿಜಿ ಎಂಬುವರಿಂದ ಈ ಮರಕ್ಕೆ ಅಲ್ಬಿಜಿಯಾ ಎಂಬ ಹೆಸರು ಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Atchison 1951). 40 ರಿಂದ 70 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ಎಲೆಗಳು ಕಾಲಕಾಲಕ್ಕೆ ಉದುರಿ ಹೋಗುತ್ತಿರುತ್ತವೆ. ಎಲೆಗಳ ತೊಟ್ಟಿನ ಮೇಲೆ ದೊಡ್ಡ ಗ್ರಂಥಿಯೊಂದಿರುತ್ತದೆ. ಈ ಮರವು ಮಾರ್ಚಿ-ಏಪ್ರಿಲ್ ತಿಂಗಳುಗಳಲ್ಲಿ ಪುಷ್ಪಭರಿತ ವಾಗುತ್ತದೆ. ಇದರ ಕಾಯಿಗಳು 4 ರಿಂದ 12 ಇಂಚು ಉದ್ದವಿದ್ದು $\frac{3}{4}$ ರಿಂದ $1\frac{3}{4}$ ಇಂಚು ಅಗಲವಿದ್ದು ಚಪ್ಪಟೆಯಾಗಿ ಬಹಳ ಹಗುರವಾಗಿರುತ್ತದೆ. ಸ್ವಲ್ಪ ಗಾಳಿ ಬೀಸಿದರೂ ವಟವಟ ಶಬ್ದಮಾಡಿ ಹಾರಿಹೋಗುವ ಈ ಬಾಗೆ ಕಾಯಿಗಳನ್ನು ಶಿವ ಮೊಗ್ಗ ಜಿಲ್ಲೆಯಲ್ಲಿ "ಹೆಂಗಸರ ನಾಲಗೆ ಕಾಯಿ" ಎಂದು ಕರೆಯುತ್ತಾರೆ. ಈ ಕಾಯಿ ಯೊಳಗೆ 4-12 ಅಂಡಾಕೃತಿಯ ಚಪ್ಪಟೆಯಾದ ಬೀಜಗಳಿರುತ್ತವೆ. ಅವುಗಳು ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತವೆ. ಇದರ ಮರವು ಗಟ್ಟಿಯಾಗಿದ್ದು ಒಳಮರವು ಕಪ್ಪು ಮಿಶ್ರಿತ ಕೆಂಪು ಬಣ್ಣವನ್ನುಹೊಂದಿರುತ್ತದೆ. ತೂಕವು ಘನ ಅಡಿ ಯೊಂದಕ್ಕೆ 50 ರಿಂದ 60 ಪೌಂಡುಗಳಷ್ಟು ಬರುತ್ತದೆ.

ಉಪಯೋಗಗಳು : ಶಿವಮೊಗ್ಗ ಜಿಲ್ಲೆಯಲ್ಲಿ ಈ ಮರದಿಂದ ಮನೆ ಸಾಮಾನು ಗಳನ್ನು ತಯಾರಿಸುತ್ತಾರೆ. ಹಿಂದೆ ಈ ಮರವನ್ನು ಇಂಗ್ಲೆಂಡಿಗೆ ರಫ್ತು ಮಾಡಲಾಗು ತ್ತಿತ್ತು. ಅಲ್ಲೆಲ್ಲಾ ಈ ಮರವು "ಈಸ್ಟ್ ಇಂಡಿಯನ್ ವಾಲ್‌ನಟ್" ಎಂದು ಪ್ರಸಿದ್ಧ ವಾಗಿತ್ತು. ಇದರ ಸೊಪ್ಪನ್ನು ಆಡುಗಳು ತಿನ್ನುತ್ತವೆ. ತಂಪು ಉಂಟುಮಾಡಲು ಇದರ ತೊಗಟೆ ಮತ್ತು ಹೂಗಳನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ.

ಬಾದಾಮಿ ಮರ (Terminalia Catappa L.)

ಭಾರತದ ಎಲ್ಲ ಕಡೆಗಳಲ್ಲೂ ಈ ಮರವನ್ನು ಬೆಳೆಸಲು ಪ್ರಯತ್ನಿಸಿದ್ದರೂ ಒಣ ಹವೆಯುಳ್ಳ ಪ್ರದೇಶಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಇದು ಮೆಲುಕ್ಕಾಸ್ ಮತ್ತು ಅಂಡಮಾನ್ ದ್ವೀಪನಿವಾಸಿಯಾಗಿತ್ತು.

ಸಸ್ಯಶಾಸ್ತ್ರ ವಿವರಣೆ : ಈ ಮರ ಕೋಂಬ್ರಿಟೇಸಿ (Combretaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣ ತಂತುಗಳ ಸಂಖ್ಯೆ 2n=24 (Simmonds 1954) ಡಿಸೆಂಬರ್ ಜನವರಿಗಳಲ್ಲಿ ಎಲೆಗಳನ್ನೆಲ್ಲಾ ಕಳೆದುಕೊಳ್ಳುವ ಈ ಮರ ಸುಮಾರು 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು 5 ರಿಂದ 12 ಇಂಚು ಉದ್ದವಾಗಿಯೂ 3 ರಿಂದ 6 ಇಂಚು ಅಗಲವಾಗಿಯೂ ಇರುತ್ತವೆ. ಹೂಗಳು ಚಿಕ್ಕವಿದ್ದು 6 ರಿಂದ 8 ಇಂಚು ಉದ್ದವಿರುವ ಹೂಗೊಂಚಲಿನಲ್ಲಿರುತ್ತವೆ. ಕಾಯಿಗಳು 1½ ಯಿಂದ 2 ಇಂಚು ಉದ್ದವಿರುತ್ತವೆ. ಬೀಜಗಳನ್ನು ನೆಟ್ಟು ಸಸಿಗಳನ್ನು ಪಡೆಯಬಹುದು. ಈ ಬಾದಾಮಿ ಮರ ನಾವು ಉಪಯೋಗಿಸುವ ಬಾದಾಮಿ ಕಾಯಿ ಮರವಲ್ಲ. ಆ ಬಾದಾಮಿ ಮರ ಪ್ರೂನಸ್ ಅಮಿಗ್ಡಾಲಿಸ್ (Prunus amygdalis) ಆಗಿದೆ.

ಉಪಯೋಗಗಳು : ಇದರ ಮರ ಹಗುರವಾಗಿದ್ದರೂ ಬಾಳಿಕೆ ಬರುವ ಗುಣವನ್ನು ಹೊಂದಿದೆ. ಇದರ ಬೀಜಗಳಿಂದ ತೆಗೆದ ಎಣ್ಣೆಗೆ ನಿಜವಾದ ಬಾದಾಮಿ ಎಣ್ಣೆಯ ವಾಸನೆಯೇ ಇರುತ್ತದೆ. ಇದರ ತೊಗಟೆ ಮತ್ತು ಎಲೆಗಳಿಂದ ತೆಗೆದ ಕಪ್ಪು ಬಣ್ಣದಂತಹ ಪದಾರ್ಥವನ್ನು ಹಾಸನ ಜಿಲ್ಲೆಯ ಹಳ್ಳಿಗಳಲ್ಲಿ ಹಲ್ಲುಗಳಿಗೆ ಕಪ್ಪು ಬಣ್ಣ ಬರಿಸಿಕೊಳ್ಳಲು ಹೆಂಗಸರುಗಳು ಬಳಸುತ್ತಾರೆ.

ಬಾಷಾವರ (Glochidion neilgherrense wight.)

ಈ ಮರದ ನಾಲ್ಕೈದು ಪ್ರಭೇದಗಳು ಮಲೆನಾಡಿನ ಅರಣ್ಯದಲ್ಲಿ ಬೆಳೆಯುತ್ತವೆಂದು ಕೆಲವು ಆಧಾರಗಳಿಂದ ತಿಳಿದು ಬರುತ್ತದೆ. ನೀಲಗಿರಿಯಲ್ಲಿ ಹಾಗೂ ಪಶ್ಚಿಮ ಘಟ್ಟಗಳ ಘೋರ ಅರಣ್ಯಗಳಲ್ಲಿ ಸಮುದ್ರ ಮಟ್ಟಕ್ಕೆ 5000 ಅಡಿಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ

ಸಸ್ಯಶಾಸ್ತ್ರ ವಿವರಣೆ : ಈ ಮರ ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. Glochidion Zeylanicum A. Juss, G. arboreum wight. G. malabaricum. G. Johnstonei Hook. Glochidion ralphii Hook. ಮುಂತಾದುವೆಲ್ಲ ನಮ್ಮ ಅರಣ್ಯ

ಗಳಲ್ಲಿ ಬೆಳೆಯುತ್ತವೆಂದು ಹೇಳಲಾಗಿದ್ದರೂ ಇವುಗಳ ಮರದ ಗುಣದ ಬಗ್ಗೆ ಹಾಗೂ ಉಪಯೋಗಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರಕಿಲ್ಲ.

ಬಾಲಗೆ ಮರ (ಗೊಡ್ಡಣ, ಹಾಳ) Garuga pinnata Roxb.

ಈ ಮರ ಭಾರತ ಮತ್ತು ಫಿಲಿಫೈನ್ಸ್ ದೇಶಗಳಲ್ಲಿ ಚೆನ್ನಾಗಿ ಬೆಳೆಯುತ್ತವೆ

ಸಸ್ಯಶಾಸ್ತ್ರ ವಿವರಣೆ : ಈ ಮರ ಬರ್ಸರೇಸಿ (Burseraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Ghosh 1961) 30 ರಿಂದ 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ತೊಗಟೆ ಆಗಾಗ್ಗೆ ಉದುರಿ ಹೋಗುತ್ತಿರುತ್ತದೆ. ಎಲೆಗಳು 6 ರಿಂದ 18 ಇಂಚು ಉದ್ದವಿದ್ದು ಹತ್ತು ಬಿಡಿ ಎಲೆ ಜೊತೆಗಳನ್ನು ಹೊಂದಿರುತ್ತವೆ. ಕೊನೆಗೆ ಒಂದು ಎಲೆ ಬಿಡಿ ಎಲೆ ಇರುತ್ತದೆ. ಎಲೆಗಳ ಮೇಲೆ ಕೀಟಗಳಿಂದಾದ ಕೆಂಪು ಗುಳ್ಳೆಯಿರುತ್ತದೆ. ಮರದ ಎಲೆಗಳೆಲ್ಲಾ ಉದುರಿರುವಾಗ ಹಳದಿ ಬಣ್ಣದ ಹೂಗೊಂಚಲುಗಳು ಮೂಡುತ್ತವೆ. ಇದರ ಕಾಯಿಗಳು ಸ್ವಲ್ಪ ದುಂಡಗಿದ್ದು ಮೊದಲು ಹಸಿರಾಗಿರುತ್ತವೆ. ಅನಂತರ ಕಪ್ಪು ಮಿಶ್ರಿತ ಹಳದಿ ಬಣ್ಣ ಹೊಂದುತ್ತವೆ.


ಉಪಯೋಗಗಳು : ಇದರ ಕಾಯಿಗಳನ್ನು ತಿನ್ನುತ್ತಾರೆ. ಹಲವು ಕಡೆ ಉಪ್ಪಿನ ಕಾಯಿ ಹಾಕುತ್ತಾರೆಂದು ಹೇಳಲಾಗುತ್ತಿದೆ. ಆದರೆ ಮೈಸೂರಿನಲ್ಲಿ ಇಂಥ ಅಭ್ಯಾಸಗಳೊಂದೂ ಕಂಡು ಬಂದಿಲ್ಲ. ಒಂದು ಘನ ಅಡಿಗೆ 40 ಪೌಂಡುಗಳಷ್ಟು ಮಾತ್ರ ತೂಗುವ ಈ ಮರವನ್ನು ಸೌದೆಗಾಗಿ ಬಳಸುತ್ತಾರೆ.

ಬೀಟೆ ಮರ (ಬೀಟೆ, ತೊಡಗಟ್ಟೆ ಮರ) Dalbergia latifolia Roxb.

ಬ್ರಿಟಿಷರ ಆಧಿಪತ್ಯದ ಕಾಲದಲ್ಲಿ ಭಾರತದ ಕಪ್ಪು ಮರ, ಭಾರತದ ಗುಲಾಬಿ ಮರ ಎಂದೆಲ್ಲಾ ಈ ಮರವನ್ನು ಕರೆಯಲಾಗುತ್ತಿತ್ತು. ಇಂದಿಗೂ ನಮ್ಮ ದೇಶದಿಂದ ಬೇರೆ ದೇಶಗಳಿಗೆ ರಫ್ತು ಮಾಡುತ್ತಿರುವ ಮರಗಳಲ್ಲಿ ಬೀಟೆ ಮರವು ಒಂದಾಗಿದೆ. ಮೈಸೂರು ಸಂಸ್ಥಾನದಲ್ಲಿ ಹಾಸನ, ಕೊಡಗು ಮತ್ತು ಮೈಸೂರು ಜಿಲ್ಲೆಗಳ ಕೆಲವು ಅರಣ್ಯ ಪ್ರದೇಶಗಳಲ್ಲಿ ಈ ಮರ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೇಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=20 (Atchison 1951). ಸಮುದ್ರ ಮಟ್ಟಕ್ಕೆ 2500 ಅಡಿಗಳಿಂದ 4000 ಅಡಿಗಳವರೆಗಿನ ಪ್ರದೇಶಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಒಮ್ಮೊಮ್ಮೆ 100 ಅಡಿಗಳಷ್ಟು ಎತ್ತರಕ್ಕೆ

ಬೆಳೆದಿರುವ ಆಧಾರಗಳೂ ಉಂಟು. ಚಳಿಗಾಲದ ಕೊನೆಗೆ ಎಲೆಗಳನ್ನು ಕಳೆದು ಕೊಳ್ಳುವ ಈ ಮರದ ಎಲೆಗಳಿಗೆ ಮಧ್ಯೆ ಕಡ್ಡಿಯೊಂದಿದ್ದು ಅದರ ಎರಡು ಕಡೆಯೂ 5 ರಿಂದ 7 ಬಿಡಿ ಎಲೆಗಳಿರುತ್ತವೆ. ಹೂಗಳು ಬೆಳ್ಳಗಿದ್ದು ಹೊಂಗೆ ಮರದ ಹೂ ಗಳಂತಿರುತ್ತವೆ. ಚಪ್ಪಟೆಯಾದ ಕಾಯಿಯಲ್ಲಿ 1 ರಿಂದ 3 ಬೀಜಗಳಿರುತ್ತವೆ. ಈ ಮರ ಸಾಮಾನ್ಯವಾಗಿ ಬೇಸಿಗೆಯಲ್ಲಿ ಹೂ ಬಿಡುತ್ತದೆ.



ಬೀಟೆಮರ

ಸ್ವೀಡಿಷ್ ಸಸ್ಯಶಾಸ್ತ್ರಜ್ಞ N. ಡಾಲ್ಬರ್ಗ್‌ರವರಿಂದ ಈ ಮರಕ್ಕೆ ಡಾಲ್ಬರ್ಜಿಯಾ ಎಂಬ ಹೆಸರು ಬಂದಿದೆ. ಲ್ಯಾಟಿಫೋಲಿಯ ಎಂಬುದು ಅಗಲವಾದ ಎಲೆಗಳಿವೆ ಎಂಬು ದನ್ನು ಸೂಚಿಸುತ್ತದೆ. ಬೀಜಗಳನ್ನು ನೆಟ್ಟು ಮೊದಲು ಸಸಿಗಳನ್ನು ಪಡೆದು ಅನಂತರ ಈ ಸಸಿಗಳನ್ನು ಅನುಕೂಲ ವಾತಾವರಣವಿರುವ ಕಡೆ ನೆಡುತ್ತಾರೆ.

ಉಪಯೋಗಗಳು : ಇದರ ಒಳಮರ ಕೆಂಪು ಮಿಶ್ರಿತ ಕಪ್ಪು ಬಣ್ಣಕ್ಕಿದ್ದು ಗಟ್ಟಿಯಾಗಿರುತ್ತದೆ. 1 ಘನ ಅಡಿಗೆ 55 ರಿಂದ 60 ಪೌಂಡು ತೂಕ ಬರುತ್ತದೆ. ಹತ್ತಿರದ ಎಳೆಗಳನ್ನು ಹೊಂದಿರುವ ಈ ಕಪ್ಪು ಮರಕ್ಕೆ ಚೆನ್ನಾಗಿ ಪಾಲಿಷ್ ತೆಗೆದು ಕೊಳ್ಳುವ ಗುಣವಿದೆ

ಈ ಮರ ನಮ್ಮ ದೇಶದ ಅತ್ಯಂತ ಬೆಲೆ ಬಾಳುವ ಮರಗಳಲ್ಲೊಂದು ಎಂದು ಹೇಳಿದರೆ ತಪ್ಪಾಗಲಾರದು. ಇತ್ತೀಚಿನ ಒಂದು ಘಟನೆಯನ್ನೇ ಹೇಳುವುದಾದರೆ



ಬೀಟೆಮರದ ಅಡ್ಡಸೀಳಿನ ಒಂದು ಭಾಗ.

ಬೀಟೆಮರದ 63·7 ಘನ ಅಡಿ ಇರುವ ದಿಮ್ಮಿಯೊಂದನ್ನು 23,059·40 ರೂಪಾಯಿಗಳಿಗೆ ಮಾರಲಾಯಿತು. ಈ ಲೆಕ್ಕಾಚಾರದ ಪ್ರಕಾರ 1 ಘನ ಅಡಿಗೆ 632 ರೂಪಾಯಿಗಳಾಗುತ್ತವೆ. (Indian Forester 89,462, 1963 Wesley GD.) ಮನೆಯ ದಿನ ಬಳಕೆಯ ಕುರ್ಚಿ, ಮೇಜುಗಳು, ಮಂಚಗಳು, ಪೆಟ್ಟಿಗೆಗಳು ಇವೆಲ್ಲವನ್ನೂ ಮಾಡಲು ಬೀಟೆ ಮರವನ್ನು ಉಪಯೋಗಿಸುವುದರಿಂದ ಈ ಮರಕ್ಕೆ ಬಹಳ ಬೇಡಿಕೆ ಇದೆ.

ಬಿರಟೆ ಮರ (ಬಿರಟು) Millingtonia hortensis Linn.

ಮೂಲತಃ ಬರ್ಮಾ ಮತ್ತು ಮಲಯಾ ದ್ವೀಪ ಸ್ತೋಮಗಳಲ್ಲಿ ಕಾಣಬರುತ್ತಿದ್ದ ಈ ಮರವನ್ನು ನಮ್ಮ ದೇಶದ ಎಲ್ಲೆಡೆಗಳಲ್ಲೂ ನೋಡಬಹುದು. ನಮ್ಮ ದೇಶದ ಸುಂದರ ವೃಕ್ಷಗಳಲ್ಲಿ ಇದೂ ಒಂದು. ಸಂಸ್ಕೃತ ಸಾಹಿತ್ಯದಲ್ಲಿ ಆಕಾಶ ನಿಂಬೂ ಎಂದು ಪ್ರಸಿದ್ಧವಾಗಿದೆ. ಮೈಸೂರಿನಲ್ಲೂ ಇದನ್ನು ಬೆಳೆಸಲಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಬಿಗ್ನಾನಿಯೇಸಿ (Bignoniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=30 (N. Rao 1936). 18ನೆಯ ಶತಮಾನದ ಸಸ್ಯಶಾಸ್ತ್ರಜ್ಞ ಟಿ. ಮಿಲ್ಲಿಂಗ್‌ಟನ್‌ರವರ ಗೌರವಾರ್ಥವಾಗಿ ಇದಕ್ಕೆ ಮಿಲ್ಲಿಂಗ್‌ಟೋನಿಯ ಎಂದು ಹೆಸರಿಡಲಾಗಿದೆ. ಹಾರ್ಟೆನ್ಸಿಸ್ ಎಂಬ ಲ್ಯಾಟಿನ್ ಪದ ಇದು ತೋಟದಲ್ಲಿ ಬೆಳೆಯಲು ಯೋಗ್ಯವಾದುದು ಎಂಬುದನ್ನು ಸೂಚಿಸುತ್ತದೆ.

80 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ವೃಕ್ಷ ಹಳದಿ ಮಿಶ್ರ ಬೂದು ಬಣ್ಣದ ತೊಗಟೆ ಹೊಂದಿದ್ದು ದೊಡ್ಡ ಎಲೆಗಳನ್ನು ಹೊಂದಿರುತ್ತದೆ. ಬಿಡಿ ಎಲೆಗಳು 1 ರಿಂದ 3 ಇಂಚು ಉದ್ದವಾಗಿರುತ್ತವೆ. ಜನವರಿ-ಮಾರ್ಚಿಗಳಲ್ಲಿ ಎಲೆಗಳು ಉದುರಿ ಮತ್ತೆ ಹುಟ್ಟುತ್ತವೆ. ವರ್ಷಕ್ಕೆರಡು ಬಾರಿ ಹೂಗಳು ಮೂಡುತ್ತವೆ. ನವೆಂಬರ್-ಡಿಸೆಂಬರ್ ತಿಂಗಳುಗಳಲ್ಲಿ ಒಂದು ಬಾರಿಯೂ, ಏಪ್ರಿಲ್-ಜೂನ್ ತಿಂಗಳುಗಳಲ್ಲಿ ಇನ್ನೊಂದು ಬಾರಿಯೂ ಮೂಡಿಬರುವ ಈ ಹೂಗಳು ಬೆಳ್ಳಿಯಂತೆ ಬೆಳ್ಳಗಿದ್ದು ಸುವಾಸನಾಭರಿತವಾಗಿರುತ್ತವೆ. ಹೂಗಳು ಅರಳಿದ ಮೇಲೆ ಕೆಳಗುದುರಿ ಮರದ ಕೆಳಗೆಲ್ಲಾ ಬಿದ್ದಿರುತ್ತವೆ. ಇದರ ಕಾಯಿ ಚಪ್ಪಟೆಯಾಗಿದ್ದು ಎರಡು ಕಡೆಗಳೂ ಚೂಪಾದ ಮೊನೆಗಳನ್ನು ಹೊಂದಿರುತ್ತವೆ. ಬೀಜಗಳು ತೆಳ್ಳಗಿದ್ದು ಸೂಕ್ಷ್ಮ ರೆಕ್ಕೆಗಳನ್ನು ಹೊಂದಿರುತ್ತವೆ. ಈ ಮರ ಭಾರತದ ಬಹು ಭಾಗಗಳಲ್ಲಿ ಕಾಯಿ ಬೀಜಗಳನ್ನು ಉತ್ಪತ್ತಿಮಾಡುತ್ತಿಲ್ಲ. ಆದ್ದರಿಂದ ಸಣ್ಣ ರೆಂಬೆಗಳನ್ನು ಕತ್ತರಿಸಿ ಬೇರೆ ಕಡೆ ನೆಡುತ್ತಾರೆ

ಉಪಯೋಗಗಳು : ಇದರ ಮರ ಬೆಳ್ಳಗೆ ಮೃದುವಾಗಿರುತ್ತದೆ. ಒಂದು ಘನ ಅಡಿಗೆ 40 ರಿಂದ 45 ಪೌಂಡುಗಳಷ್ಟು ತೂಗುತ್ತದೆ. ಇದರಿಂದ ಮನೆ ಸಾಮಾನುಗಳನ್ನು ಮತ್ತು ಮರದ ಅಲಂಕಾರಿಕ ಸಾಮಾನುಗಳನ್ನು ಮಾಡುತ್ತಾರೆ. ಈ ಮರವನ್ನು ಅಲಂಕಾರಕ್ಕಾಗಿ ಉದ್ಯಾನಗಳಲ್ಲೂ, ರಸ್ತೆಗಳ ಪಕ್ಕದಲ್ಲೂ ಬೆಳೆಸುತ್ತಾರೆ. ಇದರ ತೊಗಟೆಯಿಂದ ಮಾಡಿದ ಬಿರಟೆಗಳು (corks) ಅಷ್ಟು ಒಳ್ಳೆಯವಿರುವುದಿಲ್ಲ.

ಸೂಚನೆ : ಈ ಮರ ಬಹಳ ಬೇಗ ಬೆಳೆಯುತ್ತದೆ. ಕಲ್ಕತ್ತಾದ ಸಸ್ಯಗಳ ತೋಟದಲ್ಲಿ ಹಾಕಿದ ಒಂದು ಸಸಿ 12 ವರ್ಷಗಳಲ್ಲಿ 50 ಅಡಿಗಳ ಎತ್ತರಕ್ಕೆ ಬೆಳೆಯಿತು.

ಬಿಲ್ವಪತ್ರೆಮರ (ಬಿಲ್ಪತ್ರಿ, ಬಿಲ್ಪತ್ರೆ) (Aegle marmelos Correa.)

ಈಶ್ವರನಿಗೆ ಪ್ರಿಯವಾದ ಬಿಲ್ವಪತ್ರೆಗಳನ್ನು ಅರ್ಚನೆಗೋಸ್ಕರ ಬಳಸುತ್ತಾರೆ. ನಮ್ಮ ದೇಶದಲ್ಲಿ ಎಲ್ಲೆಲ್ಲಿ ಈಶ್ವರ ದೇವಸ್ಥಾನಗಳಿರುವುವೋ ಅಲ್ಲೆಲ್ಲಾ ಈ ಮರಗಳನ್ನು ಬೆಳೆಸುವ ಹವ್ಯಾಸ ಕಾಣಬರುತ್ತದೆ. ಇದು ಬೇಸಿಗೆಯಲ್ಲಿ ಎಲೆಯುದುರುವ ಮರವಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=36 (E.K.J) ಈ ಸಣ್ಣ ಮರ ½ ಇಂಚಿನಿಂದ 1½ ಇಂಚಿನಷ್ಟು ಉದ್ದವಾದ ಮುಳ್ಳುಗಳನ್ನು ಹೊಂದಿದ್ದು ಸಂಯುಕ್ತ ಪತ್ರಗಳನ್ನು ಹೊಂದಿದೆ. ಮೇನಿಂದ ಜುಲೈ ತಿಂಗಳವರೆಗೆ ಹೂಗಳನ್ನು

ಬಿಡುತ್ತಿರುತ್ತದೆ. ಹೂಗಳ ಬಣ್ಣ ಬಿಳಿ ಮಿಶ್ರ ಹಸಿರು. ಇದರ ಕಾಯಿ 2 ರಿಂದ 5 ಇಂಚು ಸುತ್ತಳತೆ ಹೊಂದಿದ್ದು ಒಳಗೆ ಸಿಹಿಯಾದ ತಿರುಳನ್ನು ಹೊಂದಿರುತ್ತದೆ. ತಿರುಳು ಸ್ವಲ್ಪ ಹಳದಿ ಬಣ್ಣಕ್ಕಿರುತ್ತದೆ. ಬೀಜಗಳ ಸುತ್ತ ಸ್ವಲ್ಪ ಅಂಟುದ್ರವ ಇರುತ್ತದೆ.

ಉಪಯೋಗಗಳು : ಬಿಲ್ವಪತ್ರೆಗಳನ್ನು ಶಿವನಿಗರ್ಪಿಸುತ್ತಾರೆ. ಈ ಮರದ ಎಲ್ಲ ಭಾಗಗಳೂ ಒಂದಲ್ಲ ಒಂದು ಉಪಯೋಗಕ್ಕೆ ಬರುತ್ತವೆ. ಇದರ ಹಣ್ಣನ್ನು ಆಮ ಶಂಕೆ ಹಾಗೂ ಭೇದಿ ನಿವಾರಕ ಔಷಧಿಗಳಿಗಾಗಿ ಉಪಯೋಗಿಸುತ್ತಾರೆ. ಎಳೆಯ ಕಾಯಿಗಳನ್ನು ಹೊಟ್ಟೆನೋವಿನ ಪರಿಹಾರಕ್ಕಾಗಿ ಉಪಯೋಗಿಸುತ್ತಾರೆ. ಈ ಮರವನ್ನು ಕಡಿಯುವುದು ಅಪರೂಪ. ಕಡಿದಾಗ ಮರ ಸುವಾಸನಾಭರಿತವಾಗಿರುವುದನ್ನು ಕಾಣಬಹುದು. ಮರ ಹಳದಿ ಮಿಶ್ರ ಬಿಳಿ ಬಣ್ಣಕ್ಕಿರುತ್ತದೆ. ಘನ ಅಡಿ ಒಂದಕ್ಕೆ 57 ಪೌಂಡುಗಳಷ್ಟು ತೂಗುತ್ತದೆ. ಗಾಡಿಗಳನ್ನು ಮಾಡಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಈ ಮರವನ್ನು ಬಳಸಬಹುದು.

ಬಿಲ್ವಾರ (ಬಿಳೀವಾರ, ಬಿಲ್ವಾರ) (Albizzia od rtissima Benth)

ಕೊಡಗು, ಪಶ್ಚಿಮ, ಮೈಸೂರು, ಹಾಸನ ಮುಂತಾದ ಅರಣ್ಯ ಪ್ರದೇಶಗಳಲ್ಲಿ ಹಾಗೂ ಹಳ್ಳಿಗಳ ಹತ್ತಿರ ಈ ಮರ ಬೆಳೆಯುತ್ತದೆ

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಒಳ್ಳೆಯ ವಾತಾವರಣದಲ್ಲಿದ್ದರೆ 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಈ ಮರವು 30–40 ಅಡಿಗಳವರೆಗೆ ಕವಲೊಡೆಯದೆ ನೇರವಾಗಿ ಬೆಳೆಯಬಲ್ಲದು. ಇದರ ಎಲೆಗಳೆಲ್ಲಾ ಮಾರ್ಚಿ, ಏಪ್ರಿಲ್‌ಗಳಲ್ಲಿ ಉದುರಿ ಜೂನ್‌ನಲ್ಲಿ ಹಸಿರು ಮಿಶ್ರವಾದ ಬಿಳುಪಾದ ತೊಟ್ಟಿಲ್ಲದ ಹೂಗಳು ಬಿಡುತ್ತವೆ. ಈ ಹೂಗಳ ಪರಾಗ ಕೋಶಗಳು ಹಳದಿ ಬಣ್ಣಕ್ಕಿರುತ್ತವೆ. ಇದರ ಒಳಮರ ಕಂದು ಬಣ್ಣಕ್ಕಿದ್ದು ಗಟ್ಟಿಯಾಗಿರುತ್ತದೆ. ಘನ ಅಡಿಗೆ ತೂಕ 50 ರಿಂದ 55 ಪೌಂಡುಗಳು ಬರುತ್ತದೆ. ಇದರ ಕಾಯಿಗಳು ಸ್ವಲ್ಪ ದಪ್ಪವಾಗಿದ್ದು ಕಂದು ಬಣ್ಣಕ್ಕಿರುತ್ತವೆ. ಅಗಲ 1ರಿಂದ 1 5 ಇಂಚು ಇರುತ್ತದೆ.

ಉಪಯೋಗಗಳು : ಎಲೆಗಳು ಮತ್ತು ಸಣ್ಣ ಟೊಂಗೆಗಳನ್ನು ದನಗಳು ಮತ್ತು ಆಡುಗಳು ತಿನ್ನುತ್ತವೆ. ಇದರಿಂದ ಒಳ್ಳೆಯ ಸೌದೆ ಹಾಗೂ ಇದ್ದಿಲು ದೊರೆಯುತ್ತದೆ. ಇದು ಗಟ್ಟಿಯಾದ ಮರವಾದ್ದರಿಂದ ಲಾರಿಯ ತೀರುಗಳನ್ನೂ, ಮನೆಯ ತೊಲೆಗಳನ್ನು ಮಾಡಲು ಉಪಯೋಗಿಸುತ್ತಾರೆ. ಮರ ಕೊಯ್ಯಲು ಕಷ್ಟವಾದರೂ

ಗೆದ್ದಲು ಈ ಮರವನ್ನು ನಾಶಪಡಿಸವು ಉತ್ತರ ಭಾರತದಲ್ಲಿ ಟೀ ತೋಟಗಳಲ್ಲಿ ನೆರಳಿಗಾಗಿ ಈ ಮರವನ್ನು ಬೆಳೆಸುತ್ತಾರೆ.

ಬಿಳೀಜಾಲಿಮರ (Acacia leucophlaea (Rcxd) Willd.)

ರಾಜಾಸ್ಥಾನ, ಪಂಜಾಬು, ಮಧ್ಯಪ್ರದೇಶಗಳಲ್ಲಿ ಬೆಳೆಯುವ ಈ ಮರ ಮೈಸೂರಿನಲ್ಲೂ ಚೆನ್ನಾಗಿ ಬೆಳೆಯುತ್ತದೆ. ಈ ಮರವನ್ನು ತೋಪಲ, ತುಂಬೆ ಎಂದು ಕರೆಯುವುದುಂಟು.



ಬಿಳೀಜಾಲಿ ಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೋಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ತೊಗಟೆ ಬೂದು ಬಣ್ಣ ಇಲ್ಲವೇ ತುಸು ಬೆಳ್ಳಗಿದ್ದು ಅಲ್ಲೊಂದು ಇಲ್ಲೊಂದು ಮುಳ್ಳುಗಳನ್ನು ಹೊಂದಿರುತ್ತದೆ. ಈ ಮರದ ತೊಗಟೆ ಬೂದು ಬಣ್ಣಕ್ಕಿದ್ದು ಚಿಕ್ಕದಿದ್ದಾಗ ಮೃದುವಾಗಿರುತ್ತದೆ. ವಯಸ್ಸಾದಂತೆಲ್ಲಾ ಒರಟಾಗಿ ಕಂದು ಮಿಶ್ರಿತ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಎಲೆಗಳು 1 ರಿಂದ 2 ಇಂಚು ಉದ್ದವಿದ್ದು 5 ರಿಂದ 15 ಜೊತೆ ಬಿಡಿ ಎಲೆಗಳನ್ನು ಹೊಂದಿರುತ್ತದೆ. ಹೂಗಳು ಕೆಂಪು ಹಳದಿ ಮಿಶ್ರಿತ ಬಿಳಿಯ ಬಣ್ಣವನ್ನು ಹೊಂದಿರುತ್ತವೆ. ಇದರ ಕಾಯಿಗಳು ಚಪ್ಪಟೆಯಾಗಿದ್ದು 4 ರಿಂದ 8 ಇಂಚು ಉದ್ದವಿದ್ದು 3 ಇಂಚು ಅಗಲವಾಗಿರುತ್ತದೆ. ಇದು ಬೆಳೆಯುವ ಜಾಗದಲ್ಲಿ ಬೇರೆ ಮರಗಳು ಬೆಳೆಯಲು ಅವಕಾಶ

ಕೊಡುವುದಿಲ್ಲ. ಒಳ ಮರಕ್ಕಿಂತ ಹೊರ ಮರನೇ ಜಾಸ್ತಿಯಿರುತ್ತದೆ. ಘನ ಅಡಿ ಒಂದಕ್ಕೆ 55 ಪೌಂಡುಗಳಷ್ಟು ತೂಕ ಬರುತ್ತದೆ.

ಉಪಯೋಗಗಳು : ಇದರ ತೊಗಟೆಯನ್ನು ಈಚಲು, ಬಗನಿ, ರಸಗಳಿಂದ ಮದ್ಯಸಾರವನ್ನು ತೆಗೆಯುವಾಗ ಉಪಯೋಗಿಸುತ್ತಾರೆ. ತೊಗಟೆಯಿಂದ ನಾರನ್ನು ತೆಗೆಯಬಹುದು. ಇದರಿಂದ ಒಳ್ಳೆಯ ಗೋಂದೂ ಸಿಕ್ಕುತ್ತದೆ. ಕೆಲವು ಕಡೆ ಈ ಮರದ ಎಳೆ ಕಾಯಿಗಳನ್ನು ತರಕಾರಿಯಂತೆ ಬಳಸಿದರೂ ಮೈಸೂರಿನಲ್ಲಿ ಈ ಅಭ್ಯಾಸ ವಿಲ್ಲ. ಆಡು ಕುರಿಗಳು ಈ ಮರದ ಸೊಪ್ಪನ್ನು ತಿನ್ನುತ್ತವೆ.

ಬಿಳಿದಾಳೆಮರ (ಮುಸ್ಸಿ) (Sterculia villosa Roxb.)

ಉತ್ತರ ಇಂಡಿಯಾದ ಪಂಜಾಬ್, ಮಧ್ಯಪ್ರದೇಶ, ಅಸ್ಸಾಂ ಮತ್ತು ಖಾಸಿಯಾ ಪ್ರದೇಶಗಳಲ್ಲೆಲ್ಲಾ ಬೆಳೆಯುವ ಈ ಮರ ಮಲೆನಾಡಿನಲ್ಲೆಲ್ಲಾ ಬೆಳೆಯುತ್ತದೆಂಬುದಕ್ಕೆ ಆಧಾರಗಳಿವೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸ್ಟರ್ಗೂಲಿಯೇಸಿ (Steiculiaceae) ಕುಟುಂಬಕ್ಕೆ ಸೇರಿದೆ. ಇದೊಂದು ದೊಡ್ಡ ಮರ. ಈ ಮರದ ತೊಗಟೆ ಸ್ವಲ್ಪ ಬೆಳ್ಳಗಿರುತ್ತದೆ. ಹೂಗಳು ಕೆಂಪಗಿರುತ್ತವೆ. ಎಳೆ ಭಾಗಗಳು, ಎಲೆಗಳ ಕೆಳಭಾಗ ಹಾಗೂ ಎಳೆ ಕಾಯಿಗಳು ತುಪ್ಪಳವನ್ನು ಹೊಂದಿರುತ್ತವೆ.

ಉಪಯೋಗಗಳು : ಮರ ಗಟ್ಟಿಯಿದ್ದು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಮನೆ ಕಟ್ಟುವ ಮರ ಮತ್ತು ಮನೆ ಸಾಮಾನುಗಳನ್ನು ಮಾಡಲು ಈ ಮರವನ್ನು ಬಳಸುತ್ತಾರೆ. ಇತ್ತೀಚೆಗೆ ಇದರ ತೊಗಟೆಯಿಂದ ತೆಗೆದ ನಾರನ್ನು ಹಗ್ಗ ಮತ್ತು ಚೀಲಗಳನ್ನು ಮಾಡಲು ಉಪಯೋಗಿಸುತ್ತಿದ್ದಾರೆ.

ಬಿಳೀಬಸುರಿ (Ficus tsiela Roxb)

ಹಳೆಯ ಮೈಸೂರಿನ ಎಲ್ಲ ರಸ್ತೆಗಳಲ್ಲೂ ಕಾಣಬರುವ ಬಸರೀಮರವೇ ಇದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಈ ಮರದ ಎಲೆಗಳು ತುಪ್ಪಳ ರಹಿತವಾಗಿರುತ್ತವೆ. ಅವುಗಳ ಅಗಲ ಉದ್ದಗಳು ಸರಾಸರಿ 2×4 ಇಂಚುಗಳು ಇರುತ್ತವೆ. ಇದರ ಹಣ್ಣುಗಳು ಮಾಗಿದ ಮೇಲೆ ಕೆಂಪಗಿರುತ್ತವೆ. ಹಸಿರು ಬೂದು ಬಣ್ಣದ ತೊಗಟೆ ಇರುತ್ತದೆ. ಈ ಮರ ಬೇಗ ಬೆಳೆದರೂ ಬಿಳಿಲುಗಳಿರುವುದಿಲ್ಲ.

ಉಪಯೋಗಗಳು : ಆಡುಗಳು ಇದರ ಸೊಪ್ಪನ್ನು ತಿನ್ನುತ್ತವೆ. ಈ ಮರವನ್ನು ಸೌದೆಗಾಗಿ ಕಡಿಯುತ್ತಾರೆ.

ಬಿಳೀ ಬೂತಾಳ (Schefflera venulosa (Seem.) (Syn. Hepta pleurum venulosum)

ಬೇರೆ ಮರಗಳ ಸಂಪರ್ಕವಿದ್ದಾಗ ಅಡರು ಸಸ್ಯದಂತೆ ಬೆಳೆದರೂ ಇದೊಂದು ಮೃದುವಾದ ಮರವುಳ್ಳ ಸಣ್ಣ ಮರ.

ಸಸ್ಯಶಾಸ್ತ್ರ ವಿವರಣೆ : ಈ ಮರ ಎರ್ರಾಲಿಯೇಸಿ (Araliaceae) ಕುಟುಂಬಕ್ಕೆ ಸೇರಿದೆ. ಇದರ ಎಳೆಗಳು ದುಂಡಗೆ ಹೊಳೆಯುತ್ತಿರುತ್ತವೆ. ಕಾಯಿ ಹಳದಿ ಬಣ್ಣವನ್ನು ಹೊಂದಿರುತ್ತದೆ.

ಉಪಯೋಗಗಳು : ವಿವರಗಳು ದೊರತಿಲ್ಲ.

ಬಿಳೀ ಬೂರುಗ (ಬೂರಗ, ಬಿಳೀಬಲ್ರು) (Ceiba pentandra (L) Gaertn.)

ಅಂಡಮಾರ್, ಮಲಯಾ ದ್ವೀಪಸ್ತೋಮ, ಸಿಲೋನ್, ದಕ್ಷಿಣ ಅಮೆರಿಕ ಮತ್ತು ಜಾವಾ ದೇಶಗಳಲ್ಲಿ ಬೆಳೆಯುತ್ತಿದ್ದ ಈ ಮರವನ್ನು ಭಾರತದಲ್ಲಿ ಎಲ್ಲ ಕಡೆಯೂ ಬೆಳೆಸಲಾಗುತ್ತಿದೆ 60 ರಿಂದ 109 ಅಡಿಗಳಷ್ಟು ಎತ್ತರ ಬೆಳೆಯುವ ಈ ಮರ ಸುತ್ತಲೂ ಹರಡಿಕೊಳ್ಳುವ ಅಡ್ಡ ರೆಂಬೆಗಳನ್ನು ಹೊಂದಿರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಬಾಂಬಕೇಸಿ (Bombacaceae) ಕುಟುಂಬಕ್ಕೆ ಸೇರಿದೆ. ಎತ್ತರದ ಈ ಮರದ ಬುಡದ ಮೇಲೆಲ್ಲಾ ಮುಳ್ಳುಗಳಿರುತ್ತವೆ. ಈ ಮರಕ್ಕೆ ಸಂಯುಕ್ತ ಪತ್ರಗಳಿದ್ದು ಎಳೆಗಳ ತೊಟ್ಟು 4 ರಿಂದ 6 ಇಂಚಿನಷ್ಟು ದೊಡ್ಡದಾಗಿರುತ್ತದೆ. ಬಿಡಿ ಎಲೆಗಳು 5 ರಿಂದ 8 ಇರುತ್ತವೆ. ಈ ಮರದಲ್ಲಿ ಹೂಗಳು ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಮೂಡುತ್ತವೆ. ರಾತ್ರಿಯಲ್ಲಿ ಅರಳುವ ಈ ಪುಷ್ಪಗಳ ಪರಾಗಸ್ಪರ್ಶ ಮಕರಂದವನ್ನು ಕುಡಿಯುವ ಕಪಟಗಳಿಂದ ಆಗುತ್ತದೆ. ಇದರ ಕಾಯಿ 4 ರಿಂದ 6 ಇಂಚು ಉದ್ದವಿದ್ದು ಒಳಗೆಲ್ಲಾ ರೇಶ್ಮೆಯಂತೆ ಮೃದುವಾಗಿರುವ ಹತ್ತಿ ಇರುತ್ತದೆ. ಬೀಜಗಳು ಕಪ್ಪಗಿರುತ್ತವೆ. ಇದರ ಮರ ಹಗುರವಾಗಿರುತ್ತದೆ. ತೂಕ 1 ಘನ ಅಡಿಗೆ 28 ಪೌಂಡುಗಳು.

ಉಪಯೋಗಗಳು : ಇದರ ಹತ್ತಿಯಲ್ಲಿ 61 ರಿಂದ 64% ಸೆಲ್ಯುಲೋಸ್ ಇರುತ್ತದೆ. ಇದನ್ನು ಹಾಸಿಗೆ ದಿಂಬುಗಳನ್ನು ತಯಾರಿಸಲು, ತೇಲುವ ಬುರುಡೆಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಪ್ರಂಪಚದಲ್ಲೆಲ್ಲಾ ಜಾವಾದಲ್ಲಿಯೇ ಹೆಚ್ಚು ಬೂರುಗದ ಹತ್ತಿಯನ್ನು ಬೆಳೆಯಲಾಗುತ್ತದೆ. ಇದರ ಬೀಜದಲ್ಲಿ 20-25% ಎಣ್ಣೆ ಇರುತ್ತದೆ. ಹತ್ತಿ ಬೀಜದ ಎಣ್ಣೆಯನ್ನು ಹೇಗೆ ಉಪಯೋಗಿಸುತ್ತಾರೋ ಅಂತೆಯೇ

ಇದನ್ನೂ ಉಪಯೋಗಿಸಬಹುದು. ಇದರ ಹತ್ತಿಯಿಂದ ಬಟ್ಟೆಗಳನ್ನು ಮಾಡುತ್ತಾರೆ. ಇದರ ಮರವನ್ನು ಬೆಂಕಿಕಡ್ಡಿ ತಯಾರಿಕೆಯಲ್ಲಿ ಬಳಸಬಹುದು. ಇದರ ಎಲೆ, ಬೇರು, ಕಾಂಡಗಳಿಂದ ಬರುವ ಅಂಟನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ.

ಬಿಳೀ ಕಂಚವಾಳ (Bauhinia variegata L.)

ಅಲಂಕಾರಕ್ಕಾಗಿ ಈ ಮರವನ್ನು ಮೈಸೂರಿನಲ್ಲಿ ಬೆಳೆಸಲಾಗುತ್ತಿದೆ. ಇದು ಒಳ ಹಿಮಾಲಯದಲ್ಲಿ ಸಮುದ್ರಮಟ್ಟದಿಂದ 5000 ಅಡಿಗಳವರೆಗೂ, ಅಸ್ಸಾಂ, ಮಧ್ಯಪ್ರದೇಶ, ಛೋಟಾನಾಗಪುರಗಳಲ್ಲಿಯೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Ceaslpaniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=28$ (Atchison 1951). ಮಧ್ಯಮ ಎತ್ತರದ ಈ ಮರದ ಎಲೆಗಳು ಗೊರಸಿನ ಆಕಾರವನ್ನು ಹೊಂದಿರುತ್ತವೆ. ಮರದ ತೊಗಟೆ ಬೂದು ಬಣ್ಣಕ್ಕಿರುತ್ತದೆ. ಸ್ವಲ್ಪ ಕೆಂಪು ಇಲ್ಲವೇ ಬಿಳೀ ಹೂಗಳು ಫೆಬ್ರುವರಿಯಿಂದ ಏಪ್ರಿಲ್‌ವರೆಗೂ ಮೂಡುತ್ತಿರುತ್ತವೆ. ಈ ಮರ 8-10 ಅಡಿ ಇರುವಾಗಲೇ ಹೂ ಕಾಯಿ ಬಿಡಲು ಪ್ರಾರಂಭಿಸುತ್ತದೆ. ಕಾಯಿಗಳಲ್ಲಿ ಬೀಜಗಳಿರುತ್ತವೆ. ಬೀಜಗಳಿಂದ ಸಸಿಗಳನ್ನು ಬೆಳೆಸಬಹುದು.

ಉಪಯೋಗಗಳು : ಇದರ ಎಳೆ ಎಲೆಗಳನ್ನು, ಹೂಗಳನ್ನು, ಮೊಗ್ಗುಗಳನ್ನು ಉತ್ತರ ಇಂಡಿಯಾದಲ್ಲಿ ತರಕಾರಿಯಂತೆ ಬಳಸುತ್ತಾರೆ. ಇದರ ಮರ ಅಷ್ಟೇನೂ ಗಟ್ಟಿಯಾಗಿಲ್ಲದಿದ್ದರೂ ಸೌದೆ ಮತ್ತು ವ್ಯವಸಾಯದ ಉಪಕರಣಗಳನ್ನು ಮಾಡಲು ಉಪಯೋಗಿಸುತ್ತಾರೆ. ದನಗಳು ಮತ್ತು ಆಡುಗಳು ಇದರ ಎಲೆಗಳನ್ನು ತಿನ್ನುತ್ತವೆ. ತೊಗಟೆಯಿಂದ ನಾರು ಮತ್ತು ಬಣ್ಣವನ್ನು ಪಡೆಯಬಹುದು.

ಭೂತಾಳೆ (Grewia oppositifolia Roxb.)

ಉತ್ತರ ಪಶ್ಚಿಮ ಹಿಮಾಲಯಗಳಲ್ಲಿ ಬೆಳೆಯುವ ಈ ಮರ ಮೈಸೂರಿನ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಹೇರಳವಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಟಿಲಿಯೇಸಿ (Tiliaceae) ಕುಟುಂಬಕ್ಕೆ ಸೇರಿದೆ. ಹೊಸದಾಗಿ ಕಡಿದಾಗ ಮತ್ತು ಉರಿಸುವಾಗ ಇದು ಒಂದು ಬಗೆಯ ದುರ್ವಾಸನೆಯನ್ನುಂಟು ಮಾಡುತ್ತದೆ. 1 ಘನ ಅಡಿಗೆ 45 ರಿಂದ 50 ಪೌಂಡು ತೂಗುತ್ತದೆ.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನುತ್ತಾರೆ. ಇದರ ತೊಗಟೆಯಿಂದ ತೆಗೆದ ನಾರನ್ನು ಒರಟಾದ ಬಟ್ಟೆಗಳನ್ನೂ, ಚೀಲಗಳನ್ನೂ ಮಾಡಲು ಉಪಯೋಗಿಸುತ್ತಾರೆ. ಇದರ ಎಲೆಗಳನ್ನು ದನ, ಕುರಿ ಮತ್ತು ಆಡುಗಳು ತಿನ್ನುತ್ತವೆ.

ಬೆಟ್ಟದ ಕಮಾ ಗಗ್ಗರಿ (Wendlandia thyrsoidea (R.&.S.) L. Steud (Wendlandia notoniana Wall.)

ಈ ಸಣ್ಣ ಮರ ನಂದೀದುರ್ಗದ ಸುತ್ತಲಲ್ಲಿ ಬೆಳೆಯುತ್ತದೆ. ಮೇಲುಕೋಟೆ ಮತ್ತು ಸಾವನದುರ್ಗಗಳಲ್ಲಿ ವಿಶೇಷವಾಗಿ ಕಾಣಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಸುಮಾರು 15 ರಿಂದ 20 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ತೊಗಟೆ ಕೆಂಪು ಮಿಶ್ರಿತ ಬೂದು ಬಣ್ಣವನ್ನು ಹೊಂದಿದ್ದು ಒರಟಾಗಿರುತ್ತದೆ. ಎಲೆಗಳ ಮೇಲ್ಭಾಗ ಹಸಿರಾಗಿದ್ದರೂ ಕೆಳಭಾಗ ಕಂದು ಮಿಶ್ರಿತ ಬೂದು ಬಣ್ಣವನ್ನು ಹೊಂದಿರುತ್ತದೆ. ಎಲೆಗಳ ಉದ್ದ ಅಗಲಗಳು 5 × 2 ಇಂಚು. ಮಾರ್ಚ್, ಏಪ್ರಿಲ್ ಕಾಲದಲ್ಲಿ ಈ ಮರ ಹೂ ಬಿಡುತ್ತದೆ. ಇದರ ಕಾಯಿ ದುಂಡಗಿದ್ದು ಬೀಜಗಳು ಸಣ್ಣಗಿರುತ್ತವೆ. ಈ ಮರದ ಹೂಗಳು ಹಳದಿ ಬಣ್ಣವನ್ನು ಹೊಂದಿರುತ್ತವೆ. ಸ್ವಲ್ಪ ಒಳ್ಳೆ ವಾಸನೆ ಇರುತ್ತದೆ.

ಈ ಮರದ ಉಪಯೋಗಗಳ ಬಗ್ಗೆ ಹೆಚ್ಚು ವಿವರಗಳು ಸಿಕ್ಕಿಲ್ಲ.

ಸೂಚನೆ : ಇದೇ ಜಾತಿಗೆ ಸೇರಿದ ಇನ್ನೊಂದು ಪ್ರಭೇದ (Wendlandia lawii) ಬಾಬಾಬುಡನ್ ಬೆಟ್ಟಗಳಲ್ಲಿ ಬೆಳೆಯುತ್ತದೆ. ಇದರ ಬಗ್ಗೆಯೂ ವಿವರಗಳನ್ನು ಸಂಗ್ರಹಿಸಬೇಕಾಗಿದೆ.

ಬೆಟ್ಟದ ಮಾವು (ಕೊಂಡಮಾವು) (Protium caudatum W & A.)

ಈ ಮರವನ್ನು ಕೊಂಡ ಮಾಮಿಡಿ ಎಂದು ಕರೆಯುತ್ತಾರೆ. ಆದರೆ ಇದು ತೆಲಗು ಹೆಸರು. ಮೈದಾನ ಪ್ರದೇಶಗಳಲ್ಲೆಲ್ಲಾ ಈ ಮರ ಬೆಳೆಯುತ್ತದೆ. ಕೆಲವು ಮರಗಳು ಬೆಂಗಳೂರಿನಲ್ಲಿವೆ.


ಸಸ್ಯಶಾಸ್ತ್ರ ವಿವರಣೆ : ಈ ಮರ ಬರ್ಸರೇಸಿ (Burseraceae) ಕುಟುಂಬಕ್ಕೆ ಸೇರಿದೆ. ಇದರ ಹಣ್ಣುಗಳು ಬಟಾಣಿಯಷ್ಟು ದಪ್ಪವಿರುತ್ತವೆ. ತೊಗಟೆ ಹಸಿರಾಗಿರುತ್ತದೆ. ಮರ ಸುಮಾರು 20 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು ಪರ್ಯಾಯ ಜೋಡಣೆಯನ್ನು ಹೊಂದಿದ್ದು ಟೊಂಗೆಗಳ ತುದಿಯಲ್ಲಿ ಗುಂಪುಗೂಡಿಕೊಂಡಿರುತ್ತವೆ. ಎಲೆಗಳಿಂದ ಸ್ವಲ್ಪ ವಾಸನೆ ಬರುತ್ತಿರುತ್ತದೆ. ಹೂಗಳ ಬಣ್ಣ ಕಂದು, ಹೂ ಬಿಡುವ ಕಾಲ ಮಾರ್ಚಿ ತಿಂಗಳು.

ಉಪಯೋಗಗಳು : ಈ ಮರದಿಂದ ನಾಟಕದ ಕಂಪನಿಯವರು ಕಿರೀಟಗಳನ್ನು ಮಾಡಿಕೊಳ್ಳುತ್ತಾರೆ.

ಸೂಚನೆ : ಇದೇ ಜಾತಿಗೆ ಸೇರಿದ ಇನ್ನೊಂದು ಪ್ರಭೇದ (Protium pubescens W. & A.) ಕೂಡ ಪಶ್ಚಿಮಘಟ್ಟಗಳ ಅರಣ್ಯ ಪ್ರದೇಶದಲ್ಲಿ ಹೇರಳವಾಗಿ ಬೆಳೆಯುತ್ತದೆ. ಇದರ ಮರ 1 ಘನ ಅಡಿಗೆ 46 ಪೌಂಡುಗಳಷ್ಟು ತೂಗುತ್ತದೆ.

ಬೇವಿನಮರ (ಒಳ್ಳೇಬೇವು, ವಿಷಬೇವು) (Azadirachta indica A. Juss. (Syn. Melia azadirachta L.)

ಬರ್ಮಾದ ಮೂಲನಿವಾಸಿಯಾಗಿದ್ದ ಈ ಮರ ಬಹಳ ಕಾಲದಿಂದಲೂ ನಮ್ಮ ದೇಶದ ಎಲ್ಲಾ ಕಡೆಗಳಲ್ಲೂ ಬೆಳೆಯುತ್ತಿದೆ. ಈ ಮರ ಹಿಂದೂಗಳೆಲ್ಲರಿಗೂ ಪವಿತ್ರವಾದದ್ದು. ಗ್ರಾಮದ ದೇವತೆಯಾದ ಮಾರಮ್ಮನಿಗೆ ಪ್ರೀತಿಯಾದ ಸೊಪ್ಪೆಂದರೆ ಬೇವಿನಸೊಪ್ಪು. ಭೂತ ವಿಮೋಚನೆಗೆ ಬೇಕಾದದ್ದು ಬೇವಿನಸೊಪ್ಪು. ಯುಗಾದಿ ಹಬ್ಬದ ದಿವಸ ಬೆಲ್ಲದ ಜೊತೆ ಸೇರಿಸಿ ಮೆಲ್ಲುವುದು ಬೇವನ್ನು.



ಬೇವಿನಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳಸಂಖ್ಯೆ 2n=28 (Pathak etal.

1949) ಈ ನಿತ್ಯಹರಿದ್ವರ್ಣದ ಸುಂದರ ವೃಕ್ಷದ ತೊಗಟೆ ಕಪ್ಪು ಮಿಶ್ರಿತ ಬೂದು ಬಣ್ಣ ವನ್ನು ಹೊಂದಿರುತ್ತದೆ. ಇದರಲ್ಲಿ ಹೂಗಳು ಸಾಮಾನ್ಯವಾಗಿ ಮಾರ್ಚ್‌ನಿಂದ ಮೇ ತಿಂಗಳವರೆಗಿರುತ್ತವೆ. ಸಣ್ಣಗೆ ಬೆಳ್ಳಗಿರುವ ಈ ಹೂಗಳಿಂದ ಜೇನಿನ ವಾಸನೆ ಬರುತ್ತದೆ. ಜೂನ್‌ನಿಂದ ಆಗಸ್ಟ್ ತಿಂಗಳವರೆಗೂ ಇದು ಫಲಭರಿತವಾಗಿರುತ್ತದೆ. ಬಹಳ ವರ್ಷ ಬೀಜಗಳನ್ನಿಟ್ಟು ಅನಂತರ ನೆಟ್ಟರೆ ಅವು ಮೊಳೆಯುವ ಶಕ್ತಿಯನ್ನು ಹೊಂದಿರುವುದಿಲ್ಲ.

ಉಪಯೋಗಗಳು : ಈ ಮರದ ಚೇಗನ್ನು ಮೂರ್ತಿಗಳ ಕೆತ್ತನೆಗೆ ಉಪ ಯೋಗಿಸುತ್ತಾರೆ ಮರ ಗಟ್ಟಿಯಾಗಿದ್ದು ಬಹು ಬಾಳಿಕೆ ಬರುವಂಥದ್ದಾಗಿದೆ. ಅದ ರಲ್ಲೂ ಕಹಿ ಅಂಶ ಇರುವುದರಿಂದ ಕೀಟಗಳು ಮರವನ್ನು ಏನೂ ಮಾಡಲಾರವು. ತೂಕ ಒಣಗಿದ ಮೇಲೆ ಘನ ಅಡಿಗೆ 45 ಪೌಂಡುಗಳು. ಈ ಮರದಿಂದ ನೇಗಿಲು ಗಳು, ಮನೆಕಟ್ಟುವ ಸಾಮಾನುಗಳು ಮುಂತಾದುವನ್ನು ಮಾಡುತ್ತಾರೆ. ವಸಂತ ಕಾಲದಲ್ಲಿ ಈ ಮರದ ಬುಡವಲ್ಲಿ ದೊಡ್ಡ ಗಾಯಗಳನ್ನು ಮಾಡಿದರೆ ಅದರಿಂದ ಬೆಳ್ಳ ನೆಯ ರಸ ಬರಲು ಪ್ರಾರಂಭವಾಗಿ ಅದು ಕೆಲವು ವಾರಗಳವರೆಗೆ ಒಂದೇ ಸಮನೆ ಹರಿ ಯುತ್ತದೆ. ಇದಕ್ಕೆ ಆಧಾರಗಳು ಸಿಕ್ಕಿವೆ. ಇದರ ರಸವನ್ನು ಔಷಧಿಯಾಗಿ ಹೊಟ್ಟೆ ನೋವು ಮುಂತಾದುವುಗಳಿಗೆ ಉಪಯೋಗಿಸುತ್ತಾರೆ ಆ ರಸದಲ್ಲಿ ಶೇಕಡ 6.5 ರಷ್ಟು ಶರ್ಕರಾಂಶ ಇರುತ್ತದೆ. ಮರದ ತಿರುಳಿನಿಂದ ಹಾಗೂ ಬೀಜಗಳಿಂದ ಎಣ್ಣೆ ಯನ್ನು ತೆಗೆಯುತ್ತಾರೆ. ಬೀಜಗಳಲ್ಲಿ 45% ಎಣ್ಣೆಗೆ ಪೂತಿನಾಶಕ ಹಾಗೂ ಕ್ರಿಮಿ ನಾಶಕ ಗುಣಗಳಿರುತ್ತವೆ. ಸೋಪು ತಯಾರಿಕೆಯಲ್ಲೂ, ದೀಪ ಉರಿಸಲೂ ಈ ಎಣ್ಣೆ ಯನ್ನು ಉಪಯೋಗಿಸುತ್ತಾರೆ. ಬೇವಿನ ಹಿಂಡಿಯನ್ನು ಹಾಕಿದ ಕಡೆ ಗೆದ್ದಲು ಹುಳು ಗಳು ಬರುವುದಿಲ್ಲ. ಇದನ್ನು ಗೊಬ್ಬರಕ್ಕಾಗಿಯೂ ಉಪಯೋಗಿಸುತ್ತಾರೆ. ಬೇವಿನ ಎಣ್ಣೆ ಕಹಿಯಾಗಿರುವುದಕ್ಕೆ ಮುಖ್ಯ ಕಾರಣವೆಂದರೆ ಅದರಲ್ಲಿರುವ ನಿಂಬಿಡಿನ್ (Nim-bidin) ಎಂಬ ಪದಾರ್ಥ. ಅತಿ ಕಹಿಯಾದ ಈ ವಸ್ತು ಸ್ವಲ್ಪ ಗಂಧಕಾಂಶವನ್ನು ಹೊಂದಿರುತ್ತದೆ. ಇತ್ತೀಚೆಗೆ ಈ ನಿಂಬಿಡಿನ್ ಸಂಯುಕ್ತಗಳನ್ನು ಪೂತಿನಾಶಕಗಳಾ ಗಿಯೂ, ಸುಟ್ಟ ಗಾಯಗಳಿಗೂ, ಚರ್ಮರೋಗಗಳಿಗೂ, ಹಲ್ಲಿನಿಂದ ರಕ್ತ ಬರುವು ದನ್ನೂ ತಪ್ಪಿಸಲೂ ಉಪಯೋಗಿಸುತ್ತಿದ್ದಾರೆ.

ಸೂಚನೆ : ಬೇವಿನ ಗಿಡಗಳನ್ನು ಬೆಳೆಸಬೇಕಾದರೆ ಮರದಿಂದ ಬಿದ್ದ ಹಣ್ಣು ಗಳನ್ನಾರಿಸಿಕೊಂಡು ಒಣಗಿಸಿ ಬೀಜಗಳನ್ನು ಕೂಡಲೇ ನೆಡಬೇಕು. ಬೀಜಗಳನ್ನು ಬಹಳ ದಿನ ಸಂಗ್ರಹಿಸಿಟ್ಟಿದ್ದರೆ ಅವುಗಳ ಮೊಳೆಯುವ ಶಕ್ತಿ ಕುಂಠಿತವಾಗುತ್ತದೆ. ಒಣಹವೆಯ ಪ್ರದೇಶಗಳಲ್ಲೆಲ್ಲಾ ವನಮಹೋತ್ಸವವನ್ನು ಆಚರಿಸುವಾಗ ಈ ಮರ ವನ್ನು ನೆಡಬಹುದು.

ಬೇಲದಹಣ್ಣಿನ ಮರ Feronia limonia (L.) swingle. (Syn F. elephantum correa)

ಮೈಸೂರಿನಲ್ಲಿ ಎಲ್ಲ ಕಡೆಯೂ ಬೆಳೆಯುತ್ತಿರುವ ಈ ಮರ ಜಾವಾ, ಸಿಲೋನ್ ದ್ವೀಪಗಳಲ್ಲಿಯೂ ಬೆಳೆಯುತ್ತದೆ. ಈ ಮರದ "ಫೆರೋನಿಯಾ" ಎಂಬ ಸಸ್ಯಶಾಸ್ತ್ರದ ಹೆಸರು ರೋಮನ್ ಅರಣ್ಯ ದೇವತೆ ಫೆರೋಳಿಂದ ಬಂದಿವೆ. "ಲಿಮೋನಿಯ" ಎಂಬ ಪ್ರಭೇದದ ಹೆಸರು ನಿಂಬೆಹಣ್ಣನ್ನು ಹೋಲುವ ಕಾಯಿಗಳು ಈ ಮರದಲ್ಲಿರುತ್ತವೆ ಎಂಬುದನ್ನು ಸೂಚಿಸುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರುಟೇಸಿ (Rutaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 18 (Toxopeus 1933). ಮುಳ್ಳುಗಳಿಂದ ಕೂಡಿದ ಈ ಮರಕ್ಕೆ ಸಂಯುಕ್ತ ಪತ್ರಗಳಿರುತ್ತವೆ. ಹೂಗಳು ಚಿಕ್ಕವಿದ್ದು 10 ರಿಂದ 12 ಪುಂಕೇಸರಗಳನ್ನು ಹೊಂದಿರುತ್ತವೆ. ಇದರ ಹಣ್ಣು ದುಂಡಗಿದ್ದು 2 ರಿಂದ 3 ಇಂಚು ಸುತ್ತಳತೆ ಹೊಂದಿರುತ್ತದೆ. ಈ ಹಣ್ಣಿನ ರುಚಿಕರವಾದ ತಿರುಳಿನಲ್ಲಿ ಬೀಜಗಳಿರುತ್ತವೆ. ಈ ಬೀಜಗಳನ್ನು ನೆಟ್ಟು ಅವುಗಳಿಂದ ಸಸಿಗಳನ್ನು ಪಡೆಯಬಹುದು.


ಉಪಯೋಗಗಳು : ಕಾಡುಗಳಲ್ಲೆಲ್ಲಾ ಈ ಮರ ಬೆಳೆದರೂ ಬೇಲದಹಣ್ಣಿಗಾಗಿ ಊರುಗಳಲ್ಲಿ ಇದನ್ನು ಬೆಳೆಸುತ್ತಾರೆ. ಬೇಲದಹಣ್ಣಿನ ಪಾನಕಕ್ಕೆ ಭೇದಿ, ಆಮಶಂಕೆ ಮತ್ತಿತರ ಕುಕ್ಷಿ ಸಂಬಂಧ ಖಾಯಿಲೆಗಳನ್ನು ಗುಣಪಡಿಸುವ ಗುಣ ಇದೆ. ಈ ಮರದ ಅಂಟನ್ನು ಜಲವರ್ಣಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ ಇದರ ಮರ ಹಳದಿ ಬಣ್ಣವನ್ನು ಹೊಂದಿದ್ದು ಹತ್ತಿರದ ಎಳೆಗಳನ್ನು ಪಡೆದಿದೆ. ಘನ ಅಡಿ 1ಕ್ಕೆ 50 ಪೌಂಡುಗಳಷ್ಟು ತೂಗುತ್ತದೆ. ಮನೆ ಕಟ್ಟಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಈ ಮರವನ್ನು ಉಪಯೋಗಿಸುತ್ತಾರೆ.

ಬಂದರು (Hymenodictyon excelsum Wall.)


ಈ ದೊಡ್ಡ ಮರ ಬಿಹಾರ್, ಮಧ್ಯಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಇದು ಮೈಸೂರಿನ ಪಶ್ಚಿಮಘಟ್ಟಗಳ ಎಲೆಗಳುದುರುವ ಅರಣ್ಯ ಪ್ರದೇಶಗಳಲ್ಲೂ, ತಿರುವಾಂಕೂರು, ಮಲಬಾರ್ ಪ್ರದೇಶಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 22 (Fargerlind 1937). ಇದರ ತೊಗಟೆ ಬೂದು ಬಣ್ಣವನ್ನು ಹೊಂದಿದ್ದು ಮೃದುವಾಗಿರುತ್ತದೆ. ಎಲೆಗಳು ತುಪ್ಪಳವನ್ನು ಹೊಂದಿ ಮೃದುವಾಗಿ ದೊಡ್ಡವಾಗಿರುತ್ತವೆ. ಬ್ರಾಕ್ಟ್‌ಗಳಿರುತ್ತವೆ.

ಹೂಗಳ ಬಣ್ಣ ಹಸಿರು ಮಿಶ್ರ ಕೆಂಪು. ಇದರ ಕಾಯಿಗಳು ಅನೇಕ ಬೀಜಗಳನ್ನು ಹೊಂದಿರುತ್ತವೆ. ಬೀಜಗಳಿಗೆ ರೆಕ್ಕೆಯಿರುತ್ತದೆ.



ಬಂದರು



ಬಂದರು ಮರದ ಅಡ್ಡಸೀಳಿನ ಒಂದು ಭಾಗ.


ಉಪಯೋಗಗಳು : ಟೀ ಪೆಟ್ಟಿಗೆಗಳನ್ನು ಮಾಡಲೂ, ಬೆಂಕಿಕಡ್ಡಿಗಳನ್ನು ಮಾಡಲೂ ಉಪಯೋಗಿಸುತ್ತಾರೆ.

ಸೂಚನೆ : ಇದೇ ಜಾತಿಗೆ ಸೇರಿದ ಇನ್ನೊಂದು ಪ್ರಭೇದ (Hymenodictyon obovatum) ಬಾಬಾಬುಡನ್ ಬೆಟ್ಟಗಳಲ್ಲಿ ಬೆಳೆಯುತ್ತದೆ. ಇದು ಹಿಂದಿನ ಮರಕ್ಕಿಂತಲೂ ಎತ್ತರವಾಗಿರುತ್ತದೆ. ಪಶ್ಚಿಮ ಘಟ್ಟಗಳಲ್ಲೆಲ್ಲಾ ಬೆಳೆಯುವ ಈ ಮರ 50 ಅಡಿಗಳಿಗಿಂತ ಹೆಚ್ಚು ಎತ್ತರಕ್ಕೆ ಬೆಳೆಯುತ್ತದೆ.

ಉಪಯೋಗಗಳು : ಈ ಮರದ ತೊಗಟೆಯಿಂದ ಬರುವ ಕಹಿಯಾದ ರಸವನ್ನು ಆಯುರ್ವೇದೀಯ ಔಷಧಿಯಲ್ಲಿ ಜ್ವರ ನಿವಾರಣೆಗಾಗಿ ಉಪಯೋಗಿಸುತ್ತಾರೆ. ಮರವನ್ನು ವ್ಯವಸಾಯದ ಉಪಕರಣಗಳನ್ನು ಮಾಡಲು ಉಪಯೋಗಿಸುತ್ತಾರೆ.

ಬಿಂಡಿಮರ (ಬಿಂದಿ, ಸಿಶ್ಮಬಾಗೆ) (Dalbergia sisso Roxb.)

ಮೈಸೂರು ಬೆಂಗಳೂರುಗಳಲ್ಲೆಲ್ಲಾ ಬೆಳೆಯುತ್ತಿರುವ ಈ ಮರ ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ಮುಂದಿರುವ ಬಸ್‌ಸ್ಟಾಪ್ ಮುಂದೆಯೂ ಇದೆ. ಒಳ ಹಿಮಾಲಯದಲ್ಲಿ ಸಮುದ್ರಮಟ್ಟಕ್ಕೆ 3000 ಅಡಿಗಳಷ್ಟು ಎತ್ತರದವರೆಗೂ ಬೆಳೆಯುವ ಈ ಮರ ಪಂಜಾಬ್ ಮತ್ತು ಅಸ್ಸಾಂಗಳಲ್ಲೂ ಬೆಳೆಯುತ್ತದೆ.



ಬಿಂಡಿಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿಸೇಸಿ (Papilionaceae) ಕುಟುಂಬಕ್ಕೆ ಸೇರಿದೆ. ಸುಂದರವಾದ ಈ ಮರ 40–50 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ನವೆಂಬರ್, ಡಿಸಂಬರ್ ತಿಂಗಳುಗಳಲ್ಲಿ ಪತ್ರರಹಿತವಾಗಿದ್ದು ಮಾರ್ಚ್, ಏಪ್ರಿಲ್ ತಿಂಗಳುಗಳಲ್ಲಿ ಹಳದಿ ಹೂ ಗೊಂಚಲುಗಳನ್ನು ಬಿಡುತ್ತದೆ. ಕಾಯಿಗಳು ಡಿಸೆಂಬರ್–ಜನವರಿಯ ಹೊತ್ತಿಗೆ ಬಲಿಯುತ್ತವೆ. ಸುಮಾರು 4000 ಬೀಜಗಳು 1 ಔನ್ಸ್‌ನಷ್ಟು ತೂಗುತ್ತವೆ.

ಇದರ ಬೀಜಗಳನ್ನು ನೆಟ್ಟರೆ ಅವು 12 ನೆಯ ದಿನಕ್ಕೆ ಮೊಳೆಯುವುದಕ್ಕೆ ಪ್ರಾರಂಭಿಸಿ $1\frac{1}{2}$ ತಿಂಗಳಲ್ಲಿ ಸಸಿಗಳಾಗುತ್ತವೆ. ಈ ಮರ ಲೆಕ್ಕಾಚಾರದ ಪ್ರಕಾರ 40 ವರ್ಷಗಳಲ್ಲಿ ಕೇವಲ $4\frac{1}{4}$ ಅಡಿ ಸುತ್ತಳತೆಗಳಿಸಬಲ್ಲದು.

ಉಪಯೋಗಗಳು : ರಸ್ತೆಯ ಪಕ್ಕಗಳಲ್ಲಿ ಬೆಳೆಸಲು ಇದೊಂದು ಶ್ರೇಷ್ಠ ವೃಕ್ಷ. ವನಮಹೋತ್ಸವದ ಕಾಲದಲ್ಲಿ ಈ ಮರವನ್ನು ಹೆಚ್ಚಾಗಿ ನೆಡಲಾಗುತ್ತದೆ. ಇದರ ಮರ ಘನ ಅಡಿಗೆ 45-50 ಪೌಂಡುಗಳಷ್ಟು ತೂಗುತ್ತದೆ. ಒಳಮರ ಕಂದು ಬಣ್ಣಕ್ಕಿದ್ದು ಕಪ್ಪು ಎಳೆಗಳನ್ನು ಹೊಂದಿರುತ್ತದೆ. ಮನೆ ಕಟ್ಟಲು, ಗಾಡಿಗಳನ್ನು ಮಾಡಲು, ಮನೆ ಸಾಮಾನುಗಳನ್ನು ಮಾಡಲು ಗಟ್ಟಿಯಾದ ಈ ಮರವನ್ನು ಉಪಯೋಗಿಸುತ್ತಾರೆ.

ಬೆಂಡೆಮರ (ಬೆಳ್ಳಕ, ಬೆಂಡವರುಮರ) (Kydia calycina Roxb.)

ಈ ಸುಂದರ ಮರ ಮೈಸೂರಿನ ಒಣಹವೆಯುಳ್ಳ ಕೆಲವು ಅರಣ್ಯಗಳಲ್ಲಿ ಕಂಡುಬಂದಿದೆ. ಭಾರತ, ಬರ್ಮಾ ಮೊದಲಾದ ಪ್ರದೇಶಗಳಲ್ಲೆಲ್ಲಾ ಈ ಸಣ್ಣ ಮರ ಕಂಡುಬರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಾಲ್ವೇಸಿ (Malvaceae) ಕುಟುಂಬಕ್ಕೆ ಸೇರಿದೆ. ಕಲ್ಕತ್ತಾದಲ್ಲಿ ಇಂಡಿಯಾದ ಸಸ್ಯ ತೋಟವನ್ನು ಸ್ಥಾಪಿಸಿದ ರಾಬರ್ಟ್ ಕಿಡ್ ಅವರ ಗೌರವಾರ್ಥವಾಗಿ ಇದಕ್ಕೆ ಕಿಡಿಯಾ (Kydia) ಎಂದು ಹೆಸರು ಕೊಡಲಾಗಿದೆ. ಕ್ಯಾಲಿಸಿನ ಎಂಬ ಹೆಸರು ಪುಷ್ಪಪಾತ್ರೆಗೆ ಸಂಬಂಧಿಸಿದ್ದಾಗಿದೆ. ಇವರ ಎಲೆಗಳು 3 ರಿಂದ 6 ಇಂಚು ಉದ್ದವಾಗಿದ್ದು ಕೆಳಭಾಗದಲ್ಲಿ ಹೃದಯಾಕಾರವನ್ನು ಹೊಂದಿರುತ್ತವೆ. 3 ರಿಂದ 7 ಮೂತಿಗಳನ್ನು ಹೊಂದಿರುತ್ತವೆ. ಎಲೆಗಳ ತೊಟ್ಟು 1 ರಿಂದ 2 ಇಂಚು ಉದ್ದವಿರುತ್ತದೆ. ಭಾರತದ ಸುಂದರ ವೃಕ್ಷಗಳಲ್ಲೊಂದಾದ ಇದರ ಹೂಗಳು ಬಿಳಿ ಇಲ್ಲವೇ ಕೆಂಪು ಬಣ್ಣವಾಗಿರುತ್ತವೆ. ಕಾಯಿಗಳು ಸಣ್ಣವಿದ್ದು ಬಟಾಣಿಕಾಳಿನಷ್ಟಿರುತ್ತವೆ. ಬೀಜಗಳು ಕಪ್ಪು ಮಿಶ್ರಿತ ಕಂದುಬಣ್ಣಕ್ಕಿರುತ್ತವೆ; ಮೂತ್ರಪಿಂಡದ ಆಕಾರವನ್ನು ಹೊಂದಿರುತ್ತವೆ.

ಉಪಯೋಗಗಳು : ಈ ಮರ ಬೆಳ್ಳಗೆ ಮೃದುವಾಗಿದ್ದು ಘನ ಅಡಿಗೆ 40 ರಿಂದ 45 ಪೌಂಡ್ ತೂಗುತ್ತದೆ. ಮನೆಕಟ್ಟಲೂ, ವ್ಯವಸಾಯದ ಉಪಕರಣಗಳನ್ನು



ಬೆಂಡೆಮರದ ಅಡ್ಡ ಸೀಳಿನ ಒಂದು ಭಾಗ

ಮಾಡಲೂ, ಸೌದೆ ಮತ್ತು ಇದ್ದಿಲುಗಳಿಗಾಗಿಯೂ ಈ ಮರವನ್ನು ಉಪಯೋಗಿಸುತ್ತಾರೆ.

ಸೂಚನೆ : ಈ ಮರ ಯೂರೋಪ್, ಅಮೆರಿಕಾಗಳಲ್ಲೆಲ್ಲಾ "ರಾಕ್ಸ್‌ಬರ್ಗ್ಸ್ ಕಿಡಿಯಾ" (Roxburgh's Kydia) ಎಂದು ಪ್ರಸಿದ್ಧವಾಗಿದೆ.

ಬೆಂಡುಗ (Scleropyrum wallichianum Arn)

ಈ ಮರ ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸ್ಯಾಂಟಾಲೇಸಿ (Santalaceae) ಕುಟುಂಬಕ್ಕೆ ಸೇರಿದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ದೊರಕಿಲ್ಲ.

ಬೊಂತೆಕಳ್ಳಿ (ಕಾಡುನೇವಲಿ, ಕೋಟುಕಳ್ಳಿ) Euphorbia tirukalli L.

ಬೊಂತೆಕಳ್ಳಿ ಮೂಲತಃ ಆಫ್ರಿಕಾ ಖಂಡದಲ್ಲಿ ಕಾಣಬರುತ್ತಿದ್ದು ಈಗ ನಮ್ಮ ದೇಶದ ಒಣ ಹವೆಯ ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ. ಬೇಲಿಗಾಗಿ ಮೈಸೂರಿನ ಎಲ್ಲ ಜಿಲ್ಲೆಗಳಲ್ಲೂ ಇದನ್ನು ಬೆಳೆಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರ 12 ಅಡಿಗಳಿಂದ 20 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಮರವೆಲ್ಲಾ ಹಸುರಾಗಿದ್ದು ತುಂಬಾ ಕವಲೊಡೆದಿರುತ್ತದೆ. ಇದರ

ವೈಯೆಲ್ಲಾ ಹಾಲಿನಂತಹ ರಸದಿಂದ ಕೂಡಿರುತ್ತದೆ. ಇದರ ವರ್ಣತಂತುಗಳ ಸಂಖ್ಯೆ 2n=20 (Miege 1960). ಇದರ ಎಲೆಗಳು ಚಿಕ್ಕವಾಗಿರುತ್ತವೆ. ಮಳೆಗಾಲದಲ್ಲಿ ಮಾತ್ರ ಕಂಡುಬರುವ ಈ ಎಲೆಗಳ ಉದ್ದ ಅಗಲಗಳು 1.3+0.3 ಸೆಂಟಿಮೀಟರುಗಳಾಗಿರುತ್ತವೆ. ಇದರ ಹೂ ಗೊಂಚಲುಗಳಲ್ಲಿ ಹೆಣ್ಣು ಹೂಗಳೇ ಹೆಚ್ಚಿರುತ್ತವೆ. ಇದರ ಕಾಯಿಗಳು 0.8–1 ಸೆಂಟಿಮೀಟರಿನಷ್ಟು ದಪ್ಪವಿರುತ್ತವೆ. ಬೀಜಗಳು ದುಂಡಗಿರುತ್ತವೆ.

ಉಪಯೋಗಗಳು : ಇದರ ಬೇರನ್ನು ಮೀನು ಹಾಗೂ ಹಕ್ಕಿಗಳ ವಿಷ ತಯಾರಿಸಲು ಉಪಯೋಗಿಸುತ್ತಾರೆ. ಇದರ ಹಾಲನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ. ಮೈಮೇಲೆ ಬಿದ್ದರೆ ಉರಿಯುವ ಗುಣವುಳ್ಳ ಈ ಕಳ್ಳಿಯನ್ನು ಮುರಿಯಲು ದನಗಳೂ ಹೆದರುತ್ತವೆ. ಆದ್ದರಿಂದಲೇ ಈ ಬೊಂತೆಕಳ್ಳಿಯನ್ನು ಬೇಲಿಗಾಗಿ ಉಪಯೋಗಿಸುತ್ತಾರೆ.

ಜೆಪ್ಪಾಳೆಮರ (ಹಾಲೆ (ಳೆ) (Wrightia tinctoria R.Br.)

ದೇವಸ್ಥಾನಗಳ ಹತ್ತಿರ ಬೆಳೆಸುವ ಈ ಮರ ಕೊಡಗು ಮತ್ತು ಮೈಸೂರು ಜಿಲ್ಲೆಗಳಲ್ಲಿ ಕಂಡುಬರುತ್ತದೆ. ರಾಜಾಸ್ಥಾನ, ಮಧ್ಯಪ್ರದೇಶ ಮತ್ತು ಮದರಾಸು ಪ್ರಾಂತಗಳಲ್ಲೂ ಈ ಮರ ಹೇರಳವಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಅಪೋಸಯನೇಸಿ (Apocyanaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=10 (Gajapathy 1962c). ಇದರ ಶ್ವೇತ ಕುಸುಮಗಳು ಸುವಾಸನಾಭರಿತವಾಗಿರುತ್ತವೆ. ಇದರ ಮರ ಬಹಳ ಮೃದುವಾಗಿದ್ದು, ದಂತವರ್ಣವನ್ನು ಹೊಂದಿರುತ್ತದೆ. ಬೀಜಗಳನ್ನು ನೆಡುವುದರ ಮೂಲಕ ಸಸಿಗಳನ್ನು ಸುಲಭವಾಗಿ ಬೆಳಸಬಹುದು.

ಉಪಯೋಗಗಳು : ಜಗತ್ತಿನಲ್ಲಿ ಪ್ರಸಿದ್ಧವಾಗಿರುವ ಚನ್ನಪಟ್ಟಣದ ಆಟದ ಸಾಮಾನುಗಳನ್ನು ಈ ಮರದಿಂದ ಮಾಡಲಾಗುತ್ತದೆ. ಪುರಾತನ ಕಾಲದಿಂದಲೂ ಇದರ ಎಲೆಗಳಿಂದ ಒಂದು ಬಗೆಯ ನೀಲಿ ಬಣ್ಣವನ್ನು ಪಡೆಯಲಾಗುತ್ತಿದೆ. ಇದನ್ನು 'ಪಾಲ ಇಂಡಿಗೊ' ಎಂದು ಕರೆಯುತ್ತಾರೆ. ಈ ಮರದ ಹೂಗಳನ್ನು ದೇವರ ಪೂಜೆಗೆ ಉಪಯೋಗಿಸಲಾಗುತ್ತದೆ.

ಮಟ್ಟಿನೇರಿಳೆ (ಮಕ್ಕೆ ನೇರಿಳೆ) (Syzygium hemispherium walp) Alston. Eugenia hemispherica wight.)

ಈ ಸುಂದರ ನಿತ್ಯಹರಿದ್ವರ್ಣದ ವೃಕ್ಷವು ಮಲೆನಾಡಿನ ಹಾಗೂ ಕೊಡಗಿನ ಅರಣ್ಯಗಳಲ್ಲಿ ಬೆಳೆಯುತ್ತದೆ. ಕೊಡಗು ಜಿಲ್ಲೆಯಲ್ಲಿ ಇದನ್ನು ಮಕ್ಕೆನೇರಿಳೆ ಎಂದು ಕರೆಯುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಟೇಸಿ (Myrtaceae) ಕುಟುಂಬಕ್ಕೆ ಸೇರಿದೆ. ಇದರ ಹೂಗಳು ದೊಡ್ಡವಿದ್ದು ಬಿಳಿಯಗಿರುತ್ತವೆ. ಹಣ್ಣಿನ ಸುತ್ತಳತೆ ಒಂದು ಇಂಚಿನಷ್ಟಿರುತ್ತದೆ.

ಉಪಯೋಗಗಳು : ಇದರ ಮರವನ್ನು ಮನೆಯ ಸಾಮಾನುಗಳನ್ನು ತಯಾರಿಸಲೂ ಮತ್ತಿತರ ಕೆಲಸಗಳಿಗೂ ಉಪಯೋಗಿಸುತ್ತಾರೆ. ಇದರ ತೊಗಟೆಯ ಕಷಾಯವನ್ನು ಸಿಫಿಲಿಸ್ (ಉಪದಂಶ) ಕಾಯಿಲೆಯನ್ನು ಗುಣಪಡಿಸಲು ಉಪಯೋಗಿಸುತ್ತಾರೆ.

ಮತ್ತಿಮರ (ಕರಿಮತ್ತಿ, ಹೆಬ್ಬುಲ್ವೆ) (Terminalia tomentosa wight & Arn.)

ಮಲೆನಾಡಿನ ಅರಣ್ಯ ಪ್ರದೇಶಗಳ ಕಣಿವೆಗಳಲ್ಲಿ ದೊಡ್ಡದಾಗಿ ಬೆಳೆಯುವ ಮತ್ತಿಮರವು ಮೈಸೂರಿನ ಎಲ್ಲ ಜನರಿಗೂ ಚಿರಪರಿಚಿತವಾದದ್ದು. ಕೆಲವು ಕಡೆಗಳಲ್ಲಿ ಯಂತೂ ಗುಂಪು ಗುಂಪಾಗಿ ಬೆಳೆದುಕೊಂಡಿರುತ್ತವೆ. 50 ರಿಂದ 100 ಇಂಚು ಮಳೆ ಬೀಳುವ ಫಲವತ್ತಾದ ಅರಣ್ಯ ಪ್ರದೇಶಗಳಲ್ಲೆಲ್ಲಾ ಮತ್ತಿಮರವು ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ತನ್ನ ಎತ್ತರದ ಕಾಂಡ ಹಾಗೂ ಸುತ್ತಲೂ ಹರಡಿಕೊಳ್ಳುವ ರೆಂಬೆಗಳು ಇವುಗಳಿಂದ ಕೂಡಿ ಛತ್ರ ನಿಲುವನ್ನು ಹೊಂದಿರುವ ಈ ವೃಕ್ಷವು ಕೋಂಬ್ರಿಟೇಸಿ (Combretaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 14 (Nanda 1962). ಮಲೆನಾಡಿನ ಕಾಯ್ದಿರಿಸಿದ ಕೆಲವು ಅರಣ್ಯಗಳಲ್ಲಿ ಇಂದಿಗೂ ಕೆಲವು ದೈತ್ಯಾಕಾರದ ವೃಕ್ಷಗಳಿವೆ. ಈ ಮರದ ತೊಗಟೆಯು ಬೂದು ಬಣ್ಣದಿಂದ ಕೂಡಿದ್ದು ಸ್ವಲ್ಪ ಕಪ್ಪು ಬಣ್ಣವನ್ನು ಹೊಂದಿರುತ್ತದೆ. ಜನವರಿಯಿಂದ ಏಪ್ರಿಲ್ ತಿಂಗಳ ಕೊನೆಯ ತನಕವೂ ಎಲೆಗಳುದುರಿ ಹೋಗಿರುತ್ತವೆ. ಜೂನ್–ಜೂಲೈ ತಿಂಗಳುಗಳಲ್ಲಿ ಬೆಳ್ಳನೆಯ ಹೂಗೊಂಚಲುಗಳು ಮೂಡುತ್ತವೆ. ಕಾಯಿಗಳು ಫೆಬ್ರುವರಿ-ಮಾರ್ಚಿ ತಿಂಗಳ ಹೊತ್ತಿಗೆ ಮಾಗುತ್ತವೆ. 200 ಕಾಯಿಗಳು ಒಂದು ಪೌಂಡಿನಷ್ಟು ತೂಗುತ್ತವೆ. 350 ಬೀಜಗಳು ಒಂದು ಔನ್ಸಿನಷ್ಟು ತೂಗುತ್ತವೆ. ಬೀಜಗಳಿಂದ ಸಸಿಗಳನ್ನು ಪಡೆಯಬಹುದು. ಮತ್ತಿಯ ಮರವು ಜಗತ್ಪ್ರಸಿದ್ಧವಾದುದ್ದು. ಮರವು ಕಪ್ಪುಮಿಶ್ರಿತ ಕಂದುಬಣ್ಣವನ್ನು ಹೊಂದಿದ್ದು ಕಪ್ಪನೆಯ ಗೆರೆಗಳನ್ನು ಹೊಂದಿರುತ್ತದೆ. ದೀರ್ಘಕಾಲ ಬಾಳಿಕೆ ಬರುವ ಗುಣ ಹೊಂದಿರುವ ಗಟ್ಟಿಯಾದ ಈ ಮರವು ಘನ ಅಡಿಯೊಂದಕ್ಕೆ 50 ರಿಂದ 70 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಮತ್ತಿಮರವನ್ನು ಹಡಗು ಹಾಗೂ ದೋಣಿಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಈ ಮರ ನೀರಿನಲ್ಲಿ ಬಹುಕಾಲ ಬಾಳ ಬಲ್ಲದು. ಗಾಡಿಗಳನ್ನು ಮಾಡಲೂ, ಮನೆಯ ಸಾಮಾನುಗಳನ್ನು ಮಾಡಲೂ, ಈ ಮರವನ್ನು ಉಪಯೋಗಿಸುತ್ತಾರೆ. ಹಾಸನದ ಕೆಲವು ಖಾಸಗೀ ಅರಣ್ಯಪ್ರದೇಶಗಳಲ್ಲಿ ಇಂತಹ ಒಳ್ಳೆಯ ಮರವನ್ನು ಕಡಿಸಿ ಇದ್ದಿಲು ಮಾಡಿಸುವ ದುರಭ್ಯಾಸವೂ ಇದೆ. ನಮ್ಮ ಅರಣ್ಯ ಖಾತೆಯವರು ಕಾಡನ್ನೆಲ್ಲಾ ಕಡಿಸಿ ಯೂಕಲಿಪ್ಟಸ್ ಹಾಕುವ ಬದಲು ಈ ಮರಗಳನ್ನು ಅಲ್ಲಲ್ಲೆ ಹಾಕಿದರೆ ಹಾಸನ ಮತ್ತಿತರ ತಂಪಾದ ಹವೆಯಿರುವ ಪ್ರದೇಶ ಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಹಾಸನ ಜಿಲ್ಲೆಯ ಮುಕ್ಕಾಲು ಭಾಗ ಮತ್ತಿಮರವೆಲ್ಲಾ ಅರಣ್ಯಗಳಲ್ಲಿ ಮುಗಿದುಹೋಗಿದೆ. ಬೇಡಿಕೆ ಹೆಚ್ಚಾಗಿರುವ ಈ ಮರದ ರಕ್ಷಣೆ ಅತ್ಯಗತ್ಯವಾಗಿದೆ. 50 ವರ್ಷಗಳು ಬೆಳೆದರೂ 2–2½ ಅಡಿ ಸುತ್ತ ಳತೆ ಮಾತ್ರಗಳಿಸುವ ಈ ಮರವನ್ನು ಅಧಿಕ ಸಂಖ್ಯೆಯಲ್ಲಿ ಬೆಳೆಸುವುದು ಭವಿಷ್ಯದ ದೃಷ್ಟಿಯಿಂದ ಕ್ಷೇಮಕರ.

ಮರಗಳನ್ನು ಬೆಳೆಸುವ ಕ್ರಮ : ಮರಗಳ ಬೀಜಗಳನ್ನು ಫೆಬ್ರುವರಿ-ಮಾರ್ಚ್ ತಿಂಗಳುಗಳಲ್ಲಿ ಸಂಗ್ರಹಿಸಿ ಅವನ್ನು ನೆಟ್ಟರೆ ಸುಮಾರು 66% ರಷ್ಟು ಬೀಜಗಳು ಮೊಳೆಯುವ ಶಕ್ತಿಯನ್ನು ಹೊಂದಿರುತ್ತವೆ. 9ನೆಯ ದಿನದಿಂದ ಮೊಳೆ ಯಲು ಪ್ರಾರಂಭಿಸುವ ಬೀಜಗಳು 25ನೆಯ ದಿನದ ಹೊತ್ತಿಗೆ ಚಿಕ್ಕ ಸಸಿಗಳಾಗುತ್ತವೆ. ನೇರವಾಗಿ ಬೀಜಗಳನ್ನು ಬೇಕಾದ ಕಡೆಗಳಲ್ಲಿ ನೆಡುವುದು ಉತ್ತಮ. ಇಲ್ಲದಿದ್ದಲ್ಲಿ ಸಸಿ ಗಳನ್ನೆಲ್ಲಾ ಒಂದೆಡೆ ಬೆಳೆಸಿ ಒಂದು ವರ್ಷವಾದ ಆನಂತರ ಅವನ್ನು ಕಿತ್ತು ಬೇರೆ ಕಡೆ ನೆಡಬಹುದು. ಇದರ ತೊಗಟೆಯ ಕಷಾಯವನ್ನು ಗಾಯಗಳಿಗೆ ಹಚ್ಚಲು ಉಪ ಯೋಗಿಸುತ್ತಾರೆ. ತೊಗಟೆಗೆ ಮೂತ್ರಸ್ರಾವ ಉತ್ತೇಜಕ ಶಕ್ತಿ ಇರುತ್ತದೆ. ಹೃದ್ರೋಗ ಚಿಕಿತ್ಸೆಯಲ್ಲಿಯೂ ಇದನ್ನು ಉಪಯೋಗಿಸುತ್ತಾರೆ.

ಮಡಿಮರ (Boswellia serrata Roxb.)

ಪಂಜಾಬ್ ಮಧ್ಯಪ್ರದೇಶಗಳಲ್ಲಿ ಬೆಳೆಯುತ್ತಿರುವ ಈ ಮರವನ್ನು ಒಣಹವೆಯುಳ್ಳ ನಮ್ಮ ಬೆಟ್ಟಗುಡ್ಡ ಪ್ರದೇಶಗಳಲ್ಲೂ ಕಾಣಬಹುದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಬರ್ಸರೇಸಿ (Burseraceae) ಕುಟುಂಬಕ್ಕೆ ಸೇರಿದೆ. ಈ ಮರದ ತೊಗಟೆ ಬೆಳ್ಳಗೆ ಸ್ವಲ್ಪ ತೆಳ್ಳಗಿದ್ದು ಆಗಾಗ್ಗೆ ಉದುರಿಹೋಗುತ್ತಿರುತ್ತದೆ. ಹೂಗಳು ಸಣ್ಣಗೆ ಬೆಳ್ಳಗಿದ್ದು ಗೊಂಚಲುಗಳಲ್ಲಿ ಹೂ ಬಿಡುತ್ತವೆ. ಇದರ ಇನ್ನೊಂದು ಪ್ರಭೇದ (glabra) ದಿಂದ ನಿಜವಾದ ಸಾಂಬ್ರಾಣಿ ದೊರುಕುತ್ತದೆ.

ಉಪಯೋಗಗಳು : ಇದರ ತೊಗಟೆಯಿಂದ ಬರುವ "ಓಲಿಯೊಗಂರೆಸಿನ್" ಅನ್ನು ಬಣ್ಣಗಳ ತಯಾರಿಕೆಯಲ್ಲೂ, ಸಂಧಿವಾತದಲ್ಲೂ, ನರಗಳ ದೌರ್ಬಲ್ಯ ಮತ್ತು ಚರ್ಮ ಕಾಯಿಲೆಗಳಲ್ಲೂ ಉಪಯೋಗಿಸುತ್ತಾರೆ ಕೆಲವು ಕಡೆ ಇದರ ಹೂಗಳನ್ನೂ ಬೀಜಗಳನ್ನೂ ತಿನ್ನುತ್ತಾರೆ. ಮಧ್ಯಪ್ರದೇಶದಲ್ಲಿರುವ ನೇಪಾ ನಗರದಲ್ಲಿ ಸುದ್ದಿ ಪ್ರತಿಕೆಗೆ ಬೇಕಾದ ಕಾಗದ ತಯಾರಿಸುವ ಕಾರ್ಖಾನೆಯಲ್ಲಿ ಈ ಮರದ ತಿರುಳನ್ನೇ ಉಪಯೋಗಿಸುತ್ತಾರೆ. ಹಲಗೆಗಳನ್ನು ಮಾಡಿ ಉಪಯೋಗಿಸುವ ರೂಢಿಯೂ ಉಂಟು. ಇನ್ನೊಂದು ಪ್ರಭೇದ (glabra) ದಿಂದ ಸಾಂಬ್ರಾಣಿ ದೊರಕುತ್ತದೆ. ಅದನ್ನು ದೇವಸ್ಥಾನಗಳಲ್ಲೂ, ಮನೆಯಲ್ಲೂ ಸುವಾಸನೆ ಬರಲು ಉಪಯೋಗಿಸುತ್ತಾರೆ.

ಮಸ್ಸೇವಾಲ ಮರ (ಮುಸ್ಸಿಮರ) Meliosma microcarpa craib. (Syn. Meliosma arnottiana wight.)

ಈ ಸುಂದರ ವೃಕ್ಷವು ಹಾಸನ ಶಿವಮೊಗ್ಗ ಜಿಲ್ಲೆಯ ಅರಣ್ಯಗಳಲ್ಲೂ, ಕಡೂರಿನಲ್ಲೂ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಬೆಳೆಯುತ್ತದೆ. ಮಣಿಪುರ, ಖಾಸಿಯಾ ಪ್ರದೇಶಗಳಲ್ಲೂ ಹೇರಳವಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಾಬಿಯೇಸಿ (Sabiaceae) ಕುಟುಂಬಕ್ಕೆ ಸೇರಿದೆ. ಜೂನ್ ತಿಂಗಳಲ್ಲಿ ಹೂಬಿಟ್ಟು ಸೆಪ್ಟೆಂಬರ್ ಹೊತ್ತಿಗೆ ಫಲಭರಿತವಾಗುತ್ತದೆ. ಇದರ ಹೂಗಳು ಸಣ್ಣಗೆ ಸ್ವಲ್ಪ ಬೆಳ್ಳಗಿದ್ದು ವಾಸನಾಭರಿತವಾಗಿರುತ್ತವೆ. ಈ ಮರವು ಸಮುದ್ರಮಟ್ಟಕ್ಕೆ ಸುಮಾರು 2100 ಮೀಟರ್ ಎತ್ತರದಲ್ಲೂ ಬೆಳೆಯಬಲ್ಲದು. ಇದರ ಮರ ಮೃದುವಾಗಿ ಕಪ್ಪು, ಕಂದು ಮಿಶ್ರಿತ ಕೆಂಪು ಬಣ್ಣ ಹೊಂದಿರುತ್ತದೆ. ಇದರ ಮರ ಹಗುರವಾಗಿ ಘನ ಅಡಿಯೊಂದಕ್ಕೆ 25 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಇದರ ಮರವನ್ನು ಮನೆಕಟ್ಟುವ ಸಾಮಾನುಗಳನ್ನು ಮಾಡಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಉಪಯೋಗಿಸುತ್ತಾರೆ. ತೇಲುವ ಬೆಂಡುಗಳನ್ನು ತಯಾರಿಸಲೂ ಉಪಯೋಗಿಸುತ್ತಾರೆ.

ಮಲ್ಲೈ (ಅಬನಾಸಿ, ಬಲಿ, ಕುಮಾರಿ) (Diospyros melanoxylon Roxb.)

ಮಧ್ಯಪ್ರದೇಶ, ಮಹಾರಾಷ್ಟ್ರ, ಬಿಹಾರ್‌ಗಳಲ್ಲಿ ಬೆಳೆಯುವ ಈ ಮರವು ಮೈಸೂರಿನ ಅರಣ್ಯಗಳಲ್ಲೂ ಬೆಳೆಯುತ್ತದೆ. ಬೊಂಬಾಯಿ ಸಂಸ್ಥಾನದ ಎಲೆಗಳುದುರುವ ಕಾಡುಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಎಬಿನೇಸಿ (Fbenaceae) ಕುಟುಂಬಕ್ಕೆ ಸೇರಿದೆ. ಒಳ್ಳೆಯ ವಾತಾವರಣದಲ್ಲಿದ್ದರೆ 60 ರಿಂದ 80 ಅಡಿಗಳಷ್ಟು ಎತ್ತರಕ್ಕೆ ಬೆಳೆಯುಬಲ್ಲದು. 15 ರಿಂದ 20 ಅಡಿಗಳವರೆಗೂ ನೇರವಾಗಿ ಕವಲೊಡೆಯದಂತೆ ಬೆಳೆಯುವ ಇದರ ಬುಡ ಸುಮಾರು 7 ಅಡಿಗಳಷ್ಟು ಸುತ್ತಳತೆ ಗಳಿಸಬಲ್ಲದು. ಇದರ ಹಣ್ಣು ದುಂಡಗಿದ್ದು 1 ರಿಂದ 1·5 ಇಂಚು ದೊಡ್ಡದಿರುತ್ತದೆ. ಈ ಮರದ ಚೇಗು ಭಾಗ ಕಪ್ಪಗಿದ್ದು ಅಲ್ಲಲ್ಲೇ ಕೆಂಪು ಇಲ್ಲವೇ ಕಂದು ಎಳೆಗಳನ್ನು ಹೊಂದಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 51 ರಿಂದ 56 ಪೌಂಡುಗಳಷ್ಟಿರುತ್ತದೆ. ಇದರ ಮರವು ತೇಗದ ಮರಕ್ಕಿಂತ ಗಟ್ಟಿಯಾಗಿ ತೂಕವಾಗಿದ್ದರೂ ಕೀಟಗಳಿಂದ ಕೊರೆಯಲ್ಪಡುವುದರಿಂದ ಅಷ್ಟು ಬಾಳಿಕೆ ಬರುವುದಿಲ್ಲ.

ಉಪಯೋಗಗಳು : ಇದರ ಎಲೆಗಳನ್ನು ಬೀಡಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಹಣ್ಣುಗಳನ್ನು ತಿನ್ನುತ್ತಾರೆ. ಇದರ ಮರವನ್ನು ವಾಯು ವಿಹಾರಕ್ಕೆ ಹೊರಟಾಗ ಹಿಡಿದುಕೊಂಡು ಹೋಗುವ ಊರುಗೋಲುಗಳನ್ನು ಮಾಡಲೂ, ಆಟದ ಸಾಮಾನುಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಈ ಮರದ ತೊಗಟೆಯನ್ನೂ, ಅರ್ಧವಾಗಿದ ಹಣ್ಣುಗಳನ್ನೂ ಚರ್ಮ ಹದ ಮಾಡುವಾಗ ಉಪಯೋಗಿಸುತ್ತಾರೆ. ಇದರ ಒಣಗಿದ ಹೂಗಳನ್ನು ಮೂತ್ರಪಿಂಡದ, ಚರ್ಮದ, ಹಾಗೂ ರಕ್ತದ ಕಾಯಿಲೆಗಳಿಗೆ ಉಪಯೋಗಿಸುತ್ತಾರೆ. ತೊಗಟೆಯ ಕಷಾಯವನ್ನು ಅಗ್ನಿಮಾಂದ್ಯಕ್ಕೂ, ಭೇದಿಯನ್ನು ನಿಲ್ಲಿಸುವ ಔಷಧಿಗಾಗಿಯೂ ಉಪಯೋಗಿಸುತ್ತಾರೆ. ಕಣ್ಣು ನೋವಾದಾಗ ತೊಗಟೆಯ ರಸವನ್ನು ಕಣ್ಣುಗಳಿಗೆ ಹಾಕುತ್ತಾರೆ. ಒಣಗಿದ ಹೂಗಳಿಂದ ಕಷಾಯ ಮಾಡಿ ಮೂತ್ರಪಿಂಡ, ರಕ್ತ ಮತ್ತು ಚರ್ಮ ಸಂಬಂಧ ಕಾಯಿಲೆಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ.

ವಃಸಿ (ಮುಷುದ್ದು, ಹುರಿಹುಲಿ) (Chloroxylon swietenia DC.)

ಮದರಾಸಿನ ನೀಲಗಿರಿ ಮುಂತಾದ ಪ್ರದೇಶಗಳಲ್ಲೆಲ್ಲಾ ಚೆನ್ನಾಗಿ ಬೆಳೆಯುವ ಈ ಮರವು ಮೈಸೂರಿನ ಅರಣ್ಯಗಳಲ್ಲೂ ಬೆಳೆಯುತ್ತದೆ. ಮುಖ್ಯವಾಗಿ ಕಾನಕಾನ ಹಳ್ಳಿ ಮುಂತಾದ ಪ್ರದೇಶಗಳಲ್ಲಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರುಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=10 (Nanda 1962). ಮೈದಾನ ಪ್ರದೇಶಗಳಲ್ಲಿ ಮಧ್ಯಮ ಎತ್ತರಕ್ಕೆ ಬೆಳೆಯುವ ಈ ಮರವು ಗುಡ್ಡಪ್ರದೇಶಗಳಲ್ಲಿದ್ದರೆ ಎತ್ತರಕ್ಕೆ ಬೆಳೆಯುಬಲ್ಲದು. ಇದರ ಮರದ ತೂಕವು ಘನ ಅಡಿಯೊಂದಕ್ಕೆ 54 ರಿಂದ 67 ಪೌಂಡುಗಳಷ್ಟಿರುತ್ತದೆ. ಇಂಡಿಯಾದ ಬಣ್ಣದ ಮರ ಎಂದು ಕರೆಸಿ

ಕೊಳ್ಳುವ ಈ ಮರದ ಚೇಗು ಸ್ವಲ್ಪ ಕಪ್ಪಗಿದ್ದು ಹೊರಮರವು ಹಳದಿ ಬಣ್ಣಕ್ಕಿರುತ್ತದೆ. ಇದರ ಚೇಗು ಬಹಳ ಸುಲಭವಾಗಿ ಉರಿಯುವುದಿಲ್ಲ. ನೀರಿನಲ್ಲಿ ಬಹುಕಾಲ ಬಾಳ ಬಲ್ಲದು.

ಉಪಯೋಗಗಳು : ಇದರ ಮರವನ್ನು ಬಡಗಿಗಳು ಕುಶಲ ಕೆಲಸಗಳಿಗೆಲ್ಲಾ ಉಪಯೋಗಿಸುತ್ತಾರೆ ಮರವು ನೀರಿನಲ್ಲಿ ಬಹುಕಾಲ ಬಾಳುವ ಗುಣವನ್ನು ಹೊಂದಿರುವುದರಿಂದ ದೋಣಿಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಹಲಗೆಗಳು, ತೊಲೆಗಳು, ಕಂಬಗಳನ್ನು ಮಾಡಲು ಮತ್ತು ಇದ್ದಿಲನ್ನು ತಯಾರಿಸಲು ಉಪಯೋಗಿತ್ತಾರೆ. ಸುಂದರವಾದ ಪೆಟ್ಟಿಗೆ ಮತ್ತು ಮನೆಸಾಮಾನುಗಳನ್ನು ಮಾಡಲೂ ಈ ಮರವನ್ನು ಉಪಯೋಗಿಸುತ್ತಾರೆ. ರೈಲ್ವೆ ಸ್ಲೀಪರುಗಳು, ರೈಲ್ವೆ ಗಾಡಿಗಳ ಮುಂಭಾಗಗಳು ಮುಂತಾದುದನ್ನು ಮಾಡಲೂ ಉಪಯೋಗಿಸುತ್ತಾರೆ. ಇದರ ತೊಗಟೆಯಲ್ಲಿ ಶೇ. 17 ರಷ್ಟು ಟ್ಯಾನಿನ್ ಇರುತ್ತದೆ. ಮರದಿಂದ ಒಂದು ಬಗೆಯ ಹಳದಿ ಬಣ್ಣವನ್ನು ತಯಾರಿಸುತ್ತಾರೆ. ಎಲೆಗಳನ್ನು ಸಂಧಿವಾತ, ಹುಣ್ಣುಗಳು ಮುಂತಾದುವುಗಳಿಗೆ ಔಷಧಿಯಾಗಿ ಬಳಸುತ್ತಾರೆ.

ಮಾವಿನಹಣ್ಣಿನಮರ (ಮಾವಿನಮರ) (Mangifera indica L.)

ಪುರಾತನ ಕಾಲದಿಂದಲೂ ನಮ್ಮ ದೇಶದಲ್ಲಿ ಬೆಳೆಯುತ್ತಿರುವ ವೃಕ್ಷಗಳಲ್ಲಿ ಮಾವಿನಮರವೂ ಒಂದು. ಕಾಳಿದಾಸನ ಕಾವ್ಯಗಳಲ್ಲೆಲ್ಲಾ ಚೂತವೃಕ್ಷದ ವರ್ಣನೆ ಬರುತ್ತದೆ ಕ್ರಿಸ್ತಪೂರ್ವ ಸುಮಾರು 150 ರ ಸಾಂಚಿಯ ಸ್ಥೂಪದಲ್ಲೆಲ್ಲಾ ಮಾವಿನ ಹಣ್ಣುಗಳ ಕಲಾತ್ಮಕ, ಭವ್ಯ ಚಿತ್ರಣ ಇದೆ. ಈ ಮರಕ್ಕೆ 18 ನೆಯ ಶತಮಾನದಲ್ಲಿ ಲಿನೆಯಸ್ ಎಂಬುವನು ಮ್ಯಾಂಜಿಫೆರ ಇಂಡಿಕಾ (Mangifera indica) ಎಂದು ಲ್ಯಾಟಿನ ಭಾಷೆಯಲ್ಲಿ ನಾಮಕರಣ ಮಾಡಿದ್ದಾನೆ.

ನಮ್ಮ ದೇಶದ ಅರಣ್ಯ ಪ್ರದೇಶಗಳಲ್ಲೂ ಹಾಗೂ ತೋಟಗಳಲ್ಲೂ ಕಂಡುಬರುವ ಈ ಮರ ಬಹಳ ವರ್ಷಗಳಿಂದ ನಮ್ಮಲ್ಲಿ ಬೆಳೆಯುತ್ತಿದ್ದರೂ ಈ ಮರದ ಮೂಲಸ್ಥಳ ಯಾವುದಾಗಿತ್ತೆಂಬುದರ ಬಗ್ಗೆ ವಿದ್ವಾಂಸರುಗಳಲ್ಲಿ ಇನ್ನೂ ಭಿನ್ನಾಭಿಪ್ರಾಯಗಳಿವೆ. ಕೆಲವರು ಅಸ್ಸಾಂ, ಬರ್ಮಾನಗಳನ್ನು ತೋರಿಸಿದರೆ ಇನ್ನು ಕೆಲವರುಗಳು ದಕ್ಷಿಣ ಪೂರ್ವ ಮಲಯಾ ಮುಂತಾದ ಸ್ಥಳಗಳನ್ನು ತೋರಿಸುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=40$ (Mukherjee 1950). ಕಾಡುಗಳಲ್ಲಿ ಬೆಳೆಯುವ ಮರಗಳು ಬಹಳ ಎತ್ತರಕ್ಕೆ

ಬೆಳೆದರೂ ತೋಟಗಳಲ್ಲಿ ಬೆಳೆಯುವ ಮರಗಳು ಅಷ್ಟು ಎತ್ತರಕ್ಕೆ ಸುತ್ತಲೂ ಹರಡಿಕೊಳ್ಳುವ ರೆಂಬೆಗಳಿಂದ ಕೂಡಿರುತ್ತವೆ. ನಿತ್ಯಹರಿದ್ವರ್ಣದ ಇದರ ಎಲೆಗಳು 5 ರಿಂದ 10 ಇಂಚು ಉದ್ದವಿದ್ದು 1 ರಿಂದ 3 ಇಂಚು ಅಗಲ ಇರುತ್ತವೆ. ತುದಿ ಚೂಪಾಗಿರುತ್ತದೆ. ಎಲೆಗಳು ಹೊಳಪಾಗಿ ಸ್ವಲ್ಪ ಒರಟಾಗಿಯೇ ಇರುತ್ತವೆ. ಎಲೆಗಳ ತೊಟ್ಟು 1 ರಿಂದ 2¼ ಇಂಚಿನಷ್ಟು ಉದ್ದವಿರುತ್ತವೆ. ಹೂಗಳು ರೆಂಬೆಗಳ ತುದಿಯ ಟೊಂಗೆಗಳಲ್ಲಿ ಮೂಡುತ್ತವೆ. ಹೂಗಳರಳುವ ಸಮಯದಲ್ಲಿ ಅಷ್ಟೇನೂ ಒಳ್ಳೆಯ ವಾಸನೆ ಇರುವುದಿಲ್ಲ. ಇದರ ಹಣ್ಣು ಓಟೆಕಾಯಿಯಾಗಿದ್ದು ದೊಡ್ಡದಾಗಿ ತಿರುಳು ಹೊಂದಿರುತ್ತದೆ. ಮಾವಿನಹಣ್ಣಿನ ಗುಣ, ಅದರ ಓಟೆಯ ಗಾತ್ರ, ತಿರುಳಿನಲ್ಲಿ ನಾರು ಇರುವುದು. ಇಲ್ಲದಿರುವುದು, ಅದರ ವಾಸನೆ ಇವುಗಳನ್ನು ಅವಲಂಬಿಸಿರುತ್ತದೆ. ಮಾವಿನ ಕಾಯಿಗಳು ಸ್ವಲ್ಪ ಟರ್ಪೆಂಟೈನಿನ ವಾಸನೆ ಹೊಂದಿದ್ದರೂ ಅವು ಮಾಗಿ ಹಣ್ಣಾದ ಮೇಲೆ ಈ ವಾಸನೆ ಹೊರಟು ಹೋಗುತ್ತದೆ.



ಮಾವಿನ ಮರ

ಮಾವಿನ ಮರದಲ್ಲಿ ಅನೇಕ ಪ್ರಕಾರಗಳಿವೆ. (ಸುಮಾರು ಒಂದು ಸಾವಿರ) ಈ ಪ್ರಭೇದದ ಮೈಸೂರಿನ ವಿಧಗಳಲ್ಲಿ ಮುಖ್ಯವಾದುವುಗಳು ಕಸಿಮಾವು, ರಸಪುರಿ, ಬಾದಾಮಿ, ನೀಲಂ, ಮಲಗೋಬ, ನಾಟಿಮಾವು ಮುಂತಾದುವುಗಳು. ಬೊಂಬಾಯಿನಲ್ಲಿ ಅಫೂಸ್ ಅಥವಾ ಅಫನ್ಸೋ ಎಂಬ ವಿಧ ಪ್ರಸಿದ್ಧಿಯಾಗಿದೆ. ಆಂಧ್ರದಲ್ಲಿ

ಸುವರ್ಣರೇಖ, ಬಂಗನಪಲ್ಲಿ ಮತ್ತು ನೀಲಂ, ಉತ್ತರಪ್ರದೇಶದಲ್ಲಿ ಮತ್ತು ಬಿಹಾರ್‌ನಲ್ಲಿ ಚೌಸ, ದುಸೇಹ್ರಿ ಮತ್ತು ಲಂಗ್ರ, ಬಂಗಾಳದಲ್ಲಿ ಗುಲಾಬ್ ಖಾಸ್ ಪ್ರಸಿದ್ಧವಾದುವುಗಳು.




ಮಾವಿನ ಮರದ ಹೂಗೊಂಚಲು ಹಾಗೂ ಹಣ್ಣು.

ಹಣ್ಣಿನ ಗಾತ್ರದಲ್ಲಿ ಆಂಧ್ರದ ತೆನ್ನೇರು ಎಂಬುದು ಇಂಡಿಯದ ಮಾವಿನ ಮರಗಳಲ್ಲೆಲ್ಲಾ ಪ್ರಸಿದ್ಧವಾದುದು. 1 6 ಕೆ.ಜಿ. ತೂಕ ಹೊಂದಿರುವ 23 ಸೆಂಟಿಮೀಟರ್ ಅಷ್ಟು ಉದ್ದವಾಗುವ ಈ ವಿಧ ತನ್ನ ಗುಣ ಹಾಗೂ ವಾಸನೆಗಳಲ್ಲಿ ಅಷ್ಟೇನೂ ಪ್ರಶಂಸಾರ್ಹವಾಗಿಲ್ಲ.

ಬೀಜಗಳಿಂದ ಸಸಿಗಳನ್ನು ಬೆಳೆಸಿ ನಂತರ ಕಸಿ ಮಾಡಿ ಬೆಳೆಸುವುದು ರೂಢಿಯಲ್ಲಿದೆ.

ಮೈಸೂರಿನ ಮಾವಿನಮರಗಳಿಗೆ ಬೇರೆ ಪ್ರದೇಶಗಳಲ್ಲಿರುವಂತೆಯೆ ಬದನಿಕೆ ಜಾತಿಯ ಡೆಂಡ್ರಾಫ್ತೆ ಫಲ್ಕೇಟ (Dendropthoe falcata), ವಿಸ್ಕಂ ಅಥವಾ ಇದರ ಪ್ರಕಾರವಾದ ಕಾಕ್ಸೀನಿಯಾ (coccinea) ಗಳಿಂದ ಬಹಳ ತೊಂದರೆಯಾಗುತ್ತಿದೆ. ಈ ಅರ್ಧ ಪರಾವಲಂಬಿಯ ಬೀಜಗಳನ್ನು ಒಂದು ಮರದಿಂದ ಇನ್ನೊಂದು ಮರಕ್ಕೆ ಪಕ್ಷಿಗಳು ಹರಡುತ್ತವೆ. ಅಲ್ಲಲ್ಲೇ ದಪ್ಪ ದಪ್ಪ ಗಂಟುಗಳು ಮಾವಿನ ಕೊಂಬೆಗಳಲ್ಲಿ ಆಗುವುದಕ್ಕೆ ಇದೊಂದು ಕಾರಣ. ಇದರ ಪಿಡುಗನ್ನು ಪೂರ್ಣವಾಗಿ ತೊಡೆಯಬೇಕಾದರೆ ರಾಜ್ಯದ ಎಲ್ಲೆಡೆಯಲ್ಲೂ ಇರುವ ಈ ಪರಾವಲಂಬಿಗಳನ್ನೆಲ್ಲಾ

ಒಂದೇ ಸಾರಿ ನಾಶಪಡಿಸುವುದು. ಇವು ಇರುವ ರೆಂಬೆಗಳನ್ನೆಲ್ಲಾ ನಿರ್ದಾಕ್ಷಿಣ್ಯವಾಗಿ ಕತ್ತರಿಸಿ ಹಾಕುವುದು.



ಮಾವಿನ ಮರದ ಅಡ್ಡಸೀಳಿನ ಒಂದು ಭಾಗ.

ಇಲ್ಲದಿದ್ದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಇವು ರಾಜ್ಯದ ಎಲ್ಲ ಮಾವಿನ ಮರಗಳನ್ನೂ ಫಲರಹಿತ ನಿರುಪಯೋಗೀ ವೃಕ್ಷಗಳನ್ನಾಗಿ ಮಾಡುವುದು ಖಂಡಿತ. ಕಾಡು ಮಾವಿನ ಮರಗಳ ರೆಂಬೆಗಳ ಸಂದುಗಳಲ್ಲಿ ಸುಂದರ ಆರ್ಕಿಡ್ ಸಸ್ಯಗಳಾದ ವ್ಯಾಂಡ (Vanda), ಏಕಂಪೆ (Acampe) ಮುಂತಾದುವು ಬೆಳೆದುಕೊಂಡಿರುತ್ತವೆ.

ಉಪಯೋಗಗಳು : ಇಂಡಿಯದ ಎಲ್ಲ ಹಣ್ಣುಗಳ ರಾಜ ಮಾವು ಎನ್ನುವುದುಂಟು. ನಮ್ಮ ದೇಶದ ವಿದೇಶೀ ವಿನಿಮಯಗಳಿಸುತ್ತಿರುವ ವೃಕ್ಷಗಳಲ್ಲಿ ಮಾವು ಒಂದು. ಮಾವಿನಕಾಯಿಗಳನ್ನು ಚಟ್ನಿ, ಮಾವಿನಕಾಯಿಅನ್ನ, ಉಪ್ಪಿನಕಾಯಿ ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ಸ್ವಲ್ಪ ಮಾಗಿದ ಮಾವಿನ ಹಣ್ಣಿನ ರಸ ತೆಗೆದು ಅದಕ್ಕೆ ಸಕ್ಕರೆ ಹಾಲುಗಳನ್ನು ಬೆರೆಸಿ "ಮ್ಯಾಂಗೋ ಫೂಲ್" ಎಂಬ ಪಾನೀಯವನ್ನು ತಯಾರಿಸಿ ಬೇಸಿಗೆಯಲ್ಲಿ ಉತ್ತರ ಇಂಡಿಯಾದಲ್ಲಿ ಉಪಯೋಗಿಸುತ್ತಾರೆ. ಮಾವಿನ ಹಣ್ಣಿನ ಷರಬತ್ತುಗಳನ್ನಂತೂ ಈಗ ಅನೇಕ ಹಣ್ಣಿನ ಕಾರ್ಖಾನೆಗಳು ತಯಾರಿಸುತ್ತಿವೆ. ಭಾರತದ ಮಾವಿನ ಹಣ್ಣಿನ ರುಚಿ ಎಲ್ಲ ವಿದೇಶಿಯರನ್ನು ಮರುಳು ಮಾಡಿದೆ. ಆಯುರ್ವೇದೀಯ ವೈದ್ಯದಲ್ಲಿ ಆಸ್ತಮ ಕಾಯಿಲೆಯನ್ನು ಗುಣಪಡಿಸಲು ಹಣ್ಣಿನ ಬೀಜದಳ (Cotyledons) ಗಳನ್ನು ಶತಾವರಿ (Asparagus racemosus) ಕಷಾಯದೊಂದಿಗೆ ಕುಡಿಸುತ್ತಾರೆ. ಬೇಳೆಗಳ ಒಣಗಿದ ಪುಡಿಯನ್ನು ನಶ್ಯದಂತೆ ಸೇದಿಸಿದರೆ ಮೂಗಿನಿಂದ ರಕ್ತ ಬರುವುದು ನಿಲ್ಲುತ್ತದೆ.

ಮಿಟ್ಟೆ (ಟ್ಲೆ) **ಮರ** (ಪುಂಜೆ) Streblus asper lour.

ಬೆಂಗಳೂರು ಜಿಲ್ಲೆಯಲ್ಲಿ ವಿಶೇಷವಾಗಿ ಬೆಳೆಯುತ್ತಿರುವ ಈ ಮರ ಪಂಜಾಬ್, ಉತ್ತರ ಪ್ರದೇಶ, ಬಂಗಾಳ, ಬಿಹಾರ್ ಪ್ರದೇಶಗಳಲ್ಲೂ ಬೆಳೆಯುತ್ತಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=13 (Gajapathy 1961). ಈ ಸಣ್ಣ ನಿತ್ಯಹರಿದ್ವರ್ಣ ವೃಕ್ಷದ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ತಿಳಿ ಬೂದು ಬಣ್ಣದ ತೊಗಟೆಯನ್ನು ಹೊಂದಿರುತ್ತವೆ. ಕಾಯಿಗಳು ಸ್ವಲ್ಪ ದುಂಡಾಗಿದ್ದು ದುಂಡಾದ ಬೀಜಗಳನ್ನು ಹೊಂದಿರುತ್ತವೆ. ಇದರ ಬೀಜದಲ್ಲಿ ಭ್ರೂಣವೂ ದುಂಡಾಗಿದ್ದು ಬೀಜದ ಬೇಳೆಗಳ ಪೈಕಿ ಒಂದು ದೊಡ್ಡದಿರುತ್ತದೆ.

ಉಪಯೋಗಗಳು : ಹಿಂದೆ ಸಯಾಂನಲ್ಲಿ ಇದರ ತೊಗಟೆಯಿಂದ ಕಾಗದ ತಯಾರಿಸುತ್ತಿದ್ದರು. ಗಾಯಗಳನ್ನು ವಾಸಿಮಾಡಲು ಇದರ ಹಾಲನ್ನು ಲೇಪಿಸುತ್ತಾರೆ. ಇದರ ಎಲೆಗಳನ್ನು ದಂತ ಹಾಗೂ ಮರಗಳನ್ನು ನಯಮಾಡಲು ಉಪಯೋಗಿಸುತ್ತಾರೆ. ಇದರ ಹಣ್ಣುಗಳನ್ನು ಕೆಲವೆಡೆಗಳಲ್ಲಿ ತಿನ್ನುತ್ತಾರೆ. ಇದರ ಮರ ಬೆಳ್ಳಗಿದ್ದು ಗಟ್ಟಿಯಾಗಿರುತ್ತದೆ. ಒಣಗಿದ ಮೇಲೆ ಕೊಯ್ಯಬೇಕಾದರೆ ಕಷ್ಟವಾಗುತ್ತದೆ. ಇದರ ತೊಗಟೆಯ ಕಷಾಯವನ್ನು ಜ್ವರ, ಆಮಶಂಕೆ ಮತ್ತು ಭೇದಿಗಳಿಗೆ ಔಷಧಿಯಾಗಿ ಕೊಡುತ್ತಾರೆ. ಈ ಮರದ ಬೇರಿನ ಗಂಧವನ್ನು ವಿಷಾಪಹಾರಿಯಾಗಿ ಹಾವು ಕಡಿದಾಗ ಬಳಸುತ್ತಾರೆ.

ಮುರ್ಕಲಿ (ಮುರ್ಕಲು, ನಸಕಲು) Buchanania lanzan spreng (Syn.B. latifolia Roxb.)

ಒಣ ಹವೆಯುಳ್ಳ ಪ್ರದೇಶಗಳಲ್ಲಿನ ಅರಣ್ಯಗಳಲ್ಲಿ ಬೆಳೆಯುವ ಈ ಮರವು 30 ರಿಂದ 50 ಅಡಿಗಳಷ್ಟು ಎತ್ತರಕ್ಕೆ ಬೆಳೆದು 4 ಅಡಿಗಳಿಗಿಂತ ಹೆಚ್ಚು ಸುತ್ತಳತೆ ಪಡೆಯುತ್ತದೆ. ನಮ್ಮ ದೇಶದಲ್ಲಿ ಬುಖನೇನಿಯ (Buchanania) ಜಾತಿಗೆ ಸೇರಿದ ಆರು ಪ್ರಭೇದಗಳಿವೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನಕಾರ್ಡಿಯೇಸಿ (Anacardiaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು 6 ಇಂಚಿನಷ್ಟು ಉದ್ದವಿದ್ದು 2 ಇಂಚು ಅಗಲವಿರುತ್ತದೆ. ಹೂಗಳು ಚಿಕ್ಕವಿದ್ದು 3 ಇಂಚಿನಷ್ಟಿರುತ್ತವೆ. ಇದರ ಕಾಯಿ ·3 ರಿಂದ ·6 ಇಂಚಿನಷ್ಟು ಸುತ್ತಳತೆ ಹೊಂದಿರುತ್ತದೆ. ಇದರ ಮರ ಕೊಯ್ದಾಗ ಬೂದಿ ಮಿಶ್ರ ಕಂದು ಬಣ್ಣಕ್ಕಿರುತ್ತದೆ. ಇದರ ತೊಗಟೆಯು ಮೊಸಳೆಯ ಚರ್ಮದಂತಿರುತ್ತದೆ. ಅದರಲ್ಲಿ 13·4% ಟ್ಯಾನಿನ್ ಇರುತ್ತದೆ.

ಉಪಯೋಗಗಳು : ಇದರ ಬೀಜಗಳನ್ನು ತಿನ್ನುತ್ತಾರೆ. ಇದರ ತೊಗಟೆಯನ್ನು ಚರ್ಮ ಹದಮಾಡುವ ಕೈಗಾರಿಕೆಯಲ್ಲೂ, ಇದರ ಕಾಂಡದಿಂದ ಬರುವ ಅಂಟನ್ನು ಬಟ್ಟೆಗಳಿಗೆ ಬಣ್ಣ ಹಾಕುವಾಗ, ಅಚ್ಚು ಹಾಕುವಾಗ ಉಪಯೋಗಿಸುತ್ತಾರೆ. ಈ ಮರದಿಂದ ಕಿಟಕಿಗಳು, ಬಾಗಿಲುಗಳು, ಪೆಟ್ಟಿಗೆಗಳು ಮುಂತಾದುವನ್ನು ಕೆಲವೆಡೆ ಮಾಡಿಕೊಳ್ಳುತ್ತಿದ್ದರೂ ಕೂಡ ಮರವು ಅಷ್ಟೇನೂ ಬಾಳಿಕೆ ಬರುವ ಗುಣವನ್ನು ಹೊಂದಿರುವುದಿಲ್ಲ. ಘನ ಅಡಿಯೊಂದಕ್ಕೆ 36 ಪೌಂಡುಗಳಷ್ಟು ತೂಕ ಬರುತ್ತದೆ. ಮಧ್ಯ ಇಂಡಿಯಾದ ಗುಡ್ಡಗಾಡು ಜನರು ಇದರ ಹಣ್ಣುಗಳನ್ನು ತಿನ್ನುತ್ತಾರೆ. ಇದರ ಬೀಜಗಳ ಎಣ್ಣೆಗೆ ಬಾದಾಮಿ ವಾಸನೆ ಇರುತ್ತದೆ. ಸ್ಥಳೀಯ ವೈದ್ಯರು ಈ ಎಣ್ಣೆಯನ್ನು ಬಾದಾಮಿ ಎಣ್ಣೆಗೆ ಬದಲಾಗಿ ಔಷಧಿಗಳಲ್ಲಿ ಉಪಯೋಗಿಸುತ್ತಾರೆ.

ಮುಕಾರಿವೆ (Elaeodendron giacum Pers.)

ಇದೊಂದು ಮೈದಾನ ಪ್ರದೇಶಗಳಲ್ಲಿ ಬೆಳೆಯುವ ನಿತ್ಯಹರಿದ್ವರ್ಣ ವೃಕ್ಷ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಿಲಾಸ್ಟ್ರೇಸಿ (Celastraceae) ಕುಟುಂಬಕ್ಕೆ ಸೇರಿದೆ. ಈ ಮರವು ಸಣ್ಣದಾದರೂ ಗಟ್ಟಿಯಾಗಿದ್ದು ಬಹುಕಾಲ ಬಾಳಿಕೆ ಬರುವ ಗುಣವನ್ನು ಹೊಂದಿದೆ. ತೂಕವು ಘನ ಅಡಿಯೊಂದಕ್ಕೆ 40 ರಿಂದ 50 ಪೌಂಡುಗಳು. ಮರದ ತೊಗಟೆಯು ಬೂದು ಬಣ್ಣಕ್ಕಿರುತ್ತದೆ. ಇದರಲ್ಲಿ 8–13% ಟ್ಯಾನಿನ್ ಇರುತ್ತದೆ. ಎಲೆಗಳ ಆಕಾರದಲ್ಲಿ ವೈವಿಧ್ಯತೆಯಿದ್ದರೂ ಒಣಗಿದ ನಂತರ ಅವು ಕೆಂಪು ಮಿಶ್ರ ಬೂದು ಬಣ್ಣಕ್ಕೆ ಬರುತ್ತದೆ. ಹೂಗಳು $\frac{1}{4}$ ಇಂಚಿನಷ್ಟು ದೊಡ್ಡವಿರುತ್ತವೆ. ಕಾಯಿಯಲ್ಲಿ 1 ರಿಂದ 2 ಬೀಜಗಳಿರುತ್ತವೆ.

ಉಪಯೋಗಗಳು : ಈ ಮರದ ಎಲೆಗಳು, ತೊಗಟೆ ಮತ್ತು ಬೇರುಗಳನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ. ಇದರ ಬೇರನ್ನು ಹಾವುಕಡಿದವರಿಗೆ ವಿಷಾಪಹಾರಿಯಾಗಿ ಕೊಡುತ್ತಾರೆ. ಎಲೆಗಳ ಚೂರ್ಣವನ್ನು ನಶ್ಯದಂತೆ ಸೇದಿದರೆ ಅರ್ಧ ತಲೆನೋವು ಹೋಗುವುದೆಂದು ಹೇಳುತ್ತಾರೆ. ಈ ಚೂರ್ಣವನ್ನು ಹಿಸ್ಟೀರಿಯಾ ಕಾಯಿಲೆಯ ಚಿಕಿತ್ಸೆಯಲ್ಲೂ ಉಪಯೋಗಿಸುತ್ತಾರೆ. ಈ ಮರವನ್ನು ಬಾಚಣಿಗೆಗಳನ್ನು ಮಾಡಲೂ, ಪೆಟ್ಟಿಗೆಗಳನ್ನು ಮಾಡಲೂ ಉಪಯೋಗಿಸುತ್ತಾರೆ.

ಮುಗಳಿ (Acacia suma Kurz.)

ಮೈಸೂರು ಜಿಲ್ಲೆಯ ನಾಲೆಗಳು, ಕೆರೆಗಳು, ತೊರೆಗಳು ಇವುಗಳ ಪಕ್ಕದಲ್ಲಿ ಕಂಡುಬರುವ ಈ ಮರವು ಮಧ್ಯಮ ಎತ್ತರದ ಒಂದು ಸಣ್ಣ ವೃಕ್ಷವಾಗಿದೆ. ಬಂಗಾಳ, ಬಿಹಾರಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Atchison 1948). ಈ ಮರದ ತೊಗಟೆಯು ಬಿಳುಪಾಗಿರುತ್ತದೆ. ಹೂಗಳೂ ಸ್ವಲ್ಪ ಮಸುಕಾದ ಬಿಳೀ ಬಣ್ಣವನ್ನೇ ಹೊಂದಿರುತ್ತವೆ. ಇದರ ಮರವು ಕಾಚಿನ ಮರದಂತೆಯೇ ಇರುತ್ತದೆ.

ಉಪಯೋಗಗಳು : ಮೈಸೂರಿನಲ್ಲಿ ಈ ಮರವನ್ನು ಸೌದೆ, ಇದ್ದಿಲುಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಒಮ್ಮೊಮ್ಮೆ ವ್ಯವಸಾಯದ ಉಪಕರಣಗಳನ್ನು ತಯಾರಿಸುವುದೂ ಉಂಟು.

ಮುತ್ತುಗದ ಮರ (ಮುತ್ತುಗ) Butea monosperma (Lamk.) Taub.
(Syn-Butea frondosa koenig Roxb.)

ಆಂಗ್ಲರು ಈ ಮರವು ಪುಷ್ಪಭರಿತವಾಗಿರುವ ಕಾಲದಲ್ಲಿ ನೋಡಿ ಅದನ್ನು "ಅರಣ್ಯದ ಜ್ವಾಲೆ" ಎಂದು ವರ್ಣಿಸಿದ್ದಾರೆ. ಫೆಬ್ರುವರಿ ಕೊನೆಯಲ್ಲಿ ಇಲ್ಲನೇ ಮಾರ್ಚಿ ತಿಂಗಳ ಮೊದಲಲ್ಲಿ ಪುಷ್ಪಭರಿತವಾಗುವ ಈ ಮರವು ನಮ್ಮ ದೇಶದಲ್ಲಿಜೆ ಬರ್ಮಾದಲ್ಲಿಯೂ ಇದೆ.



ಮುತ್ತುಗದ ಮರ

ಹಿಮಾಲಯದಲ್ಲಿ (ಸಮುದ್ರಮಟ್ಟಕ್ಕೆ) 3000 ಅಡಿಗಳವರೆಗೂ ಬೆಳೆಯುವ ಈ ಮರವು ದಕ್ಷಿಣದಲ್ಲಿ ಸುಮಾರು ಸಮುದ್ರಮಟ್ಟಕ್ಕೆ 4000 ಅಡಿಗಳಷ್ಟು ಎತ್ತರದವರೆಗೂ ಕಂಡುಬರುತ್ತದೆ. ಈ ಮರದ ಸಸ್ಯಶಾಸ್ತ್ರದ ಮೊದಲನೆಯ ಹೆಸರು ಬ್ಯೂಟಿಯಾ (Butea). ಇದು ರಾಕ್ಸ್‌ಬರ್ಗ್ ಅಥವಾ ಕೊನಿಗ್‌ರವರಿಂದ ಬ್ಯೂಟ್‌ನ ಅರ್ಲ್ ಆಗಿದ್ದ ಜಾನ್‌ಸ್ಟುವರ್ಟ್‌ರವರ ಗೌರವಾರ್ಥ ಇಡಲ್ಪಟ್ಟಿತು. ಮಾನೋಸ್ಪರ್ಮ (monosperma) ಎಂಬ ಹೆಸರು ಕಾಯಿಯಲ್ಲಿ ಒಂದೇ ಬೀಜವಿದೆ ಎಂಬುದನ್ನು ಸೂಚಿಸುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಪಾಪಿಲಿನೇಸಿ (Papilionaceae) ಕುಟುಂಬಕ್ಕೆ ಸೇರಿದೆ. ಸುಮಾರು 30–40 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರದ ಕೊಂಬೆಗಳು ಅಷ್ಟೇನೂ ನೇರವಾಗಿರುವುದಿಲ್ಲ. ಇದರ ತೊಗಟೆಯು ಬೂದು ಬಣ್ಣಕ್ಕಿರುತ್ತದೆ. ಎಲೆಗಳು ಮೂರು ಬಿಡಿ ಎಲೆಗಳನ್ನು ಹೊಂದಿರುತ್ತವೆ. ಎಳೆಯವಾಗಿದ್ದಾಗ ಈ ಬಿಡಿಎಲೆಗಳ ಕೆಳಭಾಗವು ಮೃದುವಾಗಿರುತ್ತದೆ. ಮಧ್ಯದ ಬಿಡಿ ಎಲೆಯು 4 ರಿಂದ 8 ಇಂಚು ಉದ್ದವಿದ್ದು ಸ್ವಲ್ಪ ಗುಂಡಗಿರುತ್ತದೆ. ಪಕ್ಕದ ಎಲೆಗಳು ಸ್ವಲ್ಪ ಚಿಕ್ಕವಿರುತ್ತವೆ. ಎಲೆಗಳ ತೊಟ್ಟು 4 ರಿಂದ 6 ಇಂಚು ಉದ್ದವಿರುತ್ತವೆ. ಹೂಗಳು ದೊಡ್ಡವಾಗಿ ಗುಂಪು ಗುಂಪಾಗಿ ಬಿಡಲ್ಪಡುತ್ತವೆ. ಹೂವಿನ ತೊಟ್ಟು 1 ರಿಂದ 2½ ಇಂಚು ಉದ್ದವಿರುತ್ತವೆ. ಅದು ಸ್ವಲ್ಪ ಕಂದು ಬಣ್ಣಕ್ಕಿರುತ್ತದೆ. ಪುಷ್ಪ ಪಾತ್ರೆಯು ಹೊರಗಡೆ ಕಂದು ಬಣ್ಣವನ್ನು ಹೊಂದಿದ್ದು ಒಳಗಡೆ ಬಿಳಿ ಬಣ್ಣವನ್ನು ಹೊಂದಿರುತ್ತದೆ. ಪುಷ್ಪದಳಗಳು ಕೆಂಪಾಗಿರುತ್ತವೆ. ಇದರ ಕಾಯಿಗಳು 4 ರಿಂದ 6 ಇಂಚು ಉದ್ದವಿದ್ದು 1 ರಿಂದ 1½ ಇಂಚು ಅಗಲವಿರುತ್ತವೆ. ಕಾಯಿಗಳು ಬಲಿತ ಮೇಲೆ ಹಳದಿ ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತವೆ.

ಬೀಜಗಳನ್ನು ನೆಡುವುದರ ಮೂಲಕ ಈ ಮರದ ಸಸಿಗಳನ್ನು ಪಡೆಯಬಹುದು. ಸುಮಾರು ಶೇಕಡ 90 ರಷ್ಟು ಬೀಜಗಳು ಮೊಳೆಯುತ್ತವೆ.

ಉಪಯೋಗಗಳು : ಈ ಮರದ ಎಲ್ಲಾ ಭಾಗಗಳೂ ಉಪಯೋಗಕಾರಿಯಾಗಿವೆ. ಮೊದಲನೆಯದಾಗಿ ಇದೊಂದು ಅಲಂಕಾರಿಕ ವೃಕ್ಷ. ಈ ಮರವನ್ನು ಉಪ್ಪುಮಿಶ್ರಿತ ಭೂಮಿಗಳಲ್ಲಿ ಹಾಕಿದರೆ ಅಲ್ಲೂ ಬೆಳೆಯುತ್ತದೆ. ಅರಗಿನ ಕೀಟಕ್ಕಾಗಿಯೂ ಈ ಮರನನ್ನು ಬೆಳೆಸಬಹುದು. ಈ ಮರದಿಂದ ಬರುವ ಅಂಟನ್ನು ಬಣ್ಣದ ಕೈಗಾರಿಕೆಯಲ್ಲೂ ಔಷಧಿಯಲ್ಲೂ ಉಪಯೋಗಿಸುತ್ತಾರೆ. ಬೇರಿನ ನಾರಿನಿಂದ ಹಗ್ಗಗಳನ್ನು ತಯಾರಿಸುತ್ತಾರೆ. ಮುತ್ತುಗದ ಎಲೆಗಳನ್ನು ಹಚ್ಚಿ ಊಟ ಮಾಡಲು ಉಪಯೋಗಿಸುತ್ತಾರೆ. ಹೂಗಳಿಂದ ಹಳದಿ ಬಣ್ಣವೊಂದನ್ನು ಪಡೆಯುತ್ತಾರೆ. ಬೀಜಗಳಲ್ಲಿ ಶೇ 18 ರಷ್ಟು ಎಣ್ಣೆ ಇರುತ್ತದೆ. ಈ ಮರವನ್ನು ಉದ್ಯಾನ

ಗಳಲ್ಲೂ, ರಸ್ತೆಗಳಲ್ಲೂ, ಬೆಳೆಸುವ ಹವ್ಯಾಸವಿಲ್ಲ. ಇದು ಹೂಬಿಡುವ ಕಾಲವೊಂದನ್ನು ಬಿಟ್ಟರೆ ಮಿಕ್ಕೆಲ್ಲ ಕಾಲದಲ್ಲೂ ಅಷ್ಟೇನೂ ಸುಂದರವಾದ ಆಕೃತಿ ಹೊಂದಿರುವುದಿಲ್ಲ. ಮರದ ತೂಕವು ಒಣಗಿದ ಮೇಲೆ ಘನ ಅಡಿಗೆ 34 ಪೌಂಡುಗಳು ನೀರಿನಲ್ಲಿ ಉಪಯೋಗಿಸುವ ಉಪಕರಣಗಳನ್ನು ಈ ಮರದಿಂದ ತಯಾರಿಸಬಹುದು. ಅರಗಿನ ಕೀಟಕ್ಕೆ ಆಶ್ರಯವಾಗಿ ಈ ಮರವನ್ನು ಬೆಳೆಸಬಹುದು. ಇದರ ಬೀಜಗಳು ಜಂತುನಾಶಕ ಗುಣವನ್ನು ಹೊಂದಿವೆ. ಮರದಿಂದ ಬರುವ ಅಂಟನ್ನು ಭೇದಿ ಮತ್ತು ಆಮಶಂಕೆಯಾದಾಗ ಔಷಧಿಯಾಗಿ ಉಪಯೋಗಿಸುತ್ತಾರೆ. ತೊಗಟೆ ಮತ್ತು ಬೀಜಗಳ ಗಂಧವನ್ನು ಹಾವು ಕಡಿದಾಗ ಕಚ್ಚಿದ ಜಾಗವನ್ನು ಹರಿತವಾದ ಉಪಕರಣದಿಂದ ಹೆರೆದು ವಿಷಮಯ ರಕ್ತವನ್ನೆಲ್ಲಾ ಹೊರ ಬರುವಂತೆ ಮಾಡಿದ ಅನಂತರ ಹಚ್ಚುತ್ತಾರೆ

ಮುದ (ಮುವಳಿ, ಸರೋಳಿ.) Ochna squarrosa L.

ಇದು ಬಹಳ ಕಾಲ ಪೊದೆಯಂತೆಯೇ ಬೆಳೆಯುವ ಸಣ್ಣ ಮರ. ಬನ್ನೇರುಘಟ್ಟ, ಬೆಂಗಳೂರು ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಆಕ್ನೇಸಿ (Ochnaceae) ಕುಟುಂಬಕ್ಕೆ ಸೇರಿದೆ. ಇದರ ಹೂಗಳು ದೊಡ್ಡವಾಗಿ ಹಳದಿ ಬಣ್ಣಕ್ಕಿದ್ದು ಆಕರ್ಷಣೀಯವಾಗಿರುತ್ತವೆ. ಹೂ ಬಿಡುವ ಕಾಲ ಫೆಬ್ರುವರಿ-ಏಪ್ರಿಲ್ ತಿಂಗಳು ಆಗಿರುತ್ತದೆ. ಇದರ ಮರವು ಕೆಂಪು ಮಿಶ್ರಿತ ಕಂದು ಬಣ್ಣಕ್ಕಿದ್ದು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಒಂದು ಘನ ಅಡಿಗೆ ಮರವು 51 ಪೌಂಡುಗಳಷ್ಟು ತೂಗುತ್ತದೆ. ಇದರ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ಸುಮಾರು 2½ ಇಂಚು ಅಗಲ 6 ಇಂಚು ಉದ್ದವಿರುತ್ತವೆ. ವರ್ಣತಂತುಗಳ ಸಂಖ್ಯೆ $n=7$ (D & W.P.109. 1955). ಇದರ ಮಾಗಿದ ಕಾಯಿಗಳು ದುಂಡಗೆ ಕಪ್ಪಗಿರುತ್ತವೆ.

ಉಪಯೋಗಗಳು : ಸಂತಾಲರು ಇದರ ಬೇರುಗಳನ್ನು ಹಾವು ಕಡಿದಾಗ ವಿಷಾಪಹಾರಿಯಾಗಿ ಉಪಯೋಗಿಸುತ್ತಾರೆ.

ಮುಳ್ಳುಮುಟ್ಟಾಳ (ಲ) Aphanamixis polystachya (Wall.) parker (Syn. Amoora rohituka W. & A.)

ಬಂಗಾಳ ಅಸ್ಸಾಂಗಳಲ್ಲಿ ಬೆಳೆಯುವ ಈ ಮರವು ಪಶ್ಚಿಮಘಟ್ಟಗಳಲ್ಲೂ ವಿಶೇಷವಾಗಿ ಬೆಳೆಯುತ್ತದೆ. ಮಲಯಾ, ಬರ್ಮಾ, ಫಿಲಿಫೈನ್ಸ್ ಮತ್ತು ಸಿಲೋನ್‌ಗಳಲ್ಲೂ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಈ ನಿತ್ಯಹರಿದ್ವರ್ಣದ ವೃಕ್ಷವು ಸುಮಾರು 60 ಅಡಿಗಳಷ್ಟು ಎತ್ತರಕ್ಕೂ ಬೆಳೆದು 6 ರಿಂದ 12 ಅಡಿಗಳಷ್ಟು ದಪ್ಪನಾಗುತ್ತದೆ. ಸಂಯುಕ್ತ ಪತ್ರ ಹೊಂದಿರುವ ಈ ಮರದ ಎಲೆಗಳು ಅಭಿಮುಖವಾಗಿದ್ದು 4 ರಿಂದ 8 ಜೊತೆ ಇದ್ದು ಕೊನೆಯಲ್ಲಿ ಮತ್ತು ಮಧ್ಯಭಾಗದಲ್ಲಿ ಒಂದೇ ಎಲೆ ಇರುತ್ತದೆ. ಪ್ರತಿ ಬಿಡಿ ಎಲೆಯೂ 3 ರಿಂದ 9 ಇಂಚು ಉದ್ದವಿದ್ದು $1\frac{1}{2}$ ಯಿಂದ 4 ಇಂಚು ಅಗಲವಿರುತ್ತದೆ. ಬಿಡಿ ಎಲೆಗಳ ತುದಿಯು ಸ್ವಲ್ಪ ಚೂಪಾಗಿರುತ್ತದೆ. ಹೂಗಳು ಸಣ್ಣವಿರುತ್ತವೆ. ಇದರ ಕಾಯಿಗಳು 1 ರಿಂದ $1\frac{1}{2}$ ಇಂಚು ಉದ್ದವಿದ್ದು ದುಂಡಗೆ ಅಂಡಾಕೃತಿ ಹೊಂದಿರುತ್ತವೆ. ಮಾಗಿದ ಮೇಲೆ ಹಳದಿ ಬಣ್ಣಕ್ಕೆ ಬರುವ ಈ ಕಾಯಿಗಳು ಒಣಗಿದ ಮೇಲೆ ಮರದ ಮೇಲಿರುವಂತೆಯೇ ಒಡೆದುಕೊಂಡು ಕಿತ್ತಳೆ ಬಣ್ಣದ ಬೀಜಗಳು ಹೊರಕಾಣುವಂತೆ ಮಾಡುತ್ತವೆ. ಇದರ ಮರ ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿದ್ದು ಹಗುರವಾಗಿರುತ್ತದೆ. ಒಣಗಿಸಿದ ಮೇಲೆ ತೂಕವು ಘನ ಅಡಿಯೊಂದಕ್ಕೆ 33 ಪೌಂಡುಗಳು. ಈ ಮರದ ಬೀಜಗಳನ್ನು ನೆರಳಿರುವ ಪ್ರದೇಶಗಳಲ್ಲಿ ನೆಡಬೇಕು.

ಉಪಯೋಗಗಳು : ಇದರ ಬೀಜಗಳಿಂದ ತೆಗೆದ ಎಣ್ಣೆಯನ್ನು ದೀಪ ಉರಿಸಲು ಉಪಯೋಗಿಸುತ್ತಾರೆ. ಇದರ ಮರವನ್ನು ಅಸ್ಸಾಂನಲ್ಲಿ ದೋಣಿಕಟ್ಟಲು ಉಪಯೋಗಿಸುತ್ತಾರೆ. ತೊಗಟೆಯನ್ನು ಪಿತ್ತಕೋಶದ ಕಾಯಿಲೆಗಳು, ಗುಲ್ಮ ರೋಗಗಳು, ಅಗ್ನಿಮಾಂದ್ಯ ಮುಂತಾದುವುಗಳಿಗೆ ಔಷಧಿಯಾಗಿ ಉಪಯೋಗಿಸುತ್ತಾರೆ.

ಮುಳ್ಳು ರಾಂಫಲ (Annona muricata L.)

ಉಷ್ಣವಲಯದ ಅಮೆರಿಕಾ ಹಾಗೂ ವೆಸ್ಟ್ ಇಂಡೀಸ್‌ಗಳ ಮೂಲ ನಿವಾಸಿಯಾದ ಈ ಮರವನ್ನು 80 ವರ್ಷಗಳ ಹಿಂದೆಯೇ ಲಾಲ್‌ಬಾಗ್ ಮುಂತಾದ ಕಡೆಗಳಲ್ಲೆಲ್ಲಾ ಬೆಳೆಸಲಾಗಿತ್ತು. ಸುಮಾರು 20 ಅಡಿಗಳಷ್ಟು ಎತ್ತರ ಬೆಳೆಯುವ ಈ ಮರವು ಅಸ್ಸಾಂ, ಬರ್ಮಾ, ಸಿಲೋನ್‌ಗಳಲ್ಲಿ ಹೆಚ್ಚಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನೋನೇಸಿ (Annonaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=14$ (Kumar S. 1941) ಈ ಸಣ್ಣ ಮರದ ಎಲೆಗಳು ಹಸುರಾಗಿದ್ದು 3 ರಿಂದ 7 ಇಂಚು ಉದ್ದವಾಗಿಯೂ $2\frac{1}{4}$ ರಿಂದ $3\frac{1}{4}$ ಇಂಚು ಅಗಲವಾಗಿಯೂ ಇರುತ್ತವೆ. ಸುಮಾರಾಗಿ ಅಂಡಾಕೃತಿ ಹೊಂದಿದ ಈ ಎಲೆಗಳ ತುದಿಗಳು ಚೂಪಾಗಿರುತ್ತವೆ. ಈ ಮರ ಆಗಸ್ಟ್‌ನಿಂದ ಜನವರಿಯವರೆಗೂ ಹೂ ಬಿಡುತ್ತಲೇ ಇರುತ್ತದೆ. ಹೂಗಳು ವಾಸನಾಭರಿತವಾಗಿರುತ್ತವೆ. ಇದರ ಹಣ್ಣುಗಳು ದೊಡ್ಡವಾಗಿದ್ದು 5 ರಿಂದ 8 ಇಂಚು ಉದ್ದವೂ 3

ರಿಂದ 5 ಇಂಚು ದಪ್ಪವೂ ಇರುತ್ತವೆ. ಹಣ್ಣಿನ ಮೇಲೆಲ್ಲಾ ಹಲಸಿನ ಹಣ್ಣಿನಂತೆ ಮುಳ್ಳುಗಳಿರುತ್ತವೆ. ಆದ್ದರಿಂದ ರಾಂಫಲದ ಹಣ್ಣಿನಂತಿರುವ ಇದನ್ನು ಮುಳ್ಳು ರಾಂಫಲ ಎಂದು ಕರೆಯುತ್ತಾರೆ. ಒಮ್ಮೊಮ್ಮೆ ಹಣ್ಣಿನ ತೂಕವು 2 ಪೌಂಡುಗಳಷ್ಟಿರುತ್ತದೆ. ಬೀಜಗಳಿಂದ ಸಸಿಗಳನ್ನು ಬೆಳೆಸಬಹುದು.

ಉಪಯೋಗಗಳು : ಇದರ ಹಣ್ಣು, ಬೇರು ಮುಂತಾದುವುಗಳನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ. ಇದರ ಬೀಜಗಳಿಗೆ ಕೀಟನಾಶಕ ಗುಣವಿದೆ. ಇದರ ಎಳೆ ಕಾಯಿಗಳನ್ನು ಜಾವಾದಲ್ಲಿ ತರಕಾರಿಯಂತೆ ಬಳಸುತ್ತಾರೆ.

ಮಂಗರೆ (ಮಂಗರೆ, ಬೊಗರೆ) Xeramphis spinosa (Thumb.) keay (=Raudia dumetorum Lamk.)

ಶಿವಮೊಗ್ಗ ಜಿಲ್ಲೆಯಲ್ಲಿ ಈ ಸಣ್ಣ ಮರ ಬೆಳೆಯುತ್ತದೆ. ಮೊದ ಮೊದಲು ಒಂದು ದೊಡ್ಡ ಪೊದೆಯಂತಿದ್ದು ಅನಂತರ ಮರದ ಆಕಾರ ಹೊಂದುತ್ತದೆ. ಈ ಮರವು ಒಳಹಿಮಾಲಯದ ಅರಣ್ಯ ಪ್ರದೇಶಗಳಲ್ಲೂ, ಗುಜರಾತ್, ಉತ್ತರಪ್ರದೇಶ ಹಾಗೂ ಮದರಾಸಿನ ಅರಣ್ಯಪ್ರದೇಶಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ರೂಬಿಯೇಸಿ (Rubiaceae) ಕುಟುಂಬಕ್ಕೆ ಸೇರಿದೆ. ಇದರ ಮುಳ್ಳುಗಳು 1 ರಿಂದ 1½ ಇಂಚಿನಷ್ಟು ಇರುತ್ತವೆ. ಇದರ ಹೂಗಳು ದೊಡ್ಡವಿರುತ್ತವೆ. ಮೊದಲು ಬೆಳ್ಳಗಿದ್ದು ಅನಂತರ ಹಳದಿ ಬಣ್ಣಕ್ಕೆ ತಿರುಗಿ ವಾಸನೆ ಹೊಂದಿರುತ್ತವೆ. ಇದರ ಹಣ್ಣು ಒಂದು ಸಣ್ಣ ಸೇಬಿನ ಗಾತ್ರಕ್ಕೆ ಇರುತ್ತದೆ. ಇದರ ಮರ ತೂಕವಿದ್ದು ಗಟ್ಟಿಯಾಗಿರುತ್ತದೆ. ಬೀಜಗಳಿಂದ ಸಸಿಗಳನ್ನು ಬೆಳೆಸಬಹುದು. ಈ ಮರದ ಬೆಳವಣಿಗೆ ಬಹಳ ನಿಧಾನ.

ಉಪಯೋಗಗಳು : ಶಿವಮೊಗ್ಗ ಜಿಲ್ಲೆಯಲ್ಲಿ ವೈಶ್ಯರ ಮದುವೆಯಲ್ಲಿ ಮಂಗರೆ ಹಾಗೂ ಯಡಮುರಿ ಕಾಯಿಗಳನ್ನು ದಂಪತಿಗಳ ಕೈಗೆ ಕಟ್ಟಿರುತ್ತಾರೆ. ಮರವನ್ನು ವ್ಯವಸಾಯದ ಉಪಕರಣಗಳನ್ನು ತಯಾರಿಸಲೂ, ಸೌದೆಗಾಗಿಯೂ ಉಪಯೋಗಿಸುತ್ತಾರೆ. ಇದರ ಹಣ್ಣುಗಳು ತಿನ್ನಲು ಯೋಗ್ಯವಾಗಿರುತ್ತವೆ. ಈ ಹಣ್ಣಿನ ತಿರುಳನ್ನು ಆಮಶಂಕೆಯಾದಾಗ ತಿನ್ನಿಸುತ್ತಾರೆ. ಚಿಕ್ಕಮಕ್ಕಳಿಗೆ ಹಲ್ಲು ಬರುವಾಗ ಬರುವ ಜ್ವರಕ್ಕೆ ಹಣ್ಣಿನ ಪುಡಿಯ ಲೇಪವನ್ನು ಬಾಯಿಯೊಳಕ್ಕೆ ಲೇಪಿಸಲಾಗುತ್ತದೆ. ಜ್ವರ ಬಂದಾಗ ಮೈ ಮೂಳೆಗಳು ನೋವಾದಲ್ಲಿ, ಸಂಧಿವಾತ ಜಾಸ್ತಿ ಇದ್ದರೆ ತೊಗಟೆಯ ಗಂಧವನ್ನು ತಿನ್ನಿಸುವುದಲ್ಲದೆ ಹೊರಗೂ ಲೇಪಿಸಲಾಗುತ್ತದೆ.

ಮಂಜದಿ (ಮಂಜತ್ರಿ) Adenanthera pavonia Linn.

ಒಳಹಿಮಾಲಯದ ಅರಣ್ಯಪ್ರದೇಶಗಳಲ್ಲೂ, ಬರ್ಮಾ, ಅಂಡಮಾನ್ ಮತ್ತು ಪೂರ್ವ ಹಿಮಾಲಯಗಳಲ್ಲೂ ದಕ್ಷಿಣ ಇಂಡಿಯಾದ ಎಲ್ಲ ಪ್ರದೇಶಗಳಲ್ಲೂ ಕಂಡು ಬರುವ ಈ ಮರವು ನಮ್ಮ ಮಾನಸಗಂಗೋತ್ರಿಯ ಆಡಳಿತ ಕಛೇರಿಯ ಮುಂದೂ ಬೆಳೆಯುತ್ತಿದೆ. ನಮ್ಮ ಪಶ್ಚಿಮಘಟ್ಟಗಳಲ್ಲೂ ಚೆನ್ನಾಗಿ ಬೆಳೆಯುತ್ತದೆ.



ಮಂಜದಿ ಮರ

ಸಸ್ಯಶಾಸ್ತ್ರ ವಿವರಣೆ: ಈ ಸುಂದರ ವೃಕ್ಷವು 20 ರಿಂದ 80 ಅಡಿಗಳಷ್ಟು ಎತ್ತರ ಬೆಳೆಯಬಲ್ಲದು. 7 ರಿಂದ 8 ಅಡಿ ಸುತ್ತಳತೆ ಪಡೆಯಬಲ್ಲದು. ಇದು ಸಂಯುಕ್ತಪತ್ರಗಳನ್ನು ಹೊಂದಿದ್ದು ಎಲೆಗಳು 8 ರಿಂದ 18 ಇಂಚುಗಳಷ್ಟು ದೊಡ್ಡ ವಿರುತ್ತವೆ. ಇದರ ಹೂಗಳು 2 ರಿಂದ 9 ಇಂಚು ಉದ್ದವಿರುವ ಹೂಗೊಂಚಲುಗಳಲ್ಲಿ ಬಿಡಲ್ಪಡುತ್ತವೆ. ಇವು ಶೀಶೆಗಳನ್ನು ಶುಭ್ರ ಮಾಡುವ ಬ್ರಷ್‌ಗಳನ್ನೇ ಹೋಲುತ್ತವೆ. ಹೂಗಳು ಚಿಕ್ಕವಿದ್ದು 10 ಪುಂಕೇಸರಗಳನ್ನು ಹೊಂದಿರುತ್ತವೆ. ಇದರ ಕಾಯಿ 6 ರಿಂದ 9 ಇಂಚು ಉದ್ದವಿರುತ್ತದೆ. $\frac{3}{4}$ ಇಂಚು ಅಗಲವಿರುತ್ತದೆ. ಕಾಯಿಗಳು ಚಪ್ಪಟೆಯಾಗಿದ್ದು ಬಲಿತ ಮೇಲೆ ಉದ್ದ ಸೀಳುವಿಕೆಯಿಂದ ಒಡೆದು ಹಿಂದಕ್ಕೆ ಸುರುಳಿ ಸುತ್ತಿಕೊಂಡಿರುತ್ತದೆ. ಇದರ ಬೀಜಗಳು $\frac{1}{3}$ ಇಂಚು ಸುತ್ತಳತೆ ಹೊಂದಿದ್ದು ಗುಲುಗಂಜಿಯಂತೆ ಹೊಳಪಾದ ಕೆಂಪು ಬಣ್ಣವನ್ನು ಹೊಂದಿರುತ್ತವೆ. ಬೀಜದ ಸಿಪ್ಪೆಯು ಮೃದುವಾಗಿರುತ್ತದೆ. ಇದರ ಒಳಮರ ಕೆಂಪು ಬಣ್ಣವನ್ನು ಹೊಂದಿದ್ದು ಘನ ಅಡಿಗೆ 66 ರಿಂದ 58 ಪೌಂಡುಗಳಷ್ಟು ತೂಕ ಹೊಂದಿರುತ್ತದೆ.

ಇದರ ಬೀಜಗಳು ಮೊಳೆಯ ಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಬೀಜಗಳನ್ನು ಕೆಲವು ದಿನ ನೀರಿನಲ್ಲಿ ನೆನೆಸಿ ಇಟ್ಟಿದ್ದು ಅನಂತರ ಭೂಮಿಯಲ್ಲಿ ನೆಡುತ್ತಾರೆ. ತಂಪಾದ ಹವೆಯಿದ್ದಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಉಪಯೋಗಗಳು : ಇದನ್ನು ಕೆಂಪು ಗಂಧದ ಮರವೆಂದು ಕರೆಯುವುದೂ ಉಂಟು. ಇದರ ಕೆಂಪು ಚೇಗನ್ನು ಸಾಣೆಕಲ್ಲಿನ ಮೇಲೆ ತೇಯ್ದು ಅದರ ಗಂಧವನ್ನು ಲಲಾಟತಿಲಕವಾಗಿ ಉಪಯೋಗಿಸುತ್ತಾರೆ. ಇದರ ಮರವನ್ನು ಮನೆ ಕಟ್ಟಲೂ, ಪೆಟ್ಟಿಗೆಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಶ್ವಾಸಕೋಶಗಳ ಕೆಲವು ಕಾಯಿಲೆಗಳಿಗೆ ಮರ ಮತ್ತು ಬೀಜಗಳಿಂದ ತಯಾರಿಸಿದ ಕಷಾಯವನ್ನು ಕೊಡುವುದುಂಟು ಈ ಬೀಜಗಳನ್ನು ಚಿನ್ನದ ಕುಶಲ ಕರ್ಮಿಗಳು ತೂಕಗಳಿಗಾಗಿ ಉಪಯೋಗಿಸುತ್ತಾರೆ. ಅವರ ಹೇಳಿಕೆಯ ಪ್ರಕಾರ ಪ್ರತಿಯೊಂದು ಬೀಜವೂ 4 ಗ್ರೇನ್‌ಗಳಷ್ಟು ತೂಗುತ್ತದೆ. ಇದರ ಬೀಜಗಳಲ್ಲಿ ಶೇ 14 ರಷ್ಟು ಎಣ್ಣೆಯ ಅಂಶವಿರುತ್ತದೆ. ಈ ಎಣ್ಣೆಯಲ್ಲಿ ಶೇ 20 ರಷ್ಟು ಲೈಗ್ನೊಸೆರಿಕ್‌ಆಮ್ಲ (Lignoceric acid) ಇರುತ್ತದೆ. ಆದ್ದರಿಂದ ಈ ಬೀಜದ ಎಣ್ಣೆಯನ್ನು ಈ ಆಮ್ಲದ ತಯಾರಿಕೆಯಲ್ಲಿ ಬಳಸುತ್ತಾರೆ. ಬೀಜಗಳ ಗಂಧವನ್ನು ವೈಮೋಲೇಳುವ ಗುಳ್ಳೆಗಳಿಗೆ ಮಡವೆಗಳಿಗೆ, ಔಷಧಿಯಾಗಿ ಉಪಯೋಗಿಸುತ್ತಾರೆ.

ಮುಂತುಳ್ಳಿಮರ (ಅರದಳವ) Garcinia cambogia Desr.

ಈ ಮರವು ಪಶ್ಚಿಮ ಮಲೆನಾಡಿನಲ್ಲಿ ಬೆಳೆಯುವ ಒಂದು ಸುಂದರ ವೃಕ್ಷವಾಗಿದೆ. ತಿರುವಾಂಕೂರು ಮುಂತಾದ ಪ್ರದೇಶಗಳಲ್ಲೂ ಬೆಳೆಯುತ್ತದೆ. ಹಿಂದಿಯಲ್ಲಿ ಇದನ್ನು ವಿಲಾಯ್ತಿ ಇಮ್ಲಿ ಎಂದು ಕರೆಯುತ್ತಾರೆ. ನೀಲಗಿರಿಯ ಷೋಲಾ ಅರಣ್ಯಗಳಲ್ಲಿ ಸಮುದ್ರಮಟ್ಟಕ್ಕೆ 6000 ಅಡಿಗಳೆತ್ತರದಲ್ಲೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ನೇರವಾಗಿ ಬೆಳೆಯುವ ಈ ಮರವು ಹಚ್ಚ ಹಸುರಾಗಿರುವ ಅಭಿಮುಖ ಸ್ಟಿಪ್ಯೂಲ್ (ವೃಂತಪರ್ಣ) ರಹಿತ ಎಲೆಗಳನ್ನು ಹೊಂದಿರುತ್ತದೆ. ಎಲೆಗಳ ಸರಾಸರಿ ಉದ್ದಗಲಗಳು $4\frac{1}{2} \times 1\frac{3}{4}$ ಇಂಚುಗಳಾಗಿರುತ್ತವೆ. ಇದರ ಹಣ್ಣು ಒಂದು ಸೇಬಿನ ಹಣ್ಣಿನ ಗಾತ್ರವನ್ನು ಹೊಂದಿರುತ್ತದೆ. ಮಾಗಿದ ಮೇಲೆ ಹಳದಿ ಇಲ್ಲವೇ ಕೆಂಪುಬಣ್ಣ ತಾಳುತ್ತದೆ. ಇದರ ಮರ ಘನ ಅಡಿಯೊಂದಕ್ಕೆ 54 ಪೌಂಡುಗಳಷ್ಟು ತೂಕ ಹೊಂದಿರುತ್ತದೆ.

ಉಪಯೋಗಗಳು : ಈ ಮರದ ಹಣ್ಣಿನ ಸಿಪ್ಪೆಯನ್ನು ತಿನ್ನುತ್ತಾರೆ. ಇದನ್ನು ಸಂಬಾರದಂತೆ ಶೇಖರಿಸಿ ಇಡುವುದೂ ಉಂಟು. ಮರವನ್ನು ಮನೆಯ ದಿನ ಬಳಕೆ ಸಾಮಾನುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಬೆಂಕಿಪೆಟ್ಟಿಗೆಯನ್ನು ತಯಾರಿಸಬಹುದು. ಈ ಮರದಿಂದ ಬರುವ ಹಳದಿ ಬಣ್ಣದ ರೆಸಿನ್, ಟರ್ಪೆಂಟೈನ್‌ನಲ್ಲಿ ಕರಗಿ ಹಳದಿ ಬಣ್ಣದ ಮೆರುಗೆಣ್ಣೆಯನ್ನು ಕೊಡುತ್ತದೆ. ಇದರ ಹಣ್ಣಿನ ಸಿಪ್ಪೆಯ

ಕಷಾಯವನ್ನು ಸಂಧಿವಾತದಲ್ಲಿ ಕೊಡುತ್ತಾರೆ. ಪಶುವೈದ್ಯದಲ್ಲಿ ಬಾಯಿಯ ಖಾಯಿಲೆಗಳಿಗೂ ಇದನ್ನೇ ಕೊಡುವುದುಂಟು.

ಮಂದಧೂಪ (ರಾಳುಧೂಪ, ಹಳೇಮದ್ದು) Canarium strictum Roxb.

ಈ ಮರ ಪಶ್ಚಿಮಘಟ್ಟಗಳಲ್ಲೂ ಮಲೆನಾಡಿನ ಅರಣ್ಯಗಳಲ್ಲೂ ಹೇರಳವಾಗಿ ಬೆಳೆಯುತ್ತದೆ. ಈ ಮರವನ್ನು ಕಪ್ಪುಡಾಮರ್ ಮರ ಎಂದೂ ಕರೆಯುತ್ತಾರೆ.


ಸಸ್ಯಶಾಸ್ತ್ರ ವಿವರಣೆ: ಈ ಮರವು ಬರ್ಸರೇಸಿ (Burseraceae) ಕುಟುಂಬಕ್ಕೆ ಸೇರಿದೆ. ಈ ಮರದ ಕೆಂಪು ಬಣ್ಣದ ಚಿಗುರೆಲೆಗಳು ಇದನ್ನು ಒಂದು ಸುಂದರ ವೃಕ್ಷವನ್ನಾಗಿ ಮಾಡಿವೆ. ತಂಪು ಹವೆಯ ಪಶ್ಚಿಮಘಟ್ಟಗಳ ನಿತ್ಯಹರಿದ್ವರ್ಣ ಕಾಡುಗಳಲ್ಲಿ ಈ ಮರ ಸಮುದ್ರಮಟ್ಟಕ್ಕೆ 5000 ಅಡಿಗಳಷ್ಟು ಎತ್ತರದಲ್ಲೂ ಚೆನ್ನಾಗಿ ಬೆಳೆಯುತ್ತದೆ. ಇದರ ಕೇಸರಗಳ ದಂಡಗಳೆಲ್ಲಾ ಸಂಯೋಗ ಹೊಂದಿ ಕೊಳವೆಯ ಆಕಾರವನ್ನು ಹೊಂದಿರುತ್ತವೆ. ಮರ ಮೃದುವಾಗಿರುತ್ತದೆ. ಹಣ್ಣಿನಲ್ಲಿ 1 ರಿಂದ 3 ಬೀಜಗಳಿರುತ್ತವೆ. ಬೀಜಗಳ ಸಿಪ್ಪೆಯು ತೆಳುವಾಗಿರುತ್ತದೆ. ಮರದ ತೂಕವು ಘನ ಅಡಿಗೆ 38 ಪೌಂಡುಗಳು. ಕಾಡುಪ್ರದೇಶದಲ್ಲಿ ನೆಟ್ಟರೆ ಇದರ ಬೀಜಗಳು ಸುಲಭವಾಗಿ ಮೊಳೆಯುತ್ತವೆ.

ಉಪಯೋಗಗಳು : ಈ ಮರವನ್ನು ಹೊಸದಾಗಿ ಕಡಿದಾಗ ಅದಕ್ಕೆ ಬಿಳೀ ಬಣ್ಣವಿರುತ್ತದೆ. ಸ್ವಲ್ಪ ಹೊತ್ತಿನ ಅನಂತರ ಅದು ಬೂದು ಬಣ್ಣಕ್ಕೆ ತಿರುಗುತ್ತದೆ. ಈ ಮರವನ್ನು ಟೀಪೆಟ್ಟಿಗೆಗಳನ್ನು ಮಾಡಲು ಉಪಯೋಗಿಸುತ್ತಾರೆ. ಇದರಿಂದ ಬರುವ ರೆಸಿನ್ ರಾಳನ್ನು ಮೆರುಗೆಣ್ಣೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ವೈದ್ಯಕೀಯ ಪ್ಲಾಸ್ಟರ್‌ಗಳಲ್ಲಿ ಉಪಯೋಗಿಸುವ ಬರ್ಗುಂಡಿಪಿಚ್ (Burgundy-pitch) ಗೆ ಬದಲಾಗಿ ಇದನ್ನೇ ಉಪಯೋಗಿಸುವ ಅಭ್ಯಾಸವೂ ಇದೆ. ಮದರಾಸು ಕೇರಳಗಳೆರಡೇ ವರ್ಷವೊಂದಕ್ಕೆ ಸುಮಾರು 1,70,000 ಪೌಂಡುಗಳಷ್ಟು ರಾಳನ್ನು ಉತ್ಪತ್ತಿಮಾಡುತ್ತಿವೆ. ರಾಳಿನ ಪುಡಿಯನ್ನು ದತ್ತೂರಿ (Argemone mexicana) ಹಾಲಿನ ಜೊತೆ ಸೇರಿಸಿ ಮೈಮೇಲೇಳು ಕುರುಗಳಿಗೆ ಲೇಪಿಸಿದರೆ ಅವು ಬೇಗನೆ ಮಾಯವಾಗುತ್ತವೆ.

ಯಣ್ಣೆಮರ (ಎಣ್ಣೆಮರ) Kingiodendron pinnatum (Roxb) Harms (Syn. Hardwickia pinnata Roxb.)

ಪಶ್ಚಿಮಘಟ್ಟಗಳು, ಮೈಸೂರು ತಿರುವಾಂಕೂರುಗಳಲ್ಲೆಲ್ಲಾ ಈ ಮರ ಬೆಳೆಯುತ್ತದೆ. ಇದೊಂದು ಸುಂದರ ನಿತ್ಯಹರಿದ್ವರ್ಣ ವೃಕ್ಷ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. ಇದರ ತೊಗಟೆಯು ಕಪ್ಪು ಮಿಶ್ರಿತ ಕಂದು ಇಲ್ಲವೇ ಹಸಿರು ವರ್ಣಹೊಂದಿ ಒರಟಾಗಿರುತ್ತದೆ. ಇದು ಸಂಯುಕ್ತಪತ್ರಗಳನ್ನು ಹೊಂದಿರುತ್ತದೆ. ಬಿಡಿ ಎಲೆಗಳು 4 ರಿಂದ 7 ಇಂಚು ಉದ್ದವಿದ್ದು 2 ರಿಂದ 4 ಇಂಚು ಅಗಲವಿರುತ್ತದೆ. ಹೂಗಳು ಸಣ್ಣಗೆ ಬೆಳ್ಳಗಿರುತ್ತವೆ. ಇದರ ಕಾಯಿಯು 1 ರಿಂದ 2 ಇಂಚು ಉದ್ದವಿರುತ್ತದೆ. ಇದರ ಹೊರ ಮರ ಸ್ವಲ್ಪ ಮಂಕಾದ ಬಿಳಿ ಬಣ್ಣ ಹೊಂದಿದ್ದರೂ ಒಳಗಿನ ಚೇಗು ಕಂದು ಮಿಶ್ರಿತ ಕೆಂಪುಬಣ್ಣ ಹೊಂದಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 38 ರಿಂದ 45 ಪೌಂಡುಗಳಷ್ಟಿರುತ್ತದೆ.



ಯಣ್ಣೆಮರದ ಅಡ್ಡಸೀಳಿನ ಒಂದು ಭಾಗ.

ಉಪಯೋಗಗಳು : ಮರವನ್ನು ಮನೆ ಕಟ್ಟುವ ಸಾಮಾನುಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಈ ಮರದ ಕಾಂಡದಿಂದ ಪಡೆದ ಒಂದು ಬಗೆಯ ರಾಳ ತೈಲ (Oleoresin) ವನ್ನು ಮರಗೆಲಸ ಮಾಡಿರುವ ಸಾಮಾನುಗಳು ಕೆಡದಂತೆ ಕಾಪಾಡಲು ಉಪಯೋಗಿಸುತ್ತಾರೆ. ಇದರ ಎಣ್ಣೆಯನ್ನು ಸಾಬೂನು ಮತ್ತು ಮೆರುಗೆಣ್ಣೆಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಇದರ ಮರ ಗಟ್ಟಿಯದಾದುದರಿಂದ ಇದನ್ನು ಹಡಗು ತಯಾರಿಕೆಯಲ್ಲೂ, ತೊಲೆಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಪದರ ಹಲಗೆಗಳು (Plywood) ಮತ್ತು ವ್ಯಾನೀರ್‌ಗಳಿಗಾಗಿ, ಬಿಲಿಯರ್ಡ್ ಮೇಜುಗಳಿಗಾಗಿ, ಇದನ್ನೇ ಉಪಯೋಗಿಸುತ್ತಾರೆ.

ಯಲಚಿಹಣ್ಣಿನ ಮರ (Zizyphus mauritiana Lamk (Zizyphus jujuba Lam.)

ಮೈಸೂರು ಸಂಸ್ಥಾನದ ಒಣಹವೆಯುಳ್ಳ ಎಲ್ಲ ಪ್ರದೇಶಗಳಲ್ಲೂ, ಈ ಮರ ಬೆಳೆಯುತ್ತದೆ. ಮೂಲತಃ ಈ ಮರ ಚೈನಾವಾಸಿಯಾಗಿದ್ದು ಈಗ ಪಂಜಾಬ್, ಬಿಹಾರ, ಉತ್ತರಪ್ರದೇಶ ಮತ್ತು ಇತರ ಕಡೆಗಳಲ್ಲೆಲ್ಲಾ ಬೆಳೆಯುತ್ತದೆ,

ಸಸ್ಯಶಾಸ್ತ್ರ ವಿವರಣೆ: ಈ ಮರ ರ್ಯಾಂನೇಸಿ (Rhamnaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆಯ ಬಗ್ಗೆ ಬಹಳ ಭಿನ್ನಾಭಿಪ್ರಾಯವಿದೆ. 24, 40, 48, 72, 96 ಎಂದೆಲ್ಲಾ ವಿವರಿಸಲ್ಪಟ್ಟಿದೆ. ಇದು 30 ರಿಂದ 45 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಮರವಾದರೂ ನಮ್ಮ ದೇಶದಲ್ಲಿ 50, 80 ಅಡಿಗಳಷ್ಟು ಎತ್ತರ ಬೆಳೆದಿರುವುದಕ್ಕೆ ಆಧಾರಗಳಿವೆ. ಈ ಮರದ ಎಲೆಗಳೆಲ್ಲಾ ಮೃದುವಾದತುಪ್ಪಳ ಹೊಂದಿರುತ್ತವೆ. ಇದರ ಮಂದವಾದ ತೊಗಟೆ ಬೂದು ಬಣ್ಣ ಮಿಶ್ರವಾಗಿಕಪ್ಪಗಿರುತ್ತದೆ. ಇದರ ರೆಂಬೆಗಳು ಚಿಕ್ಕವಿದ್ದು ಕೆಳಗಡೆಗೆ ವಾಲಿ ಆಕರ್ಷಕವಾಗಿರುತ್ತವೆ. ಕಾಡುಗಳಲ್ಲಿ ಬೆಳೆಯುವ ಮತ್ತು ಹೊಲಗಳ ಪಕ್ಕದಲ್ಲಿ ಹಣ್ಣುಗಳಿಗಾಗಿಯೇ ಬೆಳೆಸಿಕೊಳ್ಳುವ ಈ ಮರದಲ್ಲಿ ಅನೇಕ ವಿಧಗಳಿವೆ. ಕೆಲವು ದೊಡ್ಡ ಮರಗಳಾಗಿ ಬೆಳೆದರೆ ಇನ್ನು ಕೆಲವು ಸಣ್ಣವಾಗಿಯೇ ಇರುತ್ತವೆ. ಎಲೆಗಳ ಉದ್ದ ಅಗಲಗಳು, ಮುಳ್ಳುಗಳು, ಹಣ್ಣುಗಳ ಗಾತ್ರ, ಆಕಾರ, ಬಣ್ಣಗಳಲ್ಲೂ ವ್ಯತ್ಯಾಸಗಳಿರುತ್ತವೆ. ಈ ವ್ಯತ್ಯಾಸಗಳಿಗೆಲ್ಲಾ ಮೇಲೆ ತಿಳಿಸಿದ ವರ್ಣತಂತುಗಳ ಸಂಖ್ಯೆಯ ವ್ಯತ್ಯಾಸವೇ ಕಾರಣವೆಂಬುದು ನಿಸ್ಸಂದೇಹವಾದದ್ದು.

ಇದರ ಎಲೆಗಳು 1 ರಿಂದ 3 ಇಂಚಿನಷ್ಟು ದೊಡ್ಡವಿದ್ದು ಸ್ವಲ್ಪ ಅಂಡಾಕೃತಿ ಹೊಂದಿರುತ್ತವೆ. ಎಲೆಗಳ ಮೇಲ್ಭಾಗ ಹಸಿರಾಗುತ್ತದೆ. ಮಾರ್ಚ್ ಏಪ್ರಿಲ್ ತಿಂಗಳುಗಳಲ್ಲಿ ಹೂಗಳು ಮೂಡುತ್ತವೆ. ಹೂಗೊಂಚಲುಗಳ ರೀತಿ, ಗಾತ್ರಗಳೂ ವಿಧಗಳನ್ನೇ ಅವಲಂಬಿಸಿರುತ್ತವೆ. ಹಣ್ಣುಗಳು ದುಂಡಗೆ ರಸಭರಿತವಾಗಿರುತ್ತವೆ. ಅವುಗಳ ರುಚಿ ಸ್ವಲ್ಪ ಹುಳಿ. ಯಲಚಿ ಮರದ ಒಳಮರ ಗಟ್ಟಿಯಾಗಿರುತ್ತದೆ. ಘನ ಅಡಿಗೆ 57–58 ಪೌಂಡುಗಳ ತೂಕ ಬರುವ ಈ ಮರವು ಬಹಳ ಕಾಲ ಬಾಳಿಕೆ ಬರುವ ಗುಣ ಹೊಂದಿದೆ.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನುತ್ತಾರೆ. ಇದರ ಮರದಿಂದ ಮನೆ ಸಾಮಾನುಗಳು ಹಾಗೂ ವ್ಯವಸಾಯದ ಉಪಕರಗಳನ್ನು ತಯಾರಿಸುತ್ತಾರೆ. ಈ ಮರವನ್ನು ಅರಗಿನ ಕೀಟಕ್ಕೆ ಆಶ್ರಯದಾತನನ್ನಾಗಿ ಉಪಯೋಗಿಸುತ್ತಾರೆ. ಯಲಚಿ ಹಣ್ಣಿನಿಂದ ಷರಬತ್ತು ಮಾಡುತ್ತಾರೆ. ಯಲಚಿ ಹಣ್ಣುಗಳಿಗೆ ರಕ್ತವನ್ನು ಶುದ್ಧಿ ಮಾಡುವ ಗುಣವೂ, ಆಹಾರ ಪಚನಕ್ರಿಯೆ ಸರಿಯಾಗಿ ನಡೆಯು

ವಂತೆ ಮಾಡುವ ಶಕ್ತಿಯೂ ಇದೆ. ಬೇರಿನ ಕಷಾಯವನ್ನು ಒಳಜ್ವರ ಗುಣಪಡಿಸಲು ಉಪಯೋಗಿಸುತ್ತಾರೆ.

ರತ್ನಗಂಧಿ (ಕೆಂಜಿಗೆ) Caesalpinia pulcherrima (Linn.) Sw.

ಇದು ವಾತಾವರಣಕ್ಕೆ ಅನುಸಾರವಾಗಿ ಒಂದು ದೊಡ್ಡ ಪೊದೆ ಇಲ್ಲವೇ ಒಂದು ಸಣ್ಣ ಮರವಾಗಿರುತ್ತದೆ ಇದರ ಮೂಲ ವಾಸಸ್ಥಳ ಯಾವುದಾಗಿತ್ತೆಂಬುದರ ಬಗ್ಗೆ ಸರಿಯಾಗಿ ತಿಳಿದು ಬಂದಿಲ್ಲ. ಆದರೂ ಬಹಳ ವರ್ಷಗಳಿಂದಲೂ ನಮ್ಮ ದೇಶದಲ್ಲಿ ಇದು ಬೆಳೆಯುತ್ತಿರುವುದಕ್ಕೆ ಆಧಾರಗಳಿವೆ. ಸಿಸಾಲ್ಪಿನಿಯಾ (Caesalpinia) ಪ್ರಭೇದಗಳಲ್ಲೆಲ್ಲಾ ಅತ್ಯಂತ ಆಕರ್ಷಕ ಹಾಗೂ ಸುಂದರ ಪುಷ್ಪಗಳನ್ನು ಹೊಂದಿರುವುದೆಂದರೆ ಈ ಪ್ರಭೇದವೇ ಆಗಿದೆ.



ರತ್ನಗಂಧಿ

ಸಸ್ಯಶಾಸ್ತ್ರ ವಿವರಣೆ : ಈ ಸಸ್ಯವು ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. 10 ರಿಂದ 18 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ

ಸಣ್ಣ ಮರವು ಪೊದೆಯಂತೆ ಸುತ್ತಲೂ ಹರಡಿಕೊಳ್ಳುತ್ತದೆ. ಈ ಗಿಡ ಸಾಮಾನ್ಯವಾಗಿ ಎಲ್ಲ ಕಾಲಗಳಲ್ಲೂ ಪುಷ್ಪಭರಿತವಾಗಿರುತ್ತದೆ. ಈ ಸಸ್ಯದಲ್ಲಿ ಹಳದಿ ಹೂ ಬಿಡುವ ವಿಧ ಮತ್ತು ಕೆಂಪು ಹೂ ಬಿಡುವ ವಿಧ ಎಂಬ ಎರಡು ವಿಧಗಳಿವೆ. ಇದರ ಪುಷ್ಪದಳಗಳು ಚಮಚದ ಆಕಾರವನ್ನು ಹೊಂದಿರುತ್ತವೆ. ಕೆಂಪು ಹಸಿರುಗಳ ಸುಂದರ ಸಾಕಾರವೇ ರತ್ನಗಂಧಿ. ಇದರ ಕಾಯಿಗಳು 3 ಇಂಚಿನಷ್ಟು ದೊಡ್ಡವಿರುತ್ತವೆ.

ಉಪಯೋಗಗಳು : ಈ ಸಸ್ಯದ ಎಲ್ಲ ಭಾಗಗಳನ್ನೂ ಔಷಧಿಯಲ್ಲಿ ಉಪಯೋಗಿಸಲಾಗುತ್ತದೆ. ಇದರ ಹೂಗಳಲ್ಲಿ ಗ್ಯಾಲಿಕ್‌ಆಮ್ಲ, ಬೆನ್ಜೂಯಿಕ್‌ಆಮ್ಲ. ಟ್ಯಾನಿನ್‌ಗಳು ಮುಂತಾದುವಿರುತ್ತವೆ. ಈ ಹೂಗಳಿಂದ ಒಂದು ಕೆಂಪು ಬಣ್ಣವನ್ನು ತಯಾರಿಸಲಾಗುತ್ತದೆ. ಇದರ ಮರದ ಕಷಾಯವನ್ನು ಮುಟ್ಟು ನಿಂತಿದ್ದರೆ ಮತ್ತು ಗರ್ಭಪಾತಕ್ಕಾಗಿ ಉಪಯೋಗಿಸುತ್ತಾರೆ. ಕಷಾಯವನ್ನು ಆಮಶಂಕೆ ನಿಲ್ಲಿಸಲು ಮತ್ತು ಚರ್ಮದ ಕೆಲವು ಕಾಯಿಲೆಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ.

ರಾಮಫಲ (ರಾಂಫಲ್) Annona reticulata Linn.

ವೆಸ್ಟ್ ಇಂಡೀಸ್ ದ್ವೀಪಗಳ ಮೂಲನಿವಾಸಿಯಾಗಿದ್ದ ಈ ಮರವನ್ನು ಹಣ್ಣಿಗಾಗಿ ಬಹಳ ಹಿಂದಿನಿಂದಲೂ ದಕ್ಷಿಣ ಇಂಡಿಯಾ ಮತ್ತು ಬಂಗಾಳಗಳಲ್ಲಿ ಬೆಳೆಸಲಾಗುತ್ತಿದೆ. ಮರವು ಸುಮಾರು 20, 25 ಅಡಿಗಳಷ್ಟು ಎತ್ತರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನೊನೇಸಿ (Annonaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=14$ (Asna & A 1945). ಇದರ ಎಲೆಗಳು 4 ರಿಂದ 7 ಇಂಚು ಉದ್ದವಿದ್ದು 1 ರಿಂದ $1\frac{3}{4}$ ಇಂಚು ಅಗಲವಿರುತ್ತವೆ. ಎಲೆಯ ತಳಭಾಗ ದುಂಡಗಿದ್ದು ತುದಿ ಸ್ವಲ್ಪ ಮೊನಚಾಗಿರುತ್ತದೆ. ಎಲೆಗಳ ಜೋಡಣೆ ಪರ್ಯಾಯ ಕ್ರಮವನ್ನವಲಂಬಿಸಿರುತ್ತದೆ. ಹೂಗಳು ಹಸಿರು ಮಿಶ್ರ ಹಳದಿ ವರ್ಣ ಹೊಂದಿದ್ದು 2, 4 ಒಟ್ಟೊಟ್ಟಿಗೆ ಇರುತ್ತವೆ. ಇದರ ಹಣ್ಣು 4 ರಿಂದ 6 ಇಂಚು ಸುತ್ತಳತೆ ಹೊಂದಿದ್ದು ಹೃದಯದಾಕಾರ ಹೊಂದಿರುತ್ತದೆ. ತೂಕವು ಒಮ್ಮೊಮ್ಮೆ 2 ಪೌಂಡುಗಳಷ್ಟಿರುತ್ತದೆ. ಯೂರೋಪಿಯನ್ನರು ಸಾಮಾನ್ಯವಾಗಿ ಈ ಹಣ್ಣುಗಳನ್ನು ತಿನ್ನುವುದಿಲ್ಲ.

ಉಪಯೋಗಗಳು : ಈ ಮರದ ಹಣ್ಣನ್ನು ತಿನ್ನುತ್ತಾರೆ. ಇದರ ಬೀಜಗಳಿಂದ ತೆಗೆದ ಎಣ್ಣೆಯನ್ನು ಕೀಟನಾಶಕವನ್ನಾಗಿಯೂ, ಸೋಪು ಮಾಡಲೂ ಉಪಯೋಗಿಸುತ್ತಾರೆ. ಇದರ ಮರದ ತೂಕ ಘನ ಅಡಿಯೊಂದಕ್ಕೆ 40 ಪೌಂಡುಗಳಷ್ಟಿರುತ್ತದೆ. ಎಳೆ ಕಾಯಿಗಳಿಗೆ ಜಂತುನಾಶಕ ಗುಣವಿದೆ. ಇದರ ಹಣ್ಣಿನಲ್ಲಿ ನೀರಿನಂಶ ಶೇ. 2·3 ಇದ್ದು ಗ್ಲೂಕೋಸ್ ಶೇ. 12·5 ಮತ್ತು ಸಸಾರಜನಕ ಪದಾರ್ಥ (Protein

2% ಇರುತ್ತದೆ. ಇದರ ಎಲೆಗಳನ್ನು ಅರೆದು ದನಗಳ ಮೈಗೆ ಹಚ್ಚಿದರೆ ಅವುಗಳ ಮೈ ಮೇಲಿರುವ ಉಣ್ಣೆಗಳು ಸಾಯುತ್ತವೆ.

ರಾಮ ನದಿಕೆ ಮರ (Myristica magnifica Bedd.)

ಮಲೆನಾಡಿನ ಅರಣ್ಯಗಳಲ್ಲಿ ಭವ್ಯವಾಗಿ ಬೆಳೆಯುವ ವೃಕ್ಷಗಳಲ್ಲೊಂದಾದ ಈ ಮರವು ಸುಮಾರು 100 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿರಿಸ್ಟಿಕೇಸಿ (Myristicaceae) ಕುಟುಂಬಕ್ಕೆ ಸೇರಿದೆ. ಇದರ ಕಾಯಿಯು ಸುಮಾರು 4 ಇಂಚಿನಷ್ಟು ದೊಡ್ಡದಿರುತ್ತದೆ.

ಉಪಯೋಗಗಳು : ಇದರ ಮರದ ಗಂಧವನ್ನು ಹುಣ್ಣುಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ. ಮರವನ್ನು ಮನೆಯ ಸಾಮಾನುಗಳನ್ನು ಮಾಡಲೂ ಮತ್ತು ವ್ಯವಸಾಯದ ಉಪಕರಣಗಳನ್ನು ಮಾಡಲೂ ಉಪಯೋಗಿಸುತ್ತಾರೆ.

ರುದ್ರಾಕ್ಷಿ ಮರ (ರುದ್ರಕ, ದಂಡ್ಯ) Elaeocarpus tuberculates Roxb

ಮೈಸೂರು, ಕೊಡಗು ಜಿಲ್ಲೆಗಳಲ್ಲಿ ಬೆಳೆಯುವ ರುದ್ರಾಕ್ಷಿ ಮರವು ಒಂದು ಸುಂದರವೃಕ್ಷ. ಇದು ತಿರುವಾಂಕೂರಿನಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರವು ಎಲಿಯೋಕಾರ್ಪೇಸಿ (Elaeocarpaceae) ಕುಟುಂಬಕ್ಕೆ ಸೇರಿದೆ. ಒಂದು ಅಡಿಗಿಂತಲೂ ಉದ್ದವಾದ ಇದರ ಎಲೆಗಳು 4 ರಿಂದ 5 ಇಂಚು ಅಗಲವಿರುತ್ತವೆ. ನಿಜವಾದ ರುದ್ರಾಕ್ಷಿ (ಸಾಧುಸಂತರು ಹಾರವನ್ನಾಗಿ ಹಾಕಿಕೊಳ್ಳುವ ರುದ್ರಾಕ್ಷಿ ಸರ) ಈ ಮರದಿಂದ ಬರುತ್ತದೆ. ಇದಕ್ಕಿಂತ ಒಳ್ಳೆಯವು ನೇಪಾಳದ ರುದ್ರಾಕ್ಷಿಮರ ಎಲಿಯೋಕಾರ್ಪಸ್ ಗನೀಟ್ರಸ್ (E. ganitrus) ನಿಂದ ಬರುತ್ತವೆ.

ಉಪಯೋಗಗಳು : ಈ ಮರದ ಗುಣಲಕ್ಷಣಗಳ ಬಗ್ಗೆ ಮಾಹಿತಿಯಿಲ್ಲ. ರುದ್ರಾಕ್ಷಿಗಳನ್ನು ಸರಗಳನ್ನಾಗಿ ಮಾಡಿ ಸಾಧುಸಂತರುಗಳು ಉಪಯೋಗಿಸುತ್ತಾರೆ. ಔಷಧದಲ್ಲಿ ಅಪಸ್ಮಾರ, ಟೈಫಾಯಿಡ್ ಜ್ವರ ಮುಂತಾದವುಗಳನ್ನು ಗುಣಪಡಿಸಲು ಈ ರುದ್ರಾಕ್ಷಿಗಳನ್ನು ಉಪಯೋಗಿಸುತ್ತಾರೆ.

ರುದ್ರಾಕ್ಷಿ (ಜೇನುಮರ, ಭದ್ರಾಕ್ಷಿ ಮರ) Guazuma tomentosa Kunth.

ಈ ರುದ್ರಾಕ್ಷಿ ಮರವು ನಿಜವಾದ ನಮ್ಮ ದೇಶದ ರುದ್ರಾಕ್ಷಿ ಮರವಲ್ಲ. ಇದರ ಕಾಯಿಗಳು ಅದರಂತೆ ಕಾಣುವುದರಿಂದ ಹಾಗೆ ಕರೆಯುತ್ತಾರೆ. ಇದನ್ನು ಉಷ್ಣವಲಯದ

ಅಮೆರಿಕಾ ಮತ್ತು ವೆಸ್ಟ್ಇಂಡೀಸ್ ದ್ವೀಪಗಳಿಂದ ಬೇರೆಲ್ಲ ಕಡೆಗಳಿಗೂ ಹರಡಲಾಯಿತು. ಮೈಸೂರು ಜಿಲ್ಲೆಯ ಶ್ರೀರಂಗಪಟ್ಟಣ, ಬೆಂಗಳೂರು ಮುಂತಾದ ಕಡೆಗಳಲ್ಲೆಲ್ಲಾ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಸ್ಟರ್ಕುಲಿಯೇಸಿ (Sterculiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2**n** = 20 (Simmonds 1945). ಈ ಮರವು 30, 35 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಮರವನ್ನು ವೆಸ್ಟ್ಇಂಡೀಸ್‌ಗಳಲ್ಲಿ ಹೊಗಳಿದರೂ ನಮ್ಮಲ್ಲಿ ಅಷ್ಟಾಗಿ ಉಪಯೋಗಿಸುವುದಿಲ್ಲ. ಮರ ಬಹಳ ಹಗುರವಾಗಿರುತ್ತದೆ. ಘನ ಅಡಿಯೊಂದಕ್ಕೆ 32 ಪೌಂಡುಗಳಷ್ಟು ತೂಗುತ್ತದೆ. ಇದರ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು ತುಪ್ಪಳ ಭರಿತವಾಗಿ ಸ್ವಲ್ಪ ಚೂಪಾದ ತುದಿ ಹೊಂದಿರುತ್ತವೆ. ಅವು ಸುಮಾರು $1\frac{3}{4}$ ಇಂಚಿನಿಂದ $5\frac{1}{2}$ ಇಂಚಿನಷ್ಟು ಉದ್ದವಿದ್ದು $\frac{3}{4}$ ಇಂಚಿನಿಂದ $2\frac{1}{4}$ ಇಂಚಿನಷ್ಟು ಅಗಲವಿರುತ್ತವೆ. (3.5cm—11·5, 1·5cm—4–5). ಹೂಗಳು ಹೂಗೊಂಚಲುಗಳಲ್ಲಿ ಬಿಡಲ್ಪಟ್ಟು ಸ್ವಲ್ಪ ಹಳದಿ ಬಣ್ಣಕ್ಕಿರುತ್ತವೆ. ಕೇಸರಗಳು 5–7 ಇದ್ದು ಕೆಳಭಾಗದಲ್ಲಿ ಸಂಯೋಗ ಹೊಂದಿರುತ್ತವೆ. ಪರಾಗಕೋಶಗಳು ಕೆಂಪಗಿರುತ್ತವೆ. ಇದರ ಕಾಯಿಗಳು ಕಪ್ಪುಮಿಶ್ರಿತ ಕಂದು ಬಣ್ಣ ಹೊಂದಿದ್ದು ಸುಕ್ಕು ಸುಕ್ಕಾದ ಹೊರ ಮೈ ಹೊಂದಿರುತ್ತವೆ. ಬೀಜಗಳು ಕಪ್ಪಗಿರುತ್ತವೆ. ಏಪ್ರಿಲ್-ಮೇ ತಿಂಗಳುಗಳಲ್ಲಿ ಮರ ಫಲಪುಷ್ಪಭರಿತವಾಗಿರುತ್ತದೆ

ಉಪಯೋಗಗಳು : ಇದರ ಎಲೆಗಳು ಮತ್ತು ಹಣ್ಣುಗಳೆಂದರೆ ದನಗಳಿಗೆ ಬಹಳ ಪ್ರೀತಿ. ಆದ್ದರಿಂದ ಹಳ್ಳಿಗಳ ಪಕ್ಕದಲ್ಲಿ ಬೆಳೆಸಿಕೊಂಡಿದ್ದರೆ ಅನಾವೃಷ್ಟಿ, ಕ್ಷಾಮಗಳ ಕಾಲದಲ್ಲಿ ಈ ಮರ ಬಹಳ ಉಪಯೋಗಕರವಾಗಬಲ್ಲದು. ಇದರ ತೊಗಟೆಯಿಂದ ತೆಗೆದ ನಾರಿನಲ್ಲಿ ಹಗ್ಗಗಳನ್ನು ಮಾಡುತ್ತಾರೆ. ಇದರ ತೊಗಟೆಯ ಕಷಾಯವನ್ನು ಔಷಧವಾಗಿ ಸಕ್ಕರೆ ಕಾಯಿಲೆಯವರಿಗೆ ಕುಡಿಸುತ್ತಾರೆ.

ರಂಗುಮಾಲಿ ಮರ (ರಂಗುಮಾಲೆ) Bixa orellana L.

ಇದೊಂದು ಸಣ್ಣಪೊದೆಯಂತೆ ಬೆಳೆಯುವ ಸಣ್ಣಮರ. ಇದು ಮಧ್ಯ ಅಮೆರಿಕಾದಲ್ಲಿ ಕಾಣಬಹುದಾಗಿದೆ. ದಕ್ಷಿಣ ಇಂಡಿಯಾದ ಕೆಲವೆಡೆಗಳಲ್ಲೆಲ್ಲಾ ಇದನ್ನು ಬೆಳೆಸಲಾಗುತ್ತದೆ. ಮಲೆನಾಡಿನ ಕೆಲವು ಕಡೆಗಳಲ್ಲಿ ಇದನ್ನು ಸಣ್ಣ ಜಪಲಿ ಎಂದೂ ಕರೆಯುತ್ತಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಬಿಕ್ಸೇಸಿ (Bixaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n = 24 (Simmonds 1954),

14 (E. K. J). ಈ ಪ್ರಭೇದದಲ್ಲಿ ಕೆಲವು ಮರಗಳು ಬಿಳಿ ಹೂಗಳು ಮತ್ತು ಹಸಿರು ಕಾಯಿಗಳನ್ನು ಹೊಂದಿದ್ದರೆ ಇನ್ನು ಕೆಲವು ಮಾಸಲು ಕೆಂಪು ಹೂಗಳು ಮತ್ತು ಕೆಂಪು ಕಾಯಿಗಳನ್ನು ಹೊಂದಿರುತ್ತವೆ. ಪ್ರತಿ ಕಾಯಿಯಲ್ಲೂ 50 ಕ್ಕಿಂತಲೂ ಜಾಸ್ತಿ ಬೀಜಗಳಿರುತ್ತವೆ. 8 ರಿಂದ 10 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ನಿತ್ಯಹರಿದ್ವರ್ಣ ಸಸ್ಯವು ಪೊದೆಯಂತೆಯೇ ಬೆಳೆಯುತ್ತವೆ ಎಲೆಗಳು ಪರ್ಯಾಯ ಜೋಡಣೆ ಹೊಂದಿದ್ದು 4 ಇಂಚು ಉದ್ದ 4 ಇಂಚು ಅಗಲವಿರುತ್ತವೆ. ಹೂಗಳು ಬೆಳ್ಳಗಿರುತ್ತವೆ. ಅನೇಕ ಕೇಸರಗಳನ್ನು ಹೊಂದಿರುತ್ತವೆ. ಕಾಯಿ ಕಪ್ಪು ಮಿಶ್ರಿತ ಕಂದು ಬಣ್ಣ ಹೊಂದಿದ್ದು ಮೈಯೆಲ್ಲಾ ಮುಳ್ಳಾಗಿರುತ್ತವೆ. ಬೀಜಗಳು ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತವೆ.

ಉಪಯೋಗಗಳು : ಇದರ ಬೀಜಗಳಿಂದ ಪಡೆಯುವ ಬಣ್ಣದಿಂದ ಬೆಣ್ಣೆ, ತುಪ್ಪ, ಛೀಸ್ ಮುಂತಾದುವುಗಳಿಗೆ ಬಣ್ಣ ಹಾಕುತ್ತಾರೆ. ಉಣ್ಣೆ ಬಟ್ಟೆಗಳು, ವಾರ್ನಿಷ್ ಮತ್ತು ಸೋಪುಗಳಿಗೆ ಬಣ್ಣ ಕೊಡಲೂ ಇದನ್ನು ಉಪಯೋಗಿಸುತ್ತಾರೆ. ನಮ್ಮ ದೇಶ ಈ ಅನ್ನಟೊ ಬಣ್ಣವನ್ನು ಅಮೆರಿಕದಿಂದ ತರಿಸಿಕೊಳ್ಳುತ್ತಿದೆ. ಇದರ ಬೀಜಗಳನ್ನು ಆಯುರ್ವೇದೀಯ ವೈದ್ಯದಲ್ಲಿ ಗೊನೋರಿಯಾ (Gonorrhoea) ಕಾಯಿಲೆ ಗುಣಪಡಿಸಲು ಅತ್ಯುತ್ತಮ ಮದ್ದೆಂದು ಹೇಳಲಾಗಿದೆ. ಎಲೆಗಳನ್ನು ಜಾಂಡಿಸ್ (ಅರಸಿನ ಮುಂಡಿಗೆ ರೋಗ) ಕಾಯಿಲೆ ಗುಣಪಡಿಸಲು ಉಪಯೋಗಿಸುತ್ತಾರೆ

ಲಕ್ಕಿಸೊಪ್ಪಿನ ಮರ (ಲಕ್ಕಿ ಗಿಡ) Vitex negundo L.

ಮೈಸೂರು, ಕೊಡಗು, ಹಾಸನ ಜಿಲ್ಲೆಗಳಲ್ಲಿ ಹೇರಳವಾಗಿ ಬೆಳೆಯುವ ಈ ಮರ ಒಣ ಹವೆಯಿರುವ ಪ್ರದೇಶಗಳಲ್ಲಿ ಒಂದು ಸಣ್ಣ ಪೊದೆಯಂತೆ ಇರುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಸಣ್ಣ ಮರ ವರ್ಬಿನೇಸಿ (Verbenaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 34$ (Sharma & Mulk 1963 b). ಮೈಸೂರಿನ ಲಕ್ಕಿ ಗಿಡದಲ್ಲಿ ಬಿಳೀಲಕ್ಕಿ ಮತ್ತು ಕರಿಲಕ್ಕಿ ಎಂಬ ಎರಡು ವಿಧಗಳಿವೆ.

ಉಪಯೋಗಗಳು : ಕೀಟನಾಶಕವಾಗಿ ಭತ್ತದ ಜೊತೆ ಹಳ್ಳಿಗಳಲ್ಲಿ ಇದರ ಸೊಪ್ಪು ಇಟ್ಟಿರುತ್ತಾರೆ. ಇದರ ಎಳೆ ಟೊಂಗೆಗಳಿಂದ ಬುಟ್ಟಿ ಹೆಣೆಯುತ್ತಾರೆ. ಇದರ ಎಲೆ, ಕಾಯಿ, ಬೇರುಗಳನ್ನು ಔಷಧಿಯಲ್ಲಿ ಉಪಯೋಗಿಸುತ್ತಾರೆ. ಎಲೆಗಳನ್ನು ಗೊನೋರಿಯದ ವೃಷಣಗಳ ಊತವನ್ನು ಕಡಿಮೆಮಾಡಲು, ಪ್ರಸೂತಿ ಕಾಲದಲ್ಲಿ ಹೆಂಗಸರು ಸ್ನಾನ ಮಾಡಲು ಎಲೆಗಳ ಕಷಾಯವನ್ನು ನೀರಿನ ಜೊತೆ ಸೇರಿಸಿಕೊಂಡು ಉಪಯೋಗಿಸುತ್ತಾರೆ.

ಲಕೋಟಿ ಮರ (Eriobotrya japonica (Thunb.) Lindl.)

ಮೂಲತಃ ಚೈನಾದಲ್ಲಿ ಕಾಣಲಾದ ಈ ಮರವನ್ನು ಉತ್ತರ ಪ್ರದೇಶ ಮತ್ತು ಪಂಜಾಬ್‌ಗಳಲ್ಲಿ ಹೆಚ್ಚಾಗಿ ಬೆಳೆಸುತ್ತಿದ್ದಾರೆ. ನಮ್ಮಲ್ಲಿ ಈ ಮರಗಳನ್ನು ಕಾಣುವುದೇ ಕಷ್ಟ. ಉದ್ಯಾನಗಳಲ್ಲೋ ತೋಟಗಳಲ್ಲೋ ಅಲ್ಲೊಂದು ಇಲ್ಲೊಂದು ಇರುತ್ತವೆ.



ಲಕೋಟಿ ಮರ

ಸಸ್ಯಶಾಸ್ತ್ರ ವಿವರಣೆ : ಈ ಮರ ರೊಸೇಸಿ (Rosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=34$ (Moffett 1931 a). ಇದರ ಹಣ್ಣುಗಳಲ್ಲಿ ಸುಕ್ರೋಸ್ ಮತ್ತು ಮ್ಯಾಲಿಕ್‌ಆಮ್ಲ (Malic acid) ಗಳಿರುತ್ತವೆ.

ಉಪಯೋಗಗಳು : ಈ ಮರದಿಂದ ತಿನ್ನಲು ಯೋಗ್ಯವಾದ ಹಣ್ಣುಗಳು ಸಿಕ್ಕುತ್ತವೆ. ಇದಕ್ಕೆ ಬಾಯಾರಿಕೆ ಮತ್ತು ವಾಂತಿ ಬರುವಿಕೆ ಇವನ್ನು ಹೋಗಲಾಡಿಸುವ ಗುಣವಿರುತ್ತದೆ.

ವನಸಂಪಿಗೆ ಮರ (Bauhinia tomentosa L.)

ವನಸಂಪಿಗೆ ಒಂದು ಚಿಕ್ಕ ಮರ. ಮೈಸೂರಿನಲ್ಲಿ ಬೆಳೆಯುವ ಈ ಮರ ಗುಜರಾತ್, ಸೌರಾಷ್ಟ್ರ ಪ್ರದೇಶಗಳಲ್ಲಿ ಕಂಡುಬಂದಿವೆ. ಈ ಮರ ಅಸ್ಸಾಂ, ಬಿಹಾರ್‌ಗಳಲ್ಲೂ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=28 (Atchison 1951). ಇದರ ಹೂಗಳು ಸುಮಾರು 3 ಇಂಚುಗಳಷ್ಟು ದೊಡ್ಡವಿದ್ದು ಬಿಳಿ ಮಿಶ್ರಿತ ಇಲ್ಲವೇ ಕೆಂಪು ಮಿಶ್ರಿತ ಹಳದಿ ಬಣ್ಣವನ್ನು ಹೊಂದಿರುತ್ತವೆ. ಇದರ ಕಾಯಿ 4 ರಿಂದ 5 ಇಂಚಿನಷ್ಟು ಉದ್ದವಿರುತ್ತದೆ.

ಉಪಯೋಗಗಳು : ಆಲಂಕಾರಿಕ ವೃಕ್ಷವಾಗಿ ತೋಟಗಳಲ್ಲೂ ಉದ್ಯಾನಗಳಲ್ಲೂ ಬೆಳೆಸುತ್ತಾರೆ. ಇದರ ಎಲೆಗಳಿಗೆ ತಲೆನೋವು ನಾಸಿ ಮಾಡುವ ಗುಣವಿದೆಯೆಂದು ಕ್ಯಾಮೆರಾನ್ (1895) ಹೇಳಿದ್ದಾರೆ. ಇದರ ತೊಗಟೆಯಿಂದ ನಾರು ತೆಗೆಯುತ್ತಾರೆ.

ವಾಲಿಮರ (ಗೂಗ) Dipterocarpus turbinatus Gaertn.


ಬರ್ಮಾ, ಅಂಡಮಾನ್ ಮುಂತಾದ ಪ್ರದೇಶಗಳಲ್ಲೆಲ್ಲಾ ಬೆಳೆಯುವ ಈ ಮರ ಮಲೆನಾಡಿನ ಅರಣ್ಯಗಳಲ್ಲೂ ಬೆಳೆಯುತ್ತದೆ. ಈ ಉನ್ನತ ನಿತ್ಯಹರಿದ್ವರ್ಣದ ವೃಕ್ಷ ಬಂಗಾಳದಲ್ಲೂ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಡಿಪ್ಟಿರೋಕಾರ್ಪೇಸಿ (Dipterocarpaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=20 (Tixier 1960) ಇದರ ಹೂಗಳು 3 ಇಂಚಿನಷ್ಟು ದೊಡ್ಡವಾಗಿ ಸ್ವಲ್ಪ ಕೆಂಪು ಬಣ್ಣ ಹೊಂದಿರುತ್ತವೆ. ಕಾಯಿಗೆ ರೆಕ್ಕೆಗಳಿರುತ್ತವೆ. ಇದರ ಚೇಗು ಕೆಂಪು ಮಿಶ್ರಿತ ಕಂದು ಬಣ್ಣ ಹೊಂದಿದ್ದು ಬಹು ಕಾಲ ಬಾಳಿಕೆ ಬರುವ ಗುಣ ಹೊಂದಿದೆ.

ಉಪಯೋಗಗಳು : ಈ ಮರದ ಎಣ್ಣೆಯನ್ನು ಕುಷ್ಠರೋಗ ನಿವಾರಣೆಗೆ ಉಪಯೋಗಿಸುತ್ತಾರೆ. ಮರವನ್ನು ವ್ಯವಸಾಯದ ಉಪಕರಣಗಳನ್ನು ಮಾಡಲು ಉಪಯೋಗಿಸುತ್ತಾರೆ. ಇತ್ತೀಚೆಗೆ ರೈಲ್ವೆ ಸ್ಲೀಪರುಗಳು, ಮತ್ತು ಟೀ ಪೆಟ್ಟಿಗೆಗಳನ್ನು ಮಾಡಲು ಉಪಯೋಗಿಸುತ್ತಿದ್ದಾರೆ.

ಸೀಮೆ ಸಂಕೇಸುಲ ಮರ (ಗುಲ್ ಮೊಹರ್) Delonix regia (Boj.) Raf.

ಸೀಮೆ ಸಂಕೇಸುಲ ಮರ ಎಂದು ಮೈಸೂರಿನಲ್ಲಿ ಈ ಮರವನ್ನು ಕರೆದರೂ ಈ ಹೆಸರು ತೆಲುಗಿನದಾಗಿದೆ. ಮೂಲತಃ ಈ ಮರ ಮಡಗಾಸ್ಕರ್‌ನಲ್ಲಿ ಕಾಣಬರುವುದಾಗಿದೆ. ಈ ಮರ ನಮ್ಮ ದೇಶಕ್ಕೆ ಯಾವಾಗ ಬಂದಿತು ಎಂಬುದರ ಭಿನ್ನಾಭಿಪ್ರಾಯ



ಮೊಹರ್ (ಸೀಮೆಸಂತೇಸುಲ)

ಗಳಿದ್ದರೂ ನೂರು ವರ್ಷಗಳಿಗೂ ಹಿಂದೆಯೂ ಈ ಮರ ನಮ್ಮ ದೇಶದಲ್ಲಿದ್ದದ್ದಕ್ಕೆ ಆಧಾರಗಳಿವೆ. ಕೆಲವು ಸಸ್ಯಶಾಸ್ತ್ರಜ್ಞರ ಪ್ರಕಾರ ಈ ಮರಗಳು ನಮ್ಮ ದೇಶಕ್ಕೆ ಅರಬ್ಬರ ಮೂಲಕ ಅಬಿಸೀನಿಯದಿಂದ ಬಂದಿವೆ. ಈ ಮರಗಳು ಈಗ ನಮ್ಮ ದೇಶದ ಎಲ್ಲ ಕಡೆಯಲ್ಲಿಯೂ ಚೆನ್ನಾಗಿ ಬೆಳೆಯುತ್ತಿವೆ. ಮೈಸೂರಿನ ಮಾನಸಗಂಗೋತ್ರಿಯ ಲೈಬ್ರರಿಯಿಂದ ಹಿಡಿದು ಸಸ್ಯಶಾಸ್ತ್ರ ವಿಭಾಗದವರೆಗೂ ಇರುವ ರಸ್ತೆಯ ಎರಡು ಪಕ್ಕದಲ್ಲೂ ಕೆಂಪು ಹೂಗಳನ್ನು ಬಿಡುವ ಈ ವೃಕ್ಷಗಳನ್ನೇ ಹಾಕಲಾಗಿದೆ. ಏಪ್ರಿಲ್-ಜೂನ್ ತಿಂಗಳುಗಳಲ್ಲಂತೂ ಮರಗಳೆಲ್ಲಾ ಹೂಗಳಿಂದ ತುಂಬಿ ಕೆಂಪಗೇ ಕಾಣುತ್ತವೆ. ಇವುಗಳ ಸುಂದರತೆ ವರ್ಣನೆಗೆ ಮೀರಿದ್ದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ.

ಸುಮಾರು 25 ರಿಂದ 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಮರ ಸಂಯುಕ್ತ ಪತ್ರಗಳನ್ನು ಹೊಂದಿರುತ್ತದೆ. ಎಲೆಗಳು 1 ರಿಂದ 2 ಅಡಿ ಉದ್ದವಿದ್ದು 11 ರಿಂದ 18 ಜೊತೆ ಬಿಡಿ ಎಲೆಗಳನ್ನು ಹೊಂದಿರುತ್ತದೆ. ಇವುಗಳ ಸಣ್ಣ ಪತ್ರಗಳು 20 ರಿಂದ 30 ಜೊತೆ ಇರುತ್ತವೆ. ಎಲೆಗಳು ತಿಳಿಹಸಿರು ಬಣ್ಣ ಹೊಂದಿರುವುದರಿಂದ ಮನೋಹರ ವಾಗಿರುತ್ತವೆ. ಹೂ ಬಿಡುವ ಕಾಲಕ್ಕೆ ಸ್ವಲ್ಪ ಮುಂಚೆ ಎಲ್ಲ ಎಲೆಗಳೂ ಉದುರಿ ಹೋಗಿರುತ್ತವೆ. (ಫೆಬ್ರವರಿ ಅಥವಾ ಮಾರ್ಚಿಯಲ್ಲಿ) ಹೀಗೆ ಮರ ಬೋಳಾದಾಗ ಹೂಗಳು ಎಲ್ಲ ರೆಂಬೆಗಳಲ್ಲೂ ಅಧಿಕ ಸಂಖ್ಯೆಯಲ್ಲಿ ಮೂಡುತ್ತವೆ. ಈ ಕಾಲದಲ್ಲಿ ಇಡೀ ಮರವೇ ಕೆಂಪಗೆ ಕಾಣುತ್ತದೆ. ಇಂಗ್ಲೀಷರು "ಫೈರ್ ಟ್ರೀ" ಎಂದು ಕರೆಯುವುದಕ್ಕೂ ಇದೇ ಕಾರಣ. 4–5 ಇಂಚುಗಳಷ್ಟು ದೊಡ್ಡದಾದ ಈ ಹೂಗಳು ಹೊಳಪಾದ ಕೆಂಪು ಬಣ್ಣವುಳ್ಳ 4 ಪುಷ್ಪದಳಗಳನ್ನು, ಕೆಂಪು ಹಳದಿ ಬಣ್ಣಗಳಿಂದ ಸುಂದರಗೊಂಡ ಮತ್ತೊಂದು ದೊಡ್ಡ ಪುಷ್ಪದಳವನ್ನು ಹೊಂದಿರುತ್ತವೆ. ಪುಷ್ಪದಳಗಳು ಚಮಚದಾಕಾರದಲ್ಲಿದ್ದು ಸುಕ್ಕುಗಟ್ಟಿದ ಅಂಚುಗಳಿಂದ ಕೂಡಿರುತ್ತವೆ. ಪುಷ್ಪಪತ್ರಗಳ ಹೊರಭಾಗ ಸ್ವಲ್ಪ ಹಸಿರಾಗಿದ್ದರೂ ಒಳಭಾಗ ಕೆಂಪಾಗಿರುತ್ತದೆ. ವಿವಿಧ ಬಣ್ಣಗಳ 10 ಕೇಸರಗಳಿರುತ್ತವೆ. ಇವುಗಳ ದಂಡ (Filament) ಕೆಂಪಗಿದ್ದು ಪರಾಗಕೋಶ ಹಳದಿ ಬಣ್ಣಕ್ಕಿರುತ್ತದೆ. ಇದರ ಕಾಯಿ ಚಪ್ಪಟೆಯಾಗಿದ್ದು 1 ರಿಂದ 2 ಅಡಿಗಳಷ್ಟು ಉದ್ದವಾಗಿರುತ್ತದೆ. ಬೀಜಗಳು 1 ಇಂಚಿನಷ್ಟು ಉದ್ದವಿರುತ್ತವೆ. ರೆಂಬೆಗಳನ್ನು ಕತ್ತರಿಸಿ ಬೇರೆಡೆ ನೆಡುವುದರ ಮೂಲಕವೂ, ಬೀಜಗಳ ಮೂಲಕವೂ ಈ ಮರಗಳನ್ನು ಬೆಳೆಸಬಹುದು.

ಉಪಯೋಗಗಳು : ಅಲಂಕಾರಿಕ ವೃಕ್ಷವಾಗಿ ರಸ್ತೆಗಳಲ್ಲೂ, ಉದ್ಯಾನಗಳಲ್ಲೂ ಬೆಳೆಸಲಾಗುತ್ತದೆ. ಇದರ ಮರ ಅಷ್ಟೇನೂ ಉಪಯೋಗಕ್ಕೆ ಬರುವುದಿಲ್ಲ.

ತೂಕ ಘನ ಅಡಿಗೆ 28 ಪೌಂಡುಗಳು. ಬೀಜಗಳಲ್ಲಿರುವ ಅಂಟನ್ನು ಬಟ್ಟೆ ಹಾಗೂ ಆಹಾರ ಕೈಗಾರಿಕೆಗಳಲ್ಲಿ ಉಪಯೋಗಿಸುತ್ತಾರೆ.

ಸಣ್ಣ ಸೋಲ್ತಿ ಮರ (ತೋರಥಿ) Hydnocarpus alpina Wight.

ಈ ದೊಡ್ಡ ಮರ ಪಶ್ಚಿಮಘಟ್ಟಗಳಲ್ಲೂ, ನೀಲಗಿರಿ ಪ್ರದೇಶದಲ್ಲೂ ಚೆನ್ನಾಗಿ ಬೆಳೆಯುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ಕೇರಳದಲ್ಲೂ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಫ್ಲಕೋರ್ಷಿಯೇಸಿ (Flacourtiaceae) ಕುಟುಂಬಕ್ಕೆ ಸೇರಿದೆ. ಸುಮಾರು 100 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಈ ಸುಂದರ ವೃಕ್ಷವನ್ನು ರಸ್ತೆಗಳಲ್ಲಿ ಹಾಕಿದರೆ ಭವ್ಯವಾಗಿರುತ್ತದೆ. ಇದರ ಎಲೆಗಳು ಅಂಡಾಕೃತಿಯಿಂದಿದ್ದು ತುಂಬ ಹಸಿರಾಗಿರುತ್ತವೆ. ಎಳೆಯವಿದ್ದಾಗ ಕೆಂಪಗಿರುತ್ತವೆ. ಇದರ ಹೂಗಳು ಕೆಲವೇ ಇದ್ದು ಹಣ್ಣುಗಳು 3 ಇಂಚಿನಷ್ಟು ದೊಡ್ಡವಿರುತ್ತವೆ. ಇದರ ಮರ ಸ್ವಲ್ಪ ಕಂದು ಬಣ್ಣ ಹೊಂದಿದ್ದು ಕಪ್ಪು ಎಳೆಗಳನ್ನು ಹೊಂದಿರುತ್ತದೆ. ಮರ ಗಟ್ಟಿಯಾಗಿದ್ದು ತೂಕವಾಗಿರುತ್ತದೆ (ತೂಕ ಘನ ಅಡಿಗೆ 51 ಪೌಂಡುಗಳು). ಬೀಜಗಳಿಂದ ಸುಲಭವಾಗಿ ಸಸಿಗಳನ್ನು ಬೆಳೆಸಬಹುದು.

ಉಪಯೋಗಗಳು : ಈ ಮರದಿಂದ ಮರದ ಅಡಿಕಡ್ಡಿಗಳನ್ನೂ, ಚಿತ್ರಪಟಗಳನ್ನೂ ಮಾಡಬಹುದು. ಇದರ ಮರವನ್ನು ಟೀಪೆಟ್ಟಿಗೆ, ಸೌದೆ ಮುಂತಾದುವುಗಳಿಗೆ ಉಪಯೋಗಿಸುತ್ತಾರೆ. ಇದರ ಬೀಜದ ಎಣ್ಣೆಯನ್ನು ಕುಷ್ಠರೋಗ ನಿವಾರಣೆಗೆ ಉಪಯೋಗಿಸಲಾಗುತ್ತದೆ.

ಸಣ್ಣ ಹಸರೆ ಮರ (ಉಬ್ಬಿನ ಮರ) Polyalthia cerasoides Benth & Hook. f.

ಈ ಮನೋಹರವಾದ ಸಣ್ಣ ವೃಕ್ಷವು ಪಶ್ಚಿಮಘಟ್ಟಗಳಲ್ಲೂ ಬಿಹಾರದಲ್ಲೂ ವಿಶೇಷವಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಅನೋನೇಸಿ (Annonaceae) ಕುಟುಂಬಕ್ಕೆ ಸೇರಿದೆ. ಈ ಮರವನ್ನು ಬೇರೆ ಮರಗಳ ಮಧ್ಯೆ ಕಂಡುಹಿಡಿಯುವುದು ಬಹು ಸುಲಭವಾದ ಕೆಲಸ. ಏಕೆಂದರೆ, ಇದರ ಹೂಗಳು ಹಸಿರಾಗಿದ್ದು ಸುವಾಸನಾ ಭರಿತವಾಗಿರುತ್ತವೆ. ಮಾರ್ಚ್ ತಿಂಗಳಿನಲ್ಲಂತೂ ಮರವು ಪೂರ್ಣವಾಗಿ ಪುಷ್ಪಭರಿತವಾಗಿರುತ್ತದೆ. ಇದರ ಮರ ಹತ್ತಿರದ ಎಳೆಗಳನ್ನು ಹೊಂದಿದ್ದು ಗಟ್ಟಿಯಾಗಿರುತ್ತದೆ.

ಉಪಯೋಗಗಳು : ಇದರ ಹಣ್ಣುಗಳು ತಿನ್ನಲು ಯೋಗ್ಯವಾಗಿರುತ್ತವೆ. ಮರವನ್ನು ಸೌದೆಗಾಗಿ ಉಪಯೋಗಿಸುತ್ತಾರೆ. ಇದು ಉದ್ಯಾನಗಳಲ್ಲಿ ಬೆಳೆಸಲು

ಯೋಗ್ಯವಾದ ಮನೋಹರ ಸುಂದರ ವೃಕ್ಷ. ಈ ಮರವನ್ನು ಸೌದೆಗಾಗಿ ಉಪಯೋಗಿಸುತ್ತಿರುವ ಅಭ್ಯಾಸವನ್ನು ತಪ್ಪಿಸಬೇಕು.

ಸೀತಾಫಲ (ದುರಂಜಿ) Annona squamosa L.

ಮೂಲತಃ ಈ ಮರ ಉಷ್ಣವಲಯದ ಅಮೆರಿಕಾದಲ್ಲಿ ಕಾಣಬಂದು ನಮ್ಮ ದೇಶದ ಎಲ್ಲಾ ಸಂಸ್ಥಾನಗಳಲ್ಲೂ ಈ ಮರವನ್ನು ಬೆಳೆಸುತ್ತಿದ್ದಾರೆ.



ಸೀತಾಫಲ

ಸಸ್ಯಶಾಸ್ತ್ರ ವಿರವಣೆ: ಈ ಮರವು ಅನನೋಸಿ (Annonaceae) ಕುಟುಂಬಕ್ಕೆ ಸೇರಿದೆ ಈ ಸಣ್ಣ ಮರ ಸುಮಾರು 10 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು $1\frac{1}{2}$ ಯಿಂದ 3 ಇಂಚು ಉದ್ದವಿದ್ದು $\frac{3}{4}$ ಇಂಚಿನಷ್ಟು ಅಗಲವಿರುತ್ತವೆ. ತುದಿ ಸ್ವಲ್ಪ ಮೊನಚಾಗಿ ಇಲ್ಲವೇ ಮೊಂಡಾಗಿ ಇರುತ್ತತೆ. ಹೂಗಳು ಒಂಟಿಯಾಗಿ ಇಲ್ಲವೇ ಗುಂಪಾಗಿ ಮೂಡುತ್ತವೆ. ಅವುಗಳ ಬಣ್ಣ ಹಸಿರು ಮಿಶ್ರ ಹಳದಿ ಬಣ್ಣವಾಗಿರುತ್ತದೆ. ಇದರ ಹಣ್ಣು 2 ರಿಂದ 4 ಇಂಚು ಸುತ್ತಳತೆ ಹೊಂದಿದ್ದು ದುಂಡಾಗಿರುತ್ತದೆ. ಬೀಜಗಳು ಈ ಹಣ್ಣಿನೊಳಗೆ ಮೃದುವಾದ ಬಿಳಿ ತಿರುಳಿನೊಳಗೆ ಇರುತ್ತವೆ. ಅವುಗಳ ಬಣ್ಣ ಕಪ್ಪು ಮಿಶ್ರಿತ ಕಂದು ಇಲ್ಲವೇ ಕಪ್ಪಾಗಿರುತ್ತದೆ. ಈ ಹಣ್ಣುಗಳ ತಿರುಳಿನಲ್ಲಿ ನೀರಿನ ಅಂಶ ಶೇ 73·2 ರಷ್ಟು ಇದ್ದು ಗ್ಲೂಕೋಸ್ 14·5, ಸ್ಯಾಖರೋಸ್ (Saccharose) ಶೇ. 1·7, ಪ್ರೋಟೀನ್ ಶೇ. 0·8 ಇರುತ್ತದೆ.

'C' ಆಸ್ನಾಂಗ ಜಾಸ್ತಿ ಇರುತ್ತದೆ. ಶಾಖದಿಂದ ಒಣಗಿಸಿದ ಬೀಜಗಳಲ್ಲಿ ಸುಮಾರು 30% ಎಣ್ಣೆಯಿರುತ್ತದೆ. ಈ ಮರದ ತೂಕ ಘನ ಅಡಿಗೆ 46 ಪೌಂಡುಗಳಷ್ಟಿದ್ದರೂ ಮರವೇನೂ ಅಷ್ಟು ಉಪಯೋಗಕರವಾದದ್ದಲ್ಲ. ಇದರ ಎಲೆ, ತೊಗಟೆ, ಮತ್ತು ಬೇರುಗಳಲ್ಲಿ ಹೈಡ್ರೋಸಯನಿಕ್ ಆಮ್ಲ ಇರುತ್ತದೆ.

ಉಪಯೋಗಗಳು : ಇದರ ತೊಗಟೆಯಿಂದ ಕೆಳದರ್ಜೆಯ ನಾರೊಂದನ್ನು ತೆಗೆಯುತ್ತಾರೆ. ಇದರ ಬೀಜಗಳಿಂದ ಎಣ್ಣೆ ತೆಗೆಯುತ್ತಾರೆ. ಬೀಜಗಳ ಮತ್ತು ಎಲೆಗಳ ಪುಡಿ ಕೀಟನಾಶಕ ಗುಣವನ್ನು ಹೊಂದಿದೆ. ಬೀಜಗಳನ್ನು ಗರ್ಭಪಾತ ಪ್ರಯೋಗಗಳಿಗಾಗಿ ಉಪಯೋಗಿಸುತ್ತಾರೆ.

ಸೀಬೆಹಣ್ಣಿನ ಮರ (ಸೀಬೆ, ಶೀಬೆ, ಚೀಪೆ, ಪೇರಲೆ,) Psidium guajava L.

ಸೀಬೆಹಣ್ಣಿನ ಮರ ಮೂಲತಃ ಮಧ್ಯ ಅಮೇರಿಕಾದಲ್ಲಿ ಕಾಣುತ್ತಿದ್ದು; ಈಗ ಇದನ್ನು ನಮ್ಮ ದೇಶದಲ್ಲಿ ಉತ್ತರಪ್ರದೇಶ, ಬಿಹಾರ್, ಪಂಜಾಬು, ಮಹಾರಾಷ್ಟ್ರ, ಆಂಧ್ರಪ್ರದೇಶ ಮತ್ತು ಮೈಸೂರು ಪ್ರದೇಶಗಳಲ್ಲಿ ಅಧಿಕ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿರಟೇಸಿ (Myrtaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ n=11 (Atchison 1947, Kumar 1957). ಇದರ ತೊಗಟೆ ನಯವಾಗಿದ್ದು ಹಸಿರು ಇಲ್ಲವೇ ಕೆಂಪು ಮಿಶ್ರ ಬೂದು ಬಣ್ಣ ಹೊಂದಿರುತ್ತದೆ. ಇದರ ಎಲೆಗಳು ಅಭಿಮುಖ ಜೋಡಣೆ ಹೊಂದಿರುತ್ತವೆ. ಹೂಗಳು ದೊಡ್ಡವಿದ್ದು ಬೆಳ್ಳಗಿರುತ್ತವೆ. ಪುಷ್ಪಪಾತ್ರೆಯ ದಳಗಳು ಹಾಗೂ ಪುಷ್ಪ ದಳಗಳು 4 ಅಥವಾ 5 ಇದ್ದು ಕೇಸರಗಳು ಅನೇಕವಿರುತ್ತವೆ. ಅಂಡಾಶಯದಲ್ಲಿ ಅನೇಕ ವಿಭಾಗಗಳಿದ್ದು ಅನೇಕ ಅಂಡಗಳಿರುತ್ತವೆ. ಹಣ್ಣುಗಳು ದುಂಡಗೆ ಇಲ್ಲವೇ ಬುಗುರಿಯಾಕಾರಕ್ಕಿರುತ್ತವೆ. ಹಣ್ಣಿನ ಹೊರ ಆಕಾರ, ಹಣ್ಣಿನ ಒಳಗಿನ ತಿರುಳಿನ ಬಣ್ಣ ಇವನ್ನು ನೋಡಿಕೊಂಡು ಮೈಸೂರಿನಲ್ಲಿ ಚಂದ್ರಸೀಬೆ. ಬಿಳಿಸೀಬೆ, ಎಂದು ಉಪಜಾತಿಗಳನ್ನು ಮಾಡಿಕೊಂಡಿರುವುದುಂಟು. ಈಗಂತೂ ಕಸಿಮಾಡಿದ ಒಳ್ಳೆಯ ಸಸಿಗಳು ಸುಲಭವಾಗಿ ದೊರೆಯುತ್ತವೆ.

ಉಪಯೋಗಗಳು : ಹಣ್ಣುಗಳಿಗಾಗಿ ಮರ ಬೆಳೆಸುತ್ತಾರೆ. ಸೀಬೆಯ ಹಣ್ಣುಗಳಲ್ಲಿ 3, 4 ಪ್ರಕಾರಗಳಿವೆ. ಇವುಗಳಲ್ಲಿ ಬಿಳಿಸೀಬೆ, ಕೆಂಪು ಸೀಬೆ ಮುಂತಾದವು ಪ್ರಸಿದ್ಧವಾದವುಗಳು. ಇವೆಲ್ಲಕ್ಕಿಂತ ಇತ್ತೀಚೆಗೆ ಇರುವ ಕಸಿಮಾಡಿ ಸಸಿಗಳು ಬಿಟ್ಟ ಹಣ್ಣಿನ ಬೆಲೆ ಹೆಚ್ಚಾಗಿದೆ. ಇದಕ್ಕೆ ಕಾರಣವೆಂದರೆ ಅವುಗಳ ಗಾತ್ರ ಹಾಗೂ ಒಳ್ಳೆಯ

ರುಚಿ ಇವುಗಳಿಂದ ಕೂಡಿರುವುದೇ ಆಗಿವೆ. ಇದರ ಮರ ಹತ್ತಿರದ ಎಳೆಗಳನ್ನು ಹೊಂದಿ ಗಟ್ಟಿಯಾಗಿರುತ್ತದೆ. ಆಯುಧಗಳ ಹಿಡಿ ತಯಾರಿಸಲು ಉಪಯೋಗಿಸುತ್ತಾರೆ. ಮರದ ಎಲೆಗಳ ಕಷಾಯವನ್ನು ಕಾಲರಾದಲ್ಲಿ ವಾಂತಿ ಬೇಧಿಗಳನ್ನು ನಿಲ್ಲಿಸಲು ಕೊಡುತ್ತಾರೆ. ಇದರ ಹಣ್ಣಿಗೆ ಬೇಧಿ ಮಾಡಿಸುವ ಗುಣವಿದೆ.

ಸೀಮೆ ಅತ್ತಿ (ಅಂಜೂರ–ಹಿಂದಿ) Ficus carica L.

ಏಷ್ಯಾ ಮೈನರ್‌ನ ಕ್ಯಾರಿಕಾ ಪ್ರದೇಶದ ಈ ಹಣ್ಣಿನ ಮರ ಪರ್ಷಿಯಾ, ಟರ್ಕಿ ದೇಶಗಳಲ್ಲೆಲ್ಲಾ ಹೇರಳವಾಗಿ ಬೆಳೆಯುತ್ತಿತ್ತು. ಇಂಡಿಯಾಕ್ಕೆ ಇದು ಬಂದಕಾಲ, ಬಗೆಗಳ ಬಗ್ಗೆ ಇನ್ನೂ ಏಕಾಭಿಪ್ರಾಯವಿಲ್ಲ. ಮುಸ್ಲಿಮರ ದಾಳಿಗಳು ಉತ್ತರ, ದಕ್ಷಿಣ ಇಂಡಿಯಾಗಳ ಮೇಲೆ ಪ್ರಾರಂಭವಾದ ಮೇಲೆಯೆ ಈ ಮರ ನಮ್ಮ ದೇಶಕ್ಕೆ ಬಂದಿತೆಂದು ಹೇಳುತ್ತಾರೆ. ಈ ಮರಕ್ಕೆ ಜ್ವಲಂತ ಇತಿಹಾಸವುಂಟು. ಸ್ಪೇನ್, ಪೋರ್ಚುಗಲ್, ಅಮೆರಿಕಾದ ಸಂಯುಕ್ತ ಸಂಸ್ಥಾನಗಳು ಇಲ್ಲೆಲ್ಲಾ ಇದನ್ನು ಬೆಳೆಸಿರುತ್ತಾರೆ. ಪುರಾತನ ರೋಂ, ಪ್ಯಾಲಸ್ಟೈನ್ ಮತ್ತು ಗ್ರೀಸ್‌ಗಳ ಇತಿಹಾಸದಲ್ಲಿ ಈ ಹಣ್ಣಿನ ಮರದ ಪ್ರಸಂಗಗಳು ಬರುತ್ತವೆ. ಈಗ ನಮ್ಮ ದೇಶದಲ್ಲಿ ಪಂಜಾಬ್, ಮಹಾರಾಷ್ಟ್ರ, ಆಂಧ್ರಪ್ರದೇಶ, ರಾಜಾಸ್ಥಾನ, ಮೈಸೂರು ಪ್ರದೇಶಗಳಲ್ಲೆಲ್ಲಾ ಈ ಮರ ಬೆಳೆಯುತ್ತಿದೆ. 1948-49 ರಲ್ಲೇ ಸುಮಾರು 800 ಎಕರೆಗಳಲ್ಲಿ ಈ ಮರವನ್ನು ಬೆಳೆಸಲಾಗುತ್ತಿತ್ತು.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n = 26$ (Condit 1928). ಈ ಮರ ಅಷ್ಟೇನೂ ದೊಡ್ಡದಲ್ಲ. 15 ರಿಂದ 30 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಎಲೆಗಳು ಸ್ವಲ್ಪ ಅಗಲವಾಗಿ ದುಂಡಗಿದ್ದು 3 ರಿಂದ 5 ಮೂತಿಗಳನ್ನು ಹೊಂದಿರುತ್ತವೆ. ಎಲೆಗಳ ಮೇಲ್ಭಾಗವು ಸ್ವಲ್ಪ ಒರಟಾಗಿರುತ್ತದೆ. ಇದರ ಹಣ್ಣುಗಳಲ್ಲಿ 4 ಬಗೆಯಾಗಿರುತ್ತದೆ. (ಹೂಗಳ ಬಗೆ, ಪರಾಗಸ್ಪರ್ಶ ರೀತಿ ಇವನ್ನು ನೋಡಿ ವಿಂಗಡಿಸಿರುವುದು) (1) ಕಾಮನ್ ಫೀಗ್ (2) ಕ್ಯಾಪ್ರಿ ಫಿಗ್ (3) ಸ್ಮೈರ್ನಾ ಫಿಗ್ (4) ಸ್ಯಾನ್‌ಫೆಡ್ರೋ ಫಿಗ್. ಈ ಬಗೆಗಳಲ್ಲಿ ನಮ್ಮ ದೇಶದಲ್ಲಿರುವುದು ಮೊದಲನೇ ಬಗೆಯದು. ಸಣ್ಣ ಸಣ್ಣ ರೆಂಬೆಗಳ ಮೂಲಕ ಮರಗಳನ್ನು ಬೆಳೆಸಬಹುದು.

ಉಪಯೋಗಗಳು : ಪೋಷಕಾಂಶಗಳಿಂದ ಕೂಡಿದ ಈ ಹಣ್ಣುಗಳನ್ನು ಹಸಿಯಾಗಿಯೇ ಇಲ್ಲವೇ ಒಣಗಿಸಿ ತಿನ್ನುತ್ತಾರೆ. ಔಷಧಿಯಲ್ಲಿ ಇದನ್ನು ವಿರೇಚಕಗಳಾಗಿ ಉಪಯೋಗಿಸುತ್ತಾರೆ. ಈ ಮರದ ಹಾಲಿನಲ್ಲಿ ಫಿಸಿನ್ (Ficin) ಎಂಬ ಕಿಣ್ವವಿರುವುದರಿಂದ ಇದನ್ನು ಜಂತು ನಾಶಕವಾಗಿಯೂ ಉಪಯೋಗಿಸುತ್ತಾರೆ. ಇದರ

ಎಲೆಗಳನ್ನು ದನಕರುಗಳೂ, ಆಡುಗಳೂ ತಿನ್ನುತ್ತವೆ. ಇದರ ಹಾಲನ್ನು ಚೀಸ್ ತಯಾರಿಕೆಯಲ್ಲೂ, ಔಷಧಿಯಲ್ಲೂ ಉಪಯೋಗಿಸುತ್ತಾರೆ.

ಸೀಮೆ ಹುಣಿಸೆ ಮರ (Pithecellobium dulce (Roxb.) Beath.

ದಕ್ಷಿಣ ಅಮೇರಿಕದ ಈ ಮರ ಮೈಸೂರಿನಲ್ಲೂ ಬೆಳೆಯುತ್ತಿದೆ. ಇದನ್ನು ಮಣಿಲಾ ಹುಣಿಸೆ, ಕೋರ್ಕಪಿಲ್ಲಿ, (ತಮಿಳು) ಎಂದೂ ಕರೆಯುವುದುಂಟು.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮಿಮೊಸೇಸಿ (Mimosaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=26 (Sampath & R 1949). 40 ರಿಂದ 50 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ನಿತ್ಯಹರಿದ್ವರ್ಣದ ಈ ವೃಕ್ಷವು ಸಂಯುಕ್ತ ಪತ್ರಗಳನ್ನು ಹೊಂದಿರುತ್ತದೆ. ಬಿಡಿ ಎಲೆಗಳು 1 ರಿಂದ 2 ಇಂಚು ಉದ್ದವಿದ್ದು $\frac{1}{2}$ ರಿಂದ $\frac{3}{4}$ ಇಂಚು ಅಗಲವಿರುತ್ತದೆ. ಇದರ ಹೂಗಳು ಗುಂಡಾದ ಹೂ ಗೊಂಚಲುಗಳಲ್ಲಿ ಬಿಡಲ್ಪಡುತ್ತವೆ. ಇದರ ಕಾಯಿ 4 ರಿಂದ 6 ಇಂಚುಗಳಷ್ಟು ಉದ್ದವಿದ್ದು ಸುರುಟಿಕೊಂಡಿರುತ್ತದೆ. ಬೀಜಗಳು ಕಪ್ಪಗಿದ್ದು ಸ್ವಲ್ಪ ಬೆಳ್ಳಗಿನ ತಿರುಳಿನಿಂದ (aril) ಸುತ್ತುವರಿಯಲ್ಪಟ್ಟಿರುತ್ತವೆ. ನವೆಂಬರ್ ತಿಂಗಳಿನಲ್ಲಿ ಹೂ ಬಿಡಲು ಪ್ರಾರಂಭಿಸುವ ಈ ಮರವು ಬೇಸಿಗೆ ಕಳೆಯುವವರೆವಿಗೂ ಬಿಡುತ್ತಲೇ ಇರುತ್ತದೆ.

ಉಪಯೋಗಗಳು : ಬೀಜಗಳ ಸುತ್ತ ಇರುವ ತೆಳು ತಿರುಳನ್ನು ತಿನ್ನುತ್ತಾರೆ. ತೊಗಟೆಯಿಂದ ಒಂದು ವಿಧದ ಹಳದಿ ಬಣ್ಣವನ್ನು ತೆಗೆಯಲಾಗುತ್ತದೆ. ಬೀಜಗಳಿಂದ ಎಣ್ಣೆ ತೆಗೆಯುತ್ತಾರೆ. ಈ ಮರದ ಚೇಗಿನ ಭಾಗ ಕೆಂಪು ಮಿಶ್ರಿತ ಕಂದುಬಣ್ಣವನ್ನು ಹೊಂದಿರುತ್ತದೆ. ಘನ ಅಡಿಯೊಂದಕ್ಕೆ 40 ಪೌಂಡುಗಳಷ್ಟು ತೂಗುವ ಈ ಮರನನ್ನು ಹೊಸದಾಗಿ ಕೊಯ್ದಾಗ ಕೆಟ್ಟವಾಸನೆ ಬರುತ್ತದೆ. ಮರವನ್ನು ಸೌದೆಗಾಗಿಯೂ, ಮನೆಸಾಮಾನು ಮಾಡಲೂ ಉಪಯೋಗಿಸುತ್ತಾರೆ.

ಸುರಗಿಮರ (ಸುರಗಿ, ಪ್ರಂಡಿ, ಗರ್ಗುಂಡಿ) Mammea longifolia Planch. & Triana. (Syn. ochrocarpus longifolius Benth.)

ಪಶ್ಚಿಮ ಘಟ್ಟಗಳಲ್ಲೆಲ್ಲಾ ಬೆಳೆಯುವ ಈ ಮರ ಕೊಯಮುತ್ತೂರು, ಮಲಬಾರ್ ಪ್ರದೇಶಗಳಲ್ಲೂ ಕಂಡುಬಂದಿದೆ.



ಸುರಹೊನ್ನೆ

ಸಸ್ಯಶಾಸ್ತ್ರ ವಿವರಣೆ : ಈ ಮರವು ಗಟ್ಟಿಫೆರಿ (Guttiferae) ಕುಟುಂಬಕ್ಕೆ ಸೇರಿದೆ. ಈ ನಿತ್ಯಹರಿದ್ವರ್ಣದ ವೃಕ್ಷವು ಸುಮಾರು 60 ಅಡಿಗಳಷ್ಟು ಎತ್ತರಕ್ಕೂ ಬೆಳೆಯಬಲ್ಲುದು. ಇದರ ಎಲೆಗಳು ಅಭಿಮುಖವಾಗಿದ್ದು ಸಣ್ಣ ತೊಟ್ಟುಗಳನ್ನು ಹೊಂದಿರುತ್ತವೆ. ಎಲೆಗಳ ಸರಾಸರಿ ಉದ್ದಗಲಗಳು 8×3 ಇಂಚು ಇರುತ್ತವೆ. ಬೇಸಿಗೆಯಲ್ಲಿ ಹೂ ಬಿಡುವ ಈ ಮರದ ಹೂಗಳು ಸ್ವಲ್ಪ ಬಿಳಿ ಮಿಶ್ರಿತ ಕೆಂಪು ಬಣ್ಣ ಹೊಂದಿದ್ದು ಸುವಾಸಿತವಾಗಿರುತ್ತವೆ. ಇದರ ಕಾಯಿ ಒಂದು ಇಂಚಿನಷ್ಟು ದೊಡ್ಡದಿರುತ್ತದೆ. ಅದರೊಳಗೆ 1 ರಿಂದ 4 ಬೀಜಗಳಿರುತ್ತವೆ.

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನುತ್ತಾರೆ. ಇದರ ಮರ ಕೆಂಪಗಿದ್ದು ಗಟ್ಟಿಯಾಗಿರುತ್ತದೆ. ತೂಕ ಘನ ಅಡಿಗೆ 55 ಪೌಂಡುಗಳಿಂದ 60 ಪೌಂಡುಗಳು. ಮನೆ ಸಾಮಾನುಗಳನ್ನು ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಇದರ ಹೂಗಳನ್ನು ಪೂಜೆಗಾಗಿಯೂ, ಮುಡಿದು ಕೊಳ್ಳಲೂ ಉಪಯೋಗಿಸುತ್ತಾರೆ. ಇದರ ಹೂಗಳಿಂದ ಸುಗಂಧಭರಿತ ತೈಲವನ್ನು ತೆಗೆಯಬಹುದು.

ಸುರಹೊನ್ನೆ (ಪಿನ್ನೆಕಾಯಿ, ಉಮ) Calophyllum inophyllum Linn.

ನಮ್ಮ ದೇಶದ ಈ ಸುಂದರ ವೃಕ್ಷವು ಬರ್ಮಾ, ಮಲಯಾ ಆಸ್ಟ್ರೇಲಿಯಾ, ಸಿಲೋನ್, ಅಂಡಮಾನ್ ಮತ್ತು ಪೂರ್ವ ಆಫ್ರಿಕಾದ ದ್ವೀಪಗಳು ಇಲ್ಲೆಲ್ಲಾ ಬೆಳೆಯುತ್ತಿದೆ. ಈ ಮರವನ್ನು ಮೈಸೂರು ಸಂಸ್ಥಾನದ ಎಲ್ಲ ಪ್ರದೇಶಗಳಲ್ಲಿಯೂ, ತೋಟಗಳಲ್ಲಿ ಮತ್ತು ಅಲ್ಲಲ್ಲಿ ರಸ್ತೆಗಳಲ್ಲಿ ಬೆಳೆಸಲಾಗುತ್ತಿದೆಯಾದರೂ ಮಲೆನಾಡಿನ ಅರಣ್ಯಗಳಲ್ಲಿ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಗಟ್ಟಿಫೆರಿ (Guttiferae) (Clusiaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=32 (Tixier 1953 . ಮಧ್ಯಮ ಎತ್ತರದ ಈ ಮನೋಹರ ವೃಕ್ಷವು ನಯವಾದ ಆದರೆ ಸ್ವಲ್ಪ ಕಪ್ಪಾದ ತೊಗಟೆಯನ್ನು ಹೊಂದಿರುತ್ತದೆ. ಅಂಡಾಕೃತಿಯ ಎಲೆಗಳು ಅಭಿಮುಖವಾಗಿದ್ದು 3 ರಿಂದ 7 ಇಂಚು ಉದ್ದವಿದ್ದು 3 ರಿಂದ 4 ಇಂಚು ಅಗಲವಿರುತ್ತವೆ. ಎಲೆಗಳ ಅಂಚುಗಳು ಸ್ವಲ್ಪ ಕೆಳಭಾಗಕ್ಕೆ ಬಗ್ಗಿರುತ್ತವೆ. ಒರಟಾದ ಆದರೆ ಹೊಳಪುಳ್ಳ ಈ ಎಲೆಗಳು ಅಷ್ಟೇನೂ ದೊಡ್ಡ ತೊಟ್ಟುಗಳನ್ನು ಹೊಂದಿರುವುದಿಲ್ಲ. ಇದರ ಹೂಗಳು $\frac{3}{4}$ ಇಂಚಿನಿಂದ 1 ಇಂಚಿನಷ್ಟು ದೊಡ್ಡವಿದ್ದು ಬೆಳಿಗ್ಗೆ ಹೊತ್ತು ಅರಳುತ್ತವೆ. ಇವುಗಳ ಪರಾಗಸ್ಪರ್ಶ ಕೀಟಗಳಿಂದ ನಡೆಯುತ್ತದೆ ಈ ಹೂವುಗಳು ಸುವಾಸನಾಭರಿತವಾಗಿರುತ್ತವೆ. ಪುಷ್ಪಪಾತ್ರೆ ಹಾಗೂ ಪುಷ್ಪದಳಗಳು ನಾಲ್ಕು ನಾಲ್ಕಿದ್ದು ಅನೇಕ ಕೇಸರಗಳಿರುತ್ತವೆ. ಶಲಾಕಾಗ್ರವು ಅಣಬೆಯಾಕಾರದಲ್ಲಿರುತ್ತದೆ. ಇದರ

ಕಾಯಿಯು ಮೊದಲು ಹಸಿರಾಗಿದ್ದು ಕೊನೆಗೆ ಹಳದಿ ಬಣ್ಣಕ್ಕೆ ತಿರುಗುತ್ತದೆ. ದುಂಡಾಗಿರುವ ಈ ಹಣ್ಣುಗಳು 1 ರಿಂದ $1\frac{1}{2}$ ಇಂಚು ಸುತ್ತಳತೆ ಹೊಂದಿರುತ್ತವೆ. ಈ ಹಣ್ಣುಗಳನ್ನು ಕೀಚಪಾಲದ ಹಕ್ಕಿಗಳು ತಿನ್ನುತ್ತವೆ. ಅವುಗಳಿಂದಲೂ ಬೀಜಪ್ರಸಾರ ನಡೆಯುತ್ತದೆ.

ಉಪಯೋಗಗಳು : ಇದರ ಬೀಜಗಳಿಂದ ತೆಗೆದ ಹಸಿರು ಬಣ್ಣದ ಎಣ್ಣೆಯನ್ನು ಉರಿಸಲು ಹಾಗೂ ಸೋಪು ತಯಾರಿಸಲೂ ಉಪಯೋಗಿಸುತ್ತಾರೆ. ಇದರ ಮರ ಕೆಂಪು ಮಿಶ್ರಿತ ಬಿಳುಪು ಇಲ್ಲವೇ ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿರುತ್ತದೆ. ತೂಕವು ಘನ ಅಡಿಯೊಂದಕ್ಕೆ 38 ರಿಂದ 58 ಪೌಂಡುಗಳಷ್ಟಿರುತ್ತದೆ. ಹಡಗಿನ ಮರದ ಸಾಮಾನುಗಳು ರೈಲ್ವೆ ಸ್ಲೀಪರುಗಳು, ದೊಡ್ಡ ದೊಡ್ಡ ತೊಲೆಗಳು, ಕಂಬಗಳು ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ದೋಣಿಗಳು, ಮನೆ ಸಾಮಾನುಗಳು, ಪ್ಲೈವುಡ್ ಮುಂತಾದುವನ್ನು ತಯಾರು ಮಾಡಲೂ ಇದನ್ನು ಉಪಯೋಗಿಸುತ್ತಾರೆ. ಇದರ ಬೀಜದಿಂದ ತೆಗೆದ ಎಣ್ಣೆಯನ್ನು ಹೊರಗೆ ತಿಕ್ಕಲು ಸಂಧಿವಾತದಲ್ಲಿ ಉಪಯೋಗಿಸುತ್ತಾರೆ. 1686 ರಲ್ಲೇ ರ್‍ಹೀಡೀ (Rheede) ಎಂಬ ಡಚ್ಚನ್ನು ಈ ಎಣ್ಣೆಯನ್ನು ಕಜ್ಜಿ ನಿರ್ಮೂಲನಕ್ಕಾಗಿ ಉಪಯೋಗಿಸಬಹುದೆಂದು ಹೇಳಿದ್ದಾನೆ. ಕುಷ್ಠ ರೋಗಿಗಳಿಗೆ ನೋವು ಕಡಿಮೆಯಾಗಲು ಈ ಎಣ್ಣೆಯನ್ನು ಶುದ್ಧಗೊಳಿಸಿ ಸೂಜಿ ಮದ್ದಾಗಿ ಕೊಡಲಾಗುತ್ತದೆ. ಇದರ ತೊಗಟೆಯ ರಸವು ವಿರೇಚಕ ಗುಣವನ್ನು ಹೊಂದಿದೆ. ತೊಗಟೆಯಲ್ಲಿ ಶೇ 11.9 ರಷ್ಟು ಟ್ಯಾನಿನ್ ಇರುತ್ತದೆ. ಎಲೆಗಳಿಂದ ಸಪೋನಿನ್ ಮತ್ತು ಹೈಡ್ರೋಸಯನಿಕ್ ಆಮ್ಲಗಳನ್ನು ತೆಗೆಯಬಹುದು.

ಸೊಟಿಗೆ ಮರ (Ostodes zeylanica Muell.)

ಹಾಸನ ಜಿಲ್ಲೆಯ ಅರಣ್ಯಗಳಲ್ಲಿ ಈ ದೊಡ್ಡ ಮರ ಬೆಳೆಯುತ್ತದೆ. ತಂಪಾದ ಹವೆಯುಳ್ಳ ನಿತ್ಯಹರಿದ್ವರ್ಣದ ಕಾಡುಗಳಲ್ಲಿ ಈ ಮರ ಚೆನ್ನಾಗಿ ಬೆಳೆಯಬಲ್ಲದು. ಪಶ್ಚಿಮ ಘಟ್ಟಗಳು, ಅನ್ನಾಮಲೈ ಇಲ್ಲೆಲ್ಲಾ ಕಂಡುಬಂದಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಯೂಫೋರ್ಬಿಯೇಸಿ (Euphorbiaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು ಉದ್ದನೆಯ ತೊಟ್ಟುಗಳನ್ನು ಹೊಂದಿದ್ದು ಅಭಿಮುಖ ಜೋಡಣೆ ಹೊಂದಿರುತ್ತವೆ. ಸುಮಾರು 12 ಇಂಚಿನಷ್ಟು ಉದ್ದವಿದ್ದು 4 ಇಂಚಿನಷ್ಟು ಅಗಲವಿರುತ್ತವೆ. ಹೂಗಳು ಹೂ ಗೊಂಚಲುಗಳಲ್ಲಿ ಬಿಡುತ್ತವೆ. ಇದರ ಹಣ್ಣು ದೊಡ್ಡದಿದ್ದು ದುಂಡಗಿನ ಬೀಜಗಳನ್ನು ಹೊಂದಿರುತ್ತದೆ. ಇದರ ಮರ ಕೊಯ್ದಾಗ ಬೆಳ್ಳಗಿರುತ್ತದೆ. ಅಷ್ಟೇನೂ ಬಾಳಿಕೆ ಬರುವ ಗುಣವನ್ನು ಹೊಂದಿಲ್ಲ.

ಉಪಯೋಗಗಳು : ಸೌದೆಗಾಗಿ ಈ ಮರವನ್ನು ಉಪಯೋಗಿಸುತ್ತಾರೆ.

ಸ್ವಾಮಿ ಮರ (ಕಲ್ಗರಿಗೆ) Soymida febrifuga A. Juss.

ಯೂರೋಪಿಯನ್ನರು "ರೆಡ್‌ಸಿಡರ್" ಎಂದು ಕರೆಯುವ ಮರ ಇದೇ ಆಗಿದೆ. ಈ ಮರ ನಮ್ಮ ದೇಶದ ರಾಜಾಸ್ಥಾನ, ಬಿಹಾರಗಳಲ್ಲದೆ ಮೈಸೂರಿಗೆ ಮಲೆನಾಡಿನ ಗುಡ್ಡ ಪ್ರದೇಶಗಳು, ಕ್ಲೋಸ್‌ಪೇಟೆ ಮುಂತಾದ ಕಡೆಗಳಲ್ಲೆಲ್ಲಾ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರವು ಮೀಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಈ ಉನ್ನತ ವೃಕ್ಷದ ಎಲೆಗಳು 12 ರಿಂದ 20 ಇಂಚಿನಷ್ಟು ದೊಡ್ಡ ವಿರುತ್ತವೆ. ಇದರ ಕೇಸರಗಳೆಲ್ಲಾ ಸಂಯೋಗ ಹೊಂದಿ ಒಂದು ಬಟ್ಟಲಿನಾಕಾರದ ಕೊಳವೆಯಂತಿರುತ್ತವೆ. ಅಂಡಾಶಯವು 5 ಭಾಗಗಳನ್ನು ಹೊಂದಿದ್ದು ಅನೇಕ ಅಂಡ ಗಳನ್ನು ಹೊಂದಿರುತ್ತದೆ. ಬೀಜಗಳು ಎರಡು ಕಡೆಯೂ ಸಣ್ಣ ರೆಕ್ಕೆಗಳನ್ನು ಹೊಂದಿ ರುತ್ತವೆ. ಇದರ ಮರ ಸ್ವಲ್ಪ ಕೆಂಪಗಿದ್ದು ಗಟ್ಟಿಯಾಗಿ ಬಹಳ ಕಾಲ ಬಾಳಿಕೆ ಬರುವ ಗುಣವನ್ನು ಹೊಂದಿರುತ್ತದೆ. ಘನ ಅಡಿಯೊಂದಕ್ಕೆ 70 ರಿಂದ 75 ಪೌಂಡುಗಳಷ್ಟು ತೂಗುತ್ತದೆ.

ಉಪಯೋಗಗಳು : ಈ ಮರವನ್ನು ದೇವಸ್ಥಾನವನ್ನು ಕಟ್ಟುವಾಗ ಅದರ ಸಾಮಾನುಗಳನ್ನು ಮಾಡಲು ಉಪಯೋಗಿಸುತ್ತಾರೆ. ಮನೆಗಳ ಮರ ಮುಟ್ಟುಗ ಳನ್ನು ಮಾಡಲೂ ಇದನ್ನೇ ಉಪಯೋಗಿಸುವ ಅಭ್ಯಾಸವಿದೆ. ಆಮಶಂಕೆ ಮತ್ತು ಭೇದಿಗಳನ್ನು ನಿಲ್ಲಿಸಲು ಇದರ ತೊಗಟೆಯನ್ನು ಉಪಯೋಗಿಸುತ್ತಾರೆ. ಇದರ ತೊಗಟೆಯಿಂದ ಒಂದು ಬಗೆಯ ನಾರನ್ನು, ಟ್ಯಾನಿಕ್ ಆಮ್ಲವನ್ನು ಪಡೆಯುತ್ತಾರೆ. ಜ್ವರ ತಗ್ಗಿಸಲು ಇದರ ಕಷಾಯವನ್ನು ಕುಡಿಸುವ ಅಭ್ಯಾಸವೂ ಮಲೆನಾಡಿನ ಕೆಲವು ಕಡೆಗಳಲ್ಲಿದೆ.

ಸಂಪಿಗೆ ಮರ (Michelia champaka L.)

ಪೂರ್ವ ಹಿಮಾಲಯ, ಅಸ್ಸಾಂ, ಬರ್ಮಾ, ಪಶ್ಚಿಮ ಘಟ್ಟಗಳಲ್ಲೆಲ್ಲಾ ಬೆಳೆಯುವ ಸಂಪಿಗೆ ಮರವು ಬಿಳಿಗಿರಿರಂಗನಬೆಟ್ಟ, ಕೊಡಗು, ಹಾಸನಜಿಲ್ಲೆ ಇಲ್ಲೆಲ್ಲಾ ಚೆನ್ನಾಗಿ ಬೆಳೆಯುತ್ತದೆ. ಈ ಮರದ ಮೈಖೀಲಿಯಾ ಎಂಬ ಹೆಸರು. P.A. ಮೈಖಿಲಿ ಎಂಬ ಸಸ್ಯಶಾಸ್ತ್ರಜ್ಞನ ಗೌರವಾರ್ಥವಾಗಿ ಇಟ್ಟಿರುವ ಹೆಸರಾಗಿದೆ. 'ಚಂಪಕ' ಎಂಬುದು ಸಂಸ್ಕೃತದಿಂದ ಬಂದ ಸಂಪಿಗೆ ಮರದ ಹೆಸರೇ ಆಗಿದೆ

ಸಸ್ಯಶಾಸ್ತ್ರ ವಿವರಣೆ : ಈ ಮರವು ಮ್ಯಾಗ್ನಾಲಿಯೇಸಿ (Magnoliaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ $2n=38$

(Janakiammal 1953 c). ಗುಡ್ಡ ಪ್ರದೇಶಗಳ ಒಳ್ಳೆಯ ವಾತಾವರಣದಲ್ಲಿ ಬೆಳೆದ ವೃಕ್ಷಗಳು 80 ರಿಂದ 110 ಅಡಿಗಳಷ್ಟು ಎತ್ತರಕ್ಕೆ ಬೆಳೆದು 20 ರಿಂದ 25 ಅಡಿಗಳಷ್ಟು ಸುತ್ತಳತೆಗಳಿಸಿದ್ದ ಆಧಾರಗಳಿವೆ. ಇದರ ಎಲೆಗಳು ಪರ್ಯಾಯವಾಗಿದ್ದು 7 ರಿಂದ 10 ಇಂಚುಗಳಷ್ಟು ಉದ್ದವಿದ್ದು 2 ರಿಂದ 4 ಇಂಚು ಅಗಲವಾಗಿರುತ್ತವೆ. ಎಲೆಗಳ ತುದಿ ಸ್ವಲ್ಪ ಚೂಪಾಗಿರುತ್ತದೆ. ಎಲೆಗಳ ತೊಟ್ಟು $\frac{3}{4}$ ಇಂಚಿನಿಂದ 1 ಇಂಚಿನಷ್ಟು ಉದ್ದವಿರುತ್ತದೆ. ಹೂಗಳು 2 ರಿಂದ $2\frac{1}{2}$ ಇಂಚಿನಷ್ಟು ಉದ್ದವಿರುತ್ತವೆ. ಪ್ರಬಲ ಸುವಾಸನೆ ಹೊಂದಿರುತ್ತವೆ. ಕಾಯಿಗಳು $\frac{3}{4}$ ಇಂಚಿನಷ್ಟು ದೊಡ್ಡವಿರುತ್ತವೆ. ಬೀಜಗಳು ಕೆಂಪಗಿದ್ದು ನಂತರ ಕಂದು ಬಣ್ಣಕ್ಕೆ ತಿರುಗುತ್ತವೆ. ಸಂಪಿಗೆಯಲ್ಲಿ ಬಿಳೀಸಂಪಿಗೆ, ಕೆಂಡ ಸಂಪಿಗೆ ಎಂಬ ಎರಡು ವಿಧಗಳು ಮೈಸೂರಿನಲ್ಲಿವೆ. ಕೆಂಡ ಸಂಪಿಗೆ ಹೂ ಸ್ವಲ್ಪ ಚಿಕ್ಕದಿದ್ದು ಕೆಂಪಗೆ ಹೆಚ್ಚು ವಾಸನೆ ಹೊಂದಿರುತ್ತವೆ. ಬೀಜಗಳನ್ನು ನೆಡುವುದರ ಮೂಲಕ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಇದರ ಹೂಗಳನ್ನು ದೇವರಿಗೆ ಪೂಜೆ ಮಾಡಲು, ಹೆಂಗಸರು ಮುಡಿದುಕೊಳ್ಳಲು ಉಪಯೋಗಿಸುತ್ತಾರೆ ಈ ಹೂಗಳಿಂದ ತೆಗೆದ ಎಣ್ಣೆಯನ್ನು ಸುಂಗಧ ದ್ರವ್ಯಗಳ ಕಾರ್ಖಾನೆಗಳಲ್ಲಿ, ಅಗರಬತ್ತಿಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ. ಈ ಹೂಗಳಿಂದ ಹಳದಿ ಬಣ್ಣವನ್ನು ತಯಾರಿಸುತ್ತಾರೆ. ಈ ಮರಗಳು ದೇವಸ್ಥಾನದ ಹತ್ತಿರವಿದ್ದರೆ ಅವನ್ನು ಕಡಿಯುವುದಿಲ್ಲ.

ಕಾಡಿನ ಮರಗಳನ್ನು ಹಲಗೆಗಳಿಗೂ, ಮನೆ ಸಾಮಾನುಗಳಿಗೂ ಉಪಯೋಗಿಸುತ್ತಾರೆ. ತೂಕವು ಘನ ಅಡಿಯೊಂದಕ್ಕೆ ಸುಮಾರು 40 ಪೌಂಡುಗಳಷ್ಟಿರುತ್ತದೆ. ಮರದ ಕೆಲವು ಭಾಗಗಳನ್ನು ಔಷಧಿಯಲ್ಲೂ ಉಪಯೋಗಿಸುತ್ತಾರೆ. ಮರದ ಬೀಜಗಳ ಹಣ್ಣುಗಳನ್ನು ಅರೆದು ಹರಳೆಣ್ಣೆ ಸೇರಿಸಿ ಅದನ್ನು ಪಾದಗಳ ಬಿರುಕುಗಳನ್ನು ಗುಣಪಡಿಸಲು ಉಪಯೋಗಿಸುತ್ತಾರೆ.

ಸುಂಕತ್ತಿ (Delonix elata(L.) Gamble (Syn. poinciana elata L.)

ಬಿಳೀಗುಲ್ ಮೊಹರ್ ಎಂದು ಕರೆಯುವ ಈ ಮರವನ್ನು ಅಬಿಸೀನಿಯಾದಿಂದ ತರಲಾಗಿದೆ. ಮೈಸೂರು, ಮಧ್ಯಪ್ರದೇಶ, ಆಂಧ್ರಪ್ರದೇಶ ಹಾಗೂ ಗುಜರಾತ್‌ಗಳಲ್ಲೆಲ್ಲಾ ಬೆಳೆಸಲಾಗಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಸಿಸಾಲ್ಪಿನೇಸಿ (Caesalpinaceae) ಕುಟುಂಬಕ್ಕೆ ಸೇರಿದೆ. ಅಷ್ಟೇನೂ ಎತ್ತರಕ್ಕೆ ಬೆಳೆಯದ ಈ ಮರದ ರೆಂಬೆಗಳು ಛತ್ರಿಯಂತೆ ಸುತ್ತಲೂ ಹರಡಿಕೊಳ್ಳುತ್ತವೆ ಫೆಬ್ರುವರಿ, ಮಾರ್ಚ್ ತಿಂಗಳುಗಳಲ್ಲಿ ಇಡೀ

ಮರವೇ ಬಿಳಿ ಮಿಶ್ರಿತ ಹಳದಿ ಹೂವುಗಳಿಂದ ತುಂಬಿರುತ್ತದೆ. ಅದರ ಹೊಳಪುಳ್ಳ ಹಸಿರು ಎಲೆಗಳ ಮಧ್ಯೆ ಈ ಹೂಗಳು ಇರುವುದು ಆ ಮರವನ್ನು ಸುಂದರವಾಗಿ ಮಾಡಿದೆ. ಇದರ ಮರ ಘನ ಅಡಿಯೊಂದಕ್ಕೆ 45 ಪೌಂಡುಗಳಷ್ಟು ತೂಗುತ್ತದೆ. ಡಿಸೆಂಬರ್ ಜನವರಿ ತಿಂಗಳುಗಳಲ್ಲಿ ಈ ಮರ ಪತ್ರರಹಿತವಾಗುತ್ತದೆ.

ಉಪಯೋಗಗಳು : ಇದನ್ನು ಅಲಂಕಾರ ವೃಕ್ಷವಾಗಿ ಉದ್ಯಾನಗಳಲ್ಲೂ, ರಸ್ತೆಗಳಲ್ಲೂ ಬೆಳೆಸುತ್ತಾರೆ. ಮರದಿಂದ ಪೆಟ್ಟಿಗೆಗಳನ್ನು ಮಾಡುತ್ತಾರೆ. ಈ ಮರದಿಂದ ಬಾಚಣಿಗೆಗಳನ್ನು, ಬೆಂಕಿಕಡ್ಡಿಗಳನ್ನು ಮಾಡುತ್ತಾರೆ. ಇದರ ಎಲೆಗಳನ್ನು ಸಂಧಿ ವಾತ ಮತ್ತು ಜಠರ ವಾಯುಗಳನ್ನು ಹೋಗಲಾಡಿಸಲು ಉಪಯೋಗಿಸುತ್ತಾರೆ. ಇಂಡೋಚೈನಾದಲ್ಲಿ ಜ್ವರ ತಗ್ಗಿಸಲು ಇದರ ತೊಗಟೆಯ ಕಷಾಯವನ್ನು ಉಪಯೋಗಿಸುತ್ತಾರೆ.

ಹಡಗ (Cornus macrophylla Wall.)

ಮಲೆನಾಡಿನಲ್ಲಿ ಅಪರೂಪವಾಗಿ ಈ ಮರಗಳು ಅಲ್ಲೊಂದು ಇಲ್ಲೊಂದು ಕಂಡು ಬರುತ್ತವೆ. ಮೈದಾನದಲ್ಲಿ ಹೆಚ್ಚು ಎತ್ತರಕ್ಕೆ ಬೆಳೆಯಲಾರದ ಈ ಮರ ಗುಡ್ಡ ಪ್ರದೇಶಗಳಲ್ಲಿದ್ದರೆ ಉನ್ನತ ವೃಕ್ಷವಾಗಿ ಬೆಳೆಯುತ್ತದೆ. ಹಿಮಾಲಯದಲ್ಲಿ ಸಮುದ್ರ ಮಟ್ಟಕ್ಕೆ 4000 ದಿಂದ 8000 ಅಡಿಗಳ ಎತ್ತರದಲ್ಲಿ ಈ ಮರ ಹೇರಳವಾಗಿದೆ. ಇದು 40–45 ಅಡಿಗಳ ಎತ್ತರಕ್ಕೆ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಕಾರ್ನೇಸಿ (Cornaceae) ಕುಟುಂಬಕ್ಕೆ ಸೇರಿದೆ. ಇದರ ಮರ ಹತ್ತಿರದ ಎಳೆಗಳನ್ನು ಹೊಂದಿದ್ದು ಒಳ್ಳೆಯ ಮೆರುಗು ತೆಗೆದುಕೊಳ್ಳುವ ಗುಣವನ್ನು ಹೊಂದಿದೆ.

ಉಪಯೋಗಗಳು : ಈ ಮರದಿಂದ ವ್ಯವಸಾಯದ ಉಪಕರಣಗಳು, ಮನೆ ಸಾಮಾನುಗಳು ಮುಂತಾದುವನ್ನು ಮಾಡುತ್ತಾರೆ. ಇದರ ಹಣ್ಣು ತಿನ್ನಲು ಯೋಗ್ಯ. ಆಡುಗಳು ಇದರ ಎಲೆಗಳನ್ನು ತಿನ್ನುತ್ತವೆ.

ಹಲಸಿನ ಮರ (Artocarpus heterophyllus Lamk. = Artocarpus integra (Thunb.) Merril. A. integrifolia Linn. f.)

ಹಲಸಿನ ಮರ ಪುರಾತನ ಕಾಲದಿಂದಲೂ ನಮ್ಮ ದೇಶದಲ್ಲಿ ಬೆಳೆಯುತ್ತಿರುವುದಕ್ಕೆ ಆಧಾರಗಳಿವೆ. ಗ್ರೀಕ್ ಚರಿತ್ರೆಕಾರ ಥಿಯೋಫ್ರಾಸ್ಟಸ್ (ಕ್ರಿ.ಪೂ 300) ಇಂಡಿಯಾ ದೇಶದ ಈ ಹಣ್ಣಿನ ಮರದ ವಿಷಯವನ್ನು ಪ್ರಸ್ತಾಪಿಸಿದ್ದಾನೆ. ನಮ್ಮ ದೇಶದಲ್ಲಿ ಈ ಮರ ಪಶ್ಚಿಮ ಘಟ್ಟಗಳಲ್ಲೂ, ಮೈಸೂರಿನ ಎಲ್ಲ ಜಿಲ್ಲೆಗಳಲ್ಲೂ, ಆಂಧ್ರಪ್ರದೇಶ,

ಬಂಗಾಳ, ಬಿಹಾರಗಳಲ್ಲೂ ಬೆಳೆಯುತ್ತಿದೆ. ಬರ್ಮಾ ಮತ್ತು ಸಿಲೋನ್‌ಗಳಲ್ಲೂ ಹಣ್ಣಿಗಾಗಿ ಈ ಮರವನ್ನು ಬೆಳೆಸುತ್ತಿದ್ದಾರೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=56 (Lecok 1963). ಈ ನಿತ್ಯಹರಿದ್ವರ್ಣ ವೃಕ್ಷ 50–60 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು 4 ರಿಂದ 8 ಇಂಚು ಉದ್ದವಿದ್ದು ಅಂಡಾಕೃತಿ ಹೊಂದಿರುತ್ತವೆ. ಈ ಒರಟಾದ ಎಲೆಗಳ ಮೇಲ್ಭಾಗ ಹೊಳಪು ಹೊಂದಿದ್ದು ಕೆಳಭಾಗ ಸ್ವಲ್ಪ ತಿಳಿ ಹಸುರು ಬಣ್ಣವನ್ನು ಹೊಂದಿರುತ್ತದೆ. ಎಲೆಗಳ ಮಧ್ಯನಾಳ ಸ್ವಲ್ಪ ದಪ್ಪವಾಗೇ ಇರುತ್ತದೆ. ರೆಂಬೆಗಳ ತುದಿಯಲ್ಲಿ ಇಲ್ಲವೇ ಕಾಂಡದ ಮೇಲೆ ಇಲ್ಲವೇ ಬುಡದಲ್ಲಿ ಹೂಗಳು ಮೂಡುತ್ತವೆ. ಒಂದೇ ಮರದ ಮೇಲೆ ಗಂಡು ಮತ್ತು ಹೆಣ್ಣು ಹೂ ಗೊಂಚಲುಗಳಿರುತ್ತವೆ. ಗಂಡು ಹೂ ಗೊಂಚಲು 2 ರಿಂದ 5 ಇಂಚಿನಷ್ಟಿದ್ದರೆ ಹೆಣ್ಣು ಹೂ ಗೊಂಚಲು ದೊಡ್ಡದಿರುತ್ತದೆ. ಹಲಸಿನ ಹಣ್ಣು 30 ಇಂಚಿನಷ್ಟು ದೊಡ್ಡದಿದ್ದು 12 ಇಂಚು ಸುತ್ತಳತೆ ಹೊಂದಿರಬಲ್ಲದು. ಇದರ ಬೀಜಗಳು ಮೂತ್ರಪಿಂಡದಾಕಾರ ಹೊಂದಿದ್ದು 1 ರಿಂದ 1½ ಇಂಚು ಉದ್ದವಿರುತ್ತವೆ. ಇವುಗಳ ಸುತ್ತ ಇರುವ ವಾಸನಾಪೂರಿತ ಭಾಗವೇ (ಹಲಸಿನ ತೊಳೆ) ತಿನ್ನಲು ಉಪಯೋಗಿಸುವ ಹಣ್ಣಿನ ಭಾಗ. ಇವು ಪೇರಿಯಾಂತ್ (Perianth) ಭಾಗಗಳು. ಹಲಸಿನ ಹಣ್ಣು 60 ಪೌಂಡುಗಳಷ್ಟು ತೂಕ ಪಡೆದಿರುವುದಕ್ಕೂ ಆಧಾರಗಳಿವೆ.

ಬೀಜಗಳಿಂದ ಮರಗಳನ್ನು ಎಲ್ಲ ಕಡೆಯೂ ಬೆಳೆಸಬಹುದಾದರೂ ಈ ಮರ ತಂಪಾದ ಹವೆಯುಳ್ಳ ಉಷ್ಣವಲಯ ಪ್ರದೇಶಗಳಲ್ಲಿ ಚೆನ್ನಾಗಿ ಬೆಳೆಯಬಲ್ಲದು. ಈ ಮರದ ವಾಸಸ್ಥಳ ಪಶ್ಚಿಮ ಘಟ್ಟಗಳ ಅರಣ್ಯ ಪ್ರದೇಶಗಳೇ ಎಂದು ಎಲ್ಲ ವಿದ್ವಾಂಸರುಗಳೂ ಅಭಿಪ್ರಾಯಪಟ್ಟಿದ್ದಾರೆ.

ಉಪಯೋಗಗಳು : ಹಣ್ಣಿಗಾಗಿ ಈ ಮರವನ್ನು ಉಪಯೋಗಿಸುತ್ತಾರೆ. ಈ ಮರದ ಬೀಜಗಳನ್ನು, ಎಳೆಯ ಕಾಯಿಗಳನ್ನು ತರಕಾರಿಯಂತೆ ಬಳಸುತ್ತಾರೆ. ಇದರ ಚೇಗುಭಾಗ ಹಳದಿ ಬಣ್ಣಕ್ಕಿರುತ್ತದೆ. ಅದರಿಂದ ಹಳದಿ ಬಣ್ಣ ತಯಾರಿಸುತ್ತಾರೆ. ಹಿಂದೆ ಬೌದ್ಧ ಸನ್ಯಾಸಿಗಳು ತಮ್ಮ ವಸ್ತ್ರಗಳಿಗೆ ಹಳದಿ ಬಣ್ಣ ಹಾಕಲು ಇದನ್ನು ಉಪಯೋಗಿಸುತ್ತಿದ್ದರು. ಮರದ ತೂಕ ಘನ ಅಡಿಗೆ 36-45 ಪೌಂಡುಗಳು. ಈ ಮರವನ್ನು ದೋಣಿಗಳನ್ನು ಕಟ್ಟಲೂ, ಹಲಗೆಗಳಿಗಾಗಿಯೂ, ಮನೆ ಸಾಮಾನುಗಳಿಗಾಗಿಯೂ ಉಪಯೋಗಿಸುತ್ತಾರೆ. ಮರಗಳಿಗೆ ವಯಸ್ಸಾದ ಮೇಲೆ ಅವುಗಳ ಬೇರಿನ ಮೇಲೆ ಬಿಡುವ ಹಣ್ಣುಗಳಿಗೆ ಬೆಲೆಹೆಚ್ಚು. ಬರ್ಮಾದಲ್ಲಿ ಈ ಮರದ ಚಕ್ಕೆಗಳನ್ನು ತೆಗೆದುಕೊಂಡು ಬಣ್ಣ ತಯಾರಿಸುತ್ತಾರೆ. ಈ ಮರದಿಂದ ಬರುವ ಹಾಲನ್ನು ಒಣಗಿಸಿ

ಆದರಿಂದ ಆರ್ಕ್ಟೋಸ್ಟೀರೋನ್ ಪಡೆಯುತ್ತಾರೆ. (Artcsterone—$C_{36}H_{60}O$) ಇದಕ್ಕೆ ಆಂಡ್ರೋಗೋನಿಕ್ ಗುಣಗಳಿವೆ.

ಹಸರಗಣ್ಣಿ (ಬೇಲಗ, ಕನಗ) Dalbergia lanceolaria Linn. f.

ಎತ್ತರಕ್ಕೆ ಬೆಳೆಯುವ, ಸುಮಾರು 7 ಅಡಿಗಳಷ್ಟು ಸುತ್ತಳತೆ ಹೊಂದಬಲ್ಲ ಈ ಮರ ಇಂಡಿಯಾದ ಎಲ್ಲ ಕಡೆಗಳಲ್ಲೂ ಕಾಲಕಾಲಕ್ಕೆ ಎಲೆಯುದುರುವ ಅರಣ್ಯಗಳಲ್ಲಿ ಕಂಡುಬಂದರೂ ಸಾಮಾನ್ಯವಾಗಿ ಯಾವ ಕಡೆಯೂ ಹೆಚ್ಚು ಬೆಳೆಯುತ್ತಿಲ್ಲ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=20 (Atchison 1951). ಇದರ ಮರ ಚೇಗು ರಹಿತವಾಗಿ ಹಳದಿ ಮಿಶ್ರಿತ ಬಿಳೀ ಬಣ್ಣ ಹೊಂದಿರುತ್ತದೆ. ವಯಸ್ಸಾದಂತೆಲ್ಲಾ ಸ್ವಲ್ಪ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಮರ ಬಹಳ ಕಾಲ ಬಾಳಿಕೆ ಬರುವಂಥಾದ್ದಲ್ಲವಾದರೂ ಹತ್ತಿರದ ಎಳೆಗಳನ್ನು ಹೊಂದಿ ಸ್ವಲ್ಪ ಗಟ್ಟಿಯಾಗಿರುತ್ತದೆ. ತೂಕ 1 ಘನ ಅಡಿಗೆ 41 ರಿಂದ 48 ಪೌಂಡುಗಳು.

ಉಪಯೋಗಗಳು : ಸಾಮಗ್ರಿಗಳ ಹಿಡಿಗಳನ್ನು ಮಾಡಲೂ, ವ್ಯವಸಾಯದ ಉಪಕರಣಗಳನ್ನು ಮಾಡಲೂ ಈ ಮರವನ್ನು ಉಪಯೋಗಿಸುತ್ತಾರೆ. ಇದರ ತೊಗಟೆಯಲ್ಲಿ ಶೇಕಡ 14 ಭಾಗ ಟ್ಯಾನಿನ್ ಇರುತ್ತದೆ. ಇದರ ಬೀಜಗಳಿಂದ ತೆಗೆದ ಎಣ್ಣೆಯನ್ನು ಸಂಧಿವಾತದಲ್ಲಿ ಉಪಯೋಗಿಸುತ್ತಾರೆ. ಇದರ ತೊಗಟೆಯ ಕಷಾಯವನ್ನು ಅಗ್ನಿಮಾಂದ್ಯ ನಿವಾರಕವಾಗಿ ಉಪಯೋಗಿಸುತ್ತಾರೆ.

ಹಾಲುವಾಣದ ಮರ (ಪಾಲಿವಾಣ, ವಾರ್ಜಿಪೆ) Erythrina indica Lamk.

ಇಂಡಿಯಾದ ಸುಂದರ ವೃಕ್ಷಗಳಲ್ಲಿ ಒಂದಾದ ಈ ಮರ ನಮ್ಮ ದೇಶದ ಹಾಗೂ ಬರ್ಮಾದ ಕರಾವಳಿ ಪ್ರದೇಶದ ಅರಣ್ಯಗಳಲ್ಲೆಲ್ಲಾ ಬೆಳೆಯುತ್ತದೆ. ಅಂಡಮಾನ್, ನಿಕೋಬಾರ್, ಜಾವಾಗಳಲ್ಲೂ ಈ ಮರ ಬೆಳೆಯುತ್ತದೆ. ಹಿಂದೂಗಳಲ್ಲಿ ಈ ಮರ ಇಂದ್ರನ ನಂದನವನದಲ್ಲಿ ಹೂ ಬಿಡುವ ವೃಕ್ಷವಾಗಿತ್ತು ಎಂಬ ನಂಬಿಕೆಯಿದೆ. ಇದರ ಎಲೆಯ ಮೂರು ಬಿಡಿ ಎಲೆಗಳು ತ್ರಿಮೂರ್ತಿಗಳನ್ನು ಪ್ರತಿನಿಧಿಸುತ್ತವೆ. ಮಧ್ಯದ ಬಿಡಿ ಎಲೆ ವಿಷ್ಣುವನ್ನೂ, ಬಲಕ್ಕಿರುವುದು ಬ್ರಹ್ಮನನ್ನೂ, ಎಡಕ್ಕಿರುವುದು ಶಿವನನ್ನೂ ಪ್ರತಿನಿಧಿಸುತ್ತದೆಂಬ ನಂಬಿಕೆ ಉತ್ತರ ಇಂಡಿಯಾದಲ್ಲಿದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=42 (Rao, 1945)

2n=44 (Pourcques, 1945) 35 ರಿಂದ 45 ಅಡಿಗಳಷ್ಟು ಎತ್ತರಕ್ಕೆ ಬೆಳೆಯುವ ಶಕ್ತಿ ಹೊಂದಿರುವ ಈ ಮರದ ಬೂದು ಬಣ್ಣದ ತೊಗಟೆಯ ಮೇಲೆಲ್ಲಾ ಸಣ್ಣ ಸಣ್ಣ ಕಪ್ಪನೆಯ ಮುಳ್ಳುಗಳಿರುತ್ತವೆ (Prickles). ಇದರ ಸಂಯುಕ್ತ ಪತ್ರಗಳು 3 ಬಿಡಿ ಎಲೆಗಳನ್ನು ಹೊಂದಿರುತ್ತವೆ. ಈ ಬಿಡಿ ಎಲೆಗಳು 4 ರಿಂದ 6 ಇಂಚು ಉದ್ದವಿದ್ದು 3 ರಿಂದ 5 ಇಂಚು ಅಗಲವಿರುತ್ತವೆ. ಮಧ್ಯದ್ದು ಸ್ವಲ್ಪ ದೊಡ್ಡದಾಗಿರುತ್ತದೆ. ಇದರ ತುದಿ ಸ್ವಲ್ಪ ಚೂಪಾಗಿರುತ್ತದೆ. ಎಲೆಯ ತೊಟ್ಟು 4 ರಿಂದ 8 ಇಂಚು ಉದ್ದವಿರುತ್ತದೆ. ಈ ಮರ ಮಾರ್ಚಿಯ ಮೊದಲನೇ ವಾರದ ಹೊತ್ತಿಗೆ ಹೂ ಬಿಡಲು ಪ್ರಾರಂಭಿಸಿ ಏಪ್ರಿಲ್. ಮೇ ತಿಂಗಳವರೆಗೂ ಪುಷ್ಪಭರಿತವಾಗಿರುತ್ತದೆ. ಇದು ಹೂ ಬಿಡುವ ಕಾಲದಲ್ಲಿ ಎಲೆಗಳೆಲ್ಲಾ ಉದುರಿಹೋಗಿರುತ್ತವೆ. ಹೂಗಳ ಬಣ್ಣ ಹೊಳವುಳ್ಳ ಕೆಂಪು. ಪುಷ್ಪಪಾತ್ರೆಯೂ ಕೆಂಪಗೇ ಇರುತ್ತದೆ. ಈ ಹೂವಿಗೆ ಐದು ಪುಷ್ಪ ದಳಗಳಿರುತ್ತವೆ. ಇವುಗಳಲ್ಲಿ ಒಂದು ಅತಿ ದೊಡ್ಡದಾಗಿರುತ್ತದೆ. ಕೇಸರಗಳು ಹತ್ತಿರುತ್ತವೆ. ಇದರ ಕಾಯಿಗಳು ಮೊದಲು ಹಸಿರಾಗಿದ್ದು ಕಂದು ಬಣ್ಣಕ್ಕೆ ತಿರುಗಿ ಒಣಗಿದ ಮೇಲೆ ಸಂಪೂರ್ಣವಾಗಿ ಕಪ್ಪಗಾಗುತ್ತವೆ. 5 ರಿಂದ 14 ಇಂಚು ಉದ್ದವಿರುತ್ತವೆ. ಬೀಜಗಳು $\frac{1}{2}$ ಇಂಚಿನಿಂದ $\frac{3}{4}$ ಇಂಚು ಉದ್ದವಾಗಿದ್ದು ಮೂತ್ರ ಪಿಂಡದ ಆಕಾರವನ್ನು ಹೊಂದಿರುತ್ತವೆ.

ಈ ಮರದ ಸಣ್ಣ ರೆಂಬೆಗಳನ್ನು ಕಡಿದು ಬೇರೆಡೆ ನೆಡುವುದರ ಮೂಲಕವೂ ಹಾಗೂ ಬೀಜಗಳನ್ನು ನೆಡುವುದರ ಮೂಲಕವೂ ವಂಶಾಭಿವೃದ್ಧಿ ಮಾಡಿಕೊಳ್ಳಬಹುದು.

ಉಪಯೋಗಗಳು : ಇದರ ಹೂಗಳು ಸುಂದರವಾಗಿರುತ್ತವೆ. ಆದ್ದರಿಂದ ಇದನ್ನು ಅಲಂಕಾರ ವೃಕ್ಷವಾಗಿ ಹಳ್ಳಿಗಳ ಹತ್ತಿರ ಬೇಲಿಗಳಲ್ಲೂ, ಕೈ ತೋಟಗಳಲ್ಲೂ ಬೆಳೆಸುತ್ತಾರೆ. ಕಾಫಿ ತೋಟಗಳಲ್ಲಿ ನೆರಳಿನ ಮರವನ್ನಾಗಿ ಉಪಯೋಗಿಸುತ್ತಾರೆ. ಇದನ್ನು ಆಧಾರ ವೃಕ್ಷವನ್ನಾಗಿ ಉಪಯೋಗಿಸಿಕೊಂಡು ಇದರ ಮೇಲೆ ಎಲೆ ಹಂಬು, ದ್ರಾಕ್ಷಿಬಳ್ಳಿ, ಮಲ್ಲಿಗೆ, ಅಡರು ಗುಲಾಬಿಗಳು ಇವನ್ನೆಲ್ಲಾ ಬೆಳೆಸುತ್ತಾರೆ. ಇವುಗಳ ಬೇರುಗಳು ಭೂಮಿಯಲ್ಲಿ ಸಾರಜನಕ ಪದಾರ್ಥಗಳನ್ನು ಹೆಚ್ಚಿಸುವುದರಿಂದ ಈ ಮರವನ್ನು ಟೀ ಎಸ್ಟೇಟುಗಳಲ್ಲೂ ಬೆಳೆಸುತ್ತಾರೆ. ಇದರ ಮರ ಹಗುರವಾಗಿದ್ದು ಘನ ಅಡಿಗೆ 20 ಪೌಂಡುಗಳಷ್ಟು ತೂಗಿದರೂ ಬಾಳಿಕೆ ಬರುವ ಗುಣವನ್ನು ಹೊಂದಿದೆ. ಆದ್ದರಿಂದ ಇದನ್ನು ಚನ್ನಪಟ್ಟಣ ಮುಂತಾದ ಕಡೆಗಳಲ್ಲಿ ಆಟದ ಬೊಂಬೆಗಳು ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಎಲೆಗಳನ್ನು ದನಗಳು ತಿನ್ನುತ್ತವೆ.

ಹಿಪ್ಪೆ ಮರ (Madhuca longifolia (L.)Macb. (Syn. Bassia longifolia L.)

ಬಂಗಾಳ, ಬಿಹಾರ, ಆಂಧ್ರ ಪ್ರದೇಶಗಳಲ್ಲೆಲ್ಲಾ ಬೆಳೆಯುವ ಈ ಮರ ಮೈಸೂರಿನ ಮೈದಾನ ಪ್ರದೇಶಗಳಲ್ಲೆಲ್ಲಾ ಬೆಳೆಯುತ್ತದೆ.



ಹಿಪ್ಪೆ ಮರ


ಸಸ್ಯಶಾಸ್ತ್ರ ವಿವರಣೆ : ಈ ಮರ ಸಪೋಟೇಸಿ (Sapotaceae) ಕುಟುಂಬಕ್ಕೆ ಸೇರಿದೆ. ಇದರ ಎಲೆಗಳು ತುಪ್ಪಳ ರಹಿತವಾಗಿದ್ದು ಸರಾಸರಿ $5 \times 1\frac{1}{2}$ ಇಂಚು ಉದ್ದ-ಅಗಲಗಳನ್ನು ಹೊಂದಿರುತ್ತವೆ. ಇದರ ಮರ ಹಳದಿ ಮಿಶ್ರ ಕಂದು ಬಣ್ಣ ಹೊಂದಿರುತ್ತದೆ. ಹತ್ತಿರದ ಎಳೆಗಳನ್ನು ಹೊಂದಿರುವ ಈ ಮರ ಘನ ಅಡಿಗೆ 61 ಪೌಂಡುಗಳಷ್ಟು ತೂಕ ಹೊಂದಿರುತ್ತದೆ. ಇದು ಹೂ ಬಿಡುವ ಕಾಲದಲ್ಲಿ ಸುತ್ತಲೂ ಒಂದು ಬಗೆಯ ಕೆಟ್ಟ ವಾಸನೆ ಹರಡಿಕೊಳ್ಳುವಂತೆ ಮಾಡುತ್ತದೆ. ಇದರ ಹಣ್ಣುಗಳು ಜುಲೈ, ಆಗಸ್ಟ್ ತಿಂಗಳಿನಲ್ಲಿ ಮಾಗುತ್ತವೆ.

ಉಪಯೋಗಗಳು : ಈ ಮರ ಅಷ್ಟೇನೂ ಬಾಳಿಕೆ ಬರುವಂಥದ್ದಲ್ಲ. ಇದರ ಹೂಗಳಿಂದ ಮದ್ಯಸಾರವನ್ನು (Alcohol) ತೆಗೆಯಲಾಗುತ್ತದೆ. ಇದರ ಬೀಜಗಳಿಂದ ತೆಗೆದ ಎಣ್ಣೆಯನ್ನು ದೀಪ ಉರಿಸಲೂ, ಒಮ್ಮೊಮ್ಮೆ ಅಡಿಗೆ ಎಣ್ಣೆಗಳಿಗೆ ಬೆರೆಸಲೂ

ಉಪಯೋಗಿಸಲಾಗುತ್ತದೆ. ಇದರ ತೊಗಟೆಯಿಂದ ಟ್ಯಾನಿನ್ ಪಡೆಯಲಾಗುತ್ತದೆ. ಇದರ ಹೂಗಳನ್ನು ದನಗಳು ತಿನ್ನುತ್ತವೆ.

ಹುಣಸೆ ಮರ (Tamarindus indica L.)

ಈ ಮರದ "ಟಾಮರಿಂಡಸ್" ಎಂಬ ಹೆಸರು ಪರ್ಷಿಯಾದ ಟಾಮರ್-ಇ-ಹಿಂದ್(Tamar-i-Hind) ಎಂಬುದರಿಂದ ಬಂದಿದೆ. ಇದರ ಅರ್ಥ ಇಂಡಿಯಾದ ಖರ್ಜೂರ ಎಂದು. ಇಂಡಿಕ ಎಂಬ ಹೆಸರು ಈ ಮರ ನಮ್ಮ ದೇಶದಲ್ಲಿ ಮೂಲತಃ ಇದ್ದುದು ಎಂಬುದನ್ನು ಸೂಚಿಸುತ್ತದೆ. ಕೆಲವು ಸಸ್ಯಶಾಸ್ತ್ರಜ್ಞರು ಈ ಮರವು ಆಫ್ರಿಕಾದಲ್ಲಿ ಕಂಡುಬಂದು, ಮಧ್ಯ ಆಫ್ರಿಕಾದ ಅಬಿಸೀನಿಯದಲ್ಲಿ ಬೆಳೆಯುತ್ತಿತ್ತು; ಅನಂತರ ಇತರ ಕಡೆಗಳಿಗೆ ಹರಡಿತು ಎಂದೂ ಅಭಿಪ್ರಾಯಪಡುತ್ತಾರೆ. ಇಂಡಿಯಾದ ಎಲ್ಲ ಕಡೆಯೂ ಬೆಳೆಸಲಾಗುತ್ತಿರುವ ಈ ಮರವನ್ನು ಮೈಸೂರಿನಲ್ಲೂ ಬೆಳೆಸಲಾಗುತ್ತಿದೆ. ಮದರಾಸು ಸಂಸ್ಥಾನದಲ್ಲಂತೂ ಕೊಯಮುತ್ತೂರಿನ ಸುತ್ತ ಮುತ್ತಿನಲ್ಲಿ ರಸ್ತೆಗಳ ಪಕ್ಕಗಳಲ್ಲೂ ಈ ಮರವನ್ನು ಬೆಳೆಸಿದ್ದಾರೆ.



ಹುಣಸೆ ಮರ

ಸಸ್ಯಶಾಸ್ತ್ರ ವಿವರಣೆ : ಈ ಮರವು ಸಿಸಾಲ್ಪಿನೇಸಿ (Caesalpiniaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=24 (Atchison, 1951). ಸುಮಾರು ನೂರು ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರ ಒಂದು ಸುಂದರ ನಿತ್ಯಹರಿದ್ವರ್ಣ ವೃಕ್ಷವಾಗಿದೆ. ಇದರ ಸಂಯುಕ್ತ ಪತ್ರಗಳು 2 ರಿಂದ 5 ಇಂಚು ಉದ್ದವಿದ್ದು 10 ರಿಂದ 20 ಜೊತೆ ಚಿಕ್ಕ ಬಿಡಿ ಎಲೆಗಳನ್ನು ಹೊಂದಿರುತ್ತವೆ. ಇವುಗಳ ಉದ್ದ $\frac{1}{3}$ ಇಂಚಿನಿಂದ 1 ಇಂಚು ಆಗಿರುತ್ತದೆ. ಎಳೆ ಎಲೆಗಳು ತಿಳಿ ಹಸಿರು ಬಣ್ಣ ಹೊಂದಿದ್ದು ಬಲಿತವುಗಳು ತುಂಬ ಹಸಿರಾಗಿರುತ್ತವೆ. ಹೂಗಳು ಚಿಕ್ಕವಿದ್ದು ಗುಂಪು ಗುಂಪಾಗಿ ಮೂಡುತ್ತವೆ. ಇವುಗಳ ಪುಷ್ಪದಳಗಳು ಹಳದಿ ಹಾಗೂ ಕೆಂಪು ಗೆರೆಗಳಿಂದ ಕೂಡಿ ಸುಂದರವಾಗಿರುತ್ತವೆ. ಹೂ ಬಿಡುವ ಕಾಲದಲ್ಲಂತೂ ಮರದ ಕೆಳಗೆಲ್ಲಾ ಹೂವಿನ ಹಾಸುಗೆಯೇ ಇರುತ್ತದೆ. ಇದರ ಹಣ್ಣುಗಳು 3 ರಿಂದ 8 ಇಂಚು ಉದ್ದವಿದ್ದು, $\frac{3}{4}$ ಇಂಚಿನಿಂದ $1\frac{1}{2}$ ಇಂಚಿನಷ್ಟು ಅಗಲವಿದ್ದು ಚಪ್ಪಟೆಯಾಗಿರುತ್ತವೆ. ಪ್ರತಿ ಕಾಯಿನಲ್ಲೂ 3 ರಿಂದ 12 ಬೀಜಗಳು ಇರುತ್ತವೆ. ಈ ಮರವು ತನಗೆ ತಾನೇ ಹುಟ್ಟಿ ಬೆಳೆಯುವ ಸ್ವಭಾವ ಹೊಂದಿದ್ದರೂ ಈ ಮರದ ಬೀಜಗಳನ್ನು ನೆಟ್ಟು ಗಿಡಗಳನ್ನು ಪಡೆಯುವ ಅಭ್ಯಾಸವುಂಟು.

ಉಪಯೋಗಗಳು : ಇದರ ಚೇಗು ಭಾಗ ಗಟ್ಟಿಯಾಗಿರುತ್ತದೆ. ತೂಕವು ಘನ ಅಡಿಗೆ 60 ಪೌಂಡುಗಳು. ಮನೆ ಸಾಮಗ್ರಿಗಳು, ಒನಕೆಗಳು, ಮನೆ ಉಪಕರಣಗಳು, ವ್ಯವಸಾಯದ ಉಪಕರಣಗಳು ಮುಂತಾದುವುಗಳನ್ನೆಲ್ಲಾ ಮಾಡಲು ಈ ಮರವನ್ನು ಉಪಯೋಗಿಸುತ್ತಾರೆ. ಮಾಗದೆ ಇರುವ ಹಣ್ಣುಗಳಲ್ಲಿ (ಕಾಯಿಗಳಲ್ಲಿ) ಟಾರ್ಟಾರಿಕ್ ಆಮ್ಲ ಹೆಚ್ಚಾಗಿರುತ್ತದೆ. ಅನೇಕ ಔಷಧ ಕೈಗಾರಿಕೆಗಳಲ್ಲಿ, ರಸಾಯನ ಶಾಸ್ತ್ರ ಪ್ರಯೋಗ ಶಾಲೆಗಳಲ್ಲಿ ಆಹಾರ ಪದಾರ್ಥಗಳ ಕೈಗಾರಿಕೆಗಳಲ್ಲಿ ಈ ಆಮ್ಲ ಮತ್ತು ಇದರ ಲವಣಗಳನ್ನು ಉಪಯೋಗಿಸುತ್ತಾರೆ. ಇದರ ಬೀಜಗಳಿಂದ ಜೆಲ್ಲೋಸ್ ಮತ್ತು ಪಾಲಿಯೋಸ್‌ಗಳೆಂಬ ಪದಾರ್ಥಗಳನ್ನು ಪಡೆಯುತ್ತಾರೆ. ಹುಣಿಸೆ ಹಣ್ಣನ್ನು ಸಾರು ಮತ್ತು ಚಟ್ನಿಗಳನ್ನು ಮಾಡುವಾಗ ಹುಳಿ ಪದಾರ್ಥವಾಗಿ ಉಪಯೋಗಿಸುತ್ತಾರೆ. ಇದರಿಂದ ಪಾನಕ ಮಾಡುವ ಪದ್ಧತಿಯೂ ಕೆಲವೆಡೆಗಳಲ್ಲಿದೆ. ಈ ಮರದ ಎಲ್ಲ ಭಾಗಗಳನ್ನೂ ಔಷಧಿಯಲ್ಲಿ ಉಪಯೋಗಿಸಲಾಗುತ್ತದೆ.

ಹುನಾಲ್ (ಹುಲ್ವೆ, ಹುಲುವೆ) Terminalia paniculata Roth.

ಈ ಮರವು ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಕನಕಪುರ ಮತ್ತು ಸಾವನದುರ್ಗಗಳಲ್ಲೂ ಈ ಮರ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಕೋಂಬ್ರಿಟೇಸಿ (Combretaceae) ಕುಟುಂಬಕ್ಕೆ ಸೇರಿದೆ. ಮಧ್ಯಮ ಎತ್ತರದ ಈ ಮರ ಸುಮಾರು 10 ಮೀಟರು ಎತ್ತರಕ್ಕೆ ಬೆಳೆಯಬಲ್ಲದು. ಇದರ ತೊಗಟೆ ಒರಟಾಗಿ ಕಪ್ಪಗಿರುತ್ತದೆ. ಇಡೀ ಮರವೇ ವಾಸನಾಭರಿತವಾಗಿರುತ್ತದೆ. ಈ ಮರದ ಅಭಿಮುಖ ಪತ್ರಗಳು ಒರಟಾಗಿ ರುತ್ತವೆ. ಎಲೆಗಳ ಮೇಲ್ಭಾಗ ತುಂಬ ಹಸಿರಾಗಿದ್ದು ಕೆಳಭಾಗ ಬೂದು ಬಣ್ಣವನ್ನು ಹೊಂದಿರುತ್ತದೆ. ಎಲೆಗಳ ಉದ್ದ ಅಗಲಗಳು ಸರಾಸರಿ 7 × 3 ಇಂಚುಗಳಷ್ಟಿರುತ್ತದೆ. ಹೂವುಗಳು ಸಣ್ಣಗೆ ಬೆಳ್ಳಗಿರುತ್ತವೆ. ಇದರ ಕಾಯಿಗಳಿಗೆ ಮೂರು ರೆಕ್ಕೆಗಳಿದ್ದು ಅವುಗಳಲ್ಲಿ ಮಧ್ಯದ್ದು ಉದ್ದವಿರುತ್ತದೆ. ಎಳೆಯ ಕಾಯಿಗಳನ್ನು ಸೆಪ್ಟೆಂಬರ್ ತಿಂಗಳಲ್ಲೇ ನೋಡಬಹುದು. ಜೂಲೈ ಸೆಪ್ಟೆಂಬರ್ ತಿಂಗಳಲ್ಲಿ ಈ ಮರ ಪುಷ್ಪಭರಿತವಾಗಿ ರುತ್ತದೆ. ಇದರ ಮರ ಮಧ್ಯಮ ವರ್ಗವಾಗಿದ್ದು ಚೇಗು ಕಪ್ಪಗಿದ್ದು ಗಟಿಯಾಗಿ ರುತ್ತದೆ. ಬಹುಕಾಲ ಬಾಳಿಕೆ ಬರುವ ಗುಣ ಹೊಂದಿದೆ. ತೂಕವು ಘನ ಅಡಿಗೆ 47 ಪೌಂಡುಗಳು.

ಉಪಯೋಗಗಳು : ಮತ್ತಿ ಮರಕ್ಕೆ ಬದಲಾಗಿ ಈ ಮರವನ್ನು ಉಪ ಯೋಗಿಸುತ್ತಾರೆ. ಗಾಡಿಗಳನ್ನು ಮಾಡಲು ಹಾಗೂ ಹಲಗೆಗಳಿಗಾಗಿ ಈ ಮರವನ್ನು ಉಪಯೋಗಿಸುತ್ತಾರೆ.

ಹೆಬ್ಬಲ್ಸು (ಹೆಬ್ಬಹಲಸು, ಕಾಡುಹಲಸು, ಹೆಸ್ಸಾನ್, ಹೆಸ್ವ) Artocarpus hirsuta Lam.

ಮೈಸೂರು, ಕೊಡಗು ಮತ್ತು ಹಾಸನ ಜಿಲ್ಲೆಗಳಲ್ಲಿ ಕಂಡುಬರುವ ಈ ಕಾಡು ಹಲಸಿನ ಮರವು ಬಾಬಾಬುಡನ್ ಬೆಟ್ಟಗಳಲ್ಲಿ ಸಮುದ್ರ ಮಟ್ಟಕ್ಕೆ 4000 ಅಡಿ ಗಳಷ್ಟು ಎತ್ತರದವರೆಗೂ ಬೆಳೆಯುತ್ತದೆ. ಈ ಮರವು 70 ರಿಂದ 80 ಅಡಿಗಳಷ್ಟು ಎತ್ತರಕ್ಕೆ ಬೆಳೆದು 15 ಅಡಿಗಳಷ್ಟು ಸುತ್ತಳತೆಯನ್ನು ಪಡೆಯಬಲ್ಲದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಮೊರೇಸಿ (Moraceae) ಕುಟುಂಬಕ್ಕೆ ಸೇರಿದೆ. ಈ ನಿತ್ಯಹರಿದ್ವರ್ಣವೃಕ್ಷ ಸುಮಾರು 200 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲದು. ಇದರ ಎಲೆಗಳು ಪರ್ಯಾಯವಾಗಿ ಟೊಂಗೆಗಳ ಮೇಲಿದ್ದು ಸರಾಸರಿ 6 × 9 ಇಂಚು ಅಗಲ ಉದ್ದಗಳನ್ನು ಹೊಂದಿರುತ್ತವೆ. ತೂಕ 1 ಘನ ಅಡಿಗೆ 35 ರಿಂದ 40 ಪೌಂಡುಗಳಷ್ಟಿರುತ್ತದೆ. ಇದರ ಮರ ಹಳದಿ ಮಿಶ್ರಿತ ಕಂದು ಬಣ್ಣ ಹೊಂದಿದ್ದು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಇದರ ಕಾಯಿ ಹೆರಳೆಕಾಯಿ ಯಷ್ಟಿದ್ದು ಮುಳ್ಳುಗಳನ್ನು ಹೊಂದಿರುತ್ತದೆ. ಬೀಜಗಳ ಮೂಲಕ ಸಸಿಗಳನ್ನು ಪಡೆಯಬಹುದು.

ಉಪಯೋಗಗಳು : ಪಶ್ಚಿಮ ಕರಾವಳಿಯಲ್ಲಿ ಈ ಮರವನ್ನು ದೋಣಿ, ಕಟ್ಟೆಲೂ, ವ್ಯವಸಾಯೋಪಕರಣಗಳನ್ನು ಮಾಡಲೂ ಉಪಯೋಗಿಸುತ್ತಾರೆ. ಇದರ ಹಣ್ಣನ್ನು ತಿನ್ನುತ್ತಾರೆ. ಕಾಫಿ ತೋಟಗಳಲ್ಲಿ ನೆರಳಿಗಾಗಿಯೂ ಈ ಮರವನ್ನು ಬೆಳೆಸುತ್ತಾರೆ. ಈ ಮರವನ್ನು ಗೆದ್ದಲು ಹುಳುಗಳಾಗಲೀ, ಬೂಸರು ಸಸ್ಯಗಳಾಗಲೀ ಹಾಳು ಮಾಡುವುದಿಲ್ಲ. ಕಿಟಕಿ-ಬಾಗಿಲುಗಳು, ತೊಲೆಗಳು, ಟೀ ಪೆಟ್ಟಿಗೆಗಳು ಮುಂತಾದುವನ್ನು ಮಾಡಲು ಉಪಯೋಗಿಸುತ್ತಾರೆ. ಇದರ ಬೀಜಗಳಲ್ಲಿ 16–17% ಎಣ್ಣೆಯಿರುತ್ತದೆ. ಔಷಧಿಯಲ್ಲಿ ಈ ಎಣ್ಣೆಯನ್ನು ಉಪಯೋಗಿಸುತ್ತಾರೆ.

ಹೆಬ್ಬೇವು (Melia composita Willd. (Syn. M. dubia Hiern.)

ಪಶ್ಚಿಮ ಘಟ್ಟಗಳಲ್ಲಿ ಸಮುದ್ರ ಮಟ್ಟಕ್ಕಿಂತ 1500 ರಿಂದ 1600 ಮೀಟರ್‌ಗಳಷ್ಟು ಎತ್ತರದಲ್ಲಿ ಬೆಳೆಯುವ ಈ ಮರ ಸಿಕ್ಕಿಂ, ಅಸ್ಸಾಂ, ಖಾಸಿಬೆಟ್ಟಗಳು, ಉತ್ತರ ಬಂಗಾಳ ಮತ್ತು ಒರಿಸ್ಸಾಗಳಲ್ಲೂ ಬೆಳೆಯುತ್ತದೆ. ಮಲೆನಾಡಿನ ಅರಣ್ಯಗಳಲ್ಲೆಲ್ಲಾ ಈ ಮರ ಸಾಮಾನ್ಯವಾಗಿ ಕಂಡುಬರುತ್ತದೆ.



ಹೆಬ್ಬೇವು

ಸಸ್ಯಶಾಸ್ತ್ರ ವಿವರಣೆ : ಈ ಮರ ಮಿಲಿಯೇಸಿ (Meliaceae) ಕುಟುಂಬಕ್ಕೆ ಸೇರಿದೆ. ಸುಮಾರು 60–70 ಅಡಿಗಳಷ್ಟು ಎತ್ತರಕ್ಕೆ ಬೆಳೆಯಬಲ್ಲ ಈ ಮರದ ಕಪ್ಪು ಮಿಶ್ರಿತ ಕಂದು ಬಣ್ಣದ ತೊಗಟೆ ಆಗಾಗ್ಗೆ ಉದ್ದಕ್ಕೆ ಸೀಳಿ ಒಡೆದು ಉದುರಿ ಹೋಗುತ್ತಿರುತ್ತದೆ. ಮರ ಸಂಯುಕ್ತ ಪತ್ರಗಳನ್ನು ಹೊಂದಿದ್ದು ಹಸಿರುಮಿಶ್ರ ಬಿಳಿ ಪುಷ್ಪಗಳನ್ನು ಹೊಂದಿರುತ್ತದೆ. ಇದರ ದುಂಡಗಿನ ಇಲ್ಲವೇ ಅಂಡಾಕೃತಿಯ ಹಣ್ಣಿನಲ್ಲಿ 5 ಅಥವಾ ಅದಕ್ಕೂ ಕಡಿಮೆ ಬೀಜಗಳಿರುತ್ತವೆ. ಇದರ ಹೊರ ಮರ ಬೂದು ಬಣ್ಣಕ್ಕಿದ್ದು ಒಳಗಿನ ಚೇಗು ಸ್ವಲ್ಪ ಕೆಂಪಗಿರುತ್ತದೆ. ತೂಕ 1 ಘನ ಅಡಿಗೆ 21 ರಿಂದ 25 ಪೌಂಡುಗಳು. ಮರ ಹತ್ತಿರದ ಎಳೆಗಳನ್ನು ಹೊಂದಿರುತ್ತದೆ.

ಉಪಯೋಗಗಳು : ಇದರ ಮರ ಅಷ್ಟೇನೂ ಬಾಳಿಕೆ ಬರುವ ಗುಣವನ್ನು ಹೊಂದಿಲ್ಲವಾದರೂ ಇದನ್ನು ವ್ಯವಸಾಯದ ಉಪಕರಣಗಳನ್ನು ಮಾಡಲೂ, ಬೆಂಕಿ ಪೆಟ್ಟಿಗೆ, ಸೀಸದಕಡ್ಡಿಗಳು, ಸಣ್ಣ ಹಲಗೆಗಳು, ಟೀ ಪೆಟ್ಟಿಗೆಗಳು ಇವನ್ನು ಮಾಡಲು ಉಪಯೋಗಿಸುತ್ತಾರೆ. ಮಲೆನಾಡಿನಲ್ಲಿ ಸೌದೆಗೆ ಬಳಸುತ್ತಾರೆ. ಇದರ ಹಣ್ಣು ಕಹಿಯಾಗಿರುತ್ತದೆ. ಇದಕ್ಕೆ ಜಂತುನಾಶಕ ಗುಣವಿದೆಯೆಂದು ಹೇಳಲಾಗಿದೆ.

ಹೊಂಗೆ ಮರ (Pongamia pinnata (L.) pierre (Syn. Pongamia glabra Vent.)

ಪಶ್ಚಿಮ ಬಂಗಾಳ, ತಿರುವಾಂಕೂರು ಹಾಗೂ ಮೈಸೂರುಗಳಲ್ಲಿ ಈ ಮರ ಚೆನ್ನಾಗಿ ಬೆಳೆಯುತ್ತದೆ. ಮೈಸೂರಿನ ಎಲ್ಲ ಜಿಲ್ಲೆಗಳಲ್ಲೂ ಈ ಮರವನ್ನು ನೋಡಬಹುದು.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2=20 (Atchison, 1951) 2n=22 (Patel & N 1937). ಈ ಮರದ ಪೊಂಗಾಮಿಯ ಎಂಬ ಹೆಸರು ತಮಿಳ 'ಪೊಂಗ' ಅಥವಾ 'ಪೊಂಗಮ್' ಎಂಬ ಪದದಿಂದ ಬಂದಿದ್ದು, 'ಗ್ಲಾಬ್ರ' ಎಂಬ ಮೊದಲಿದ್ದ ಪ್ರಭೇದದ ಹೆಸರು ಇದರ ಮೃದು ಎಲೆಗಳಿಗೆ ಸಂಬಂಧ ಪಟ್ಟಿರುವುದಾಗಿದೆ. ಕಾಲ ಕಾಲಕ್ಕೆ ಎಲೆಗಳನ್ನು ಕಳೆದುಕೊಳ್ಳುವ ಈ ಮರ ಒಳ್ಳೆಯ ವಾತಾವರಣದಲ್ಲಿದಲ್ಲಿದ್ದರೆ 40 ರಿಂದ 60 ಅಡಿಗಳಷ್ಟು ಎತ್ತರಕ್ಕೆ ಬೆಳೆಯುತ್ತದೆ. ಇದರ ಸಂಯುಕ್ತ ಪತ್ರಗಳು 5 ರಿಂದ 10 ಇಂಚು ಉದ್ದವಿದ್ದು ಒಂದು ಮಧ್ಯದ ಬಿಡಿ ಎಲೆ ಮತ್ತು ಇತರ ಅಭಿಮುಖ ಬಿಡಿ ಎಲೆಗಳು ಇವನ್ನು ಹೊಂದಿರುತ್ತವೆ. ಈ ಬಿಡಿ ಎಲೆಗಳು $2\frac{1}{2}$ ಯಿಂದ 5 ಇಂಚು ಉದ್ದವಿದ್ದು, $1\frac{1}{2}$ ಯಿಂದ 3 ಇಂಚು ಅಗಲವಿರುತ್ತವೆ. ಅಂಡಾಕೃತಿ ಹೊಂದಿದ್ದರೂ ತುದಿ ಚೂಪಾಗಿರುತ್ತದೆ. ಇದರ ಹೂಗಳು ಬೆಳ್ಳಗಿದ್ದು

ಅಲ್ಲಲ್ಲೆ ಕೆಂಪು ಗೆರೆಗಳನ್ನು ಹೊಂದಿರುತ್ತದೆ. ಇದರ ಕಾಯಿ $1\frac{1}{2}$ ಯಿಂದ 2 ಇಂಚು ಉದ್ದವಿದ್ದು, $\frac{3}{4}$ ಇಂಚಿನಿಂದ 1 ಇಂಚು ಅಗಲವಿರುತ್ತದೆ. ಸಾಮಾನ್ಯವಾಗಿ ಪ್ರತಿ ಕಾಯಿಗೆ ಒಂದೇ ಬೀಜವಿರುತ್ತದೆ. ಇದರ ಮರ ಗಟ್ಟಿಯಾಗಿದ್ದರೂ ಹಗುರವಾಗಿರುತ್ತದೆ. ತೂಕ ಘನ ಅಡಿಗೆ ಸುಮಾರು 40 ಪೌಂಡುಗಳಷ್ಟಿರುತ್ತದೆ.



ಹೊಂಗೆ ಮರ

ಉಪಯೋಗಗಳು : ಇದರ ಎಲೆಗಳನ್ನು ಭತ್ತದ ಗದ್ದೆಗಳಿಗೆ ಹಸಿರು ಗೊಬ್ಬರವಾಗಿ ಬಳಸುತ್ತಾರೆ. ಇದರ ಬೀಜಗಳಿಂದ ತೆಗೆದ ಎಣ್ಣೆಯನ್ನು ಸೋಪು ತಯಾರಿಸಲೂ, ದೀಪ ಉರಿಸಲೂ ಉಪಯೋಗಿಸುತ್ತಾರೆ. ಸಂಧಿವಾತ ಮತ್ತು ಚರ್ಮದ ಕಾಯಿಲೆಗಳಿದ್ದಾಗಲೂ ಇದನ್ನು ಉಪಯೋಗಿಸುವುದುಂಟು. ಕಾಫಿ ಗಿಡಗಳಿಗೆ ಹೊಂಗೆ ಹಿಂಡಿಯ ಗೊಬ್ಬರ ಹಾಕುವ ಅಭ್ಯಾಸವೂ ಹಾಸನ ಜಿಲ್ಲೆಯಲ್ಲುಂಟು.

ಹೊನ್ನೆ ಮರ (ಹೊನ್ನೆ, ಬಿಬ್ಲ) Pterocarpus marsupium Roxb.)

ಸಾಮಾನ್ಯವಾಗಿ ದಕ್ಷಿಣ ಇಂಡಿಯಾದ ಅರಣ್ಯ ಪ್ರದೇಶಗಳಲ್ಲಿ ಅಲ್ಲಲ್ಲೆ ಈ ಮರ ಕಂಡುಬರುತ್ತದೆ. ಮೈಸೂರು ಜಿಲ್ಲೆಯ ಹಾಗೂ ಕೊಡಗು ಪ್ರದೇಶದ ಅರಣ್ಯಗಳಲ್ಲಿ ಈ ಮರ ಹೆಚ್ಚಾಗಿ ಬೆಳೆಯುತ್ತದೆ. ಮಲೆನಾಡಿನ ಕೆಲವೆಡೆಗಳಲ್ಲೂ ಹೊನ್ನೆ ಮರ ಚೆನ್ನಾಗಿ ಬೆಳೆಯುತ್ತದೆ.

ಸಸ್ಯಶಾಸ್ತ್ರ ವಿವರಣೆ : ಈ ಮರ ಪಾಪಿಲಿನೋಸಿ (Papilionaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=44 (Atchison 1951). ಸಾಮಾನ್ಯವಾಗಿ ಇದರ ಎಲೆಗಳು ಜೂನ್–ಜುಲೈ ತಿಂಗಳುಗಳಲ್ಲಿ ಉದುರಿ ಹೋಗಿರುತ್ತವೆ. ಈ ಮರ ಅಕ್ಟೋಬರಿನಲ್ಲಿ ಪುಷ್ಪಭರಿತವಾಗಿರುತ್ತದೆ. ಹೂಗಳ ಬಣ್ಣ ಬಂಗಾರದ ಬಣ್ಣವೇ ಆಗಿದ್ದು ಫೆಬ್ರವರಿ ತಿಂಗಳ ಹೊತ್ತಿಗೆ ಮರ ಫಲಭರಿತ ವಾಗಿರುತ್ತದೆ. ಇದರ ಕಾಯಿಗಳು ರೆಕ್ಕೆಗಳನ್ನು ಹೊಂದಿದ್ದು 1 ರಿಂದ 2 ಬೀಜಗಳನ್ನು ಹೊಂದಿರುತ್ತವೆ. ಇದರ ಮರ ಕೆಂಪು ಮಿಶ್ರಿತ ಕಂದು ಬಣ್ಣವನ್ನು ಹೊಂದಿದ್ದು ಹತ್ತಿರದ ಎಳೆಗಳನ್ನು ಹೊಂದಿರುತ್ತದೆ. ಘನ ಅಡಿಗೆ 53 ಪೌಂಡುಗಳಷ್ಟು ತೂಕ ಪಡೆದಿರುತ್ತದೆ. ಈ ಮರಕ್ಕೆ ನೀರು ಬಿದ್ದರೆ ಅದು ಹಳದಿ ಬಣ್ಣಕ್ಕೆ ತಿರುಗುತ್ತದೆ. ತೇಗದ ಮರದಷ್ಟೇ ಒಳ್ಳೆಯ ಗುಣವನ್ನು ಈ ಮರವೂ ಪಡೆದಿದೆ. ಎಂದು ಕೊಡಗಿನವರು ಹೇಳುತ್ತಾರೆ. ಈ ಮರದ ತೊಗಟೆಗೆ ಗಾಯಮಾಡಿದರೆ ಕೆಂಪಾದ ಅಂಟೊಂದು ಬರುತ್ತದೆ. ಇದನ್ನು ಆಂಗ್ಲ ಭಾಷೆಯಲ್ಲಿ ಕೈನೋ (Kino) ಎಂದು ಕರೆಯುತ್ತಾರೆ. 50 ರಿಂದ 100 ಇಂಚುಗಳಷ್ಟು ಮಳೆ ಬೀಳುವ ಪ್ರದೇಶಗಳಲ್ಲೆಲ್ಲಾ ಈ ಮರ ಚೆನ್ನಾಗಿ ಬೆಳೆಯುತ್ತದೆ.

ಉಪಯೋಗಗಳು : ಸುಂದರವಾದ ಮಂಚಗಳು, ಕುರ್ಚಿ, ಮೇಜುಗಳು ಕಿಟಕಿ, ಬಾಗಿಲುಗಳು ಮುಂತಾದುವನ್ನು ಮಾಡಲೂ, ವ್ಯವಸಾಯದ ಉಪಕರಣಗಳು, ಕಂಬಗಳು ಮುಂತಾದುವನ್ನು ಮಾಡಲೂ ಈ ಮರವನ್ನು ಉಪಯೋಗಿಸುತ್ತಾರೆ. ಇದರ ಹೂಗಳು ಮತ್ತು ಬೀಜಗಳನ್ನು ಕೆಲವೆಡೆ ಕ್ಷಾಮ ಕಾಲಗಳಲ್ಲಿ ತಿನ್ನಲು ಉಪಯೋಗಿಸುತ್ತಾರೆ. ಈ ಮರದಿಂದ ಬರುವ ಕೈನೋ ಅಂಟನ್ನು ಹಲ್ಲುನೋವು ಹಾಗೂ ಭೇದಿ ನಿವಾರಕ ಔಷಧಿಯಾಗಿ ಉಪಯೋಗಿಸುತ್ತಾರೆ.


ಹೊಳ್ಳೆ ತೂಪ್ರ (ಹೊಳೆ ತೂಪರೆ) Diospyros peregrina (Gaertn.) Gurke (Syn. D. embryopteris Pers.)

ಇದೊಂದು ಸುಂದರ ನಿತ್ಯಹರಿದ್ವರ್ಣ ವೃಕ್ಷ, ತೊರೆ, ಹೊಳೆಗಳ ಹತ್ತಿರ, ತೇವವಿರುವ ಜಾಗಗಳಲ್ಲಿ ನಮ್ಮ ದೇಶದ ಎಲ್ಲೆಡೆಗಳಲ್ಲೂ ಬೆಳೆಯುತ್ತದೆ. ಮೈಸೂರಿನಲ್ಲಿ ಈ ಮರ ತಂಪು ತನೆಯ ಶೋಲಾ ಅರಣ್ಯಗಳಲ್ಲೂ ನದಿಗಳ ದಡದಲ್ಲೂ ಕಂಡು ಬರುತ್ತದೆ.

ಸಸ್ಯಶಾಸ್ತ್ರ ವಿವರಣೆ: ಈ ಮರ ಎಬಿನೇಸಿ (Ebenaceae) ಕುಟುಂಬಕ್ಕೆ ಸೇರಿದೆ. ಇದರ ವರ್ಣತಂತುಗಳ ಸಂಖ್ಯೆ 2n=30 (Pathak et al 1949). ಮಧ್ಯಮ ಎತ್ತರದ ಈ ಮರದ ಬುಡ ಅಷ್ಟೇನೂ ಎತ್ತರವಿರುವುದಿಲ್ಲ.

ಆದರೆ ಸುತ್ತಲೂ ರೆಂಬೆಗಳು ಹರಡಿಕೊಳ್ಳುತ್ತವೆ. ಇದರ ಎಲೆಗಳು ತುಂಬಾ ಹಸಿರಾಗಿರುತ್ತವೆ. ಜೂನ್, ಜುಲೈ ತಿಂಗಳುಗಳಲ್ಲಿ ಮರದಿಂದ ಹಣ್ಣುಗಳುದುರಲು ಪ್ರಾರಂಭಿಸುತ್ತವೆ. ಇದರ ಹಣ್ಣುಗಳು ಸ್ವಲ್ಪ ಹಸಿರಾಗಿದ್ದು ದೊಡ್ಡ ಸೇಬಿನ ಹಣ್ಣಿನ ಗಾತ್ರಕ್ಕಿರುತ್ತವೆ. ಇದರ ಮರ ಹತ್ತಿರದ ಎಳೆಗಳನ್ನು ಹೊಂದಿ ಗಟ್ಟಿಯಾಗಿ ತೂಕವಾಗಿರುತ್ತದೆ. ಬಣ್ಣ ಬೂದು. ತೂಕ ಘನ ಅಡಿಗೆ 48–49 ಪೌಂಡುಗಳು.

ಬೆಳೆಸುವ ಕ್ರಮ : ಬೀಜಗಳನ್ನು ನೆಟ್ಟು ಸಸಿಗಳನ್ನು ಎಬ್ಬಿಸಿ ಅನಂತರ ಅವನ್ನು 20 ಅಡಿಗಳ ಅಂತರದಲ್ಲಿ ನೆಡಬೇಕು. ಸಸಿಗಳು ಬೆಳೆಯುವುದು ಬಹಳ ನಿಧಾನ. ಮೊದಲ 3 ವರ್ಷಗಳಲ್ಲಂತೂ ವರ್ಷಕ್ಕೆ ಕೆಲವು ಇಂಚುಗಳಷ್ಟು ಎತ್ತರ ಬೆಳೆಯುವುದೇ ಕಷ್ಟ.



ಹೊಳೇ ತೂಪ್ರ

ಉಪಯೋಗಗಳು : ಇದರ ಹಣ್ಣುಗಳನ್ನು ತಿನ್ನಬಹುದು. ಇದರ ಕಾಯಿಗಳಲ್ಲಿ ಟ್ಯಾನಿನ್ ಬಹಳವಿದ್ದರೂ ಮಾಗಿದ ಹಣ್ಣುಗಳಲ್ಲಿ ಪೆಕ್ಟಿನ್ ಅಂಶ ಬಹಳವಿರುತ್ತದೆ (50%). ಬಟ್ಟೆಗಳಿಗೆ ಬಣ್ಣ ಹಾಕುವಾಗ, ಚರ್ಮ ಹದ ಮಾಡಲು ಇದರ ಕಾಯಿಗಳನ್ನು ಉಪಯೋಗಿಸುತ್ತಾರೆ. ಈ ಹಣ್ಣಿನ ರಸವನ್ನು ಗಾಯಗಳಿಗೆ, ಹುಣ್ಣುಗಳಿಗೆ ಹಚ್ಚುತ್ತಾರೆ. ಆಗಾಗ್ಗೆ ಬರುವ ಜ್ವರ ಹಾಗೂ ಆಮಶಂಕೆ ನಿವಾರಿಸಲು ಇದರ ತೊಗಟೆಯ ಕಷಾಯವನ್ನು ಬಳಸಲಾಗುತ್ತದೆ ಇದರ ಬೀಜಗಳ ಎಣ್ಣೆಯನ್ನು ಭೇದಿ, ಆಮಶಂಕೆಗಳಲ್ಲಿ ಔಷಧಿಯಾಗಿ ಬಳಸುತ್ತಾರೆ. ಇದರ ಎಲೆಗಳನ್ನು ಬೀಡಿ ಕಟ್ಟಲು

ಉಪಯೋಗಿಸುತ್ತಾರೆ. ದೋಣಿಗಳನ್ನು ಮಾಡಲೂ, ಮನೆ ಕಟ್ಟಲೂ ಕಂಬಗಳನ್ನೂ ಮಾಡಲೂ ಇದರ ಮರವನ್ನು ಉಪಯೋಗಿಸುತ್ತಾರೆ.

ಗ್ರಂಥಋಣ

Abhishankar, K. 1967. Mysore State Gazetteer-Mandya District, Bangalore.

Adakoli, N. S. 1968. The Smuggling of Sandal Wood and its Preservation. My forest Vol. 15. No. 1: Pp. 19–28

Balaiah, B. 1964. Cry of a Forester in Wilderness. My forest Vol. 1. No. 2: Pp. 50–53

Bailey, L. H. 1949. Manual of Cultivated Plants (Ed. 2) New York.

Blatter, E., Walter S. Millard and W. T. Steam. 1964. Some Beautiful Indian Trees. Bombay.

Bhat, L.S., & Learmonth, A. T. (Ed) 1961. Mysore State Vol. I An Atlas of Resources, Bombay.

Bor, N.L. 1953. Manual of Indian Forest Botany. London.

Bor, N.L. and Riziada, M. B. 1954. Some Beautiful Indian Climbers and Shrubbs. Bombay.

Cameron, J. 1894. The Forest Trees of Mysore and Coorg (III Edn.) Bangalore.

Charles McCann., 1959. 100 Beautiful Trees of India. Bombay.

Cowen, D.V. Flowering Trees and Shrubs in India (Ed. 2) Bombay.

Darlington C.D., and Wylie, A.P. Chromosome Atlas of Flowering Plants. London.

Dastur J. F. 1951. Useful Plants of India and Pakistan.

Hayavadana Rao (Ed) 1927. Mysore Gazetteer Vol. I. Descriptive Bangalore. Pp. 61–73.

Hayavadana Rao 1929. Mysore Gazetteer Vol. II. Economic Bangalore. Pp. 175–197

Gamble, J.S. 1935. Flora of the Presidency of Madras (Vol. I) Calcutta.

Gamble J.S. 1922. A Manual of Indian Timbers (2 Edn.) London.

Hooker J.D. 1875. The Flora of British India Vol. I England.

Hooker J.D. 1879. The Flora of British India Vol. II England.

Hooker J.D. 1885. The Flora of British India Vol. IV England.

Hooker J.D. 1885. The Flora of British India Vol. V England.

Hutchison, J. 1926, 1959 a. The Families of Flowering Plants Vol. I Dicotyledons. London.

Hutchison J. 1959 b. Volume. II Monocotyledons. London.

Kaikini, N.S. 1964. Progress of Forestry Under the 5-Year Plans My forest. Vol. I. No. 1 : Pp. 11.17

Kaikini, N.S. 1967 Reorganisation of the Forest Department in Mysore. My forest. Vol IV. No. 1 : Pp. 9-15

Khader Hussain M. 1964. A Ramble in the Jungles of Mysore State. My Forest Vol. I. No. 3 : Pp. 27-35.

Khader Hussain 1966. The Need of Forests and Nature Resources. My forest. Vol. III. No. 3 : Pp. 27-35

Krishna Murthy, 1965. Reference to Trees, Herbs and Forests in Ancient Indian Literature. Ind. Forester V 91 No. 12 : Pp. 858-861.

Maheswari, P. and Umrao Singh. 1965. Dictionary of Economic Plants in India. ICAR New Delhi.

Nadakarni, K.M. 1927. Indian Materia and Medica Vols. 1 & 2 Bombay.

Nanjundappa, D. 1965. Activities of the Forest Department in Belagaum Forest Circle. My forest Vol. 2. No. 1: Pp. 9-22

Misra K.N. and M. S. Tomar. 1967. Role of Forestry in the Economic Cevelopment in India. Ind. Forester. Vol. 93. No. 4. Pp. 220-224.

Pandit S.V. 1965. Forests for food. My forest. Vol. 2. No: 1 Pp. 33-40

Raghavan, D. (Ed.) 1961. Farmers of India, Vol. II. IARI. New Delhi.

Ramaswamy M.N. 1964. My Reminiseences of the Forest Research Laboratory, Bangalore. Forest. Vol. I. No. 2: Pp. 1-31.

Ramaswamy M.N. 1964. A Short History of Mysore Forest. Department. My Forest Vol. 1. No. 1: Pp. 1-10

Randhwa M.S. 1961. Beautiful Trees and Gardens. IARI. New Delhi.

Randhwa M.S. 1965. Flowering trees. IARI. New Delhi.

Sagreiya K. P. ,Rao V. S., Bhadran C.A.R., Venkataswamy P. (Ed.) 1961. 100 years of Indian Forestry (1861-1961) Vol. II. New Delhi.

Saith & Riazada Waheed Khan 1962. Trees for Vanamahotsava. Delhi.

Santapau, H. 1966. Common Trees. New Delhi.

Sastri B.N. (Ed.) 1948. 50, 52, 56, 59, 62 The Wealth of India Vol. I-VI. CSIR. New Delhi.

Sharma, Y.M.L. Value of Forests. My Forest. Vol. 1. No. 2: Pp 14-18

Srisatyan B.N. (Ed.) 1965. Mysore State Gazetteer. Coorg Dist. Bangalore.

Srisatyan B.N. (Ed.) 1965. Mysore Gazetter. Bijapur Dist. Bangalore.

Srisatyan B.N. (Ed.) 1966. Mysore State Gazetteer. Gulberga Dist.Bangalore.

Uphof J.E. 1969. Dictionary of Economic Plants. New York.

Willis J.C. 1957. A Dictionary of the Flowering Plants & Ferns (6th Edn.) Cambridge.

ಪುಸ್ತಕದಲ್ಲಿ ಬರುವ ಸಸ್ಯಗಳ ಕನ್ನಡದ ಹೆಸರು ಮತ್ತು ಅವುಗಳ ಸಸ್ಯಶಾಸ್ತ್ರದ ಹೆಸರುಗಳ ಪಟ್ಟಿ :

ಬೆಳ್ಳಕ	Kydia calycina	೧೬೯
ಬೆಂಡು ಮರ	Trema orientalis	೯೨
ಬೆಂಡುಗ	Scleropyrum wallichianum	೧೭
ಬೆಂಡೆ ಮರ	Kydia calycina	೧೬೯
ಬೆಂಡೆವರು ಮರ	Kydia calycina	೧೬೯
ಬೇಜಲು	Anogeissus latifolia	೧೨೪
ಬೇಲಗ	Dalbergia lanceolaria	೨೧೧
ಬೇಲದ ಹಣ್ಣಿನ ಮರ	Feronia limonia	೧೬೬
ಬೇಲಂದಿ	Toona ciliata	೮೬
ಬೇವಿನ ಮರ	Azadirachta indica	೧೬೪
ಬೊಕುಳ	Mimusops elengi	೮೫
ಬೊಬ್ಬಿ	Calophyllum tomentosum	೭೦
ಬೊಬ್ಬೆ	Calophyllum wightianum	೫೫
ಬೊಂಗರೆ	Randia dumetorum	೧೮೬
ಬೊಡದರಗ	Cleistanthus collinus	೮೦
ಬೊಂತೆ ಕಳ್ಳಿ	Euphorbia tirucalli	೧೩೦
ಬೋಗ	Hopea parviflora	೬೭
ಬೋವಿಗೆ	Hopea parviflora	೬೭
ಬೈರಿ ಮರ	Caryota urens	೧೫೦
ಭಟಲ	Sterculia foetida	೧೦೬
ಭದ್ರಾಕ್ಷಿ ಮರ	Guazuma tomentosa	೧೯೪
ಭೂತಾಳೆ	Grewia oppositifolia	೧೬೨
ಮಕ್ಕೆ ನೇರಳೆ	Eugenia hemispherica	೧೭೧
ಮಟ್ಟೆ ನೇರಳೆ	Eugenia hemispherica	೧೭೧
ಮಡಿ ಮರ	Boswellia serrata	೧೭೨
ಮಡ್ಡಿ ಧೂಪ	Vateria indica	೧೨೪
ಮತ್ತಿ ಮ:ರ	Terminalia tomentosa	೧೭೨
ಮದರಾಸು ಅಶೋಕ	Polyalthia longifolia	೧೪೮
ಮದ್ದಳೆ	Alstonia scholaris	೧೧೦
ಮರ ಹರಳು	Jatropha curcas	೬೩
ಮಲ್ಲೆ ನೇರಳೆ	Syzigium jambos	೧೪೨

ಒಪ್ಪೋಲೆ

ಪುಟ ಸಂಖ್ಯೆ	ತಪ್ಪು	ಒಪ್ಪು
17.	Gardenia Gummifera	Gardenia gummifera
21.	ಕ್ನಡಿಗ	ಕನ್ನಡಿಗ
21.	Forward	Foreword
21.	Econamy	Economy
24.	ಸಾಧಿಸಲಾಗಿದ್ದ	ಸಾಧಿಸಲಾಗದೆ
24.	ಮಹತ್ಕಂಣ	ಮಹತ್ಕಂಕಣ
32.	ಅಮಟೆ ಕಾಯಿ ಆಮ್ರ	ಅಮಟೆ ಕಾಯಿ (ಆಮ್ರ)
43.	Premna Tomentosa	Premna tomentosa
46, 208.	Caesalpinaceae	Caesalpiniaceae
50.	Averrhoa Carambola	Averrhoa carambola
51.	Murrya Koenigii	Murraya koenigii
53.	Ficus lacor Buch–Hach.	Ficus lacor Buch–Ham.
63.	Jotropha curcas	Jətropha curcas
64.	5n=22	2n=22
69.	Eugenia Zeylanica	Eugenia zeylanica
88.	ಅರಕೇಸಿ ಈಗಿನ	ಈಗಿನ ಅರಕೇಸಿ
90.	Ficus gibbosa Blume var parasitica	Ficus parasitica Koen. Ex. Willd.
103.	Schleichera Oleosa	Schleichera oleosa
106.	Eugenia Jambolana	Eugenia jambolana
108.	Sesbania aegyptiea	Sesbania aegyptiaca
115.	Dispyros melanoxylon Roxb. (=D. tupru Buchman.)	Diospyros, melanoxylon Roxb. (D. tupru Buch-Ham.)
119.	Coco nucifera	Cocos nucifera

120. Arecaceae Palmae	Palmae (Arecaceae)
121. Chickrassia talbularis	Chickrassia tabularis
123. Punica grantun	Punica granatum
123. Punicacaec	Punicaceae
125. Acacia lantorum Willd.	Acacia latronum Willd.
128. nux–vamica	nux-vomica
135. Salix tetrasperama	Salix tetrasperma
146. Pavfetta	Pavetta
151. Poeciloneuron Panci-florum	Poeciloneuron pauciflo-rum
153. Terminalia Catappa	Terminalia catappa
153. Glochidion Zeylani–cum	Glochidion zeylanicum
153. G. Johnstonei	G. johnstonei
166. Hvmenodictyon	Hymenodictyon
171. Syzygium hemispherium	Syzygium hemisphericum
180. lour.	Lour.
186 Raudia	Randia
204. Beath.	Benth.

ಗ್ರಂಥಋಣ

2. Indian Materia and Medica	Indian Materia medica
2. Cevelopment	Development
2. Bangalore. Forest.	Bangalore. My Forest